ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

07 ಜನವರಿ 2015 ಪುಟ 20 ರೂ. 15/-

ವಿಶಿಷ್ಟ ಸಿನಿಮಾ





ಕಾಯ್ದೆ ಮದ್ದಿಗೆ ಚಡ್ಡಿಗಳ ವಿಷ

ಾಘು ಪಟಾಲಂನ ಉಪಟಳ



ಚಿತ್ರದುರ್ಗ

ಡ್ಡಿ ನಾಯಕನ ವ್ ಹೈಜಾಕ್

ಮಂಡ್ಯ

ಬಿ ಟಿವಿ ಯಡವಟ್ಟು

ಕೊಡಗು


ಪರಿಸರವ್ಯಾಧಿಗಳ ಉಪಟಳ

ಗವದ್ಗೀತೆ

-ವೈಶ್ಯ-ಶೂದ್ರ ದ್ವೇಷಿ

ಇಮಾಂ ಬುಖಾರಿ ತಲೆಕೆಟ್ಟ ಮುಲ್ಲಾ

ರೈತರ ಕಷ್ಟದ ನಿಜ, ಸುಳ್ಳು: ಹೊಸ ಸಮೀಕ್ಷೆ ಏನು ಹೇಳುತ್ತದೆ?



ಮೂರು ದಿನದ ಕೆಳಗೆ ಭಾರತದ ಬಹುತೇಕ ಪತ್ರಿಕೆಗಳು ಒಂದು ಸುದ್ದಿಯನ್ನು ಪ್ರಕಟಿಸಿದವು. ಭಾರತದ ಒಟ್ಟಾರೆ ರೈತಾಪಿಯಲ್ಲಿ ಶೇ.52ರಷ್ಟು ಜನರು ಸಾಲಗಾರರಾಗಿದ್ದಾರೆ; ಆಂಧ್ರದ ರೈತರಲ್ಲಿ ಶೇ.93ರಷ್ಟು ಮತ್ತು ತೆಲಂಗಾಣದ ರೈತರಲ್ಲಿ ಶೇ.89ರಷ್ಟು ಜನರು ಸಾಲಗಾರರು ಇತ್ಯಾದಿ. ಇದ್ದಕ್ಕಿದ್ದಂತೆ ಇಂತಹ ಸುದ್ದಿ ಹೇಗೆ ಎಲ್ಲಾ ಕಡೆ ಮುದ್ರಿತವಾಯಿತು (ಮುದ್ರಿತವಾಯಿತು ಎಂದೇ ಹೇಳಬೇಕು, ಬಿತ್ತರವಾಯಿತು ಎಂದು ಹೇಳುವುದು ಸಾಧ್ಯವಿಲ್ಲ, ಏಕೆಂದರೆ - ಕೆಲವು ಅಪವಾದಗಳನ್ನು ಬಿಟ್ಟರೆ - ನಮ್ಮ ಹೆಚ್ಚಿನ ಟಿವಿ ಚಾನೆಲ್‌ಗಳಿಗೆ ರೈತಾಪಿಯ, ಕಾರ್ಮಿಕರ, ದಲಿತರ ದಿನನಿತ್ಯದ ಯಾವ ಸಂಕಷ್ಟಗಳೂ ಸುದ್ದಿಯಾಗುವುದು ಹೇಗೆ ಸಾಧ್ಯ? ಅವರಿವರ ಮನೆ ಸುದ್ದಿಗಳನ್ನು ಸಾರ್ವಜನಿಕಗೊಳಿಸುವ ಅಶ್ಲೀಲ ಕೆಲಸದಾಚೆಗೆ ಅವುಗಳ ಕಲ್ಪನೆ ಹರಿಯುವುದು ಕಷ್ಟ)?

ಆಯಾ ಪತ್ರಿಕೆಗಳೇ ಬರೆದಂತೆ, ಕಳೆದ ಶುಕ್ರವಾದ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ (**NSSO-National Sample Survey Organisation**)ಯು ಬಿಡುಗಡೆ ಮಾಡಿದ ವರದಿಯನ್ವಯ ಈ ಸುದ್ದಿ ಪ್ರಕಟವಾಗಿದೆ. ಈ ಸಂಸ್ಥೆಯು, ಸರ್ಕಾರೀ ಸಂಸ್ಥೆಯಾಗಿದ್ದಾಗ್ಯೂ ಇದುವರೆಗೆ ಒಂದಷ್ಟು ಘನತೆ ಉಳಿಸಿಕೊಂಡಿದೆ. ನಿರಂತರವಾಗಿ ದೇಶದ ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ನೂರೆಂಟು ಸಂಗತಿಗಳ ಕುರಿತಾಗಿ ಸಮೀಕ್ಷೆಯನ್ನು ಅದು ನಡೆಸುತ್ತದೆ. ಈ ಸಾರಿ ಪ್ರಕಟಿಸಿರುವುದು 2013ರ ಜನವರಿಯಿಂದ ಡಿಸೆಂಬರ್‌ವರೆಗೆ ನಡೆಸಿದ 70ನೇ ಸುತ್ತಿನ ಸಮೀಕ್ಷೆಯ ವರದಿಯನ್ನು.



ಇದು ಬಂದನಂತರ ತಜ್ಞರು ಮತ್ತು ಉದ್ದಿಮೆಗಳ ವಲಯದಿಂದ ಎರಡು ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗಿದೆ. ಒಂದು, ಇದು ಈ ದೇಶದ ರೈತರ ದುಸ್ಥಿತಿಯ ಆಳವನ್ನು ಬಯಲುಗೊಳಿಸುತ್ತಿದೆ, ಹಾಗಾಗಿ ಕೃಷಿ ವಲಯಕ್ಕೆ ಸರ್ಕಾರವು ಮತ್ತಷ್ಟು ಆದ್ಯತೆಯನ್ನು ನೀಡಬೇಕು ಎಂಬ ಅಭಿಪ್ರಾಯ. ಇನ್ನೊಂದು, ಈ ಅಂಕಿ-ಸಂಖ್ಯೆಗಳಿಂದ ಆತಂಕಕ್ಕೊಳಗಾಗುವ ಅಗತ್ಯವಿಲ್ಲ; ಬದಲಿಗೆ ಇದಕ್ಕಿರುವ ಪರಿಹಾರ ಒಂದೇ, ಅದು ನಮ್ಮ ಉದ್ದಿಮೆಗಳು ಹಾಗೂ ಸೇವಾವಲಯವನ್ನು ಕೃಷಿ ಕ್ಷೇತ್ರಕ್ಕೂ ವಿಸ್ತರಿಸುವ ಮಾರ್ಗೋಪಾಯಗಳನ್ನು ಹುಡುಕಬೇಕು ಎಂಬುದು.

ವಾಸ್ತವವೇನು? ಈ ಎರಡು ಅಭಿಪ್ರಾಯಗಳ ತಳಹದಿಯೇನು? ಎಂಬುದನ್ನು ನಾವು ತಿಳಿದುಕೊಳ್ಳುವ ಅಗತ್ಯವಿದೆ. ಮೊದಲನೆಯದಾಗಿ, ಈ ಸಮೀಕ್ಷೆಯ ವಿಶ್ವಾಸಾರ್ಹತೆಯನ್ನು ಸರ್ಕಾರವೂ ಸೇರಿ ಬಹುತೇಕರು ಪ್ರಶ್ನಿಸುತ್ತಿಲ್ಲ, ಮೊದಲೇ ಹೇಳಿದಂತೆ, ಎನ್‌ಎಸ್‌ಎಸ್‌ಓ ಉಳಿಸಿಕೊಂಡಿರುವ ಘನತೆಯು ಅದಕ್ಕೆ ಕಾರಣವಾಗಿದೆ. ಆದ್ದರಿಂದಲೇ ಈ ಸಮೀಕ್ಷೆಯ ಫಲಿತಾಂಶಗಳನ್ನು ನಾವು ಮತ್ತಷ್ಟು ಗಂಭೀರವಾಗಿ ಅರಿತುಕೊಳ್ಳುವ ಅಗತ್ಯವಿದೆ.

ಸಮೀಕ್ಷೆಯ ಪ್ರಕಾರ ಅತೀ ಸಣ್ಣ ರೈತರಲ್ಲಿ ಶೇ.56ರಷ್ಟು ಕುಟುಂಬಗಳು ತಮ್ಮ ಜೀವನಾಧಾರವಾಗಿರುವ ಪ್ರಮುಖ ಆರ್ಥಿಕ ಮೂಲ ಕೃಷಿಯಲ್ಲ ಎಂದು ಹೇಳಿದ್ದಾರೆ. ಬದಲಿಗೆ ಅದು ಬೇರೆ ಕಡೆ ಕೂಲಿ ಮಾಡುತ್ತಿರುವುದು ಅಥವಾ ಕುಟುಂಬದ ಯಾರಾದರೂ ಒಬ್ಬರು ಬೇರೆ ಕಡೆ ಉದ್ಯೋಗದಲ್ಲಿರುವುದಾಗಿದೆ. ಈ ಅಂಕಣಕಾರನೂ ಭಾಗಿಯಾಗಿದ್ದ ಕರ್ನಾಟಕ ಜನಶಕ್ತಿ ಸಂಘಟನೆ ಮತ್ತು ಇತರ ಸಂಸ್ಥೆಗಳು ಒಟ್ಟು ಸೇರಿ ಮಾಡಿದ್ದ ಕರ್ನಾಟಕದ ಗ್ರಾಮೀಣ ಭಾಗದ ಅಧ್ಯಯನವೂ ಈ ಟ್ರೆಂಡ್‌ಅನ್ನು ಪತ್ತೆ ಹಚ್ಚಿತ್ತು. ನಮ್ಮ ಅಧ್ಯಯನದಲ್ಲಿ ಕಂಡುಬಂದಿದ್ದ ಇನ್ನೂ ಒಂದು ಸಂಗತಿಯನ್ನು ಇಲ್ಲಿ ಕಾಣಿಸಬೇಕು. ಅತೀ ಸಣ್ಣ ರೈತರು ಮಾತ್ರವಲ್ಲದೇ, ಮಧ್ಯಮ ಹಾಗೂ ದೊಡ್ಡ ರೈತರಲ್ಲೂ ಅವರು ಆರ್ಥಿಕವಾಗಿ ಸದೃಢವಾಗಿದ್ದಾರೆಂದರೆ, ಅವರ ಕುಟುಂಬಕ್ಕೆ ಒಂದಲ್ಲ ಒಂದು ಕೃಷಿಯೇತರ ಆದಾಯದ ಮೂಲವಿದೆ ಎಂದೇ ಅರ್ಥ. ನಮ್ಮ ಒಟ್ಟಾರೆ ಕೃಷಿ ಕ್ಷೇತ್ರದ ಸದ್ಯದ ಸ್ಥಿತಿಯನ್ನು ಈ ಅಂಶಗಳು ತೋರಿಸುತ್ತವೆ.

ಹಾಗಾದರೆ ಕೃಷಿಯನ್ನೇ ನಂಬಿಕೊಂಡಿರುವವರ ಪರಿಸ್ಥಿತಿ ಹೇಗಿದೆ? ಎನ್‌ಎಸ್‌ಎಸ್‌ಓದ ವರದಿ-'ಭಾರತದ ರೈತಾಪಿ ಕುಟುಂಬಗಳ ಸ್ಥಿತಿಗತಿಯ ಅಂದಾಜು ಸಮೀಕ್ಷೆ'-ಯು, ದೇಶಾದ್ಯಂತ ಸುಮಾರು 35,000 ಕುಟುಂಬಗಳ ವಿವರಗಳನ್ನು ಒಳಗೊಂಡಿದೆ. ಅದರ ಪ್ರಕಾರ ಭಾರತದಲ್ಲಿ ಗ್ರಾಮೀಣ ಭಾಗದ ಶೇ.57.8 ಕುಟುಂಬಗಳನ್ನು (9 ಕೋಟಿ 2 ಲಕ್ಷ ಕುಟುಂಬಗಳು) ರೈತಾಪಿ ಕುಟುಂಬಗಳು ಎನ್ನಬಹುದು. ಇವರಲ್ಲಿ ಶೇ.52ರಷ್ಟು ಜನರು ಸಾಲಗಾರರಾಗಿದ್ದಾರೆ. ಸಾಲದ ಪ್ರಮಾಣದ ಸರಾಸರಿ 47,000 ರೂ.ಗಳಾಗಿವೆ. ಹೆಚ್ಚೆಂದರೆ ಕೇರಳದಲ್ಲಿ ಸರಾಸರಿ 2,13,000 ರೂ.ಗಳಿದ್ದರೆ, ನಂತರದ ಸ್ಥಾನ ಆಂಧ್ರಪ್ರದೇಶ (1,23,400 ರೂ.) ಮತ್ತು ಪಂಜಾಬ್(1,19,500 ರೂ.)ಗಳದ್ದಾಗಿವೆ.




ಹೈನುಗಾರಿಕೆ ಮತ್ತು ಇತರ ಪ್ರಾಣಿ ಸಾಕಣೆಯೇ ಜೀವನಕ್ಕೆ ಮುಖ್ಯ ಆಧಾರ ಎಂದು ಹೇಳುತ್ತಿರುವವರ ಸಂಖ್ಯೆ ದೇಶದಲ್ಲಿ ಶೇ.23ರಷ್ಟಿದೆ. ಗ್ರಾಮೀಣ ಭಾಗದಲ್ಲಿ ಕೃಷಿಯೇತರ ಆದಾಯ ಮೂಲಗಳನ್ನು ಹೊಂದಿರುವುದೇ ಸಮಸ್ಯೆಯಲ್ಲ, ಆದರೆ ವಿವಿಧ ರೀತಿಗಳಲ್ಲಿ, ವಿವಿಧ ಆಯಾಮಗಳಲ್ಲಿ ಕೃಷಿಯನ್ನು ನಂಬಿಕೊಂಡು ಬದುಕುವುದು ಸಾಧ್ಯವಿಲ್ಲ ಎಂಬುದನ್ನೂ, ಉತ್ಪಾದಕರಿಗೆ ಜೀವನದ ಮಟ್ಟ ಸುಧಾರಣೆಗೆ ಮಿಗುತಾಯವನ್ನು ಸಾಧಿಸುವ ಅಂಶವಾಗಿ ಈ ದೇಶದ ಅತೀ ದೊಡ್ಡ ಉದ್ಯೋಗದಾತ ಕ್ಷೇತ್ರ ಉಳಿದುಕೊಂಡಿಲ್ಲ ಎಂಬ ಅಂಶ ನೀತಿ ನಿರೂಪಕರಿಗೆ (**policy makers**) ಬಹಳ ಮುಖ್ಯವಾಗಬೇಕಿದೆ.

2003ರಲ್ಲಿ ಭಾರತೀಯ ಜನತಾಪಕ್ಷವು 'ಭಾರತ ಪ್ರಕಾಶಿಸುತ್ತಿದೆ' ಎಂಬ ನಿಲುವು-ಧೋರಣೆ ಮತ್ತು ಘೋಷಣೆಯಡಿ ತಮ್ಮ ಸಾಧನೆಯನ್ನು ಬಿತ್ತರಿಸಿ ಮತ ಕೇಳಲು ಶುರು ಹಚ್ಚಿಕೊಂಡಿದ್ದರು. ಆದರೆ ದೇಶದ ಅಭಿವೃದ್ಧಿ ಹೊಂದಿದ ರಾಜ್ಯಗಳಲ್ಲೇ ರೈತರ ಆತ್ಮಹತ್ಯೆ ಮುಗಿಲು ಮುಟ್ಟಿತ್ತು. ಹೀಗಾಗಿ ಈ ಘೋಷಣೆಯು ತಿರುಗುಬಾಣವಾಗಿ ಪರಿಣಮಿಸಿ, ಬಿಜೆಪಿ ಮತ್ತು ಎನ್‌ಡಿಎಗಳು ನೆಲಕಚ್ಚಿದ್ದವು. ನಂತರ ಬಂದ ಎಡಪಕ್ಷ ಬೆಂಬಲಿತ ಯುಪಿಎ ಸರ್ಕಾರವು ಇದನ್ನೊಂದು ಎಚ್ಚರಿಕೆಯನ್ನಾಗಿ ಪರಿಗಣಿಸಿತು. ನರೇಗಾ, ವಿದರ್ಭ ಪ್ಯಾಕೇಜ್, ಬೃಹತ್ ಪ್ರಮಾಣದ ಸಾಲಮನ್ನಾ ಸೇರಿದಂತೆ ಕೆಲವು ಕ್ರಮಗಳನ್ನು ಅದು ಕೈಗೊಂಡಿದ್ದೂ ನಿಜ. ಆದರೆ, ಒಟ್ಟಾರೆ ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆಯನ್ನು ತರುವುದು ಸಾಧ್ಯವಾಗಿಲ್ಲ ಎಂಬುದನ್ನು ಈ ಅಂಕಿ-ಅಂಶಗಳು ತೋರಿಸುತ್ತಿವೆ. ಯುಪಿಎ ಅವಧಿಯಲ್ಲೂ ಆತ್ಮಹತ್ಯೆಗಳು ನಡೆದವಾದರೂ, ಹಿಂದಿಗಿಂತ ಹೆಚ್ಚಾಗಿರಲಿಲ್ಲ, ಇಷ್ಟಕ್ಕೇ ಸಮಾಧಾನಪಟ್ಟುಕೊಳ್ಳುವುದು ಅನಾಗರಿಕ ನಡವಳಿಕೆಯಷ್ಟೇ ಆಗುತ್ತದೆ. ಬದಲಿಗೆ, ಕೃಷಿ ಕ್ಷೇತ್ರದ ಈ ಅವಸ್ಥೆಗೆ ನೈಜ ಕಾರಣಗಳನ್ನು ಶೋಧಿಸಿ, ಅದನ್ನು ಮತ್ತಷ್ಟು ಬಲಪಡಿಸುವ ಕ್ರಮಗಳಿಗೆ ಮುಂದಾಗುವುದು ಇಂದಿನ ಜರೂರಾಗಿರುತ್ತದೆ.

ಆದರೆ, ಮೋದಿ ಸರ್ಕಾರವನ್ನು ನಿರ್ದೇಶಿಸುವ ಆರ್ಥಿಕ ನೀತಿ ಮತ್ತು ನೀತಿತಜ್ಞರು ಒಟ್ಟು ಅಂಕಿ-ಅಂಶಗಳನ್ನು ಬೇರೆ ನೆಲೆಯಿಂದ ವಿಶ್ಲೇಷಿಸುತ್ತಿದ್ದಾರೆ. ಅಪಾಯಕಾರಿರುವುದು ಅಲ್ಲಿ, ಅವರು ಕೃಷಿ ಕ್ಷೇತ್ರವನ್ನು ಮತ್ತಷ್ಟು ಲೂಟಿಗೈಯ್ಯಲು ದಾರಿಗಳನ್ನು ಹುಡುಕುತ್ತಿದ್ದಾರೆ. ಇದನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಅಂಶವನ್ನು ಗಮನಿಸಬೇಕು. ಒಟ್ಟಾರೆ ರೈತಾಪಿ ಸಾಲಗಾರರಲ್ಲಿ ಶೇ.66ರಷ್ಟು ಸಾಲವನ್ನು ಸಾಂಸ್ಥಿಕೇತರ ಮೂಲಗಳಿಂದ ಪಡೆದುಕೊಳ್ಳಲಾಗಿದೆ. ಅಂದರೆ ರೈತಾಪಿಗೆ ನ್ಯಾಯಯುತ ಬಡ್ಡಿದರ ಮತ್ತು ನ್ಯಾಯಯುತ ವಿಧಾನದಲ್ಲಿ ಸಾಲವನ್ನು ಒದಗಿಸುವ ಸರ್ಕಾರೀ ಮತ್ತು ಸಹಕಾರಿ ಮೂಲಗಳು ಕೇವಲ ಶೇ.33. ಅದರಲ್ಲೂ ಸಣ್ಣ ಮತ್ತು ಅತೀ ಸಣ್ಣ ರೈತರಲ್ಲಿ ಕೇವಲ ಶೇ.15ರಷ್ಟು ಜನರು ಮಾತ್ರ ಇಂತಹ ಸಾಲಗಳನ್ನು ಪಡೆದುಕೊಳ್ಳಲು ಶಕ್ತರಾಗಿದ್ದಾರೆ. ಅದೇ ಸಂದರ್ಭದಲ್ಲಿ 10 ಹೆಕ್ಟೇರ್‌ಗಳಿಗಿಂತ ಹೆಚ್ಚು ಭೂಮಿಯನ್ನು ಹೊಂದಿರುವ ದೊಡ್ಡ ಕುಟುಂಬಗಳು ಶೇ.79ರಷ್ಟು ಸಾಂಸ್ಥಿಕ ಸಾಲಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಅದೇ ರೀತಿ ಸರ್ಕಾರದ ಬೆಂಬಲ ಬೆಲೆಯ ಪ್ರಯೋಜನವು ಎಷ್ಟರಮಟ್ಟಿಗೆ ರೈತಾಪಿಗೆ ದಕ್ಕುತ್ತಿದೆ ಎಂಬುದನ್ನೂ ನೋಡಬೇಕು. ಸಮೀಕ್ಷೆ ನಡೆದ ವರ್ಷ ಭತ್ತಕ್ಕೆ ಇದ್ದುದರಲ್ಲಿ ಪರವಾಗಿಲ್ಲ ಎಂಬ ಬೆಂಬಲ ಬೆಲೆಯನ್ನು ಸರ್ಕಾರವು ಘೋಷಿಸಿತ್ತು, ಆದರೆ ಶೇ.32ರಷ್ಟು ರೈತಾಪಿಗೆ ಮಾತ್ರ ಇದರ ಅರಿವಿತ್ತು ಮತ್ತು ಕೇವಲ ಶೇ.13.5ರಷ್ಟು ರೈತರು ಮಾತ್ರ ತಮ್ಮ ಭತ್ತವನ್ನು ಸಂಬಂಧಪಟ್ಟ ಸಂಗ್ರಹಾಗಾರಗಳಿಗೆ ಮಾರಿದರು. ಅಂದರೆ ಸರ್ಕಾರೀ ಸೌಲಭ್ಯಗಳ ಮಾಹಿತಿಯೇ ರೈತರಿಗೆ ಇನ್ನೂ ತಲುಪಿಲ್ಲ ಮತ್ತು ತಲುಪಿದ್ದರೂ ಅವನ್ನು ಪಡೆದುಕೊಳ್ಳಲಾಗದ ಸ್ಥಿತಿಯಲ್ಲಿ ರೈತಾಪಿಯಿದೆ. ಸರ್ಕಾರವು ಇನ್ನೂ ಹೆಚ್ಚಿನ ಬೆಲೆ ಕೊಡುತ್ತೇನೆಂದರೂ ಅಲ್ಲಿಯವರೆಗೆ ತೆಗೆದುಕೊಂಡು ಹೋಗಲಾಗಿಲ್ಲವೇಕೆಂದರೆ, ತನ್ನ ಸಾಲದ ಕಾರಣಕ್ಕೆ, ತಕ್ಷಣವೇ ಹಣ ಬೇಕೆಂಬ ಕಾರಣಕ್ಕೆ ಅಥವಾ ಸರ್ಕಾರೀ ವ್ಯವಸ್ಥೆಯಲ್ಲಿನ ಸಮಸ್ಯೆಗಳ ಕಾರಣಕ್ಕೆ ಮಾಹಿತಿ ಇದ್ದ ರೈತರೂ ಹೋಗಿಲ್ಲ.

ಇದನ್ನು ತಪ್ಪಿಸುವುದು ಹೇಗೆಂಬುದನ್ನು ಯೋಚಿಸಬೇಕಿದೆ; ಅದೇ ರೀತಿ ಬೆಂಬಲ ಬೆಲೆಯನ್ನು ವಿವಿಧ ಬೆಳೆಗಳಿಗೆ ವಿಸ್ತರಿಸುವುದು ಹಾಗೂ ಬೆಂಬಲ ಬೆಲೆ ಎನ್ನುವುದು ವೈಜ್ಞಾನಿಕವಾದ ಬೆಲೆಯಾಗಿರುವುದು ಅತ್ಯಂತ ಅಗತ್ಯವಾಗಿದೆ. ರೈತರು ಮಾಡಿರುವ ಖರ್ಚಿನ ಜೊತೆಯಲ್ಲಿ ರೈತ ಕುಟುಂಬದ ಒಟ್ಟಾರೆ ಶ್ರಮದ ಕೂಲಿಯನ್ನು ಲೆಕ್ಕ ಹಾಕುವುದು, ಭೂಮಿಯನ್ನು ಹೊಂದಿರುವುದನ್ನೂ ಹೂಡಿಕೆಯೆಂದು ಲೆಕ್ಕ ಹಾಕುವುದು, ಆರಂಭಿಕ ಹೂಡಿಕೆಗೆ ಬಡ್ಡಿ ಲೆಕ್ಕ ಹಾಕುವುದು ಇವೆಲ್ಲವೂ ಬೆಲೆ ನಿಗದಿಯ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದ ಅಂಶಗಳು. ಆಗ ಮಾತ್ರ ಅದು ನ್ಯಾಯಯುತವೂ, ವೈಜ್ಞಾನಿಕವೂ ಆದ ಬೆಲೆಯಾಗುತ್ತದೆ.



ಇದು ರೈತಪರವಾದ ಅಥವಾ ನ್ಯಾಯಪರವಾದ ಲೆಕ್ಕಾಚಾರವಾಗಿದೆ. ಆದರೆ, ಕೆಲವು 'ತಜ್ಞರು' ಬೇರೆ ಲೆಕ್ಕಾಚಾರದಲ್ಲಿದ್ದಾರೆ. ಅವರ ಪ್ರಕಾರ ಬೆಳೆ ನಷ್ಟಕ್ಕೆ ಬೆ[illegible] ವಿಮೆಯನ್ನು ಮಾಡಿಸುವುದು ಪರಿಹಾರವಾಗಿದೆ. ಅದ[illegible] ಅವರೂ ಎನ್‌ಎಸ್‌ಎಸ್‌ಓದ ಅಂಕಿಅಂಶಗಳನ್ನೇ ಮುಂ[illegible] ಮಾಡುತ್ತಾರೆ. ಶೇ.4.8ರಷ್ಟು ಭತ್ತ ಬೆಳೆಯುವ ರೈತರು ಬೆಳೆ ವಿಮೆಯನ್ನು ಮಾಡಿಸಿದ್ದರೆ, ಹತ್ತಿ ಬೆಳೆಯುವ ರೈತರ[illegible] ಈ ಪ್ರಮಾಣ ಶೇ.10ರ ಆಸುಪಾಸಿನಲ್ಲಿದೆ. ಕಬ್ಬು ಬೆಳೆಯು[illegible] ರೈತರಲ್ಲಿ ಕೇವಲ 1.3ರಷ್ಟು ರೈತರು ಮಾತ್ರ ವಿ[illegible] ಮಾಡಿಸಿದ್ದಾರೆ. ಸಾಲಕ್ಕೆ ಒಂದು ಪ್ರಮುಖ ಕಾರಣ ಬೆ[illegible] ನಷ್ಟವಾದ್ದರಿಂದ ಬೆಳೆವಿಮೆ ಪರಿಹಾರ ಒದಗಿಸುತ್ತದೆ.

ಇದೇ ರೀತಿಯ ಇನ್ನೊಂದು ವಾದವೆಂದರೆ ಕೃಷಿಯೆಂಬುದು ನಷ್ಟದಾಯಕ ವ್ಯವಹಾರವಲ್ಲ, ಹಾಕಿದ[illegible] ಬರದಿದ್ದರೆ, ಯಾರೂ ಕೃಷಿ ಮಾಡುತ್ತಿರಲಿಲ್ಲ. [illegible] ಎನ್‌ಎಸ್‌ಎಸ್‌ಓ ವರದಿಯಲ್ಲೇ ಸಾಕ್ಷ್ಯಗಳಿವೆ. 2012ರಿಂದ ಜೂನ್ 2013ರವರೆಗಿನ ಹೇಳಿಕೆ[illegible] (ಪ್ರತೀ ತಿಂಗಳು ಮಾಡಿದ ಖರ್ಚು ಮತ್ತು ಕೊ[illegible] ಬೆಳೆ ಮಾರಿದಾಗ ಬಂದ ಹಣದ ನಡುವಿನ [illegible] ಪ್ರಕಾರ ರೈತರು ಲಾಭದಲ್ಲಿದ್ದಾರೆ! ಮೇಲೆ ಹೇಳಿದಂತೆ ರೈತರ ಭೂ ಹೂಡಿಕೆ, ಕುಟುಂಬದ ಶ್ರಮ ಮತ್ತು ಆರಂಭಿಕ ಹೂಡಿಕೆಯ ಬಡ್ಡಿಯನ್ನು ಲೆಕ್ಕ ಹಾಕದ ಲೆಕ್ಕ ಇದು.

ಮೋದಿ ತಜ್ಞರ ಪ್ರಕಾರ, ಸರ್ಕಾರೀ/ಸಹಕಾರೀ/ರಾಷ್ಟ್ರೀಕೃ[illegible] ಬ್ಯಾಂಕುಗಳು ರೈತರಿಗೆ ಕಡಿಮೆ ಪ್ರಮಾಣದಲ್ಲಿ ಸಾ[illegible] ಕೊಡುತ್ತಿವೆ ಎಂಬುದನ್ನು ಬೇರೆ ರೀತಿಯಲ್ಲಿ ಅರ್ಥಮಾಡಿ[illegible]ಕೊಳ್ಳಬೇಕಂತೆ. ಅಂದರೆ, ಸಾಲದ ಮಾರುಕಟ್ಟೆಯನ್ನು ಖಾಸಗಿ ಲೇವಾದೇವಿಗಾರರು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಇಲ್ಲಿ ಬಡ್ಡಿದರ ಹೆಚ್ಚು ಇತ್ಯಾದಿ ಮಾತುಗಳಿಗೆ ಅರ್ಥವಿಲ್ಲ. ಹಾಗಾಗಿ ಈ ವಿಚಾರವನ್ನು ಖಾಸಗಿಯವರಿಗೇ ಬಿಟ್ಟರೆ ಒಳ್ಳೆಯದು. ಅವರು ಇನ್ನೂ ಮುಂದಕ್ಕೆ ಹೋಗಿ [illegible] ಮಾತು ಹೇಳುತ್ತಾರೆ. ರೈತರು ಶತಮಾನಗಳಗಟ್ಟಲೆ [illegible] ಸಮಸ್ಯೆಗಳ ನಡುವೆಯೂ ಉಳಿದುಕೊಂಡು ಬಂದಿದ್ದಾ[illegible] ಮುಂದೆಯೂ ಉಳಿದುಕೊಳ್ಳುತ್ತಾರೆ. ಅದರ ಬಗ್ಗೆ ತುಂ[illegible] ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ!!

ಎನ್‌ಎಸ್‌ಎಸ್‌ಓದ ಸಮೀಕ್ಷೆ ಮುಂದಿಟ್ಟಿರು[illegible] ಅಂಕಿ-ಅಂಶಗಳು ಇಷ್ಟು ಸ್ಪಷ್ಟವಾಗಿರುವಾಗಲೂ, ರೈತರ ಬದುಕನ್ನು ಅಪಹಾಸ್ಯ ಮಾಡುವಂತೆ ಮೋದಿಯ ತಜ್ಞರು ಇಂತಹ ವಾದಗಳನ್ನು ಮುಂದಿಡುತ್ತಿದ್ದಾರೆ.

ಅಂದರೆ ಹೊಸ ಸಮೀಕ್ಷೆ ಹಾಗೂ ಹೊಸ ವಿಶ್ಲೇಷಣೆ ಎರಡೂ ಈ ದೇಶದ ರೈತಾಪಿಯ ಕಷ್ಟಗಳು ಹೆಚ್ಚಾಗಲಿವೆ ಎಂಬುದನ್ನೇ ಸೂಚಿಸುತ್ತಿವೆ.

...ಲಂಕೇಶರ ಮೊಮ್ಮಕ್ಕಳಿಗೆ ಹೇಳಿದ ಕ್ರಿಸ್‌ಮಸ್ ಕತೆ



• ಗೌರಿ ಲಂಕೇಶ್
editorlankesh@gmail.com

ಬುಧವಾರ ಸಂಜೆ ಲಂಕೇಶರ ಮೂವರು ...ಮ್ಮಕ್ಕಳಾದ ಸಮರ್ಜಿತ್, ಇಶಾ ಮತ್ತು ಸಮಯ್ ...ಮಸ್ ಹಬ್ಬದ ಸಂಭ್ರಮದಲ್ಲಿದ್ದರು. ಕ್ರಿಸ್‌ಮಸ್ ... ಶೃಂಗಾರ ಮಾಡಿದ್ದಲ್ಲದೆ ಒಂದು ...ಟಬೋರ್ಡ್ ದಬ್ಬದಲ್ಲಿ ನೇಟಿವಿಟಿಯ ದೃಶ್ಯವನ್ನೂ ...ಸಿದರು. ಮಾರನೆ ಬೆಳಗ್ಗೆ ತಮಗೆಲ್ಲ ಎಂತಹ ...'ಗಳು ಸಿಗಲಿವೆ ಎಂಬ ಕುತೂಹಲವಂತೂ ...ವನ್ನೆಲ್ಲ ಆವರಿಸಿತ್ತು.

...ಆದರೆ ಕ್ರಿಸ್‌ಮಸ್ ಹಬ್ಬದ ನಿಜ ಅರ್ಥ ...ಹಾಯಕರಿಗೆ ನೆರವಾಗುವ ಮೂಲಕ ಎಲ್ಲರ ...ಕಿನಲ್ಲೂ ಒಂದಿಷ್ಟು ಸಂತೋಷ ಮತ್ತು ನೆಮ್ಮದಿ ...ವಂತೆ ನಡೆದುಕೊಳ್ಳುವುದು. ಆ ನಿಟ್ಟಿನಲ್ಲಿ ...ವರನ್ನೂ ಕೂರಿಸಿಕೊಂಡು ಕ್ರಿಸ್‌ಮಸ್ ಬಗ್ಗೆ ...ಮ ಕತೆ ಹೇಳಲು ಪ್ರಾರಂಭಿಸಿದೆ.

"ನಿಮಗೆ ಹೆಲೆನ್ ಕೆಲ್ಲರ್ ಬಗ್ಗೆ ಗೊತ್ತಾ?"

"ಗೊತ್ತು, ಆಕೆ ಕುರುಡಿ ಮತ್ತು ಕಿವುಡಿ. ಆದರೂ ...ಹಲವಾರು ಪುಸ್ತಕಗಳನ್ನು ಬರೆದಿದ್ದಳು."

"ಕಣ್ಣಿಲ್ಲದಿದ್ದ ಆಕೆಗೆ ಏನೂ ಕಾಣಿಸುತ್ತಿರಲಿಲ್ಲ, ಕಿವಿ ...ಯಿದ್ದರಿಂದ ಆಕೆಗೆ ಏನೂ ಕೇಳಿಸುತ್ತಿರಲಿಲ್ಲ. ...ರೂ ಆಕೆ ಬರೆಯುವುದನ್ನು ಕಲಿತದ್ದು ಹೇಗೆ? ...ಕ್ಷಣ ಕಣ್ಣು ಮತ್ತು ಕಿವಿ ಇಲ್ಲದಿದ್ದರೆ ...ರುತ್ತದೆ ಎಂದು ಊಹಿಸಿಕೊಂಡು ನೋಡಿ."

...ಕೆಲಕ್ಷಣ ಮೂವರೂ ಕಣ್ಣು ಮತ್ತು ಕಿವಿ ...ಚ್ಚಿಕೊಂಡು ಊಹಿಸಿಕೊಳ್ಳಲು ಪ್ರಯತ್ನಿಸಿದರು. ...ಮ್ಮಷ್ಟು ಹಾರಿಬಲ್ ಆಗಿರುತ್ತೆ ಅವ್ವಾ" ಎಂದಳು ...

"ಕಣ್ಣು ಮತ್ತು ಕಿವಿ ಇಲ್ಲದವರಿಗೆ ಕೈ ಸನ್ನೆಗಳೂ ...ಯೋಗಕ್ಕೆ ಬರುವುದಿಲ್ಲ. ಆದ್ದರಿಂದ ಆಕೆಗೆ ...ಯುವುದನ್ನು ಹೇಳಿಕೊಟ್ಟಿದ್ದು ಹೇಗೆ ಗೊತ್ತಾ?"

"ಹೇಗೆ ಹೇಳು. ಆದರೆ ಇದಕ್ಕೂ ಕ್ರಿಸ್‌ಮಸ್ ...ಕ್ಕೂ ಏನು ಸಂಬಂಧ?" ಎಂದ ಸಮರ್.

"ತಾಳ್ಮೆ... ಹೇಳ್ತೀನಿ. ಹೆಲೆನ್ ಎಲ್ಲ ಮಕ್ಕಳಂತೆ ...ರ್ಮಲ್ ಆಗಿಯೇ ಹುಟ್ಟಿದ್ದಳು. ಆದರೆ ಆಕೆ 18 ...ಳ ಕೂಸಾಗಿದ್ದಾಗ ಮೆನಿಂಜೈಟಿಸ್ ಕಾಯಿಲೆ ...ಬಿತು. ಅದು ಮಿದುಳಿಗೆ ತಾಕುವ ಕಾಯಿಲೆ. ...ಾ ಆರನೆ ತರಗತಿಯಲ್ಲಿದ್ದಾಗ ಅದು ನನಗೂ ತಾಕಿ ...ಾ ಕೋಮಾಗೆ ಜಾರಿದ್ದೆ. ಆಗ ಡಾಕ್ಟರ್‌ಗಳು ನಿಮ್ಮ ... ಅಜ್ಜಿಗೆ '40 ಗಂಟೆಗಳಲ್ಲಿ ಕೋಮಾದಿಂದ ...ರಬಾರದಿದ್ದರೆ ನಿಮ್ಮ ಮಗಳು ಕುರುಡಿ ಮತ್ತು ...ಡಿ ಆಗುವ ಸಾಧ್ಯತೆ ಇದೆ' ಎಂದಿದ್ದರು. ಅಂದರೆ ...ೂ ಹೆಲೆನ್ ತರಹ ಕಣ್ಣು ಮತ್ತು ಕಿವಿ ...ದವಳಾಗಿರುತ್ತಿದ್ದೆ. ಆದರೆ ನನ್ನ ಅದೃಷ್ಟ ಚೆನ್ನಾಗಿತ್ತು. ...ಜ್ಞಾನದ ಸಂಶೋಧನೆಯಿಂದಾಗಿ ನನಗೆ ಸರಿಯಾದ ...ಷಧಿ ದೊರೆತು ನಾನು 36 ಗಂಟೆಗಳ ನಂತರ ...ಕೋಮಾದಿಂದ ಹೊರಬಂದೆ. ಆದರೆ ಹೆಲೆನ್ ನನ್ನಷ್ಟು ...ದೃಷ್ಟಶಾಲಿಯಾಗಿರಲಿಲ್ಲ."

"ನೀನು ಕೋಮಾದಲ್ಲಿದ್ಯಾ?" ಪುಟ್ಟ ಸಮಯ್ ...

"ಹೌದು. ಹೆಲೆನ್ ಕತೆ ಕೇಳಿ. ಅವಳಿಗೆ ಏನೂ ...ಸುತ್ತಿರಲಿಲ್ಲ ಮತ್ತು ಕಾಣಿಸುತ್ತಿರಲಿಲ್ಲವಾದ್ದರಿಂದ ...ಳೊಂದಿಗೆ ಹೇಗೆ ಕಮ್ಯೂನಿಕೇಟ್ ಮಾಡಬೇಕೆಂದು ...ರಿಗೂ ಗೊತ್ತಿರಲಿಲ್ಲ. ಅವಳು ಏಳು ವರ್ಷದ ...ಕಿ ಆಗಿದ್ದಾಗ ಕುರುಡರನ್ನು ಟ್ರೈನ್ ಮಾಡುವ ... ತರಬೇತಿ ಪಡೆದಿದ್ದ ಒಬ್ಬ ಟೀಚರ್ ಅನ್ನು ...ನ್‌ಳ ತಂದೆ ನೇಮಿಸಿದರು. ಆಕೆಯ ಹೆಸರು ಆನ್ ...ನ್. ಆದರೆ ಆನ್‌ಗೂ ಕಣ್ಣು ಮತ್ತು ಕಿವಿ ...ಡೂ ಇಲ್ಲದವರನ್ನು ಹೇಗೆ ಟ್ರೈನ್ ...ಡಬೇಕೆಂದು ಗೊತ್ತಿರಲಿಲ್ಲ. ಅಂದರಾಗೆ ...ಧವರನ್ನು ಹೇಗೆ ಟ್ರೈನ್ ಮಾಡುತ್ತಾರೆ ಗೊತ್ತಾ?"

"ಹೇಗೆ?"

"ಕಿವುಡರಿಗೆ ಕೈ ಸನ್ನೆ ಇರುವಂತೆ, ಕಣ್ಣು ಮತ್ತು ... ಇಲ್ಲದವರಿಗೂ ಒಂದು 'ಭಾಷೆ' ಇದೆ. ...ನೆಂದರೆ ಅವರ ಅಂಗೈ ಮೇಲೆ ಕೋಡ್ ...ಯೋಗಿಸಿ ಪದಗಳನ್ನು ಮೆಲ್ಲಗೆ ತಟ್ಟುವುದು.

"... "

"ವಾವ್!"

"ಆದರೆ ಆರಂಭದಲ್ಲಿ ಹೆಲೆನ್‌ಗೆ ತನ್ನ ಅಂಗೈ ...ಲೆ ಆನ್ ಯಾಕೆ ತಟ್ಟುತ್ತಿದ್ದಾಳೆ ಎಂದೇ ಅರ್ಥವಾಗಲಿಲ್ಲ. ಶಬ್ಧ ಮತ್ತು ದೃಷ್ಟಿ ಎರಡರಿಂದಲೂ ದೂರವಿದ್ದ ಹೆಲೆನ್‌ಗೆ ಏನಾಗುತ್ತಿದೆ ಎಂದು ಗೊತ್ತಾಗುವುದು ಸುಲಭವಾಗಿರಲಿಲ್ಲ. ಆದರೆ ಆನ್ ಸುಮ್ಮನಾಗಲಿಲ್ಲ. ಪ್ರಯತ್ನಿಸುತ್ತಲೇ ಇದ್ದಳು. ಒಂದು ದಿನ ಆನ್‌ಗೆ ರೋಸಿಹೋಯಿತು. ಹೆಲೆನ್‌ಳನ್ನು ಒಂದು ಹ್ಯಾಂಡ್‌ಪಂಪ್ ಹತ್ತಿರ ಕರೆದುಕೊಂಡು ಹೋಗಿ ಒಂದು ಅಂಗೈ ಮೇಲೆ ನೀರು ಸುರಿಸುತ್ತಾ ಇನ್ನೊಂದು ಅಂಗೈ ಮೇಲೆ 'ನೀರು' ಎಂಬ ಪದವನ್ನು ತಟ್ಟಲಾರಂಭಿಸಿದಳು. ಆಗಲೂ ಹೆಲೆನ್‌ಗೆ ಯಾಕೆ ಆನ್ ಹಾಗೆ ಮಾಡುತ್ತಿದ್ದಾಳೆ ಎಂದು ಅರ್ಥವಾಗಲಿಲ್ಲ. ಆನ್ 'ಎಲ್ಲಕ್ಕೂ ಒಂದು ಪದ ಇರುತ್ತದೆ. ಇದನ್ನು ನೀರು ಎಂದು ಕರೆಯುತ್ತಾರೆ' ಎಂದು ರೇಗುತ್ತಲೇ ನೀರನ್ನು ಸುರಿಸುತ್ತಾ ಪದವನ್ನು ತಟ್ಟುತ್ತಾ ಹೋದಳು. ಕೆಲ ಹೊತ್ತಿನ ನಂತರ ಹೆಲೆನ್‌ಗೆ ಜ್ಞಾನೋದಯವಾಯಿತು. ಆಕೆ ಅಚ್ಚರಿಯಿಂದ ಒಂದು ತರಹ ಊಳಿಟ್ಟಳು. ಆನ್‌ಳ ಅಂಗೈ ಮೇಲೆ ತಾನೂ 'ನೀರು' ಎಂಬ ಪದವನ್ನು ತಟ್ಟಿ, ಸರಿಯಾ ಎಂದು ದೃಢಪಡಿಸಿಕೊಳ್ಳಲು ಆನ್‌ಳ ಮುಖ ಮುಟ್ಟಿದಳು. ಆನ್ 'ಹೌದು' ಎಂದು ತಲೆ ಆಡಿಸಿದಳು. ಆ ಕ್ಷಣದಿಂದಲೇ ಹೆಲೆನ್‌ಳ ಬದುಕಿನಲ್ಲಿ ಬೆಳಕು ಹರಿಯಿತು. ಆಕೆ ಅದೆಷ್ಟು ಎಕ್ಸೈಟ್ ಆದಳೆಂದರೆ ನೆಲದ ಮೇಲೆ ಬಿದ್ದು ಹುಲ್ಲಿನ ಗರಿಕೆಯನ್ನು ಕಿತ್ತು ಆನ್‌ಳತ್ತ ಒಡ್ಡಿದಳು. ಆನ್ 'ಹುಲ್ಲು' ಎಂದು ತಟ್ಟಿದಳು. ಹೆಲೆನ್ ಹತ್ತಿರವೇ ಇದ್ದ ಮರದತ್ತ ಓಡಿ ಅದರ ರೆಂಬೆಯನ್ನು ಜಗ್ಗಾಡಿದಳು. ಆನ್ 'ಮರ' ಎಂದು ತಟ್ಟಿದಳು. ಹೆಲೆನ್ ಮನೆಯತ್ತ ಧಾವಿಸಿ ಮೆಟ್ಟಿಲು ಮೇಲೆ ಬಿದ್ದು ಅದನ್ನು ಬಡಿಯಲಾರಂಭಿಸಿದಳು. ಆನ್ 'ಮೆಟ್ಟಿಲು' ಎಂದು ತಟ್ಟಿದಳು."

"ವಾವ್!"

"ಹೆಲೆನ್ ಮತ್ತು ಆನ್ ಇಬ್ಬರೂ ಎಕ್ಸೈಟ್ ಆಗಿದ್ದರು. ಮನೆಯೊಳಗಿದ್ದ ಹೆಲೆನ್‌ಳ ತಂದೆ ಮತ್ತು ತಾಯಿಯನ್ನು ಆನ್ ಕರೆದಳು. ಅವರಿಬ್ಬರೂ ಹೊರಗೆ ಬರುತ್ತಿದ್ದಂತೆ 'ಹೆಲೆನ್‌ಗೆ ಅರ್ಥವಾಗುತ್ತಿದೆ' ಎಂದು ಆನ್ ಸಂತೋಷದಿಂದ ಚೀರಿದಳು. ಅಪ್ಪ, ಅಮ್ಮ ಇಬ್ಬರೂ ಮಗಳನ್ನು ಅಪ್ಪಿಕೊಂಡು ಕಣ್ಣೀರಿಟ್ಟರು. ಆನ್ ಹೆಲೆನ್‌ಳ ಅಂಗೈ ಮೇಲೆ 'ಅಪ್ಪ ಅಮ್ಮ' ಎಂದು ತಟ್ಟಿದಳು. ಹೆಲೆನ್‌ಗೆ ಕಿವಿ ಮತ್ತು ಕಣ್ಣು ಇರಲಿಲ್ಲ, ಆದರೆ ಆಕೆ ಚುರುಕು ಬುದ್ಧಿಯವಳಾಗಿದ್ದಳು. ಎಷ್ಟು ಚುರುಕಾಗಿದ್ದಳೆಂದರೆ ಆಕೆ ಮೊದಲ ದಿನವೇ 60 ಹೊಸ ಪದಗಳನ್ನು ಕಲಿತಳು. ಹೀಗೆ ಆಕೆ ಕಲಿತುಕೊಂಡಿದ್ದರಿಂದ ಮುಂದೆ ಹಲವಾರು ಪುಸ್ತಕಗಳನ್ನು ಬರೆಯಲು ಸಾಧ್ಯವಾಯಿತು."

"ಆದರೆ ಇದಕ್ಕೂ ಕ್ರಿಸ್‌ಮಸ್‌ಗೂ ಏನು ಸಂಬಂಧ?" ಸಮರ್ ಪ್ರಶ್ನೆ.

"ಹೇಳ್ತೀನಿ ಕೇಳು. ಎಷ್ಟೋ ವರ್ಷಗಳ ನಂತರ ಯಾರೋ ಹೆಲೆನ್‌ಳನ್ನು 'ನಿನಗೆ ತುಂಬಾ ಸಂತೋಷ ಕೊಟ್ಟ ಕ್ರಿಸ್‌ಮಸ್ ಹಬ್ಬ ಆಚರಿಸಿದ್ದು ಯಾವಾಗ?' ಎಂದು ಕೇಳಿದರು. ಅದಕ್ಕೆ ಆಕೆ ಕೊಟ್ಟ ಉತ್ತರ 'ನಾನು ಎಂಟು ವರ್ಷದವಳಾಗಿದ್ದಾಗ ಆಚರಿಸಿದ ಕ್ರಿಸ್‌ಮಸ್ ಹಬ್ಬ.' ಅದಕ್ಕೆ ಕಾರಣವೂ ಇತ್ತು. ಅದೇನೆಂದರೆ ಅಲ್ಲಿಯತನಕ ಆಕೆಯ ಬದುಕು ಸಂಪೂರ್ಣವಾಗಿ ಬರಿದಾಗಿತ್ತು. ಆಕೆಯೇ ಹೇಳಿರುವಂತೆ ಅಲ್ಲಿಯ ತನಕ ಆಕೆ 'ವಿಚಿತ್ರ ಶಬ್ಧಗಳನ್ನು ಮಾಡುತ್ತಿದ್ದ ಪ್ರಾಣಿ'ಯಂತಿದ್ದಳು. ಕ್ರಿಸ್‌ಮಸ್ ಹಬ್ಬದ ಬಗ್ಗೆಯಾಗಲಿ, ಗಿಫ್ಟ್‌ಗಳ ಬಗ್ಗೆಯಾಗಲಿ ಆಕೆಗೆ ಗೊತ್ತೇ ಇರಲಿಲ್ಲ. ಆದರೆ ಕಲಿಯಲು ಶುರು ಮಾಡಿದ ನಂತರ ಆಕೆಗೆ ಕ್ರಿಸ್‌ಮಸ್ ಹಬ್ಬದ ಸಡಗರ, ಅದರ ಉದ್ದೇಶಗಳೆಲ್ಲ ಅರ್ಥವಾಗಿದ್ದವು. ಆಕೆ ಹೇಳಿದ್ದಾಳೆ 'ಅವತ್ತು ಬೆಳಗ್ಗೆ ಉತ್ಸಾಹದಿಂದ ಎದ್ದದ್ದು, ಎಲ್ಲರ ಅಂಗೈ ಮೇಲೆ ಮೆರಿ ಕ್ರಿಸ್‌ಮಸ್ ಎಂದು ತಟ್ಟಿದ್ದು, ಕ್ರಿಸ್‌ಮಸ್ ಪಾರ್ಟಿಗಾಗಿ ಕಾದಿದ್ದು, ಎಲ್ಲವೂ ಇನ್ನೂ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿವೆ."

"ಕೂಲ್!"

"ಇರಿ. ಆ ವರ್ಷ ಆಕೆಗೆ ಬಂದ ಗಿಫ್ಟ್‌ಗಳು ಮೊದಲನೆ ಬಾರಿಗೆ ನಿಜಕ್ಕೂ ಸಂತೋಷ ಕೊಟ್ಟವು. ಅವಳೂ ತನ್ನ ಮುದ್ದಿನ ನಾಯಿ ಬೆಲ್ಲೆಯ ಕತ್ತಿನ ಸುತ್ತ ಒಂದು ಬೋ ಕಟ್ಟಿದಳು. ಆದರೆ ಆ ನಾಯಿಯೋ ಹಕ್ಕಿಗಳಿಗೆ ಬೇಟೆ ಆಡಲು ಹೋಗಿ ಅದನ್ನು ಹರಿದುಕೊಂಡು ಬಂದಿತ್ತು. ಅದಕ್ಕಿಂತ ಮುಖ್ಯವಾಗಿ ಅವತ್ತು ಹೆಲೆನ್‌ಳನ್ನು ಮೊದಲನೆ ಬಾರಿಗೆ ಊರಿನ ಮಕ್ಕಳೆಲ್ಲ ಜೊತೆಗೂಡಿ ಆಚರಿಸುತ್ತಿದ್ದ ಕ್ರಿಸ್‌ಮಸ್ ಸಂಜೆಗೆ ಆಹ್ವಾನಿಸಲಾಗಿತ್ತು. ಅಲ್ಲಿ ಶೃಂಗರಿಸಿದ್ದ ಕ್ರಿಸ್‌ಮಸ್ ಮರವನ್ನು ಮತ್ತದರ ಅಡಿ ಇಟ್ಟಿದ್ದ ಗಿಫ್ಟ್‌ಗಳನ್ನೆಲ್ಲ ಮುಟ್ಟಿಮುಟ್ಟಿ ಹೆಲೆನ್ ಆನಂದಿಸಿದಳು. ಆಮೇಲೆ ಅವಳ ಕೈಗಳಿಂದಲೇ ಇತರೆ ಎಲ್ಲ ಮಕ್ಕಳಿಗೆ ಗಿಫ್ಟ್‌ಗಳನ್ನು ಹಂಚಿಸಿದರು. ಹೆಲೆನ್‌ಳ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಆಕೆ ಆ ಹಾಲ್‌ನಲ್ಲಿದ್ದ ಎಲ್ಲವನ್ನು ಮತ್ತು ಎಲ್ಲರನ್ನು ಮುಟ್ಟುತ್ತಾ ಹೋದಂತೆ ಒಬ್ಬ ಹುಡುಗಿಗೆ ಯಾರೂ ಗಿಫ್ಟ್ ಕೊಟ್ಟಿಲ್ಲ ಎಂದು ಗೊತ್ತಾಯಿತು. ಯಾಕೆ ಎಂದು ಹೆಲೆನ್ ಕೇಳಿದಾಗ ಆ ಹುಡುಗಿ ಬಡವೆಯಾದ್ದರಿಂದ ಆಕೆಗೆ ಯಾರೂ ಗಿಫ್ಟ್ ಕೊಟ್ಟಿಲ್ಲ ಎಂದು ಗೊತ್ತಾಯಿತು."

"ಅಯ್ಯೋ ಪಾಪ."

"ಹೆಲೆನ್ ತನಗೆ ಬಂದಿದ್ದ ಗಿಫ್ಟ್‌ಗಳಲ್ಲಿ ಒಂದನ್ನು ಆ ಹುಡುಗಿಗೆ ಕೊಟ್ಟಳಾದರೂ ಅವಳಿಗೆ ನೆಮ್ಮದಿ ಇರಲಿಲ್ಲ. ಆಕೆ ಆನ್‌ಳನ್ನು ಪೀಡಿಸಲಾರಂಭಿಸಿದಳು. 'ಯಾಕೆ ಆ ಹುಡುಗಿ ಬಡವೆ?', 'ದೇವರು ಯಾಕೆ ಅವಳಿಗೆ ಅನ್ಯಾಯ ಮಾಡಿದ್ದಾನೆ?' 'ಯಾಕೆ ನನಗೆ ಇಷ್ಟೆಲ್ಲಾ ಕೊಟ್ಟ ದೇವರು ಆಕೆಗೆ ಏನನ್ನೂ ಕೊಡಲಿಲ್ಲ?', 'ಬಡ ಮಕ್ಕಳನ್ನು ನಿರ್ಲಕ್ಷಿಸುವ ಕ್ರಿಸ್‌ಮಸ್ ಅದು ಹೇಗೆ ಹಬ್ಬವಾಗುತ್ತದೆ?' ಎಂದೆಲ್ಲಾ ಪ್ರಶ್ನೆಗಳನ್ನು ಕೇಳುತ್ತಿದ್ದಳು. ನೆನಪಿಡಿ ಹೆಲೆನ್ 'ಆಕೆಗೆ ಕಣ್ಣು ಮತ್ತು ಕಿವಿ ಕೊಟ್ಟ ದೇವರು ನನಗೇಕೆ ಅನ್ಯಾಯ ಮಾಡಿದ?' ಎಂದು ಕೇಳಲಿಲ್ಲ. ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿದೆಯಾ?"

"ಅರ್ಥ ಆಗ್ತಿದೆ."

"ನೀವು ಮೂವರೂ ತುಂಬಾ ಲಕ್ಕಿ. ನಿಮಗೆ ಒಳ್ಳೆಯ ಅಪ್ಪ ಅಮ್ಮ ಇದ್ದಾರೆ. ಒಳ್ಳೆಯ ಮನೆಗಳಿವೆ. ಚೆನ್ನಾಗಿರುವ ಶಾಲೆಗೆ ಹೋಗುತ್ತೀರಿ. ನಿಮಗೆ ಬೇಕಾದ ಪುಸ್ತಕಗಳು ಮತ್ತು ಆಟಿಕೆಗಳು ಸುಲಭವಾಗಿ ಸಿಗುತ್ತವೆ. ಆದರೆ ಈ ಜಗತ್ತಿನಲ್ಲಿ ನಿಮ್ಮಷ್ಟು ಲಕ್ಕಿ ಅಲ್ಲದ, ತುಂಬಾ ಬಡವರಾದ ಮಕ್ಕಳೂ ಇದ್ದಾರೆ. ನೀವೆಲ್ಲ ಇನ್ನೂ ಪುಟ್ಟ ಮಕ್ಕಳು ಅನ್ನೋದು ನನಗೆ ಗೊತ್ತು. ಆದರೆ ನೀವು ದೊಡ್ಡವರಾದ ಮೇಲೆ ಈ ಜಗತ್ತಿನಲ್ಲಿ ಬಡತನ, ಅಸಮಾನತೆ, ದುಃಖ ಇಲ್ಲದಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲೂ ಇರುತ್ತೆ. ಕಣ್ಣು ಮತ್ತು ಕಿವಿ ಎರಡೂ ಇರದಿದ್ದ ಹೆಲೆನ್ ಕೆಲ್ಲರ್ ತರಹದವರೇ ಸಮಾನತೆ ಇರುವ ಸಮಾಜಕ್ಕೆ ದುಡಿದಿದ್ದರು. ನೀವೂ ಹಾಗೆ ಮಾಡಬೇಕಲ್ಲವೆ? ಪ್ರಾಮಿಸ್?"

"ಎಸ್ ಅತ್ತೆ!" "ಎಸ್ ಅವ್ವಾ!"

"ಮೆರಿ ಕ್ರಿಸ್‌ಮಸ್!" •



ಪತ್ರಿಕೆಯ ಓದುಗರಿಗೆ, ಏಜಂಟರಿಗೆ ಮತ್ತು ಸಮಾನ ಸಮಾಜಕ್ಕಾಗಿ ಹೋರಾಡುತ್ತಿರುವ ಎಲ್ಲಾ ಸಹೃದಯಿಗಳಿಗೆ ಹೊಸ ವರ್ಷದ ಶುಭಾಶಯಗಳು

– ಲಂಕೇಶ್ ಬಳಗ


ಉಡಿತುಂಬ 'ಪ್ರಸಾದ'ವಿಟ್ಟ ರಾಘುನ ಪ್ರಳಯಾಂತಕ ಮಿತ್ರರು




ರಾಮಚಂದ್ರಾಪುರ ಮಠದ ಪೋಲಿ ಸ್ವಾಮಿ ಶ್ರೀರಾಮನ ಅವತಾರವೆತ್ತಿ ರಾಮಕಥಾ ಗಾಯಕಿಯ ಒಳ ಬಟ್ಟೆಯಲ್ಲಿ 'ಪ್ರಸಾದ' ಚೆಲ್ಲಿದ್ದು ಸಾಬೀತಾಗಿದೆ. 'ಪರಕಾಯ ಪ್ರವೇಶ'ದ ಆತುರದಲ್ಲಿ ಪ್ರೇಮಲತಾರ ಉಡುಪಿನ ಮೇಲೆ ತಾನು ಪ್ರಸಾದ ಬಿಟ್ಟಿರುವುದು ರಾಘುಗೆ ಈಗ ದೊಡ್ಡ ಪೀಕಲಾಟ ತಂದಿಟ್ಟಿದೆ! ಈ ಅಪರಾಧ ಪ್ರಜ್ಞೆಯಿಂದಾಗಿಯೇ ಆತ ಮೆಡಿಕಲ್ ಟೆಸ್ಟ್‌ಗೆ ಹಿಂಜರಿದದ್ದು. ರಾಘುನ ತುತ್ತೂರಿಯಂತಾಗಿರುವ ಪ್ರಳಯಾಂತಕ ಪತ್ರಕರ್ತನ ಪಟಾಲಮ್ ಗುರುವಿನ ವೈದ್ಯಕೀಯ ಪರೀಕ್ಷೆ ಆಗದಂತೆ ಮಾಡಲು ವಿಫಲ ಪ್ರಯತ್ನ ಮಾಡಿತ್ತು. ಅಂಥದೊಂದು ಟೆಸ್ಟ್ ಇಂದಲ್ಲ ನಾಳೆ ನ್ಯಾಯಾಲಯದ ಆದೇಶದಂತೆಯೇ ಆಗಲೇಬೇಕಾಗುತ್ತದೆಂಬ ಕಹಿ ವಾಸ್ತವದ ಅರಿವಾದಾಗ ಈ ಮಾಧ್ಯಮ ಮಸಲತ್ತುಗಾರ ನಿಷ್ಪಾಪಿ ಪ್ರೇಮಲತಾರ ಚಾರಿತ್ರ್ಯ ಹನನಕ್ಕೆ ಕೈಹಾಕಿಬಿಟ್ಟ!

ರಾಘು ಮಠದ ಪೀಠವನ್ನೇ ಪಲ್ಲಂಗ ಮಾಡಿಕೊಂಡಿರುವುದರಿಂದ ಹವ್ಯಕ ಸಮುದಾಯದಲ್ಲಾಗಿರುವ ಡ್ಯಾಮೇಜು ಕಂಟ್ರೋಲ್‌ಗೆ ಎಂತೆಂಥ ಬೋಗಸ್ ವರದಿ ಹೊಸೆಯಬೇಕೆಂದು ಈ ಪ್ರಳಯಾಂತಕ ಪತ್ರಕರ್ತ ಸ್ಕೆಚ್ ಹಾಕತೊಡಗಿದ. ಪ್ರೇಮಲತಾರೇ ಜಾರಿಣೆ ಎಂದು ವಾದಿಸಿದರೆ ಮಠದಲ್ಲೇ ಬೆತ್ತಲಾದ ಗುರುಗಳ ಮಾನಕ್ಕಾದ ಕುಂದು ಕಮ್ಮಿಯಾಗಬಹುದೆಂಬುದು ಆತನ ವಿಕೃತ ಲೆಕ್ಕಾಚಾರವಾಗಿತ್ತು. ಆಗ ಆತನಿಗೊಂದು ಐಡಿಯಾ ಹೊಳೆದಿದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ತನಗೊಬ್ಬನಿಗೇ ಸಿಕ್ಕಂತೆ ಆತ ಖೋಟಾ ವರದಿಗಳ ಎಪಿಸೋಡು ಹೆಣೆದಿದ್ದಾನೆ. ಸಂತ್ರಸ್ತೆಯ ಬಟ್ಟೆಯಲ್ಲಿ ಒಬ್ಬನದಲ್ಲ ಇಬ್ಬರ ಪುರುಷತ್ವ ಕಂಡುಬಂದಿದೆಯೆಂದು ಪರಮ ನೀಲಿ ಕತೆಗಳನ್ನು ಸರಣಿಯಲ್ಲಿ ವಿವರಿಸಿದ್ದಾನೆ.

ಈ ಪತ್ರಕರ್ತ ರಾಮಚಂದ್ರಾಪುರ ಮಠದ ಆಡಳಿತ ಮಂಡಳಿಯ ಮಹತ್ವದ ಮಹಾಮನಾದರೆ, ಸದ್ರಿ ಪತ್ರಿಕೆಯ ಮಾಜಿ ದೊರೆಗಳಾದ ಗೋಯಂಕಾರ ಬಂಧುಗಳ ಜತೆಗೂ ರಾಘುಗೆ ಅನೇಕ ರಹಸ್ಯ ವ್ಯಾವಹಾರಿಕ ನಂಟಿದೆ. ಒಂದು ಚಾತುರ್ಮಾಸ್ಯ ವ್ರತ ಸಂಭ್ರಮವನ್ನು ರಾಘು ಕೋಲ್ಕತ್ತಾದ ಗೋಯಂಕಾಗಳ ಇಮಾಮಿ ಗ್ರೂಪ್‌ನ ಅತಿಥಿ ಗೃಹದಲ್ಲಿ ನಡೆಸಿ ಕೃತಾರ್ಥನಾಗಿದ್ದಾನೆ. ಇಮಾಮಿ ಸಂಸ್ಥೆಗೆ ಮಠದ ಗೋದಂಥ, ರಾಮಕಥಾದಂಥ ಕಮರ್ಷಿಯಲ್ ಪ್ರಾಡಕ್ಟ್‌ಗಳ ವಹಿವಾಟನ್ನು ವಹಿಸಿ ಕಮಿಷನ್ ಕುಂತಲ್ಲೇ ಪಡೆಯುವ ಪ್ರಯತ್ನ ರಾಘು ತುಂಬ ಹಿಂದಿಂದ ನಡೆಸುತ್ತಲೇ ಇದ್ದಾನೆ. ಈತನ ಭಾವ ಜಗದೀಶ ಶರ್ಮನ ಹೆಸರಲ್ಲಿ ಒಂದೆರಡು ಇಮಾಮಿ ಮಳಿಗೆಗಳಿವೆ ಎಂಬ ಸುದ್ದಿ ಮಠದ ಪಡಸಾಲೆಯಲ್ಲಿದೆ.



ಬಿ.ವಿ. ಆಚಾರ್ಯ



ಅಶೋಕ ಹಾರನಹಳ್ಳಿ

ಅದಿರಲಿ; ಪ್ರೇಮಲತಾ ನಡತೆಗೆಟ್ಟವರೆಂದು ರಾಘುನ ಶಿಷ್ಯೋತ್ತಮನ ಪತ್ರಿಕೆಯಲ್ಲಿ ಸುಳ್ಳು-ಸುಳ್ಳೇ ಚಿತ್ರಿತವಾದಂತೆಲ್ಲಾ ಆತನ ಅಸಲೀ ಅವತಾರ ತಂತಾನೆ ಅನಾವರಣ ಆಗುತ್ತಾ ಹೋಯ್ತು! ಆತ್ಮಶ್ರಾದ್ಧ ಮಾಡಿಕೊಂಡು, ಸರ್ವಸಂಗ ಪರಿತ್ಯಾಗ ಮಾಡಿ, ಭಿಕ್ಷೆಯಿಂದಲೇ ಜೀವಧಾರಣ ಮಾಡುವ ಶುದ್ಧ ಸ್ವಾಮೀಜಿ ತಾನೆಂಬಂತೆ ನಕಲಿ ಪೋಸು ಕೊಡುತ್ತ ಬಂದಿದ್ದ ರಾಘು ಇಂದ್ರಿಯನಿಗ್ರಹ ಸಾಧ್ಯವಾಗದೆ ನೈತಿಕ ಅಧಃಪತನ ಕಂಡಿರುವುದು ಆ ಪತ್ರಿಕೆಯ ಧಾರಾವಾಹಿಗಳೇ ಜಗಜ್ಜಾಹೀರುಮಾಡಿಬಿಟ್ಟವು; ಸದ್ರಿ ವರದಿಗಳು ರಾಘು ನಡತೆಗೆಟ್ಟ ಪೋಲಿ ಮಠಾಧೀಶನೆಂಬುದನ್ನು ಖಾತ್ರಿಪಡಿಸಿಬಿಟ್ಟವು. "ಪ್ರೇಮಲತಾ ಎಂಥವಳೇ ಇರಲಿ... ಪರಮ ಪೂಜ್ಯ ಪೀಠದಲ್ಲಿ ಕುಳಿತ ಸ್ವಾಮಿ ಹಾಗೆ ರಾಸಲೀಲಾ ವಿನೋದದಲ್ಲಿ ಮೈಮರೆಯಬಹುದಾ?" ಎಂದು ಜನರಾಡಿಕೊಂಡರು.

ರಾಘುನ ದೌರ್ಬಲ್ಯ ಹಿಡಿದಾಡಿ ಮಠದ ಪಾರುಪತ್ಯಗಾರನಾಗುವ ರಹಸ್ಯ ಕಾರ್ಯಸೂಚಿಯ ಆಟ ಆರಂಭಿಸಿರುವ ಸದ್ರಿ ಸಂಪಾದಕನಿಗೆ ಈಗ ಅಡ್ವೋಕೇಟ್ ಜನರಲ್ ರವಿವರ್ಮಕುಮಾರ್ ಮತ್ತವರ ಲಾಯರ್ ತಂಡದ ಭಯ ಬಾಧಿಸುತ್ತಿದೆ. ಸಹಾಯಕ ಅಡ್ವೋಕೇಟ್ ಜನರಲ್ ಬಿ.ಟಿ. ವೆಂಕಟೇಶ್ ಮೇಲೆ ಲೋಕಾಯುಕ್ತದ ಮುಂದೆ ಬೋಗಸ್ ದೂರು ಕೊಡಿಸಿ ಅವರ ನೈತಿಕ ಸ್ಥೈರ್ಯ ಕೆಡಿಸುವ ಕಿತಾಪತಿ ಮಾಡಿದರೂ ಏನೂ ಆಗಲಿಲ್ಲ. ಪ್ರೇಮಲತಾ ಮತ್ತವರ ಪತಿ ದಿವಾಕರ್ ಶಾಸ್ತ್ರಿ ವಿರುದ್ಧ ಸುಳ್ಳು ಬ್ಲ್ಯಾಕ್‌ಮೇಲ್ ಕೇಸು ಹಾಕಿ ಹೊನ್ನಾವರ ನ್ಯಾಯಾಲಯಕ್ಕೆ ಕರೆತಂದ ಆರಂಭದಿಂದ ನ್ಯಾಯಾಲಯಗಳ ದಿಕ್ಕು ತಪ್ಪಿಸುತ್ತ ಬಂದ ರಾಘು ಚಿಂತಕ ಚಾವಡಿ ಪಂಡಿತರಿಗೆ ಹೈಕೋರ್ಟ್‌ನಲ್ಲಿ ಖುದ್ದು ಎಜಿಯೇ ಎದುರು ನಿಂತಿರುವುದು ಎದುರಿಸಲಾಗುತ್ತಿಲ್ಲ. ಒಂಥರಾ ಫಜೀತಿಗೆ ಬದ್ದಿರುವ ರಾಘು ಅಂಡ್ ಕೋ "....... ಈ ಜುಜುಬಿ ಕ್ರಿಮಿನಲ್ ಕೇಸಿಗೇಕೆ ಎಜಿಯಂಥ ದೊಡ್ಡವರು ಬರಬೇಕು..." ಎಂದು ಅಲವತ್ತುಕೊಳ್ಳುತ್ತಿದೆ, ಪಾಪ!!

ಮಠಾಂಧರ ಕುತರ್ಕ!!



ರಾಮಚಂದ್ರಾಪುರ ಮಠದ ಫಲಾನುಭವಿ ಪಾರುಪತ್ಯಗಾರರು ಹತಾಶೆಯಿಂದ ನಡೆಸುತ್ತಿರುವ ಹುಚ್ಚಾಟಗಳಿಂದ ಹಾಸ್ಯಾಸ್ಪದವಾಗಿ ಹೋಗಿದ್ದಾರೆ. ಹವ್ಯಕ ಬ್ರಾಹ್ಮಣರ ಒಂದು ವರ್ಗವನ್ನು 'ಮಠಾಂಧ'ರಾಗಿಸಿ ದಾರಿ ತಪ್ಪಿಸಲಾಗಿದೆ. ಈ ಮಠಾಂಧರನ್ನು ಸೋಗಲಾಡಿ ಸ್ವಾಮಿಯ ಅನೈತಿಕತೆ, ಅಸಡ್ಡಾಳತನ, ಅವ್ಯವಹಾರ, ಅನ್ಯಾಯ ಬಯಲಿಗೆಳೆವವರ ವಿರುದ್ಧ ಛೂಬಿಟ್ಟು, ಅವರ ತೇಜೋವಧೆ ಮಾಡಿಸುತ್ತಿದ್ದಾರೆ ಮಠದ ಸೂತ್ರಧಾರರು. ಮಠದ ತಾಲಿಬಾನಿಗಳ ತಲೆಯಲ್ಲಿ ಪ್ರೇಮಲತಾ, ಆಕೆಯ ಪತಿ ಹಾಗು ಬೆಳೆದು ನಿಂತ ಹೆಣ್ಮಕ್ಕಳಿಬ್ಬರ ಶೀಲ-ಸಂಸ್ಕಾರದ ಬಗ್ಗೆ ಕೆಟ್ಟ ಕತೆ ಕಟ್ಟಿ ಬಿತ್ತಲಾಗಿದೆ. ಸಿಐಡಿ, ನ್ಯಾಯಾಲಯ ಮತ್ತು ಸರ್ಕಾರಿ ವಕೀಲರನ್ನು ಈ ಅನಾಚಾರಿ ಪಡೆ ಬಿಟ್ಟಿಲ್ಲ.

ಅಭಿನವ ಶ್ರೀರಾಮಚಂದ್ರ ರಾಘು ಭಟ್ಟನ ಕಾಮೋನ್ಮಾದ ಭಾನಗಡಿ ಬಹಿರಂಗವಾದಾಗ ಆತನ ಸುತ್ತಲಿನ ಪಾಪಿಗಳು ಮಾಡಿದ ಮೊದಲ ಕೆಲಸವೆಂದರೆ, ಬಲಿಪಶು ಪ್ರೇಮಲತಾ ಮತ್ತಾಕೆಯ ಹೆಣ್ಮಕ್ಕಳ ಚಾರಿತ್ರ್ಯ ಹನನದ ಪುಣ್ಯ ಕಾರ್ಯ! ಈ ತಾಯಿ-ಮಕ್ಕಳು ಕೆಟ್ಟವರೆಂದೇ ಇಟ್ಟುಕೊಳ್ಳೋಣ. ಸರ್ವಸಂಗ ಪರಿತ್ಯಾಗಿಯಾದ ಕಾವಿಧಾರಿ ಕೆಟ್ಟ ಹೆಂಗಸಿನೊಂದಿಗೆ ಡಿಂಗ್‌ಡಾಂಗ್ ನಡೆಸಬಹುದಾ? ಎಂಬ ಅಸಲೀ ಪ್ರಶ್ನೆಗೆ ಮಾತ್ರ ಮಠಾಂಧರಿಂದ ಉತ್ತರ ಕೊಡಲಾಗುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಮಹತ್ವ ಅಂಶ ಒಂದಿದೆ. ದೇಶದ ಯಾವ ಮೂಲೆಯಲ್ಲೇ ಆಗಲಿ, ಅತ್ಯಾಚಾರ ಆದಾಗ ಮೊದಲು ಆಗುವುದು ಸಂತ್ರಸ್ತೆ ಮತ್ತಾಕೆ ಕುಟುಂಬದ ಚಾರಿತ್ರ್ಯ ವಧೆ ಮತ್ತು ಸಾಕ್ಷ್ಯ ನಾಶದ ಷಡ್ಯಂತ್ರ. ರಾಘುನೂ ಇಂಥದ್ದೇ ಮೂರನೆ ದರ್ಜೆಯ ನೀಚತನ ಮಾಡಿದ್ದಾನೆ.

ಆ ಬಳಿಕ ಮಠಾಂಧರು 'ರೇಪ್' ಶಬ್ದದ ಸುತ್ತ ಸಂಶೋಧನೆಗೆ ಇಳಿದರು. "ಅತ್ಯಾಚಾರ (ರೇಪ್) ಎಂದರೆ ಒಂದೇ ಒಂದು ಸಲ ನಡೆಯುವಂಥದ್ದು. ನಮ್ಮ ಸುಬಗ ಸ್ವಾಮಿಯಿಂದ ಮೂರು ವರ್ಷಗಳ ಕಾಲ ನೂರಾರು ಬಾರಿ ರೇಪ್ ಆಗಲು ಅದ್ಹೇಗೆ ಸಾಧ್ಯ?" ಎಂಬ ಕುತರ್ಕ ಶುರುವಾಯ್ತು. 'ರೇಪ್'ನ ಕಾನೂನುಬದ್ಧ-ನೈತಿಕ ವ್ಯಾಖ್ಯಾನಗಳೆರಡೂ ಗೊತ್ತಿಲ್ಲದ ಪೆದ್ದ ಮಠಾಂಧರ ಮಧ್ಯೆ ಇದು ದೊಡ್ಡ ಮಟ್ಟದ ಚಾಲ್ತಿಗೆ ಬಂತು. ಆದರೆ ವಾಸ್ತವ ಕಠೋರವಾಗಿದೆ. ಮಹಿಳೆಯೊಬ್ಬಳ ಒಪ್ಪಿಗೆ ಇಲ್ಲದ ಅಕ್ರಮ ಸಂಭೋಗ ಅದೆಷ್ಟೇ ಬಾರಿಯಾಗಿದ್ದರೂ ಅದು ಅತ್ಯಾಚಾರವೇ!! ಭಾರತೀಯ ದಂಡಸಂಹಿತೆ ಸೆಕ್ಷನ್ 376 (2) (ಎನ್) ಮತ್ತು ಸಾಕ್ಷಿ ಕಾಯ್ದೆ ಹಾಗೆ ಹೇಳುತ್ತವೆ. ಹಾಗಾಗಿ ರಾಘು ಮಾಡಿದ್ದು ನಿರಂತರ 'ರೇಪ್'!


"ನೀನು ದಿವ್ಯಳು, ನಿನ್ನ ಮೇಲೆ ಶ್ರೀರಾಮನ ವಿಶೇಷ ಕರುಣೆಯಾಗಿದೆ... ನಾನೇ ಆ ಶ್ರೀರಾಮ... ಈ ಶ್ರೀರಾಮನಿಗೆ ನಿನ್ನನ್ನು ನೀನು ಸಮರ್ಪಿಸಿಕೊಳ್ಳಬೇಕಾದ ಕರ್ತವ್ಯವಿದೆ.... ಇದರಿಂದ ರಾಮನಿಗೆ ಖುಷಿಯಾಗುತ್ತದೆ...." ಎಂದ್ಹೇಳಿ ಪ್ರೇಮಲತಾರ ತಿಂದು ತೇಗುತ್ತಿದ್ದನಲ್ಲ ರಾಘು ಸ್ವಾಮಿ? ಸ್ನಾನ ಮುಗಿದ ಮೇಲೆ ಶ್ರೀರಾಮನ ವಿಗ್ರಹದ ಎದುರು ಆಕೆಯನ್ನು ನಿಲ್ಲಿಸಿ "ಯಾರಿಗೂ ಹೇಳುವುದಿಲ್ಲ" ಎಂದು ಆಣೆಯೂ ಮಾಡಿಸುತ್ತಿದ್ದ. ಹೇಳಿದರೆ "ನಿನಗೆ, ನಿನ್ನ ಕುಟುಂಬಕ್ಕೆ ರಾಮನ ಶಾಪ ತಟ್ಟುತ್ತದೆ" ಎಂದು ಬೆದರಿಸುತ್ತಿದ್ದ. ಹೀಗೆ ಹೆದರಿಸಿ-ಬೆದರಿಸಿ ಭೋಗಿಸುವುದಿದೆಯಲ್ಲ, ಅದು ಭಾರತೀಯ ದಂಡ ಸಂಹಿತೆ ಸೆಕ್ಷನ್ 376 (2) (ಎಫ್) ಪ್ರಕಾರ ರಿಲೀಜಿಯಸ್ ಬ್ಲ್ಯಾಕ್‌ಮೇಲ್! ಪ್ರಭಾವ ಮತ್ತು ನಿಯಂತ್ರಕ ಸ್ಥಾನದಲ್ಲಿರುವ ರಾಘು ನಂಬುವ ಹಾಗು ಮುಗ್ಧ ಭಾವುಕತೆಗಳ ಪ್ರೇಮಲತಾರನ್ನು ನಿರಂತರವಾಗಿ ಭಾವನಾತ್ಮಕ ಬ್ಲ್ಯಾಕ್‌ಮೇಲ್ ಮಾಡಿದ್ದಾನೆಂಬುದು ಐಪಿಸಿ 372(2) (ಕೆ) ಸೆಕ್ಷನ್ ಸಾಬೀತುಪಡಿಸುವಂತಿದೆ.

ಇಂಥ ಕಾನೂನಾತ್ಮಕ ಮತ್ತು ನೈತಿಕ ಸತ್ಯಗಳನ್ನೆಲ್ಲ ಬುದ್ಧಿಪೂರ್ವಕವಾಗೇ ಮರೆಮಾಚುತ್ತ ಬಂದ ಧರ್ಮಾತ್ಮರು "ಮೂರು ವರ್ಷಗಳಿಂದ ಅತ್ಯಾಚಾರ ಆಗುತ್ತಿದ್ದರೆ ಪ್ರೇಮಲತಾ ಮೊದಲ ಬಾರಿಯೇ ಏಕೆ ಬಹಿರಂಗ ಮಾಡಲಿಲ್ಲ?.... ಇದು ಪರಸ್ಪರ ಒಪ್ಪಿತ ಕ್ರಿಯೆ ಅಲ್ಲವಾ?" ಎಂಬ ಕುಚೋದ್ಯ ನಡೆಸುತ್ತಿದ್ದಾರೆ. ಅತ್ಯಾಚಾರ, ಅನ್ಯಾಯವಾದಾಗ ಅಥವಾ ರೇಪ್‌ನಂಥ ಕೊಳಕು ಕತೆಗಳನ್ನು ಚಪ್ಪರಿಸುವ ಮನಸ್ಸುಗಳು "ಹೌದೌದು...! ಹೌದೌದು...!!" ಎಂದು ತಲೆ ತೂಗಿಸುವಂತೆ ಮಾಡಬಲ್ಲ ಮಾತುಗಾರಿಕೆಯಿದು. ಸಂತ್ರಸ್ತೆಯ ಘೋರ ದುರಂತ ಸ್ಥಿತಿಗತಿಯಲ್ಲಿದ್ದು ಯೋಚಿಸಿದರೆ ಆಕೆ ಕೊನೆಯತನಕ ಗುರುವಿನ ಲೀಲೆಯಾಕೆ ಬಹಿರಂಗ ಮಾಡಲಿಲ್ಲವೋ ಅದೇ ಕಾರಣಕ್ಕಾಗಿ ಮೊದಲ ದಿನವೇ ಹೇಳುವ ಧೈರ್ಯವೂ ಬರಲಿಲ್ಲ. ಇದು ಅರ್ಥವಾಗಬೇಕಿದ್ದರೆ ನೈತಿಕ ತಳಹದಿಯ ತೆರೆದ ಮನಸ್ಸಿನ ಯೋಚನಾ ಬುದ್ಧಿ ಬೇಕಷ್ಟೇ!

ಆರಂಭದಲ್ಲೇ ಗುರುವಿನ ಹಲ್ಕಟ್‌ಗಿರಿ ಹೊರಗೆಡಹಲು ಆಕೆಗೆ ಹಲವು ಭಯಾನಕ ತೊಡಕುಗಳಿದ್ದವು. ಬಹಳ ಮುಖ್ಯವಾಗಿ ಮಠ ಮೇನಿಯಾದಲ್ಲಿ ಬುದ್ಧಿಗೆ ಮಂಕು ಹಿಡಿಸಿಕೊಂಡಿದ್ದ ಆಕೆಗೆ ನೈತಿಕತೆ-ಅನೈತಿಕತೆ, ಸರಿ-ತಪ್ಪುಗಳ ಅಂತರ ಅರ್ಥವಾಗುವಂತಿರಲಿಲ್ಲ. ಸುಳ್ಳು-ಅನಾಚಾರಗಳನ್ನೇ ರಾಮನಿಗೆ ಪ್ರಿಯವಾದ ಸತ್ಯ-ಸದಾಚಾರ ಎಂದು ವಿವರಿಸಿ ಒಲಿಸಿಕೊಳ್ಳುವ ವಾಕ್ಚಾತುರ್ಯದ ರಾಘುನ ಎದುರು ಆಕೆ ಪಳಗಿದ ಪ್ರಾಣಿಯಂತಾಗಿ ಹೋಗಿದ್ದರು. ಇದರ ಜತೆಗೇ ಸತ್ಯ ಹೇಳಿದರೆ ಇಡೀ ಕುಟುಂಬದ ಬದುಕು ಮಣ್ಣಾಗುವ ಹತ್ತಾರು ಆತಂಕ-ಅನುಮಾನ ಆಕೆಗೆ ಹಿಂಜರಿಕೆ ತಂದಿಟ್ಟಿತ್ತು. ಸ್ವಾಮಿ ಹಾಕಿಸಿದ್ದ ಆಣೆ-ಪ್ರಮಾಣ ಮತ್ತು ಶ್ರೀರಾಮನ ಶಾಪದ ಭಯ, ಮಾನ-ಮರ್ಯಾದೆ ಹೋಗುವ ಭಯ, ವಯಸ್ಸಿಗೆ ಬಂದ ಇಬ್ಬರು ಹೆಣ್ಮಕ್ಕಳ ಭವಿಷ್ಯ ಬರಡಾಗುವ ಆತಂಕ, ಗಂಡನೇ ಪರಿತ್ಯಜಿಸುವ ಅಂಜಿಕೆ, ಕೀಚಕ ಸ್ವಾಮಿಯ ಪ್ರಭಾವ- ಹಣಮದದ ಗಿಲೀಟಿನ ಎದುರು ತಾನು ಸುಳ್ಳಿ ಆಗುವ ಆತಂಕ, ಮಠದ ಪಾರುಪತ್ಯಗಾರರಲ್ಲಿ ಇರುವ ಸುದ್ದಿ ಮಾಧ್ಯಮದ ಕಿರಾತಕರು, ಪ್ರಭಾವಿ ಪೊಲೀಸ್ ಅಧಿಕಾರಿಗಳು ತನ್ನ ಹೈರಾಣಾಗಿಸುವ ಚಿಂತೆ, ರಾಘು ಮೊಬೈಲ್- ಐಪ್ಯಾಡಲ್ಲಿ ತನ್ನ ಅಶ್ಲೀಲ ಫೋಟೋ ತೆಗೆದಿಟ್ಟುಕೊಂಡಿರುವ ಅನುಮಾನ... ಇಂಥ ಕಾರಣದಿಂದ ಪ್ರೇಮಲತಾ ಮೊದಲ ದಿನ ಮತ್ತು ಆ ನಂತರದ ದಿನಗಳಲ್ಲಿ ಯಾರಿಗೂ ಹೇಳದೆ ಮನೋವೇದನೆಯಲ್ಲಿ ಕಳೆದದ್ದು!


ಇದಕ್ಕೆ ಸಮಾನಾಂತರವಾಗಿ ರಾಘುನ ಕಾಮಾಸುರ ತಂತ್ರಗಾರಿಕೆ ಪ್ರೇಮಲತಾ ಮೇಲೆ ಪ್ರಯೋಗ ಆಗುತ್ತಲೇ ಇತ್ತು. ಗಂಡ-ಹೆಂಡತಿ ನಡುವೆ ಅಂತರ-ವೈಮನಸ್ಯ ಹೆಚ್ಚಿಸುವ ಹರಾಮಿತನ ರಾಘು ದಿನದಿನವೂ ಮಾಡುತ್ತಿದ್ದ. ಮೊಬೈಲ್, ಎಸ್‌ಎಂಎಸ್, ವಾಟ್ಸ್‌ಅಪ್, ಫೇಸ್‌ಬುಕ್... ಇತ್ಯಾದಿಗಳಿಂದ ಪ್ರೇಮಲತಾರ ಬ್ರೈನ್‌ವಾಶ್ ನಡೆಸುತ್ತಲೇ ಇದ್ದ. ಸಂಪ್ರದಾಯಸ್ಥ ಕುಟುಂಬದ ಹೆಣ್ಣೊಬ್ಬಳಿಗೆ ಆಗಬಾರದ್ದು ಆದರೆ "ಟಾಪ್ ಸಿಕ್ರೇಟ್"ನಲ್ಲಿ ಇಡುವರಲ್ಲವಾ? ಯಾವ ಕಾರಣಕ್ಕಾಗಿ ಹೆಣ್ಣಿನ ಕುಟುಂಬದವರು ರಹಸ್ಯ ಕಾಪಾಡುವರೋ ಅದೇ ಕಾರಣಕ್ಕೆ ಪ್ರೇಮಲತಾರೂ ಸುಮ್ಮನಿದ್ದರು. ಬಹುಶಃ ರಾಘುನ ಮಠ ತಾಲಿಬಾನಿಗಳೆಲ್ಲ ಸೇರಿ ಆಕೆಯ ಮೇಲೆ ಸುಳ್ಳು ಬ್ಲ್ಯಾಕ್‌ಮೇಲ್ ಕೇಸು ಹಾಕದಿದ್ದರೆ ಈ ಕಾವಿಯ ಕಾಮಕಾಂಡ ಹೊರಬರುತ್ತಲೇ ಇರಲಿಲ್ಲವೇನೋ?

ಯಾರೇನೇ ಹೇಳಲಿ; ಸ್ತ್ರೀ ಲಂಪಟ ರಾಘು ಸ್ವಾಮಿ ಆಕಾಶಕ್ಕೆ ಮುಖ ಮಾಡಿ ಉಗುಳಿದಂತಾಗಿದೆ!!



ರವಿವರ್ಮ ಕುಮಾರ್

ರಾಘು ಭಟ್ಟನ ವಕೀಲಿಕೆ ಟೀಮಿನಲ್ಲಿ ಘಟಾನುಘಟಿಗಳೇ ದ್ದಾರೆ. ಇಬ್ಬಿಬ್ಬರು ಮಾಜಿ ಅಡ್ವೊಕೇಟ್ ಜನರಲ್, ಬ್ಬರು ಹಿರಿಯ ವಕೀಲರು, ಒಂದಿಷ್ಟು ಮರಿ ಡ್ವೊಕೇಟ್‌ಗಳ ಹಿಂಡೂ ಇದೆ. ಬಿ.ವಿ. ಆಚಾರ್ಯ ಮತ್ತು ಅಶೋಕ ಹಾರ್ನಳ್ಳಿ ಹಿಂದಿನ ಎಜಿಗಳು, ಪಿ.ಎನ್. ನಮೋಹನ್ ನುರಿತ ವಕೀಲರಾದರೆ ಆರ್.ಜಿ. ಶವನ್‌ರಂಥ ತೂಕದ ನ್ಯಾಯವಾದಿ ತುಂಬ ತುರ್ವರ್ಜಿಯಿಂದ ರಾಘು ರಕ್ಷಣೆಗೆ ಸಮರ ಮಾಡುತ್ತಿದ್ದಾರೆ. ಷ್ಟಾದರೂ ಈಗೀಗ ಪಾಪಪ್ರಜ್ಞೆಯ ರಾಘು ಗ್ಯಾಂಗಿಗೆ ಡ್ಯಾಕೋ ಜೈಲಿನ ಕನಸುಗಳೇ ಬೀಳುತ್ತಿವೆ. ಎ.ಜಿ.



ಬಿ.ಟಿ. ವೆಂಕಟೇಶ್

ವರ್ಮಕುಮಾರ್ ನ್ಯಾಯ ನಿಷ್ಠೆಯಿಂದ ಕರ್ತವ್ಯ ಯಿಸುತ್ತಿರುವುದು ಸ್ವಾಮಿಗೆ ನಡುಕ ಮೂಡಿಸಿಬಿಟ್ಟಿದೆ. ರಾಘು ನ್ಯಾಯಾಲಯಗಳಲ್ಲಿ ಪ್ರಭಾವ ಬೀರಿದ್ದರಿಂದಲೇ ಗೆ ಸಂಕಷ್ಟಗಳ ಸರಮಾಲೆ ಎದುರಾಯ್ತೆಂದು ಸಂತ್ರಸ್ತೆ ಮಲತಾ ರಾಷ್ಟ್ರಪತಿ, ಸುಪ್ರೀಂಕೋರ್ಟಿಗೆ ದೂರು ಸಿದ್ದರು. ಬೆಳಗ್ಗೆ ಬಂಧನವಾದರೆ ಸಂಜೆ ಜಾಮೀನಾಗುವ ಕ ಬ್ಲ್ಯಾಕ್‌ಮೇಲ್ ಕೇಸಲ್ಲಿ ಪ್ರೇಮಲತಾ ದಂಪತಿಗಳನ್ನು ಬ್ಬರಿ ಮೂರು ವಾರ ಜೈಲಲ್ಲಿ ಇಡುವ 'ನ್ಯಾಯ ಸ್ಥೆ' ಮಾಡಿದ್ದ ಮಠದ ಮಾಫಿಯಾ ಪ್ರೇಮಲತಾ ಕಿರುವ ಅತ್ಯಾಚಾರ ಕೇಸನ್ನು ವಜಾ ಮಾಡುವಂತೆ ಕೋರ್ಟ್‌ಗೆ ಹೋಯ್ತು. ಅಲ್ಲಿ ತಿಂಗಳುಗಟ್ಲೆ ತಲೆ ಸಿಕೊಳ್ಳಲು ರಾಘುಗೆ ಅವಕಾಶ ಸಿಕ್ಕಿತು. ಅಂತಿಮವಾಗಿ ಸದಸ್ಯ ಪೀಠ ರಾಘು ಸಿಐಡಿ ವಿಚಾರಣೆ ಜರಾಗುವುದು ಕಡ್ಡಾಯ ಎಂದಿತು.

ಈ ತೀರ್ಪು ಬೆಳಗ್ಗೆ ಹೈಕೋರ್ಟ್‌ನಲ್ಲಿ ಬಂತು. ಅದಾದ ಮೂರೇ ತಾಸಿನಲ್ಲಿ ಸೆಷನ್ಸ್ ನ್ಯಾಯಾಲಯ ರಾಘುಗೆ ತ್ಕಾಲಿಕ ನಿರೀಕ್ಷಣಾ ಜಾಮೀನು ಕೊಟ್ಟುಬಿಟ್ಟಿತು. ಮಾನ್ಯರಿಗೆ ಸಿಗದ ತ್ವರಿತ ನ್ಯಾಯ ರಾಘುಗೆ ದಕ್ಕಿದ್ದು ಂಗ್‌ನ ಅನುಮಾನಕ್ಕೆ ಕಾರಣವಾಯ್ತು. ಹೀಗೆ ಎರಡ್ಮೂರು ತಾತ್ಕಾಲಿಕ ಜೀವದಾನ ಪಡೆದುಕೊಂಡ ರಾಘು ಕಾಯಂ ರೀಕ್ಷಣಾ ಜಾಮೀನು ಪಡೆದುಕೊಳ್ಳಲು ಯಶಸ್ವಿಯಾದ. ಲ್ಲಿ ರಾಘುನ ಕಾವಿ-ಕಾಂಚಾಣ ಶಕ್ತಿ ಮಹಿಮೆ ಎಂಬ ರ್ಚೆಗಳೂ ಭುಗಿಲೆದ್ದಿವೆ. ಸಿಐಡಿ ತನಿಖೆಗೆ ಒಲ್ಲದ ಮನಸ್ಸಿನಿಂದ ಸಬೂಬು ಮಾಡುತ್ತಲೇ ಹಾಜರಾದ ರಾಘು ಡಿಕಲ್ ಟೆಸ್ಟ್ ಮಾತ್ರ ಬೇಡವೆಂದು ಹಠಹಿಡಿದು ಕೂತುಬಿಟ್ಟ. ಹೈಕೋರ್ಟ್ ಮುಚ್ಚಕೊಂಡು ವೈದ್ಯಕೀಯ ರೀಕ್ಷೆಗೆ ಹೋಗೆಂದಾಗ ಜೈಲೂಟದ ಭಯದಿಂದ ಟೆಸ್ಟ್ ಕೊಡಿಸಿಕೊಂಡ [illegible]

ಈಗಾತ ಏಕ ಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಕೋರ್ಟಿಗೆ ಹೋಗಿದ್ದಾನೆ; ಅತ್ಯಾಚಾರ ಕೇಸ್ ರದ್ದು ಡಿ ಎನ್ನುತ್ತಿದ್ದಾನೆ. ಆದರೆ ಅಲ್ಲಾತನಿಗೆ ನಿಷ್ಠುರ ಯವಾದಿ ಎಜಿ ರವಿವರ್ಮ ಕುಮಾರ್ 'ಗುಮ್ಮ' ಗಾಲಾಗಿಸುತ್ತಿದ್ದಾರೆ! ಮಧ್ಯರಾತ್ರಿಯ ವಾಮಾಚಾರ ಡುತ್ತಿರುವ 'ಕರಕಾಯ ಕಪೋಕ ಪ್ರವೀಣ' ರಾಘು ನ್ಯಾಯಾತ್ಮಕವಾಗಿಯೂ ವಾಮಮಾರ್ಗವೇ ಹಿಡಿದಿದ್ದಾನೆ. ರಿ ಕಾನೂನುಶಿಸ್ತ ಮಾತ್ರ ಕಟ್ಟುನಿಟ್ಟು ಬುತ್ತಿಯಂತಾಗಿದೆ!!

● ಶುದ್ಧೋಧನ

ಚಿತ್ರದುರ್ಗ: ಹಿಂಜಾವೆ ಸಂಚಾಲಕನ 'ಲವ್ ಹೈಜಾಕ್'!

ದೊಡ್ಡವರ ಮನೆ ಸಂಗತಿ ಎನ್ನುವ ಕಾರಣಕ್ಕೆ ಕಳೆದ ಎರಡು ತಿಂಗಳಿನಿಂದ 'ಗುಪ್ತ'ವಾಗಿದ್ದ ಅನೈತಿಕ ಪ್ರೇಮ ಪ್ರಸಂಗವೊಂದು ಇದೀಗ ಚಿತ್ರದುರ್ಗದ ತುಂಬಾ ಸದ್ದು ಮಾಡುತ್ತಿದೆ. ದುರ್ಗದ ಸಭ್ಯಸ್ಥ ಕುಟುಂಬವೆಂದೇ ಹೆಸರಾದ ಪ್ರಿನ್ಸ್ ಮಹಾದೇವಪ್ಪನವರ ಮನೆ ಸೊಸೆಯನ್ನೇ ಹಲಾಲುಕೋರನೊಬ್ಬ ಹೈಜಾಕ್ ಮಾಡಿಕೊಂಡು ಹೊತ್ತೊಯ್ದಿದ್ದಾನೆ. ಕುಚೋದ್ಯವೆಂದರೆ ಹೀಗೆ ಕಂಡವರ ಹೆಂಡತಿಯನ್ನು ಎಗರಿಸಿಕೊಂಡು ಹೋಗಿರೋದು ಪರಂಪರೆ, ಸಂಸ್ಕೃತಿ, ಸ್ತ್ರೀ ಗೌರವ, ಭರತಮಾತೆ ಅಂತೆಲ್ಲಾ ಮುಂಡಾಮೋಚುವಂತೆ ಭಾಷಣ ಬಿಗಿಯುವ ಹಿಂದೂ ಜಾಗರಣಾ ವೇದಿಕೆಯ ಜಿಲ್ಲಾ ಸಂಚಾಲಕ. ಆತನ ಹೆಸರು ಶ್ರೀಧರ್. ಓದಿದ್ದು ಲಾ ಆದರೂ, ಮಾಡುತ್ತಿರೋದು ಮಾತ್ರ ಪಕ್ಕಾ ಲಫಂಗ ಕೆಲಸಗಳು.

ಕಳೆದ ಅಕ್ಟೋಬರ್ 18ರಂದು ಚಿತ್ರದುರ್ಗದ ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಿನ್ಸ್ ಮಹಾದೇವಪ್ಪನವರ ಮೊಮ್ಮಗ ಸಚಿನ್ ತನ್ನ ಹೆಂಡತಿ ನಾಪತ್ತೆ ಆಗಿದ್ದಾಳೆ ಎಂದು ದೂರು ಕೊಟ್ಟಾಗಲೇ ಸಣ್ಣದೊಂದು ಗುಲ್ಲು ಶುರುವಾಗಿತ್ತು. ಆತನ ಹೆಂಡತಿ ಉಷಾರಾಣಿ ಹಾಗೂ ಹಿಂಜಾವೆ ವೀರ ಶ್ರೀಧರನ ಹಕ್ಕಾಟಗಳನ್ನು ಕಂಡಿದ್ದ ಕೆಲವರು ಆಕೆಯ ನಾಪತ್ತೆ ಪ್ರಕರಣದ ನಂಟನ್ನು ಸುಲಭವಾಗಿ ಊಹಿಸಿಕೊಂಡಿದ್ದರು. ಆ ಸತ್ಯ ಕೊನೆಗೂ ಸಚಿನ್‌ಗೆ ಅರ್ಥವಾದ್ದರಿಂದ ಅದೇ ತಿಂಗಳ 27 ರಂದು ಶ್ರೀಧರ ಎನ್ನುವ ಪೋಲಿ ತನ್ನ ಹೆಂಡತಿಯನ್ನು 'ಕಿಡ್ನಾಪ್' ಮಾಡಿದ್ದಾನೆ ಎಂಬ ಮತ್ತೊಂದು ಕೇಸ್ ದಾಖಲಿಸಿದ್ದ. ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಇಮ್ರಾನ್‌ಬೇಗ್ ಅವತ್ತೆ 366ನೇ ಸೆಕ್ಷನ್ ಹಾಕಿ ಎಫ್‌ಐಆರ್ ಹರಿದು ಸಚಿನ್ ಕೈಗಿಟ್ಟು ತೆಪ್ಪಗಾಗಿದ್ದರು. ಅದ್ಯಾವ ಒತ್ತಡ ಬಂತೋ ಗೊತ್ತಿಲ್ಲ ಪರಸ್ತ್ರೀ ಚೋರ ಶ್ರೀಧರನ ವಿರುದ್ಧ ಪೊಲೀಸರು ಕಾರ್ಯಾಚರಣೆಗೆ ಇಳಿಯಲೇ ಇಲ್ಲ.

ಅಸಲಿಗೆ ಮಹಾದೇವಪ್ಪನವರ ಕುಟುಂಬಕ್ಕೆ ದುರ್ಗದಲ್ಲಿ ಭಾರೀ ಗೌರವವೇ ಇದೆ. ಕಾಟನ್ ಬ್ಯುಸಿನೆಸ್‌ನಲ್ಲಿ ಕಿಂಗಾಗಿದ್ದ ಮಹಾದೇವಪ್ಪನವರು ದಾನಧರ್ಮದಲ್ಲಿ ಎತ್ತಿದ ಕೈ. ಹಾಗಾಗಿಯೇ ಅವರ ಕುಟುಂಬವನ್ನು ಜನ 'ಪ್ರಿನ್ಸ್ ಫ್ಯಾಮಿಲಿ' ಅಂತಲೇ ಗುರುತಿಸುತ್ತಾರೆ. ಅವರ ಮಗನಾದ ಲೋಕನಾಥ್ ಕೂಡಾ ಅಪ್ಪನಷ್ಟೆ ಹೆಸರು ಮಾಡಿದವರು. ಆ ಲೋಕನಾಥ್‌ರ ಮಗನೇ ಸಚಿನ್.


ಸಚಿನ್ ಉಡಾಳನೇನಲ್ಲ. ಅಜ್ಜನ ವ್ಯಾಪಾರಿ ವೃತ್ತಿ ಅವನಿಗೂ ಅಂಟಿಕೊಂಡಿತ್ತು. ತಂದೆಯಿಂದ ನಯಾಪೈಸೆ ಪಡೆಯದೆ ದುರ್ಗದ ಪತಾಂಜಲಿ ಆಸ್ಪತ್ರೆಯ ಹತ್ತಿರವೇ ಟವರ್ಸ್ ಕಂಪ್ಯೂಟರ್ ಸೆಂಟರ್ ತೆರೆದು ವ್ಯಾಪಾರಕ್ಕಿಳಿದ. ಅಲ್ಲಿಂದ ವ್ಯವಹಾರದಲ್ಲಿ ಆತ ಹಿಂದಿರುಗಿ ನೋಡಿದ್ದೇ ಇಲ್ಲ, ಅಜ್ಜನಷ್ಟು ಅಲ್ಲದಿದ್ದರೂ ಕೆಲವು ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ. ಅಂತವನಿಗೆ 2006ರಲ್ಲಿ ಮದುವೆ ಮಾಡಲು ನಿರ್ಧರಿಸಿದ ತಂದೆ ಲೋಕನಾಥ್ ದಾವಣಗೆರೆಯ ದಿವಂಗತ ಮಹೇಂದ್ರ, ಉಮಾದೇವಿಯವರ ಮಗಳಾದ ಉಷಾರಾಣಿಯನ್ನು ಸೊಸೆಯನ್ನಾಗಿ ತಂದುಕೊಂಡಿದ್ದರು. ಉಷಾರಾಣಿ ದಾವಣಗೆರೆಯ ಆರ್.ಎಲ್ ಲಾ ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದರೂ ಪ್ರಾಕ್ಟೀಸಿಗಂತ ಹೋದವಳಲ್ಲ. ಮದುವೆಯಾದ ಮೊದಲ ಮೂರು ವರ್ಷ ಇಬ್ಬರ ನಡುವೆ ಯಾವ ತಕರಾರೂ ಇರಲಿಲ್ಲ. ಆದರೆ ಉಷಾರಾಣಿಗೆ ತನ್ನ ಗಂಡ ನೋಡಲು ಸುಂದರವಾಗಿದ್ದರೂ ಸ್ಲಿಮ್ ಆಗಿಲ್ಲ ಎನ್ನುವ ಕೊರಗಿತ್ತು. ಈ 'ಸಣ್ಣ' ಸಂಗತಿ ಅವರಿಬ್ಬರ ದಾಂಪತ್ಯದಲ್ಲಿ ಸಣ್ಣ ಬಿರುಕು ಮೂಡುವಂತೆ ಮಾಡಿತ್ತು.

ಆಕೆ ತನ್ನ ಗಂಡನ ಸ್ಲಿಮ್‌ನೆಸ್ ಬಗ್ಗೆ ಅದೆಷ್ಟು ಚಿಂತಿತಳಾಗಿದ್ದಳೆಂದರೆ ಒಮ್ಮೆ ಆಂಧ್ರ ಮೂಲದ ನಕಲಿ ವೈದ್ಯ ರಾಮಮೋಹನ ರೆಡ್ಡಿ ಎಂಬಾತ ದಪ್ಪಗಿದ್ದ ಗಂಡನನ್ನು ತೆಳ್ಳಗೆ ಮಾಡುತ್ತೇನೆ ಅಂತ ಕೊಟ್ಟ ಸ್ಲಿಮ್ಮಿಂಗ್ ಪೌಡರನ್ನು ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ಹಾಲಲ್ಲಿ ಮಿಕ್ಸ್ ಮಾಡಿ ಗಂಡನಿಗೆ ಕೊಡಲು ಶುರುಮಾಡಿದ್ದಳು. ಅದರಿಂದ ಸಚಿನ್ ಸ್ಲಿಮ್ ಆಗುವ ಬದಲು ಸೈಡ್ ಎಫೆಕ್ಟ್‌ನಿಂದ ತನ್ನ ಬೆನ್ನು ಮೂಳೆಯನ್ನೇ ಸವೆಸಿಕೊಂಡು ಪರದಾಡುವಂತಾಗಿತ್ತು. ಕೊನೆಗೆ 2012ರಲ್ಲಿ ಆ ನಕಲಿ ವೈದ್ಯನ ವಿರುದ್ಧ ಕೇಸು ಜಡಿದು ಪೌಡರ್‌ನಿಂದ ಮುಕ್ತಿ ಪಡೆದುಕೊಂಡಿದ್ದ. ಆದರೂ ಅವನ ಬೆನ್ನು ಮೂಳೆಗಾಗಿದ್ದ ಘಾಸಿ ಬಹಳ ದಿನಗಳ ಕಾಲ ಆತನನ್ನು ಬಾಧಿಸಿತ್ತು.

ಈ ನಡುವೆ ಕಾನೂನು ಪದವೀಧರೆಯಾಗಿದ್ದ ಉಷಾರಾಣಿ ತಾನು ಲಾ ಪ್ರಾಕ್ಟೀಸ್ ಮಾಡುವುದಾಗಿ ಗಂಡನ ಮುಂದೆ ಬೇಡಿಕೆ ಇಟ್ಟಿದ್ದಳು. ಅದೆಲ್ಲಾ ಏನು ಬೇಡ ತನ್ನ ಕಂಪ್ಯೂಟರ್ ಶೋರೂಮನ್ನೇ ನೋಡಿಕೊಂಡಿರು ಅಂತ ಸಚಿನ್ ಎಷ್ಟು ಹೇಳಿದರೂ ಆಕೆ ತನ್ನ ಹಠ ಬಿಟ್ಟಿರಲಿಲ್ಲ. ಕಾನೂನು ಪದವೀಧರೆಯಾಗಿದ್ದರೂ ಆಕೆ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರಲಿಲ್ಲ. ಕಡೆಗೆ ಸಚಿನ್‌ನೇ 20 ಸಾವಿರ ಖರ್ಚುಮಾಡಿ ಹೆಸರು ನೋಂದಾಯಿಸಿ, ಸಿ.ಎಂ.ವೀರಣ್ಣ ಎನ್ನುವ ಸೀನಿಯರ್ ಬಳಿ ಪ್ರಾಕ್ಟೀಸ್‌ಗೆ ಬಿಟ್ಟಿದ್ದ. ಅದ್ಯಾಕೊ ಅವಳಿಗೆ ಅಲ್ಲಿ ಸರಿಬರದ ಕಾರಣ ಅಬ್ದುಲ್ ಅಜೀಜ್ ಎಂಬ ಮತ್ತೊರ್ವ ಸೀನಿಯರ್ ಬಳಿ ಲಾ ಪ್ರಾಕ್ಟೀಸ್‌ನ ತನ್ನ ಎರಡನೇ ಇನ್ನಿಂಗ್ಸ್ ಶುರುಮಾಡಿದ್ದಳು. ಆಗಲೇ ಅವಳಿಗೆ ಹಿಂದೂ ಜಾಗರಣ ವೇದಿಕೆಯ ಅಪಾಪೋಲಿ ಶ್ರೀಧರನ ಗೆಳೆತನವಾಗಿದ್ದು.



ಹುಂಬ ಶ್ರೀಧರ



ಸಚಿನ್-ಉಷಾರಾಣಿ

ಹುಟ್ಟಾ ಚೆಡ್ಡಿಯಾದ ಶ್ರೀಧರ ಹಿಂದೂ ಜಾಗರಣಾ ವೇದಿಕೆಯ ಸಂಚಾಲಕ. ಚಿತ್ರದುರ್ಗದ ಕೋಮು ಸೌಹಾರ್ದತೆಗೆ ಧಕ್ಕೆ ತಂದ ಪರಮ ಪಾತಕಿ. ಹೇಳೀಕೇಳಿ ಚಿತ್ರದುರ್ಗದಲ್ಲಿ ವೈಚಾರಿಕ ಗೆಳೆಯರ ಪಡೆಯೇ ಇದೆ. ಪ್ರಗತಿಪರ ಚಳವಳಿಗೆ ಹೆಸರಾದ ಜಿಲ್ಲೆ ಇದು. ಚಿತ್ರದುರ್ಗದಲ್ಲಿ ಶುರುವಾದ ನೀರಾವರಿ ಹೋರಾಟದ ಫಲವಾಗಿಯೇ ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೂ ನೀರಾವರಿ ಭಾಗ್ಯ ಒದಗಿಬಂದದ್ದು. ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್, ದಿವಂಗತ ವೈಕುಂಠರಾಜು, ಮಹೇಶ್‌ಬಾಬು, ಚಳ್ಳಕೆರೆ ಬಸವರಾಜ, ದಲಿತ ಸಂಘರ್ಷ ಸಮಿತಿಯ ಜಯಣ್ಣ ಸಾಹಿತಿ ಬಿ.ಎಲ್.ವೇಣುರಂತಹವರ ವೈಚಾರಿಕ ಕ್ರಿಯಾಶೀಲ ಚಟುವಟಿಕೆಗಳಿಂದ ದುರ್ಗದ ಸಾಮಾಜಿಕ ಸಮಾನತೆಗಾಗಲಿ, ಕೋಮು ಸೌಹಾರ್ದತೆಗಾಗಲಿ ಎಂದೂ ಧಕ್ಕೆ ಬಂದಿರಲಿಲ್ಲ.

ಆದರೆ ಅದೇ ನೆಮ್ಮದಿ ಇತ್ತೀಚಿನ ದಿನಗಳಲ್ಲಿ ಉಳಿದಿಲ್ಲ. ನಕಲಿ ದೇಶಭಕ್ತರ ಉಪಟಳ ಜೋರಾಗುತ್ತಿದೆ. ಚೆಡ್ಡಿ ಚತುರರ ಚಮತ್ಕಾರಗಳು ಕೋಮು ಸೌಹಾರ್ದತೆಗೆ ಕಲ್ಲು ಹಾಕುತ್ತಿವೆ. ಹಾಲಿ ಬಿಜೆಪಿ ಶಾಸಕ ತಿಪ್ಪಾರೆಡ್ಡಿಯೇ ಇಂತಹ ಹಿಂದೂವಾದಿಗಳ ಪಾಲಿನ ಗಾಡ್‌ಫಾದರ್! ಇಂಥಾ ವಾತಾವರಣದಲ್ಲೇ ಶ್ರೀಧರ ಎನ್ನುವ ಪಟಿಂಗ ಹಿಂದೂ ಜಾಗರಣಾ ವೇದಿಕೆಯ ಸಂಚಾಲಕನಾಗುವ ಮೂಲಕ ದುರ್ಗದಲ್ಲಿ ಧಗೆ ಹೊತ್ತಿಸುವ ಕೆಲಸ ಮಾಡಿದ್ದ. ಈತ ಹಿಂದೂ ಜಾಗರಣಾ ವೇದಿಕೆಯ ಸಂಚಾಲಕನಾಗುತ್ತಲೇ ಮನುವಾದಕ್ಕೆ ಪುಷ್ಟಿನೀಡಿದ್ದ. 'ಲವ್ ಜಿಹಾದ್' ಹೆಸರಲ್ಲಿ ಅನ್ಯಕೋಮಿನ ಹುಡುಗರ ವಿರುದ್ಧ ಕೆಂಡಕಾರಿದ್ದ. ಹಿಂದೂ ಮಹಿಳೆಯರನ್ನು ಭರತಮಾತೆ ಎಂದೆಲ್ಲಾ ಕೊಂಡಾಡಿ ಜನರಲ್ಲಿ ಕೇಸರಿ ಕಲ್ಪನೆಗಳನ್ನು ಬಿತ್ತುವ ಯತ್ನ ಮಾಡಿದ್ದ. ಬಹುತೇಕ ಚೆಡ್ಡಿವೀರರಂತೆ ಅವನ ಮಾತಿಗೂ, ಅವನ ನಡೆಗೂ ಅಜಗಜಾಂತರ ವ್ಯತ್ಯಾಸವಿತ್ತು. ಮೇಲ್ನೋಟಕ್ಕೆ ಸ್ತ್ರೀಯರನ್ನು 'ಮಾತೆ' ಎಂದೆಲ್ಲಾ ಕರೆಯುತ್ತಿದ್ದ ಶ್ರೀಧರ ಪರಸ್ತ್ರೀಯರನ್ನು ಕಂಡರೆ ಒಳಗೊಳಗೇ ರಮಿಸುವ ವಿಕೃತ ಕಾಮಿ. ಮರ್ಯಾದಸ್ಥ ಮನೆಯ ಸೊಸೆಯನ್ನೇ ಹಾರಿಸಿಕೊಂಡು ಹೋಗಿರೋದೇ ಇದಕ್ಕೆ ಸಾಕ್ಷಿ!

ಮಧ್ಯರಾತ್ರಿ ಎಸ್‌ಎಂಎಸ್

ಗಂಡ ಸ್ಲಿಮ್ ಇಲ್ಲ ಎನ್ನುವ ನೆಪ ಇಟ್ಟುಕೊಂಡು ಕೊರಗುತ್ತಿದ್ದ ಉಷಾರಾಣಿಯ ವೀಕ್ನೆಸ್ ಅರ್ಥಮಾಡಿಕೊಂಡ ಶ್ರೀಧರ ಆಕೆಯನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದ್ದ. ಹೇಗೂ ಈತನೂ ಕಾನೂನು ಪದವಿ ಮುಗಿಸಿದ್ದರಿಂದ ಅವಳ ಲಾ ಪ್ರಾಕ್ಟೀಸು ಇಬ್ಬರನ್ನೂ ಮತ್ತಷ್ಟು ಹತ್ತಿರಕ್ಕೆ ತಂದಿತ್ತು.

ಚೆಡ್ಡಿಗಳ 'ಸಂವಿಧಾನ'ದ ಪ್ರಕಾರ ಹೇಳುವುದಾದರೆ ಮದುವೆಯಾದ ಪರಸ್ತ್ರೀ ಪರ ಪುರುಷನಿಗೆ ತಾಯಿಗೆ ಸಮಾನ. ಅಂತಹ ತಾಯಿಯ ಮೊಬೈಲ್‌ಗೇ ಶ್ರೀಧರ್‌ನ ಮೊಬೈಲ್‌ನಿಂದ ಮಧ್ಯರಾತ್ರಿ ಎಸ್‌ಎಂಎಸ್ ಹರಿದಾಡಲು ಶುರು ಮಾಡಿದ್ದವು. 'ನಿನ್ನನ್ನು ಬಿಟ್ಟಿರಲಾರೆ, ಓಡಿಹೋಗೋಣ' ಎಂಬರ್ಥದ ಥರ್ಡ್‌ಕ್ಲಾಸ್ ಮೆಸೇಜುಗಳು ಉಷಾರಾಣಿಯನ್ನು ಮರುಳು ಮಾಡಿದ್ದವು. ತಮ್ಮಿಬ್ಬರ ವಿಚಾರ ಮನೆಯವರಿಗೆ ಗೊತ್ತಾಗದಂತೆ ಉಷಾರಾಣಿ ಅದೆಷ್ಟೇ ಎಚ್ಚರಿಕೆ ವಹಿಸಿದ್ದರೂ ಸಣ್ಣ ಅನುಮಾನ ಸಚಿನ್‌ಗೆ ಶುರುವಾಗಿತ್ತು. 2009ರಲ್ಲಿ ಹೆರಿಗೆಗೆಂದು ಉಷಾ ತವರು ಮನೆಸೇರಿದ್ದ ತಡ ಶ್ರೀಧರ ದಾವಣಗೆರೆಗೂ ಹೋಗಿ ಬರತೊಡಗಿದ್ದ. ಇಬ್ಬರ ನಡುವಿನ ಸಂಬಂಧ ಗಾಢವಾದಂತೆಲ್ಲ ಉಷಾ ಕೂಡ ಬದಲಾಗತೊಡಗಿದಳು. ಬಾಣಂತನ ಮುಗಿಸಿಕೊಂಡು ಮುದ್ದಾದ ಗಂಡು ಮಗುವಿನೊಂದಿಗೆ ಗಂಡನ ಮನೆಗೆ ವಾಪಾದಳಾದರೂ ಅವಳ ವರ್ತನೆ ಸಂಪೂರ್ಣ ಬದಲಾಗಿತ್ತು.

ಒಮ್ಮೆ ಉಷಾರಾಣಿಯ ಮೊಬೈಲನ್ನು ಸಚಿನ್ ಚೆಕ್ ಮಾಡಿದಾಗ ಇನ್‌ಬಾಕ್ಸ್ ತುಂಬೆಲ್ಲಾ ಶ್ರೀಧರನ ವಿಕೃತ ಮನಸಿನ ಸಂದೇಶಗಳು ದಾಖಲಾಗಿದ್ದು ಗೊತ್ತಾಯಿತು. ಅವಳ ಅಸಲಿಯತ್ತು ಗೊತ್ತಾಗುತ್ತಿದ್ದಂತೆಯೇ ಸಚಿನ್ ಡೈವೋರ್ಸ್ ಬಗ್ಗೆ ಮಾತನಾಡಿದ್ದ. ಆಗ ಗಾಬರಿಗೆ ಬಿದ್ದ ಉಷಾ ಅತ್ತೆಯ ಕಾಲಿಡಿದು ತಪ್ಪಾಯಿತೆಂದು ಗೋಳಾಡಿ ಬಚಾವಾಗಿದ್ದಳು. ಇದೇ ಸಂದರ್ಭದಲ್ಲೇ ಸಚಿನ್ ಹೆಂಡತಿ ಪ್ರಾಕ್ಟಿಸಿಗೆ ಹೋಗೊದು ಬೇಡ ಎಂದು ಬಿಡಿಸಿದ್ದ. ಇತ್ತ ಶ್ರೀಧರನಿಗೂ ಸಚಿನ್ ಎಚ್ಚರಿಕೆ ನೀಡಿದ್ದ. ವಕೀಲರೆಲ್ಲ ಸೇರಿ ಶ್ರೀಧರನ ಮಾರಿಗೆ ಕ್ಯಾಕರಿಸಿ ಉಗಿದು 'ಇಂಥಾ ಮನೆಮುರುಕ ಕೆಲಸ ಮಾಡಬೇಡ' ಎಂದು ಬುದ್ಧಿ ಹೇಳಿದ್ದರು. ಅದಾದ ಒಂದು ವರ್ಷ ಇಬ್ಬರ ನಡುವೆ ಸಂಪರ್ಕವೇ ಇಲ್ಲವೇನೋ ಎಂಬಂತಿದ್ದರು; ಆದರೆ ಅಂತರ್ಯದಲ್ಲಿ ಸಂಬಂಧಕ್ಕೇನು ಮುಕ್ಕಾಗಿರಲಿಲ್ಲ.

ಹುಂಬ ಶ್ರೀಧರ ಉಷಾರಾಣಿಯ ನೆನಪಲ್ಲಿ ಹುಚ್ಚಾಟ ಶುರುವಿಟ್ಟುಕೊಂಡು ತಿರುಗಾಡತೊಡಗಿದ್ದ. ಜೊತೆಗೆ ಉಷಾರಾಣಿಯ ತಲೆ ಕೆಡಿಸುವುದನ್ನೂ ಮರೆತಿರಲಿಲ್ಲ. ಕೊನೆಗೊಮ್ಮೆ ತಾವಿಬ್ಬರೂ ಮನೆಬಿಟ್ಟು ಓಡಿಹೋಗುವ ಆಯ್ಕೆಯನ್ನು ಉಷಾ ಮುಂದಿರಿಸಿದ್ದ. ಮುಕ್ಕಾಲು ಪಾಲು ನೀರಿಗಿಳಿದಿದ್ದ ಉಷಾರಾಣಿಗೆ ಬೇರೆ ಆಯ್ಕೆಯೇ ಇರದಿದ್ದರಿಂದ ಶ್ರೀಧರ್‌ನ ಆಣತಿಗೆ ಒಪ್ಪಿಕೊಂಡಿದ್ದಳು. ಅದರಂತೆ ಇದೇ ಅಕ್ಟೋಬರ್ ತಿಂಗಳಿನಲ್ಲಿ ತವರುಮನೆಗೆ ಹೋಗಿ ಬರುವುದಾಗಿ ಹೇಳಿ ಮಗುವಿನ ಸಮೇತ ಆಕೆ ದಾವಣಗೆರೆಗೆ ಹೋಗಿದ್ದಳು. ಹಾಗೆ ಹೊರಟವಳು ಖಾಲಿ ಕೈಯಲ್ಲೇನು ಹೋಗಿರಲಿಲ್ಲ. ಹಲಾಲುಕೋರ ಶ್ರೀಧರನ ಐಡಿಯಾದಂತೆ ಮೂರು ಲಕ್ಷ ನಗದು ಮತ್ತೊಂದಷ್ಟು ಒಡವೆಗಳನ್ನೂ ಕೊಂಡೊಯ್ದಿದ್ದಳು. ಕೆಲ ದಿನ ತವರು ಮನೆಯಲ್ಲಿದ್ದ ಆಕೆ 17ನೇ ತಾರೀಖು ಗಂಡನ ಮನೆಗೆ ಹೋಗುತ್ತಿರುವುದಾಗಿ ಹೇಳಿದ್ದಳು. ಅಗ ಉಷಾಳ ತಾಯಿ ಉಮಾದೇವಿ ದುರ್ಗದಲ್ಲಿದ್ದ ಸಚಿನ್‌ಗೆ ಫೋನ್ ಮಾಡಿ ಮಗಳು ಹೊರಟಿರುವ ವಿಷಯ ತಿಳಿಸಿದ್ದಳು. ಹೆಂಡತಿ ಮೇಲೆ ಸಂಪೂರ್ಣ ನಂಬಿಕೆಯನ್ನೆ ಕಳೆದುಕೊಂಡಿದ್ದ ಸಚಿನ್ 'ಅವಳೊಬ್ಬಳನ್ನೇ ಕಳಿಸಬೇಡಿ. ನೀವೂ ಜೊತೆಗೆ ಬಂದು ಬಿಟ್ಟುಹೋಗಿ' ಎಂದಿದ್ದ. ಆದರೆ ತಾಯಿಯನ್ನು ಅವಾಯ್ಡ್ ಮಾಡುವಲ್ಲಿ ಯಶಸ್ವಿಯಾದ ಉಷಾ ಮಗುವನ್ನು ಕರೆದುಕೊಂಡು ಒಬ್ಬಳೇ ಹೊರಟಳು. ಮೊದಲೇ ಪ್ಲಾನ್ ಹಾಕಿದ್ದಂತೆ ಅವತ್ತೇ ಶ್ರೀಧರ್ ದಾವಣಗೆರೆಗೆ ದೌಡಾಯಿಸಿದ್ದ. ಇಬ್ಬರೂ ಜೊತೆಗೂಡಿ ಅಲ್ಲಿಂದ ಪೇರಿಕಿತ್ತಿದ್ದರು. ಆಮೇಲಷ್ಟೆ ಸಚಿನ್ ಮಿಸ್ಸಿಂಗ್ ಕೇಸು ದಾಖಲಿಸಿದ್ದು.

ಉಷಾರಾಣಿಯಿಂದ ಪ್ರಿನ್ಸ್ ಮಹಾದೇವಪ್ಪನವರ ಕುಟುಂಬದ ಮರ್ಯಾದೆ ಬೀದಿಗೆ ಬಿದ್ದಿದೆ ಎಂಬುದು ಎಷ್ಟು ಸತ್ಯವೋ, ಪರಸ್ತ್ರೀಯನ್ನು ವ್ಯಾಮೋಹಿಸಿ ಹೊತ್ತೊಯ್ದ ಹಿಂಜಾವೆ ಶ್ರೀಧರನಿಂದಾಗಿ ಚೆಡ್ಡಿಗಳ ಮನೋವಿಕೃತಿಯ ಅಸಲಿಯತ್ತೂ ಬಯಲಾಗಿದೆ. ಈಗ ದುರ್ಗದ ಜನ ಶ್ರೀಧರನನ್ನು ಕ್ಯಾಕರಿಸಿ ಉಗಿಯುತ್ತಿದ್ದಾರೆ. 'ಲವ್ ಜಿಹಾದ್' ನೆಪವಿಟ್ಟುಕೊಂಡು ಅಮಾಯಕ ಹುಡುಗ-ಹುಡುಗಿಯರ ಮೇಲೆ ಹಲ್ಲೆ ನಡೆಸುವ ಚೆಡ್ಡಿಗಳು 'ಲವ್ ಹೈಜಾಕ್' ನಡೆಸಿರುವ ಶ್ರೀಧರನ ವಿರುದ್ಧ ತುಟಿ ಎರಡು ಮಾಡುತ್ತಿಲ್ಲ; ಬದಲಾಗಿ ಮಾನಗೆಟ್ಟವರಂತೆ ಪೊಲೀಸ್ ಇಲಾಖೆ ಮೇಲೆ ಒತ್ತಡ ತಂದು ಆತನನ್ನು ರಕ್ಷಿಸುವ ಹುನ್ನಾರ ನಡೆಸಿದ್ದಾರೆ. ಚೆಡ್ಡಿ ಸಂತತಿಗಳ ಬಾಯಲ್ಲಿ 'ರಾಮ', ಮನದಲ್ಲಿ 'ಕಾಮ' ಅನ್ನೋದು ಈ ದು'ಗ'ಟನೆಯಿಂದ ಮತ್ತೊಮ್ಮೆ ಸಾಬೀತಾಗಿದೆ.

● ಟಿ.ಎನ್. ಮಣ್ಣಿಖ

ಮಂಡ್ಯ

'ಬಿ'ಟಿವಿಯಲ್ಲೊಂದು ಯಡವಟ್ಟು!

ಮಂಡ್ಯ ಜಿಲ್ಲೆಯು ತನ್ನದೇ ವಿಶಿಷ್ಟ ವೈಚಾರಿಕತೆ ಮತ್ತು ಜನಪರ ಚಿಂತನೆಗಳ ಕಾರಣದಿಂದ ಇಂದಿಗೂ ಕೋಮುವಾದಿಗಳ ಆಟಾಟೋಪಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ. ಇಲ್ಲಿನ ಪತ್ರಕರ್ತರೂ ಅನಗತ್ಯ ಸೆನ್ಸೇಷನಲಿಸಂ ಮಾಡುವುದಾಗಲೀ, ಸುಳ್ಳು ಸುದ್ದಿಗಳನ್ನು ಹೊಸೆಯುವುದಾಗಲೀ ಎಂದಿಗೂ ಮಾಡಿಲ್ಲ. ಕೆಲವು ಜಿಲ್ಲೆಗಳಲ್ಲಿ ಕೋಮುವಾದಿಗಳು ಮತ್ತು ಪತ್ರಕರ್ತರ ಡೆಡ್ಲಿ ಕಾಂಬಿನೇಷನ್ ಹಲವು ರೀತಿಯ ಸಮಸ್ಯೆಗಳನ್ನು ಕೆರಳಿಸಿವೆ. ಜನರ ಮಧ್ಯೆಯೇ ಬಿರುಕು ಉಂಟು ಮಾಡುವಲ್ಲಿಯೂ ಶಕ್ತವಾಗಿವೆ; ಇದ್ದಕ್ಕಿದ್ದಂತೆ ಎಲ್ಲೆಲ್ಲೋ ಭಯೋತ್ಪಾದಕರನ್ನೂ ಹುಟ್ಟು ಹಾಕಿವೆ.

ಅಂತಹ ಕೆಲಸ ಮಂಡ್ಯದ ಪತ್ರಿಕೋದ್ಯಮದಲ್ಲಿ ನಡೆದೇ ಇಲ್ಲ. ಬಲಿಷ್ಠ ಒಕ್ಕಲಿಗ ಜಾತಿಯ ಪತ್ರಕರ್ತರು ಹೆಚ್ಚಿದ್ದಾಗ್ಯೂ ಜಾತಿ ಸಂಘರ್ಷದ ಸಮಯದಲ್ಲೂ ಸಮತೋಲನವನ್ನು ಬಹುತೇಕ ಕಾಪಾಡಿಕೊಂಡಿರುವುದು ಇಲ್ಲಿನ ವೈಶಿಷ್ಟ್ಯ. ವಿಶೇಷವಾಗಿ ಜನಪರ ಚಳವಳಿಗಳಿಗೂ ಪತ್ರಿಕೋದ್ಯಮಕ್ಕೂ ಸಾಮರಸ್ಯದ ಸಾಂಗತ್ಯ ಇಲ್ಲಿ ಸಾರ್ವಕಾಲಿಕ. ಕಾವೇರಿ ಚಳವಳಿಯಿಂದ ಹಿಡಿದು, ಎಲ್ಲಾ ಬಗೆಯ ಪ್ರಗತಿಪರ ಚಳವಳಿಗಳನ್ನು ಎತ್ತಿಹಿಡಿಯುವಲ್ಲಿ ಇಲ್ಲಿನ ಎಲ್ಲಾ ಪತ್ರಿಕೆಗಳು/ಚಾನೆಲ್‌ಗಳ ಪತ್ರಕರ್ತರು ಹಿಂದೆ ಬಿದ್ದಿಲ್ಲ. ಆದರೆ, ಇತ್ತೀಚಿನ ಒಂದು ಟಿವಿ ಸುದ್ದಿ ಮಂಡ್ಯದ ಪತ್ರಿಕೋದ್ಯಮಕ್ಕೆ ಕಪ್ಪುಚುಕ್ಕೆಯಂತೆ ಕೆಲವು ವಲಯಗಳಲ್ಲಿ ಎದ್ದು ಕಂಡಿದೆ.


ವಿಪರ್ಯಾಸವೆಂದರೆ, ಯುವ ಉತ್ಸಾಹೀ ತಂಡದೊಂದಿಗೆ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಮಾಡುತ್ತಿರುವ, ಯಾವ ಜನವಿರೋಧಿ ರಾಜಕೀಯ ಗುಂಪಿನೊಂದಿಗೂ ಗುರುತಿಸಿಕೊಳ್ಳದೇ ಭರವಸೆ ಮೂಡಿಸಿರುವ 'ಬಿ ಟಿವಿ'ಯಲ್ಲಿ ಇಂತಹದ್ದೊಂದು ಯಡವಟ್ಟು ಆಗಿದೆ. ಅದರ ಸ್ಥಳೀಯ ಪತ್ರಕರ್ತ ಶಶಿಕುಮಾರ್ ಟಿಆರ್‌ಪಿ ಅಮಲಿನಲ್ಲಿ ವೃತ್ತಿಧರ್ಮವನ್ನೇ ಮರೆತು ಮಾಡಿದ ಸುದ್ದಿ ಚಾನೆಲ್‌ಗೇ ಮುಜುಗರ ತರುವಂತಿದೆ. ವರದಿ ಮಾಡಿರುವ ರೀತಿ, ಅದಕ್ಕೆ ಅವರು ಬಳಸಿಕೊಂಡಿರುವ ವ್ಯಕ್ತಿಗಳು ಮತ್ತು ನಂತರ ಪ್ರಚಾರಕ್ಕೆ ಕೊಂಡೊಯ್ಯುತ್ತಿರುವ ವಿಧಾನ ಎಲ್ಲವೂ ಸ್ಥಳೀಯ ಕೋಮುವಾದಿ ಸಂಘಪರಿವಾರದ ಜೊತೆಗಿನ ಕಿತಾಪತಿಯನ್ನು ಬಯಲುಗೊಳಿಸುತ್ತದೆ.


ಡಾ.ವಾಸು ಮತ್ತು ಮಲ್ಲಿಗೆಯವರ ನಿಗೂಢ ವಾಸ್ತವ್ಯ?

'ಇತ್ತೀಚೆಗಷ್ಟೇ ಸರ್ಕಾರಕ್ಕೆ ಶರಣಾದ ಮಾಜಿ ನಕ್ಸಲ್ ನಾಯಕ ಸಿರಿಮನೆ ನಾಗರಾಜ್ ಕುಟುಂಬಕ್ಕೂ ಸಕ್ಕರೆ ಜಿಲ್ಲೆ ಮಂಡ್ಯಕ್ಕೂ ನಂಟಿದೆಯಾ?' ಎಂಬ ವರದಿ ವಾರದ ಹಿಂದಷ್ಟೇ 'ಬಿ ಟಿವಿ'ಯಲ್ಲಿ ಪ್ರಸಾರವಾಯಿತು. ಆ ವರದಿಯ ಪ್ರಕಾರ ಸಿರಿಮನೆ ನಾಗರಾಜ್‌ರ ಪತ್ನಿ ಹೇಮಲತಾ, ಮಗಳು ಮಲ್ಲಿಗೆ ಮತ್ತು ಅಳಿಯ ಡಾ.ವಾಸು ಮಂಡ್ಯದ ಹೊಳಲು ಗ್ರಾಮದಲ್ಲಿ ನಿಗೂಢವಾಗಿ ವಾಸ್ತವ್ಯ ಹೂಡಿದ್ದಾರೆ; ಸಿರಿಮನೆ ಪತ್ನಿ ತಾವೊಬ್ಬ ನಿವೃತ್ತ ಬ್ಯಾಂಕ್ ಉದ್ಯೋಗಿ ಎಂದು ಹೇಳಿಕೊಂಡಿದ್ದಾರಂತೆ, ಸೂರ್ಯ ಹುಟ್ಟೋಕು ಮುನ್ನ ಮನೆ ಬಿಡುವ ಇವರು ರಾತ್ರಿ ಮನೆ ಸೇರೋದು 11 ಗಂಟೆ ನಂತರವಂತೆ. ಒಂದೊಂದು ಬಾರಿ ಮನೆ ಬಿಟ್ಟು ಹೋದರೆ ಒಂದು ತಿಂಗಳಾದ್ರೂ ಬರಲ್ಲವಂತೆ... ಇತ್ಯಾದಿ ಮಾತುಗಳನ್ನು ಓತಪ್ರೋತವಾಗಿ ಹೇಳುತ್ತಾಹೋಗುವ ವರದಿ ಅದಕ್ಕೆ ಬಳಸಿಕೊಂಡಿರುವ ದೃಶ್ಯಾವಳಿಗಳೂ ವಿಚಿತ್ರವಾಗಿವೆ.

ಮಂಡ್ಯ-ಮೇಲುಕೋಟೆ ಮುಖ್ಯರಸ್ತೆಯಲ್ಲೇ ಇರುವ ಮನೆಯಲ್ಲಿ, ಮಂಡ್ಯದಿಂದ ಕೇವಲ ನಾಲ್ಕು ಕಿ.ಮೀ. ದೂರ ಮನೆ ಮಾಡಿದ್ದರೆ ಅದು ನಿಗೂಢ ವಾಸ್ತವ್ಯವಾಗಿ ಈ ವರದಿಗಾರನಿಗೆ ಕಾಣುತ್ತದೆ. ಮಂಡ್ಯದ ಹಲವಾರು ಜನರು, ಹೊಳಲು ಹಾಗೂ ಅಕ್ಕಪಕ್ಕದ ಗ್ರಾಮದ ಹಲವರು ಆಗಾಗ್ಗೆ ಇಲ್ಲಿಗೆ ಬಂದುಹೋಗುತ್ತಿದ್ದರೂ ಈ ವರದಿಗಾರನಿಗೆ ಗೊತ್ತಿಲ್ಲದ ಮಾತ್ರಕ್ಕೆ ಅದು ನಿಗೂಢವಾ?

ಜನಪರ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ವಾಸು ಮತ್ತು ಮಲ್ಲಿಗೆ ದಂಪತಿಗಳಿಗೆ ತಮ್ಮ ಮನೆ, ಸಂಸಾರವಷ್ಟೇ ಮುಖ್ಯವಲ್ಲವೆಂಬುದು ಅವರನ್ನು ಬಲ್ಲ ಎಲ್ಲರಿಗೂ (ಮಂಡ್ಯದ ಪತ್ರಕರ್ತರೂ ಸೇರಿದಂತೆ) ಗೊತ್ತಿದೆ. ಹಾಗಾಗಿ ಪ್ರತೀದಿನ ಮನೆಗೆ ಹೋಗದಿರುವುದನ್ನೇ 'ಯಾವಾಗ ಬರ್ತಾರೋ, ಯಾವಾಗ ಹೋಗ್ತಾರೋ ಗೊತ್ತೇ ಇಲ್ಲ' ಎಂದು ವರದಿ ಬಿಂಬಿಸುತ್ತದೆ. ಅದೇ ಮನೆಯಲ್ಲಿ ಕಳೆದ ಎರಡು ವರ್ಷಗಳಿಂದ ಮಲ್ಲಿಗೆಯವರ ತಾಯಿ ಹೇಮಲತಾ ಹಗಲೂ, ರಾತ್ರಿ ವಾಸಿಸುತ್ತಿರುವುದನ್ನು ಮಾತ್ರ ಮರೆಮಾಚಿ





ಈ ಇಬ್ಬರು ಜನಪರ ಸಂಘಟಕರ ಓಡಾಟವನ್ನು ನಿಗೂಢವಾಗಿಸಿರುವುದರ ಹಿಂದೆ ವರದಿಗಾರನ ಕ್ರಿಮಿನಲ್ ತಲೆ ಕೆಲಸ ಮಾಡಿದಂತಿದೆ.

ಸುಳ್ಳುಗಳ ಸರಮಾಲೆ

25 ವರ್ಷಗಳ ಕಾಲ ಮೈಸೂರು, ಕೊಪ್ಪ ಗುಲ್ಬರ್ಗಾಗಳ ಸಿಂಡಿಕೇಟ್ ಬ್ಯಾಂಕ್ ಬ್ರಾಂಚ್‌ಗಳಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದುಕೊಂಡ ಹೇಮಲತಾ ಅವರ ಪೂರ್ವಾಪರ ಗೊತ್ತಿಲ್ಲದೇ, ಅವರು ಸುಳ್ಳು ಹೇಳಿದ್ದಾರೆ ಎಂದು ಹೇಳಲು ಈ ವರದಿಗಾರನಿಗೆ ಏನು ಕಾರಣವಿತ್ತೋ ಆತನೇ ಹೇಳಬೇಕು. ಸ್ವತಃ ಸಿಂಡಿಕೇಟ್ ಬ್ಯಾಂಕ್‌ನ ಉದ್ಯೋಗಿಗಳ ಪಟ್ಟಿಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಹೇಳುವ ಧಾಟಿಯಲ್ಲಿ ವರದಿ ಸಾಗುತ್ತದೆ. ಬೆಳಿಗ್ಗೆ 8 ಗಂಟೆಗೆ ಮನೆ ಬಿಡುವುದೆಂದರೆ (ಈ ರೀತಿ ಇದೇ ವರದಿಯಲ್ಲಿ ಮನೆ ಮಾಲೀಕ ಹೇಳುತ್ತಾರೆ) ಅದು ಸೂರ್ಯ ಹುಟ್ಟೋಕೂ ಮುಂಚೆ ಎಂದು ಬಿಂಬಿಸಿರುವುದನ್ನು ನೋಡಿದರೆ, ಈ ವರದಿಗಾರನಿಗೆ 10 ಗಂಟೆ ತನಕ ಸೂರ್ಯ ಹುಟ್ಟುವ ರೀತಿ ಕಾಣುವುದಿಲ್ಲ.

ಊರಿನ ಜನರು ಇವರಿಬ್ಬರ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿಲ್ಲ. ಬದಲಿಗೆ ಆಗಾಗ್ಗೆ ವಿವಿಧ ಟಿವಿ ಚರ್ಚೆಗಳಲ್ಲಿ ಭಾಗವಹಿಸುವ ಅವರ ವಿಚಾರಗಳನ್ನು ಕೇಳಿ ಅಭಿಮಾನವನ್ನೇ ಹೊಂದಿದ್ದಾರೆ. ಅಸಲಿಗೆ ಈ ಪ್ರಗತಿಪರ ದಂಪತಿಗಳ ಅಗತ್ಯತೆ ಕೇವಲ ಮಂಡ್ಯಕ್ಕೆ ಮಾತ್ರವಲ್ಲದೆ ರಾಜ್ಯದ ಉದ್ದಗಲಕ್ಕೂ ಅನಿವಾರ್ಯವಿರುವುದರಿಂದ ಹೊಳಲುವಿನಲ್ಲಿ ಎಲ್ಲರ ಜೊತೆ ಬೆರೆಯುವಷ್ಟು ಸಮಯವೇ ಅವರಿಗಿಲ್ಲ. ಪಕ್ಕದ ಬಿ.ಹೊಸಹಳ್ಳಿಯ ಕೃಷ್ಣಪ್ರಕಾಶ್ ಇವರೀರ್ವರು ಕೆಲಸ ಮಾಡುವ ಕರ್ನಾಟಕ ಜನಶಕ್ತಿಯ ಜಿಲ್ಲಾಧ್ಯಕ್ಷರಾಗಿದ್ದಾರೆ. ಕನಿಷ್ಠ ವಾರಕ್ಕೊಮ್ಮೆಯಾದರೂ ಈ ಮನೆಗೆ ಭೇಟಿ ಕೊಡುವ ಅವರು ಹೊಳಲುವಿನಲ್ಲಿ ಕನಿಷ್ಠ ಅರ್ಧ ಜನಕ್ಕೆ ಪರಿಚಯ. ಅಲ್ಲಿಂದ ಮೂರ್‍ನಾಲ್ಕು ಕಿ.ಮೀ. ದೂರದಲ್ಲಿದ್ದು ಪತ್ರಿಕೋದ್ಯಮ ನಡೆಸುವ ವ್ಯಕ್ತಿಗೆ ಇಷ್ಟು ಅಂದಾಜು ಇರುವುದಿಲ್ಲವೆಂದರೆ, ಆತನ ಪತ್ರಿಕೋದ್ಯಮದ ಕುರಿತೇ ಸಂದೇಹ ಪಡಬೇಕಷ್ಟೇ.

ನೋಂದಣಿಯೇ ಆಗದ ಕರ್ನಾಟಕ ಜನಶಕ್ತಿ, ಮಹಿಳಾ ಮುನ್ನಡೆ ಸಂಘಟನೆಗಳಲ್ಲಿ ಇವರು ಕೆಲಸ ಮಾಡುತ್ತಿದ್ದಾರೆ ಎಂಬುದು ಇವರ ಇನ್ನೊಂದು ಆರೋಪ. ಸರ್ಕಾರದಿಂದ, ವಿದೇಶೀ ಸಂಸ್ಥೆಗಳಿಂದ ಹಣ ಪಡೆಯುವ ಸಂಸ್ಥೆಗಳು ನೋಂದಣಿ ಮಾಡಿಕೊಳ್ಳುತ್ತವೆ. ಈ ರಾಜ್ಯದ ಎಷ್ಟೋ ದೊಡ್ಡ ಸಂಘಟನೆಗಳು ನೋಂದಣಿಯಾಗಿಲ್ಲ ಎಂಬ ಪ್ರಾಥಮಿಕ ಜ್ಞಾನ ವರದಿಗಾರನಿಗಿಲ್ಲ. ಹಾಗಾದರೆ, ನೋಂದಣಿಯಾಗದ ಈ ಸಂಘಟನೆಗಳನ್ನು ಸರ್ಕಾರ ಹತ್ತಾರು ವಿಚಾರಗಳಿಗೆ ಸಂಬಂಧಿಸಿದ ಸಭೆಗಳಿಗೆ ಏಕೆ ಕರೆಯುತ್ತದೆ? ಯಾವ ಸಂಘಟನೆಗಳೊಂದಿಗೆ, ಸದರಿ ವರದಿಗಾರ ಕೈ ಜೋಡಿಸಿದ್ದಾನೋ, ಅವೆಲ್ಲವೂ ನೋಂದಣಿಯಾಗಿವೆಯಾ?

ಕರ್ನಾಟಕ ಜನಶಕ್ತಿ ಸಂಘಟನೆಯ ರಾಜ್ಯ ಸಂಚಾಲಕರಾದ ವಾಸು ಪ್ರತಿನಿತ್ಯ ತಮ್ಮ ಸಂಘಟನೆಯ ಭಾಗವಾಗಿ ಕಾರ್ಮಿಕರು, ಸ್ಲಂ ಜನರ ಕೆಲಸಗಳಲ್ಲಿ ನಿರತರಾಗುತ್ತಾರೆ. ತಿಂಗಳಿಗೆ ಮಂಡ್ಯದಲ್ಲಿ ಕನಿಷ್ಠವೆಂದರೂ 5-6 ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಾರೆ. ಮಂಡ್ಯ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಡಾ.ವಾಸು ಹಾಗೂ ಮಲ್ಲಿಗೆಯವರ ಬಗ್ಗೆ ಚೆನ್ನಾಗಿ ಗೊತ್ತಿದೆ. ಡಿಸಿ, ಎಸ್ಪಿ, ಪೊಲೀಸ್ ಠಾಣೆಗಳಿಗೆ ಆಗಾಗ್ಗೆ ಒಂದಿಲ್ಲೊಂದು ಕಾರಣಕ್ಕೆ ತೆರಳುವ ಡಾ.ವಾಸು ನಿಗೂಢವಾಗಿ ಹೊಳಲು ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದಾರೆಂಬುದು ವಿಕೃತ ಮನಸ್ಸಿಗೆ ಹೊಳೆದ ವಿಕೃತ ಆಲೋಚನೆಯಷ್ಟೇ.

ಸದಾ ಜನಪರವಾಗಿ ಯೋಚಿಸುವ ಡಾ.ವಾಸು ಮತ್ತು ಮಲ್ಲಿಗೆ ತಮ್ಮ ಜೀವನವನ್ನೇ ಸಂಘಟನೆಗಾಗಿ ಮುಡಿಪಾಗಿಟ್ಟಿದ್ದಾರೆ. ಎಂ.ಬಿ.ಬಿ.ಎಸ್. ಮುಗಿಸಿ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಡಾ.ವಾಸು ಕೈತುಂಬ ಹಣ ಬರುತ್ತಿದ್ದ ವೈದ್ಯ ವೃತ್ತಿಯನ್ನು ತೊರೆದು ಸಂಘಟನೆಯ ಮೂಲಕ ಜನರ ಸೇವೆಯಲ್ಲಿ ತೊಡಗಿಸಿಕೊಂಡಂತವರು. ಸ್ವಾರ್ಥ ಮತ್ತು ಐಷಾರಾಮಿ ಜೀವನಕ್ಕಾಗಿ ತನ್ನನ್ನು ಸೀಮಿತವಾಗಿಸಿಕೊಳ್ಳದೆ ಶ್ರಮಿಕರ ಪರವಾಗಿ ಹೋರಾಟ ನಡೆಸಬೇಕೆನ್ನುವುದು ಅವರ ನಿಲುವು. ಅದಕ್ಕೆಂದೆ 20 ವರ್ಷಗಳಿಂದ ರಾಜ್ಯಾದ್ಯಂತ ಕಾರ್ಮಿಕ ಸಂಘಟನೆಗಳನ್ನು ಕಟ್ಟುವ ಮೂಲಕ ಬಂಡವಾಳಶಾಹಿಗಳ ವಿರುದ್ಧ ಹೋರಾಡುತ್ತಿದ್ದಾರೆ, ಜನಸಾಮಾನ್ಯರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ, ಕೋಮು ಸೌಹಾರ್ದ ವೇದಿಕೆ ಮೂಲಕ ಸಮಾಜಘಾತುಕ ಶಕ್ತಿಗಳ ವಿರುದ್ಧ ಹೋರಾಡುತ್ತಿದ್ದಾರೆ. ಅವರ ಹೋರಾಟಗಳಷ್ಟೆ ಅವರ ವೈಯಕ್ತಿಕ ಬದುಕು ಕೂಡಾ ಅಷ್ಟೇ ನಿಷ್ಕಲ್ಮಷ ಮತ್ತು ಪಾರದರ್ಶಕ. ಅಂತವರಿಗೆ 'ನಿಗೂಢ'ತೆಯ ಪಂಚ್‌ಲೈನ್ ಕೊಟ್ಟ ವರದಿಗಾರನಿಗೆ ಪುಲಿಟ್ಜರ್ ಪ್ರಶಸ್ತಿಯನ್ನೇ ನೀಡಬೇಕು.

ಸಿ.ಟಿ.ಮಂಜು ಹುನ್ನಾರ

ನಕ್ಸಲರು ಹಿಂಸೆ ತ್ಯಜಿಸಿ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಮನವಿ ಮಾಡಿದ ಸಿಎಂ ಸಿದ್ದರಾಮಯ್ಯನವರ ಆಶಯದಂತೆ ಸಿರಿಮನೆ ನಾಗರಾಜ್ ಹಾಗೂ ನೂರ್ ಶ್ರೀಧರ್ ಮುಖ್ಯವಾಹಿನಿಗೆ ಮರಳಿ ಬಂದಿದ್ದಾರೆ. ಶರಣಾಗುವ ನಕ್ಸಲರಿಗೆ ಸರ್ಕಾರ ನೀಡುವ ವಿಶೇಷ ಪ್ಯಾಕೇಜ್ ಬೇಡವೆಂದು ತಿರಸ್ಕರಿಸಿ ಸಿರಿಮನೆ ನಾಗರಾಜ್ ಹಾಗೂ ನೂರ್ ಶ್ರೀಧರ್ ಇಬ್ಬರೂ ಜಾಮೀನು ಪಡೆದು ಹೊರಗೆ ಬರುತ್ತಿರುವುದು ಸಂಘಪರಿವಾರದ ಪುಡಿಪುಕ್ಕಗಳಿಗೆ ಸಹಿಸಲಾಗುತ್ತಿಲ್ಲ.

ನಕ್ಸಲರು ಸಮಾಜದ ಮುಖ್ಯವಾಹಿನಿಗೆ ಬರುತ್ತಾರೆಂದು ಗೊತ್ತಾದಾಗ ಚಿಕ್ಕಮಗಳೂರು ಶಾಸಕ ಸಿ.ಟಿ.ರವಿ ಭಾರಿ ವಿರೋಧವನ್ನೇ ವ್ಯಕ್ತಪಡಿಸಿದ್ದ. ಹಿಂದೂ-ಮುಸ್ಲಿಂ ಸೌಹಾರ್ದತೆಯ ಸಂಕೇತವಾದ ಬಾಬಾಬುಡನ್‌ಗಿರಿಯಲ್ಲಿ ಕೋಮುದಳ್ಳುರಿ ಹಚ್ಚಿಯೇ ಎರಡು ಬಾರಿ ಶಾಸಕನಾಗಿರುವ ಸಿ.ಟಿ.ರವಿಯಂತೆಯೇ ಹಿನ್ನೆಲೆ ಹೊಂದಿರುವ ಮಂಡ್ಯದ ಸಿ.ಟಿ.ಮಂಜುನಾಥ್ ಈ ವರದಿಯನ್ನು ಫೇಸ್‌ಬುಕ್‌ನಲ್ಲಿ ಹಾಕುವ ಮೂಲಕ ವಿಕೃತ ಖುಷಿ ಪಡುತ್ತಿದ್ದಾನೆ. ಎಂಪಿ, ಎಂಎಲ್‌ಎ ಚುನಾವಣೆಯಲ್ಲಿ ನಿಂತು ಸೋತಿರುವ ಈತನದ್ದು ಕೋಮುವಾದಿ ಮನಸ್ಸು.

ಒಂದೂವರೆ ವರ್ಷದ ಹಿಂದೆ ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ತೆರಳುತ್ತಿದ್ದ ಬಿಹಾರ್, ಜಾರ್ಖಂಡ್ ರಾಜ್ಯಗಳ ಕೂಲಿ ಕಾರ್ಮಿಕ ಯುವಕರನ್ನು ಬಾಂಗ್ಲಾ ದೇಶದ ಮುಸ್ಲಿಮರೆಂದು ತಡೆದ ಸಿ.ಟಿ.ಮಂಜುನಾಥ್ ಅಂಡ್ ಗ್ಯಾಂಗ್ ಅವರನ್ನು ಹಿಗ್ಗಾಮುಗ್ಗಾ ಥಳಿಸಿತ್ತು. ಸ್ಥಳಕ್ಕೆ ಬಂದ ಪೊಲೀಸರಿಗೆ ಅವರು ಐಡೆಂಟಿಟಿ ಕಾರ್ಡ್ ನೋಡಿದ ನಂತರವಷ್ಟೇ ಇವರು ಬಾಂಗ್ಲಾ ಮುಸ್ಲಿಮರಲ್ಲ, ಬಿಹಾರ, ಜಾರ್ಖಂಡ್‌ನ ಬಡ ಕಾರ್ಮಿಕರೆಂದು ಗೊತ್ತಾದದ್ದು. ಈ ಸಂದರ್ಭದಲ್ಲಿ ಕರ್ನಾಟಕ ಜನಶಕ್ತಿ ಸಂಘಟನೆಯು ಕೋಮುವಾದಿ ಸಂಘಪರಿವಾರದ ಮುಖಂಡರಿಗೆ ಸವಾಲು ಹಾಕಿ ಕಾರ್ಮಿಕರ ಪರವಾಗಿ ಪ್ರತಿಭಟನೆ ನಡೆಸಿದಲ್ಲದೆ ಹಲ್ಲೆಕೋರ ಸಂಘಪರಿವಾರಿಗಳ ಮೇಲೆ ಕ್ರಮ ಜರುಗಿಸುವಂತೆ ಆಗ್ರಹಿಸಿದ್ದರು. ಈ ಕಾರಣಕ್ಕೆ ಸಿ.ಟಿ.ಮಂಜುನಾಥ್ 'ಬಿ ಟಿವಿ' ವರದಿಯನ್ನು ಎಲ್ಲರಿಗೂ ಕಳುಹಿಸಿ ಅಪಪ್ರಚಾರ ಮಾಡುತ್ತಿದ್ದಾನೆ.

ಆರ್‌ಎಸ್‌ಎಸ್ ಮುಖಂಡನ ಮನೆಯಲ್ಲಿ ಕಾರ್ಯತಂತ್ರ

ಡಾ.ವಾಸು ಹಾಗೂ ಮಲ್ಲಿಗೆಯವರ ಬಗ್ಗೆ ಸಂಪೂರ್ಣ ಗೊತ್ತಿದ್ದೂ ಇಂತಹ ಕಪೋಲಕಲ್ಪಿತ ವರದಿ ಮಾಡಿದ ಶಶಿಕುಮಾರನ ಹಿಂದೆ ಸಂಘಪರಿವಾರದ ಕೈವಾಡ ಇರುವುದು ಸ್ಪಷ್ಟವಾಗಿದೆ. 'ಬಿ ಟಿವಿ' ವರದಿಗಾರ ಶಶಿಕುಮಾರ್ ಹೊಳಲು ಗ್ರಾಮಕ್ಕೆ ಹೋದವನೇ ಅದೇ ಊರಿನ ಸ್ಥಳೀಯ ಆರ್‌ಎಸ್‌ಎಸ್ ಮುಖಂಡನ ಮನೆಗೆ ಮನೆ ಮಾಲೀಕರನ್ನು ಕರೆಸಿಕೊಂಡಿದ್ದಾನೆ. ಮೊದಲು ಡಾ.ವಾಸುಗೆ ರಾಷ್ಟ್ರಮಟ್ಟದ ಪ್ರಶಸ್ತಿ ಬಂದಿದೆ, ಆ ಹಿನ್ನೆಲೆಯಲ್ಲಿ ಸುದ್ದಿ ಮಾಡಲು ತಾವು ಬಂದಿರುವುದಾಗಿ ತಿಳಿಸಿದ್ದಾರೆ. ನಂತರ ಡಾ.ವಾಸು, ಮಲ್ಲಿಗೆ ಯಾರು? ಅವರ ಅತ್ತೆ ಬಗ್ಗೆ ಗೊತ್ತಿದೆಯೇ? ಯಾವ ಸಂಘಟನೆ ಮಾಡ್ತಾರೆ, ಅವರೊಂದಿಗೆ ಎಷ್ಟು ಜನ ಇದ್ದಾರೆ. ಅವರೇನು ಮಾಡ್ತಾರೆ ಅಂತೆಲ್ಲಾ ಕೇಳಿದ್ದಾರೆ. ಮನೆ ಮಾಲೀಕರು ಅದನ್ನೆಲ್ಲಾ ಏಕೆ ಕೇಳ್ತಿದ್ದೀರಿ ಎಂದಾಗ ಅಸಲಿ ವಿಷಯಕ್ಕೆ ಬಂದಿದ್ದಾರೆ. ಡಾ.ವಾಸು, ಮಲ್ಲಿಗೆ ಹೇಮಲತಾ ಯಾರೆಂಬುದು ನಿಮಗೆ ಗೊತ್ತಾ ಎಂದು ಭಯಪಡಿಸಿದ್ದಾರೆ.

ವಾಸು ಹೆಂಡತಿ ಮಲ್ಲಿಗೆಯವರ ತಂದೆ ಸಿರಿಮನೆ ನಾಗರಾಜ್ ನಕ್ಸಲೈಟ್ ಎಂಬ ಮಾಹಿತಿ ನಿಮಗೆ ಗೊತ್ತಿದೆಯಾ? ಅವರೇನು ಮಾಡುತ್ತಿದ್ದಾರೆಂಬುದು ಗೊತ್ತಿದೆಯಾ ಎಂದೆಲ್ಲಾ ಹೆದರಿಸಿದ್ದಾರೆ. ನಂತರ ಅವರ ಹೇಳಿಕೆಯನ್ನು ಪಡೆದು 'ಅವರ ಕುರಿತು ಏನು ಮಾಡುತ್ತೀರಿ, ನೋಡಿ' ಎಂದು ಹೇಳಿ ಮಾಲೀಕನನ್ನು ಕಳುಹಿಸಿದ್ದಾರೆ. ಜನಪರ ಸಂಘಟನೆಯ ಮುಖಂಡರ ಮೇಲೆ ಆರೋಪ ಮಾಡುವ ಸಂದರ್ಭದಲ್ಲಿ ಅವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಬೇಕೆಂಬುದು ಪತ್ರಿಕಾ ಧರ್ಮ. ಆದರೆ ಇದನ್ನು ಮರೆತ 'ಬಿ ಟಿವಿ' ವರದಿಗಾರ ಶಶಿಕುಮಾರ್ ಸಿಂಗಲ್‌ಸೈಡ್ ವರದಿ ಮಾಡಿ ಕೋಮುವಾದಿ ಚಡ್ಡಿಗಳ ಮನಸ್ಸನ್ನು ಸಂತೋಷ ಪಡಿಸಿದ್ದಾನೆ. ಡಾ.ವಾಸು, ಮಲ್ಲಿಗೆ, ಹೇಮಲತಾರನ್ನು ನಿಗೂಢ ವ್ಯಕ್ತಿಗಳೆಂದು ಬಿಂಬಿಸುವ ಪ್ರಯತ್ನ ಮಾಡುವ ಮೂಲಕ ಪತ್ರಿಕಾ ಧರ್ಮ ಮರೆತಿದ್ದಾನೆ.

'ಬಿ ಟಿವಿ'ಯಲ್ಲಿ ವರದಿ ಮಾಡಿದ್ದೇ ತಪ್ಪಲ್ಲ. ಕ್ರಿಯಾಶೀಲ ಕೆಲಸ ಮಾಡುವಾಗ ಆತುರದಲ್ಲಿ ಒಂದಷ್ಟು ರೋಚಕತೆ-ರಂಜನೆಯೂ ಬೆರೆತಿರುತ್ತದೆ. ಆದರೆ ಸುಳ್ಳುಗಳ ಆಧಾರದ ಮೇಲೆ, ದುರುದ್ದೇಶಪೂರ್ವಕವಾದ ಕಥೆ ಹೆಣೆದಿರುವುದು ಮಾತ್ರ ಅಕ್ಷಮ್ಯ. ತಮ್ಮ ಸಂಸ್ಥೆಯ ಒಳಗೆ ತೂರಿಕೊಂಡಿರುವ ಕೆಲ ಕೋಮುವಾದಿ ಮನಸ್ಸಿನ ವ್ಯಕ್ತಿಗಳು ಮತ್ತು ಅವರ ಕೆಲಸದ ವಿಧಾನದ ಬಗ್ಗೆ 'ಬಿ ಟಿವಿ' ಮುಖ್ಯಸ್ಥರು ಎಚ್ಚರದಿಂದಿರುವುದು ಒಳಿತು.

ಇನ್ನು ಜಿಲ್ಲೆಯ ಜನರು ರೈತ-ಜನಪರ ಹೋರಾಟಗಾರರು ಯಾರು ಎಂಬ ಬಗ್ಗೆ ಸದಾ ಎಚ್ಚರ ಕಣ್ಣುಗಳಿಂದ ನೋಡುತ್ತಿರುತ್ತಾರೆ. ತಮ್ಮ ಜೀವನವನ್ನೇ ಸಂಘಟನೆ- ಸಮಾಜಕ್ಕೆ ಮೀಸಲಿಟ್ಟಿರುವ ಡಾ.ವಾಸು, ಮಲ್ಲಿಗೆ ಬಗ್ಗೆ ಜನತೆಗೆ ಗೊತ್ತಿದೆ. ಸರಳ ಜೀವನ ನಡೆಸಬೇಕು, ಕಡಿಮೆ ಬಾಡಿಗೆ ಮನೆಯಲ್ಲಿರಬೇಕು, ಹಳ್ಳಿಯಲ್ಲಿ ಇರೋಣ ಎಂಬ ಆದರ್ಶವನ್ನೇ ನಿಗೂಢತೆಯನ್ನಾಗಿ ಬಿಂಬಿಸುವ ಇಂತಹ ಪತ್ರಕರ್ತರ ಕುಕೃತ್ಯ ಸಮಾಜಕ್ಕೆ ಮಾರಕವೇ ಹೊರತು ಪೂರಕವಲ್ಲ. ವೈಯಕ್ತಿಕ ಹಿತಾಸಕ್ತಿಗಳನ್ನು ತಲೆಗೆ ಹಚ್ಚಿಕೊಳ್ಳದೇ ತಮ್ಮ ಪಾಡಿಗೆ ತಮ್ಮ ಕೆಲಸ ಮಾಡುತ್ತಾ ಇರುವಂತಹ ಡಾ.ವಾಸು ಮತ್ತು ಮಲ್ಲಿಗೆಯವರ ಒಳ್ಳೆಯತನದ ದುರ್ಲಾಭ ಪಡೆಯುತ್ತಿರುವ ಕೊಳಕು ಮನಸ್ಸುಗಳು 'ನಿಗೂಢ'ತೆ ಶೋಧಿಸುವ ಮುನ್ನ ಕಣ್ಣಿಗೆ ಕಾಣುವ 'ವಾಸ್ತವ'ವನ್ನು ನೋಡುವ ವೃತ್ತಿಧರ್ಮ ಬೆಳೆಸಿಕೊಳ್ಳಬೇಕಿದೆ.

● ಮಂಡ್ಯ ನಾಗೇಶ್

ಶಾಹಿ ಇಮಾಂ ಬುಖಾರಿ ಎಂಬ ತಲೆಕೆಟ್ಟ ಮುಲ್ಲಾ



ಭಾರತೀಯ ಮುಸ್ಲಿಮರನ್ನು ತನ್ನ ಚಿತ್ರ-ವಿಚಿತ್ರ ...ಳಿಕೆಗಳಿಂದ ಮುಜುಗರಕ್ಕೊಳಪಡಿಸುವ ದೆಹಲಿಯ ಜುಮಾ ...ಸೀದಿಯ ಶಾಹಿ ಇಮಾಂ ಕಳೆದ ತಿಂಗಳು ತನ್ನ ಪುತ್ರನ ...ಟ್ಟಾಭಿಷೇಕ ಕಾರ್ಯಕ್ರಮ ಮಾಡುವ ಮೂಲಕ ಮುಸ್ಲಿಮ್ ...ಮುದಾಯಕ್ಕೆ ವಾಕರಿಕೆ ಹುಟ್ಟಿಸಿದ್ದ. ಅದಕ್ಕೂ ಮೊದಲು ... ತನ್ನ ಪುತ್ರನ ಪಟ್ಟಾಭಿಷೇಕಕ್ಕೆ "ಮೋದಿಯನ್ನು ಕರೆಯಲಾರೆ, ... ಮುಸ್ಲಿಮರಿಗೆ ಅನ್ಯಾಯ ಮಾಡಿದ್ದಾನೆ" ಎಂದು ಪಾಕಿಸ್ತಾನದ ...ಾನಿ ನವಾಜ್ ಶರೀಫ್‌ಗೆ ಆಹ್ವಾನ ನೀಡಿದ್ದ (ಆತ ಬರಲಿಲ್ಲ). ...ೀದಿಯನ್ನು ಕರೆಯದಿರುವುದು, ನವಾಜ್ ಶರೀಫ್‌ಗೆ ಆಹ್ವಾನ ...ಡುವುದು ಇವ್ಯಾವುವೂ ಚರ್ಚಾರ್ಹ ವಿಷಯವೇ ಅಲ್ಲ. ...ಎ ಬುಖಾರಿಯ ಮತಿಗೆಟ್ಟ ರಾಜಕೀಯ ಹುಚ್ಚಾಟಗಳಷ್ಟೆ. ...ದು ಮೋದಿ ಮುಸ್ಲಿಮರಿಗೆ ಮಾಡಿದ ಗಾಯ ಎಂದೆಂದೂ ...ಸಲಾಗದು. ಆದರೆ ನವಾಜ್ ಶರೀಫ್ ಎಂಬ ಪುಣ್ಯಾತ್ಮ ...ರತೀಯ ಮುಸ್ಲಿಮರಿಗೆ ಅದೇನು ಅನುಕೂಲ ಮಾಡಿದ್ದಾನೋ ... ಕಾಣೆ.

ಈ ಬುಖಾರಿ ಎಂಬ ತಲೆಕೆಟ್ಟ ಮುಲ್ಲಾ ಕೂಡಾ ...ರತೀಯ ಮುಸ್ಲಿಮರಿಗೆ ಬಹಳಷ್ಟು ಡ್ಯಾಮೇಜ್ ಮಾಡಿದ್ದಾನೆ. ...ತನ ಹುಚ್ಚಾಟವೆಲ್ಲ ಇಸ್ಲಾಮಿ ಫಿಲಾಸಫಿಗೆ ವಿರುದ್ಧವಾದುದು ...ಮಾತ್ರವಲ್ಲ ಮುಸ್ಲಿಮರೇ ನಾಚಿಕೆಪಡುವಂತಹದ್ದು. ...ಮೊದಲನೆಯದಾಗಿ ಫ್ಯೂಡಲ್ ವಂಶಾಡಳಿತ ಮತ್ತು ...ರೋಹಿತಶಾಹಿತ್ವ ಇಸ್ಲಾಮಿನ ಮೂಲತತ್ವಕ್ಕೆ ವಿರುದ್ಧವಾದುದು. ...ಗಂಬರ್(ಸ)ರು ಫ್ಯೂಡಲಿಸಮ್, ವಂಶಾಡಳಿತ, ...ರೋಹಿತಶಾಹಿತ್ವದ ವಿರುದ್ಧ ಬಂಡೆದ್ದು ಕ್ರಾಂತಿಯ ಕಿಡಿ ...ಹಚ್ಚಿದವರು. ಅವರು ಮೊಟ್ಟಮೊದಲನೆಯದಾಗಿ ತನ್ನ ...ಕುಟುಂಬದ-ಫ್ಯೂಡಲಿಸಂಗೆ ಸೆಡ್ಡು ಹೊಡೆದು ಜನಸಾಮಾನ್ಯರ, ...ವರ, ತುಳಿತಕ್ಕೊಳಗಾದವರ, ಮಹಿಳೆಯರ ಪರವಾಗಿ ನಿಂತು ... ಕುಟುಂಬಿಕರ ಶತ್ರುತ್ವಕ್ಕೊಳಗಾದವರು, ಸಾಮಾಜಿಕ ...ಹಿಷ್ಕಾರಕ್ಕೊಳಗಾದವರು. ಅವರು ಅರೇಬಿಯಾದ ರಾಜಕೀಯ, ...ಸಾಮಾಜಿಕ, ಧಾರ್ಮಿಕ ನಾಯಕರಾಗಿಯೂ ಕೊನೆಗಾಲದವರೆಗೂ ...ಡವರಾಗಿಯೇ, ಒಪ್ಪೊತ್ತಿನ ಊಟಕ್ಕೂ ಕಷ್ಟಪಟ್ಟೇ ಬದುಕು ...ಸಿದರು. ಅರೇಬಿಯಾದ ಕಿರೀಟ ಮತ್ತು ಸಿಂಹಾಸನರಹಿತ ...ಜನಾಗಿ ಬಾಳಿದರು. ಬದುಕಿನ ಬವಣೆಗಳನ್ನು ತೀವ್ರವಾಗಿ ...ನುಭವಿಸಿದರು. ಅವರು ತನ್ನ ಕುಟುಂಬಿಕರಿಗೆ ಉತ್ತರಾಧಿಕಾರ ...ತಲಿಲ್ಲ. ವಾಸ್ತವದಲ್ಲಿ ಅವರ ಬಳಿಕದ ನಾಲ್ಕು ಖಲೀಫರಿಗೆ ...ತ್ರ ಇಸ್ಲಾಮಿನಲ್ಲಿ ಮಾನ್ಯತೆ ಇದೆ. ಆ ಬಳಿಕ ಬಂದವರ್‍ಯಾರಿಗೂ ...ಮಾನ್ಯತೆಯೇ ಇಲ್ಲ. ಪ್ರವಾದಿಯವರ ಗಂಡು ಮಕ್ಕಳು ಅವರ ...ಕ್ಕಿಂತ ಮುಂಚೆಯೇ ಕಾಲವಾಗಿದ್ದರು. ಅವರು ತನ್ನ ಬಳಿಕ ... ಅಳಿಯ ಅಲೀಯವರಿಗೆ ನಾಯಕ ಸ್ಥಾನದ ಉಯಿಲು ...ಬರೆದಿಟ್ಟು ಹೋಗಲಿಲ್ಲ. ಪ್ರವಾದಿಯವರ ಬಳಿಕ ಜನರು ...ಅಬೂಬಕರ್ ಸಿದ್ದೀಖ್‌ರವರನ್ನು ತಮ್ಮ ನಾಯಕರನ್ನಾಗಿ ಆಯ್ಕೆ ...ಮಾಡಿದರು. ಅವರು ಇಸ್ಲಾಮಿನ ಮೊದಲ ಖಲೀಫರಾದರು. ... ಬಳಿಕ ಉಮರ್, ನಂತರ ಉಸ್ಮಾನ್ ತದನಂತರ ...ಪ್ರವಾದಿಯವರ ಪ್ರೀತಿಯ ಪುತ್ರಿ ಫಾತಿಮಾರ ಪತಿ ...ಅಲೀಯವರನ್ನು ಜನತೆ ತಮ್ಮ ನಾಯಕನನ್ನಾಗಿ ಅಂಗೀಕರಿಸಿದರು. ...ಶಿಯಾ-ಸುನ್ನಿ ಸಂಘರ್ಷದ ಮೂಲವಿರುವುದೇ ಅಲ್ಲಿ. ಶಿಯಾ ಎಂದು ಇಂದು ಗುರುತಿಸಲ್ಪಡುವ ಗುಂಪಿನವರು ಪ್ರವಾದಿಯವರ ಬಳಿಕ ಖಲೀಫನಾಗಬೇಕಾಗಿದ್ದುದು ಅಲೀ ಎಂದು ಬಂಡೆದ್ದು ವಂಶಾಡಳಿತದ ಪರ ನಿಂತರು. ಆದರೆ ಪ್ರವಾದಿಯವರು ಜನತೆಯೇ ತಮ್ಮ ನಾಯಕನನ್ನು ಆರಿಸಿಕೊಳ್ಳಲಿ ಎಂಬ ಉದ್ದೇಶದಿಂದ ಯಾವುದೇ ಉಯಿಲು ಬರೆದಿಟ್ಟಿರಲಿಲ್ಲ. ಇಂದು ಈ ಬುಖಾರಿ ಮಹಾತ್ಮ ಮಾಡುತ್ತಿರುವುದೇನು? ತನ್ನ ಪುತ್ರನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ. ಅಷ್ಟಕ್ಕೂ ಜುಮಾ ಮಸೀದಿಯ ಇಮಾಂ ಎಂದರೆ ಮುಸ್ಲಿಮರ ರಾಜನೆಂದು ಈತ ತಿಳಿದುಕೊಂಡಿದ್ದಾನೆಯೇ? ಮೂಲತಃ ಇಸ್ಲಾಮ್ ಪುರೋಹಿತಶಾಹಿ ವಿರೋಧೀ ಧರ್ಮ. ಪೈಗಂಬರ್(ಸ)ರು ಅರೇಬಿಯಾದ ಪುರೋಹಿತಶಾಹಿಗಳನ್ನು ಎದುರುಹಾಕಿಕೊಂಡದ್ದರ ಪರಿಣಾಮ ಬಹಳಷ್ಟು ಪೀಡನೆಗೊಳಗಾಗಿದ್ದರು. ಅನೇಕ ಸೂಫಿ ಸಂತರುಗಳೂ ಪುರೋಹಿತಶಾಹಿಯನ್ನು ಧಿಕ್ಕರಿಸಿದ್ದಕ್ಕಾಗಿ ಪ್ರಭುತ್ವದ ಪೀಡನೆಗೊಳಗಾಗಬೇಕಾಗಿ ಬಂದಿತ್ತು. ಇಸ್ಲಾಮ್ ಅಲ್ಲಾಹನ ಮತ್ತು ಸೃಷ್ಟಿಗಳ ನಡುವೆ ಮಧ್ಯವರ್ತಿಗೋ, ಪುರೋಹಿತಶಾಹಿಗೋ ಅವಕಾಶ ನೀಡುವುದಿಲ್ಲ. ಖುರ್‌ಆನ್‌ನಲ್ಲಿ ಪುರೋಹಿತಶಾಹಿತ್ವ ಮತ್ತು ಪಾಳೆಗಾರಿಕೆಯ ಸೊಕ್ಕು ಮುರಿಯುವ ಅನೇಕ ವಚನಗಳಿವೆ. ಬುಖಾರಿ ಪುರೋಹಿತಶಾಹಿ ಮಾತ್ರವಲ್ಲ ಪಾಳೇಗಾರಿಕೆಯ ಪಳಿಯುಳಿಕೆಯೂ ಹೌದು. ಈತನ ಪುತ್ರ ಶಬಾನ್ ಬುಖಾರಿ 19 ರ ಹರೆಯದ ಪ್ಲೇ ಬಾಯ್. ಆತನಿಗೆ ಇಸ್ಲಾಮೀ ತತ್ವಜ್ಞಾನದ, ಕರ್ಮಶಾಸ್ತ್ರದ ಬೇಸಿಕ್ ಅಂಶಗಳೇ ತಿಳಿದಿರಲಿಕ್ಕಿಲ್ಲ. ಆತ ಕನಿಷ್ಟ ಈ ಕಾಲದ ಒಂದು ಧಾರ್ಮಿಕ ಕಾಲೇಜಿನ ಪದವಿಯನ್ನೂ ಪಡೆದಿಲ್ಲ. ಆತನ ಅರ್ಹತೆ ಆತ ಶಾಹಿ ಇಮಾಂ ಅಹ್ಮದ್ ಬುಖಾರಿಯ ಪುತ್ರ ಎಂಬುವುದಷ್ಟೇ.

ಇಮಾಂ ಎಂದರೆ ಸಮುದಾಯದ ನೇತಾರ. ಮಸೀದಿಯ ಇಮಾಂ ಎಂದರೆ ಸಾಮೂಹಿಕ ನಮಾಜ್‌ಗೆ ನೇತೃತ್ವ ನೀಡುವಾತ. ಪ್ರಸ್ತುತ ಅಹ್ಮದ್ ಬುಖಾರಿಯಾಗಲೀ, ಆತನ ಅಪ್ಪ ಅಬ್ದುಲ್ಲಾ ಬುಖಾರಿಯಾಗಲೀ ಎಂದೂ ಸಮುದಾಯದ ನೇತಾರರಾಗಿರಲಿಲ್ಲ. ನಮ್ಮಲ್ಲಿ ಬಹುತೇಕರು ನಂಬಿರುವಂತೆ ಬುಖಾರಿ ಎಂದರೆ ಅದೊಂದು ಧಾರ್ಮಿಕ ಪದವಿಯೇನಲ್ಲ. ಬುಖಾರಿ ಎಂದರೆ ಉಜ್ಬೆಕಿಸ್ತಾನದ ಬುಖಾರ ಎಂಬ ನಗರದ ಮೂಲದವರು ಎಂದರ್ಥ. 1956 ರಲ್ಲಿ ಮೊಘಲ್ ದೊರೆ ಶಹಜಹಾನ್ ಪುರಾತನ ದೆಹಲಿಯಲ್ಲಿ ಜುಮಾ ಮಸೀದಿಯನ್ನು ಕಟ್ಟಿಸಿದಾಗ ನಮಾಜ್‌ಗೆ ನೇತೃತ್ವ ನೀಡಲು ಯೋಗ್ಯ ಪಂಡಿತನನ್ನು ಕಳುಹಿಸಿಕೊಡಲು ಉಜಿಕಿಸ್ತಾನ ರಾಜನಿಗೆ ಪತ್ರ ಬರೆದಿದ್ದ ಶಹಜಹಾನನ ಕೋರಿಕೆಯಂತೆ ಅಲ್ಲಿನ ರಾಜ ಬುಖಾರಾ ಪಟ್ಟಣದ ಅಬ್ದುಲ್ ಗಫೂರ್ ಶಾ ಎಂಬ ಧಾರ್ಮಿಕ ವಿದ್ವಾಂಸನನ್ನು ದೆಹಲಿಗೆ ಕಳುಹಿಸಿಕೊಟ್ಟರು. ಅಬ್ದುಲ್ ಗಫೂರ್ ಶಾನ ಹೆಸರಿನೊಂದಿಗೆ ಆತನ ಊರು ಬುಖಾರಾದ ಹೆಸರು ಸೇರಿಕೊಂಡು ಬುಖಾರಿ ಎಂಬ ಹೆಸರು ಬಂತು. ಆ ಕಾಲದಲ್ಲಿ ಶಹಜಹಾನ್ ಅಬ್ದುಲ್ ಗಫೂರ್ ಶಾನ ಬಳಿಕ ಆತನ ವಂಶಸ್ಥರೇ ದೆಹಲಿಯ ಜುಮ್ಮಾ ಮಸೀದಿಯ ಇಮಾಮರಾಗಿ ಸೇವೆ ಸಲ್ಲಿಸಬೇಕು ಎಂಬ ಆಜ್ಞೆ ಹೊರಡಿಸಿದ. ಅದರ ಫಲಶ್ರುತಿಯೇ ಈಗಿರುವ ತಲೆಕೆಟ್ಟ ಮುಲ್ಲಾ ಅಹ್ಮದ್ ಬುಖಾರಿ ಮತ್ತು ಮರಿ (ಶಬಾನ್) ಬುಖಾರಿ. ಮೊಗಲ್ ದೊರೆ ಶಹಜಹಾನ್‌ನ ರಾಜಾಜ್ಞೆ ಮುಂದೊಂದು ದಿನ ಭಾರತೀಯ ಮುಸ್ಲಿಮರ ಪಾಲಿಗೆ ತಲೆನೋವಾಗಿ ಪರಿಣಮಿಸಬಹುದು ಎಂದು ಯಾರೂ ಗ್ರಹಿಸಿರಲಿಕ್ಕಿಲ್ಲ. ಈ ಬುಖಾರಿ ತನ್ನನ್ನು ತಾನು ಸಮಸ್ತ ಭಾರತೀಯರ ಇಮಾಂ (ನೇತಾರ) ಎಂದು ತಿಳಿದುಕೊಂಡಿದ್ದಾನೆ. ಈ ಬುಖಾರಿಯ ಹೊಣೆಗೇಡಿ ಹೇಳಿಕೆಗಳು, ತನ್ನ ಲಾಭಕ್ಕಾಗಿ ಮಾಧ್ಯಮಗಳ ಮುಂದೆ ಏನೇನೋ ಪೆದ್ದುಪೆದ್ದಾಗಿ ಮಾತನಾಡುವುದು, ಧರ್ಮ ಮತ್ತು ರಾಜಕೀಯವನ್ನು ಬೆರೆಸಿ ಆಡುವ ಅವಿವೇಕದ ಮಾತುಗಳು, ಚಿತ್ರವಿಚಿತ್ರ ನಡವಳಿಕೆಗಳು ಇಡೀ ಮುಸ್ಲಿಂ ಸಮುದಾಯಕ್ಕೆ ಡ್ಯಾಮೇಜ್ ಮಾಡುತ್ತಿದೆ. ದೇಶದ ಹೆಚ್ಚು ಕಡಿಮೆ ಎಲ್ಲಾ ಮಾಧ್ಯಮಗಳು ಈತನ ಪ್ರಚಾರದ ತೆವಲಿಗೆ ನೀರೆರೆದು ಪೋಷಿಸುತ್ತಿವೆ. ಆತನನ್ನು ಸಮಸ್ತ ಭಾರತೀಯ ಮುಸ್ಲಿಮರ ನೇತಾರ ಎಂದು ಬಿಂಬಿಸುತ್ತಿವೆ. ಆತ ದೆಹಲಿಯ ಮಸೀದಿಯೊಂದರ ಇಮಾಂ ಮಾತ್ರವೇ ಹೊರತು ಆತ ಮುಸ್ಲಿಂ ಸಮುದಾಯದ ನಾಯಕನೇನಲ್ಲ ಎಂಬುದನ್ನು ಮಾಧ್ಯಮಗಳು ಉದ್ದೇಶಪೂರ್ವಕ ಮರೆತುಬಿಡುತ್ತವೆ.

ಈ ಬುಖಾರಿಯನ್ನು ಮೊಟ್ಟಮೊದಲ ಭಾರತೀಯ ರಾಜಕಾರಣದಲ್ಲಿ ಲೈಮ್‌ಲೈಟಿಗೆ ತಂದದ್ದು ಇಂದಿರಾ ಗಾಂಧಿ. ಆಕೆ ಈತನ ಹೆಸರನ್ನು ಬೇಕು ಬೇಕಂತಲೇ ಫೋಕಸ್ ಮಾಡಿಸಿ ವೋಟ್ ಬ್ಯಾಂಕ್ ರಾಜಕೀಯಕ್ಕೆ ಕೈ ಹಾಕಿದರು. ಆದರೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಈ ಬುಖಾರಿ ಸ್ವಲ್ಪ ಪ್ರಬುದ್ಧವಾಗಿ ವರ್ತಿಸಿದ್ದರಿಂದ ಇಂದಿರಾ ಗಾಂಧಿ ಮತ್ತು ಆಕೆಯ ಪುತ್ರ ಸಂಜಯ ಗಾಂಧಿ ಬುಖಾರಿಯ ರೆಕ್ಕೆಪುಕ್ಕಗಳನ್ನು ಕತ್ತರಿಸಿ ಮೂಲೆಗೆ ತಳ್ಳಿದರು. ಆದರೆ ಒಮ್ಮೆ ರಾಜಕೀಯದ ರುಚಿ ಹತ್ತಿಸಿಕೊಂಡ ಬುಖಾರಿಗೆ ಮತ್ತೆ ಸುಮ್ಮನಿರಲಾಗಲಿಲ್ಲ. ಆಗಾಗ ಅದರಲ್ಲೂ ಯಾವುದೇ ಚುನಾವಣಾ ಸಂದರ್ಭದಲ್ಲಿ ಹೊಣೆಗೇಡಿ ಹೇಳಿಕೆಗಳನ್ನು ನೀಡುವ ತನ್ನ ಚಾಳಿಯನ್ನು ಬುಖಾರಿ ಮುಂದುವರಿಸಿದ. ದೇಶದ ಪ್ರಮುಖ ಮೋನ್ಯುಮೆಂಟ್‌ಗಳಲ್ಲಿ ಒಂದಾದ ಜುಮಾ ಮಸೀದಿಯ ಆವರಣವನ್ನು ಈ ಬುಖಾರಿ ಸಂತೆಯ ಮಟ್ಟಕ್ಕೆ ಇಳಿಸಿ ಅಲ್ಲಿ ಟೀ ಸ್ಟಾಲ್, ಸೆಲೂನು, ಮಾಂಸದಂಗಡಿ ಇತ್ಯಾದಿಗಳಿಗೆ ಬಾಡಿಗೆಗೆ ನೀಡಿ ಅದನ್ನು ತನ್ನ ಪಿತ್ರಾರ್ಜಿತ ಆಸ್ತಿ ಎಂಬಂತೆ ಅನುಭವಿಸುತ್ತಾ ಬರುತ್ತಿದ್ದಾನೆ. ಅದಕ್ಕೆ ಯಾವುದೇ ಲೆಕ್ಕವನ್ನೂ ಆತ ನೀಡುವುದಿಲ್ಲ. ಅಲ್ಲಿ ಬಾಡಿಗೆ ವಸೂಲಿಗೆ, ವ್ಯಾಜ್ಯ ಪರಿಹಾರಕ್ಕೆ ಕೆಲವು ರಪ್ಪೋರಿಗಳನ್ನು ಬುಖಾರಿ ಸಾಕುತ್ತಿದ್ದಾನೆ. ಜುಮಾ ಮಸೀದಿಯ ಆವರಣದ ಸಂತೆಗಳಿಂದ, ಅಂಗಡಿಗಳಿಂದ ಲಕ್ಷಾಂತರ ರೂಪಾಯಿ ಬಾಡಿಗೆ ಬರುತ್ತಿದ್ದರೂ ಕನಿಷ್ಠ ಮಸೀದಿಯ ಪಾಯಿಖಾನೆಗಳನ್ನು ಶುಚಿಯಾಗಿಡುವ ಬಗ್ಗೆ ಈ ಬುಖಾರಿ ಯೋಚಿಸಿದ್ದಿಲ್ಲ.

ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಉತ್ತರ ಪ್ರದೇಶದ ಶಹಾದನ್‌ಪುರದಲ್ಲಿ ತನ್ನ ಹತ್ತಿರ ಸಂಬಂಧಿ ಉಮರ್ ಅಲೀಗೆ ಸಮಾಜವಾದಿ ಪಾರ್ಟಿಯ ಟಿಕೆಟ್ ಕೊಡಿಸಿದ. ಅದು ಮುಸ್ಲಿಂ ಬಾಹುಳ್ಯದ ಪ್ರದೇಶವಾಗಿದ್ದರೂ ಉಮರ್ ಅಲೀಗೆ ಪ್ರಚಂಡ ಸೋಲಾಯಿತು. ಇದು ಮುಸ್ಲಿಂ ಸಮುದಾಯದ ಮೇಲೆ ಬುಖಾರಿಗೆ ಇರುವ ಹಿಡಿತವನ್ನು ತೋರಿಸುತ್ತದೆ. ಉಮರ್ ಅಲೀ ಸೋತ ಬಳಿಕ ಸಮಾಜವಾದಿ ಸರಕಾರದಲ್ಲಿ ಆತನಿಗೆ ಎಂ.ಎಲ್‌.ಸಿ ಪಟ್ಟ ಕೊಡಿಸಲು ಬುಖಾರಿ ಹೆಣಗಾಡಿದ್ದ.

ಇದೀಗ ಮೋದಿಯನ್ನು ವಿರೋಧಿಸುವ ಬುಖಾರಿ 2004 ರಲ್ಲಿ ಬಿಜೆಪಿಯನ್ನು ಬೆಂಬಲಿಸಿ ಬಹಿರಂಗ ಹೇಳಿಕೆಗಳನ್ನು ಕೊಡುತ್ತಿದ್ದುದನ್ನು ಈ ಸಮುದಾಯ ಮರೆತಿಲ್ಲ. 2002ರ ಗುಜರಾತ್ ಹತ್ಯಾಕಾಂಡ ಗಾಯವಿನ್ನೂ ಹಸಿಹಸಿಯಾಗಿರುವಾಗಲೇ ಆತ ಬಿಜೆಪಿಯನ್ನು ಬೆಂಬಲಿಸಿದ್ದು ಆತನ ರಾಜಕೀಯ ತೆವಲುಗಳು ಯಾವ ಮಟ್ಟದ್ದು ಎಂಬುವುದನ್ನು ತೋರಿಸುತ್ತದೆ.

ಬಾಬರೀ ಮಸೀದಿಯ ಧ್ವಂಸವಾದ ಕಾಲದಲ್ಲಿ ಮುಸ್ಲಿಂ ಮುಖಂಡರು ಸ್ಥಾಪಿಸಿದ್ದ "ಮಜ್‌ಲಿಸೇ ಮುಶಾವರ"ದಿಂದ ದೂರ ನಿಂತು ತನ್ನದೇ ಆದ ಬೇರೊಂದು ಸಮಿತಿ ರಚಿಸಿ ಸಮುದಾಯದ ಮಧ್ಯೆ ಈ ಬುಖಾರಿ ಒಡಕುಂಟು ಮಾಡಿದ್ದನ್ನು ಮರೆಯಲು ಸಾಧ್ಯವಿಲ್ಲ.

ಮೊನ್ನೆ ನವೆಂಬರ್ 22ರಂದು ಈ ಬುಖಾರಿ ತನ್ನ ಪುತ್ರ ಶಬಾನ್ ಬುಖಾರಿಗೆ ಅದ್ದೂರಿಯ ಪಟ್ಟಾಭಿಷೇಕ ಮಾಡಿದ. ಈ ಪಟ್ಟಾಭಿಷೇಕ ಎಂಬ ವಿಚಾರವೇ ಇಸ್ಲಾಮಿ ಪರಿಕಲ್ಪನೆಗೆ ಹೊರತಾದುದು. ಪ್ರಪಂಚದ ಇತಿಹಾಸದಲ್ಲೆಲ್ಲೂ ಯಾರೂ ಮಸೀದಿಯ ಇಮಾಮರ ಪಟ್ಟಾಭಿಷೇಕ ಎಂಬ ಕಾರ್ಯಕ್ರಮವೇರ್ಪಡಿಸಿದ್ದಿಲ್ಲ. ಮಸೀದಿಯ ಇಮಾಂ ಎಂದರೆ ಆತ ಚಕ್ರವರ್ತಿಯೋ, ರಾಜಕುಮಾರನೋ ಅಲ್ಲ. ಒಂದು ಕಾಲಕ್ಕೆ ಮುಸ್ಲಿಂ ಮತ್ತು ಮುಸ್ಲಿಮೇತರರಲ್ಲೂ ಅತ್ಯಂತ ಗೌರವಕ್ಕೆ ಪಾತ್ರರಾಗುತ್ತಿದ್ದ ದೆಹಲಿಯಾ ಶಾಹಿ ಇಮಾಂ ಇಂದು ಜೋಕರ್‌ಗಳಂತಾಗಿರುವುದು ಮುಸ್ಲಿಂ ಸಮುದಾಯದ ದುರಂತ.


● ಇಸ್ಮತ್ ಫಜೀರ್

ಗೋಡ್ಸೆ ಆರೆಸ್ಸೆಸ್‌ನ ಪ್ರಮುಖ ಸದಸ್ಯನಾಗಿದ್ದ

...ಜನವರಿ 30 ರಂದು ಮಹಾತ್ಮ ...ಗಾಂಧಿಯನ್ನು ಕೊಲೆ ಮಾಡಿದ್ದ ...ನಾಥೂರಾಮ್ ಗೋಡ್ಸೆ ನೆನಪಿನಾರ್ಥ ...ಶೌರ್ಯ ದಿವಸ್' ಅನ್ನು ಆಚರಿಸಲು ...ಕೇಂದ್ರ ಸರ್ಕಾರ ಯೋಜಿಸಿದೆ. ಈ ...ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ...ಹೆಚ್.ಎಸ್. ದೊರೆಸ್ವಾಮಿಯವರ ...ನೆನಪಿನ ಸುರುಳಿ ತೆರೆದಾಗ' ಪುಸ್ತಕದಲ್ಲಿ ...ಗೋಡ್ಸೆ ಮತ್ತು ಆರೆಸ್ಸೆಸ್ ನಂಟಿನ ಬಗ್ಗೆ ...ಬರೆದಿರುವುದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

1947ರ ಸೆಪ್ಟೆಂಬರ್‌ನಲ್ಲಿ ಮೈಸೂರು ಚಲೋ ...ಗ್ರಹ ನಡೆದಾಗ ನಾವು ಹಿಂದೂಪುರದಿಂದ ಪತ್ರಿಕೆ ...ಕೆಸುತ್ತಿರುವುದು ಸರಿಯಷ್ಟೆ. ರುಮಾಲೆ ...ಬಸವಯ್ಯನವರೂ ಆಗ ನಮ್ಮೊಡನಿದ್ದರು. ನಾವು ...ರವಾಣಿ ಪತ್ರಿಕೆ ಹೊರಡಿಸುವುದರಲ್ಲಿ ತೊಡಗಿದ್ದರೆ ಅವರು ...ಸ್ಟೈಲ್ ಯಂತ್ರ ಇಟ್ಟುಕೊಂಡು, ಬುಲೆಟಿನ್‌ಗಳನ್ನು ...ಹೊರಡಿಸುತ್ತಿದ್ದರು. ಗಾಂಧಿಯವರ ಕೊಲೆಯಾಗಬಹುದೆಂಬ ... ಅವರ ತಲೆಯನ್ನು ಹೇಗೋ ಹೊಕ್ಕಿತ್ತು, ಅವರು ...ಬುಲೆಟಿನ್‌ಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ... ಎಚ್ಚರಿಕೆಯಿಂದಿರಬೇಕೆಂದು ಪದೇಪದೇ ...ಸುತ್ತಿದ್ದರು. ಈ ಬುಲೆಟಿನ್‌ಗಳನ್ನು ಎಲ್ಲ ಕಡೆಗೂ ...ಲ್ಲ ಕಳುಹಿಸುತ್ತಿದ್ದರು.

ಜನವರಿ 30, 1948ರಂದು ಗಾಂಧೀಜಿಯ ಕೊಲೆಯಾಯಿತು. ಕೊಲೆ ಮಾಡಿದ ವ್ಯಕ್ತಿ ನಾಥುರಾಂ ವಿನಾಯಕ ಗೋಡ್ಸೆ. ರುಮಾಲೆ ಚನ್ನಬಸವಯ್ಯನವರು ತಾಯಿನಾಡು ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ಗಾಂಧೀಜಿಯ ಕೊಲೆ ಮಾಡಿದವನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪುಢಾರಿ ನಾಥುರಾಮ್ ಗೋಡ್ಸೆ ಎಂದು ಬರೆದರು. ಅದು ಬೆಂಗಳೂರಿನ ಪತ್ರಿಕೆಯಲ್ಲಿ ಪ್ರಕಟವಾಯಿತಾಗಿ, ನಗರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಕಾರ್ಯಕರ್ತರಾದ ಕೆ. ಸೂರ್ಯನಾರಾಯಣ ಅವರು ರುಮಾಲೆಯವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದರು. ಮೊಕದ್ದಮೆ ಸಿಟಿ ಮ್ಯಾಜಿಸ್ಟ್ರೇಟರಾದ ಹೊಂಬಾಳಯ್ಯನವರ ಮುಂದೆ ವಿಚಾರಣೆಗೆ ಬಂತು. ರುಮಾಲೆಯವರ ಪರವಾಗಿ ಕೆ. ರಂಗಯ್ಯಂಗಾರ್‍ಯರೂ, ಆರ್.ಎಸ್.ಎಸ್. ಪರವಾಗಿ ವಕೀಲರಾದ ಭೀಮಾಚಾರ್‍ಯರೂ ವಕಾಲತ್ತು ವಹಿಸಿಕೊಂಡಿದ್ದರು. ಈ ಮೊಕದ್ದಮೆಯಲ್ಲಿ ಪೌರವಾಣಿ ಪತ್ರಿಕೆಯ ಸಂಪಾದಕನಾದ ನಾನು ಮತ್ತು ಎಂ.ಎಸ್. ಸೀತಾರಾಮಯ್ಯನವರು ರುಮಾಲೆಯವರ ಪರವಾಗಿ ಸಾಕ್ಷ್ಯ ನುಡಿದೆವು. ಗೋಡ್ಸೆ ಆರ್.ಎಸ್.ಎಸ್.ಗೆ ಸೇರಿದವನು ಎಂಬುದಕ್ಕೆ ರುಜುವಾತು ಒದಗಿಸಿಕೊಟ್ಟೆವು.




ಗಾಂಧೀಜಿ ಕೊಲೆಗೆ ಎರಡು ವಾರಗಳ ಮೊದಲು ಬೆಂಗಳೂರಿನಲ್ಲಿ 1948ರ ಜನವರಿ 17, 18, 19ನೇ ತಾರೀಖುಗಳಲ್ಲಿ ಕರ್ನಾಟಕದ ರಾಜ್ಯಮಟ್ಟದ ರಾಷ್ಟ್ರೀಯ ಸ್ವಯಂಸೇವಕದಳದ (ಸಂಘ ಪರಿವಾರದ) ರ್‍ಯಾಲಿ ನಡೆಯಿತು. ಈ ರ್‍ಯಾಲಿಗೆ ಅತಿಥಿಯಾಗಿ ನಾಥುರಾಮ್ ವಿನಾಯಕ ಗೋಡ್ಸೆ ಎಂಬುವವರು ಬಂದಿದ್ದರು. ನಾಥುರಾಮ್ ಗೋಡ್ಸೆ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಬೇಲಿ ವಾಸುದೇವಮೂರ್ತಿಯವರ ಅತಿಥಿಯಾಗಿ ಅವರ ಮನೆಯಲ್ಲಿ ತಂಗಿದ್ದರು ಎಂಬ ಸುದ್ದಿಯನ್ನು ಪೌರವಾಣಿ ಪತ್ರಿಕೆಯ ನಗರ ವರದಿಗಾರರಾದ ಹೆಚ್.ಎಸ್. ನಾರಾಯಣರಾಯರು ರ್‍ಯಾಲಿ ನಡೆಯುವುದಕ್ಕೆ ಮೊದಲ ದಿನವೇ ಪತ್ರಿಕೆಗೆ ಫೋನ್ ಮಾಡಿ ತಿಳಿಸಿದ್ದರು. ಅದನ್ನು ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಲಾಗಿತ್ತು.

ತುಮಕೂರಿನ ನ್ಯಾಯವಾದಿ ರಂಗಯ್ಯಂಗಾರ್‍ಯರು ಪೌರವಾಣಿಯಲ್ಲಿ ಪ್ರಕಟವಾಗಿದ್ದ ಈ ಸುದ್ದಿಯ ಆಧಾರದ ಮೇಲೆ ತಮ್ಮ ವಾದವನ್ನು ಮಂಡಿಸಿದರು. 'ಗಾಂಧೀಜಿಯ ಹತ್ಯೆ ಆಗುವುದಕ್ಕೆ 12 ದಿನಗಳ ಮೊದಲು ನಾಥುರಾಮ್ ವಿನಾಯಕ ಗೋಡ್ಸೆಯ ಹೆಸರನ್ನು ಬೆಂಗಳೂರಿನ ಜನ ಕೇಳಿರಲಿಲ್ಲ, ಅವರ ಹೆಸರು ಪ್ರಚಾರದಲ್ಲಿರಲೂ ಇಲ್ಲ, ಬಹಳ ಎಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲ ಮುಖ್ಯರಿಗೆ ಅವರು ಯಾರು ಎಂಬುದು ತಿಳಿದಿರಬಹುದು. ಗೋಡ್ಸೆ ರ್‍ಯಾಲಿಗೆ ಎಲ್ಲರಂತೆ ಬಂದುಹೋಗಿದ್ದರೆ ಈ ಸುದ್ದಿ ಯಾರ ಗಮನಕ್ಕೂ ಬರುತ್ತಿರಲಿಲ್ಲ. ಆದರೆ ಗೋಡ್ಸೆ ಸ್ವಾಗತ ಸಮಿತಿಯ ಅಧ್ಯಕ್ಷರ ಮನೆಯಲ್ಲಿ ಅತಿಥಿಯಾಗಿ ತಂಗಿದ್ದರು ಎಂದಾದಮೇಲೆ, ಗೋಡ್ಸೆ ಆರ್.ಎಸ್.ಎಸ್.ನಲ್ಲಿ ಪ್ರಮುಖ ವ್ಯಕ್ತಿಯೇ ಆಗಿರಬೇಕು. ಚಿಲ್ಲರೆ ಜನವಾಗಿದ್ದರೆ ಅವರನ್ನೇಕೆ ಸ್ವಾಗತ ಸಮಿತಿಯ ಅಧ್ಯಕ್ಷರು ತಮ್ಮ ಅತಿಥಿಯನ್ನಾಗಿ ಮಾಡಿಕೊಳ್ಳುತ್ತಿದ್ದರು? ನಾಥುರಾಂ ವಿನಾಯಕ ಗೋಡ್ಸೆ ಆರ್.ಎಸ್.ಎಸ್.ನ ಸಾಮಾನ್ಯ ಕಾರ್ಯಕರ್ತ ಅಲ್ಲ, ಅವನೊಬ್ಬ ಪ್ರಮುಖ ಕಾರ್ಯಕರ್ತ ಎಂಬುದು ಈ ಸುದ್ದಿಯಿಂದ ಸ್ಥಿರಪಡುತ್ತದೆ. ಆದ್ದರಿಂದ ರುಮಾಲೆ ಚನ್ನಬಸವಯ್ಯನವರು ಸುಳ್ಳು ಆರೋಪವನ್ನೇನೂ ಮಾಡಿಲ್ಲ, ಅವರು ಗಾಂಧೀಜಿಯ ಕೊಲೆ ಮಾಡಿದ ಗೋಡ್ಸೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಸದಸ್ಯ ಎಂಬುದನ್ನು ಸಾಕ್ಷ್ಯಾಧಾರಗಳ ಸಮೇತ ಹೇಳಿದ್ದಾರೆ. ರುಮಾಲೆ ಚನ್ನಬಸವಯ್ಯನವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಾನನಷ್ಟ ಮಾಡುವ ಕೆಲಸ ಮಾಡಿಲ್ಲ, ರುಮಾಲೆಯವರನ್ನು ನಿರಪರಾಧಿಗಳೆಂದು ಘೋಷಿಸಿ, ಮಾನನಷ್ಟ ಮೊಕದ್ದಮೆಯನ್ನು ರದ್ದು ಮಾಡಬೇಕು' ಎಂದು ರಂಗಯ್ಯಂಗಾರ್‍ಯರು ವಾದಿಸಿದರು. ಸಿಟಿ ಮ್ಯಾಜಿಸ್ಟ್ರೇಟ್ ಹೊಂಬಾಳಯ್ಯನವರಿಗೆ ವರ್ಗವಾಯಿತಾಗಿ ಬೇರೊಬ್ಬ ಮ್ಯಾಜಿಸ್ಟ್ರೇಟರ ಮುಂದೆ ಮತ್ತೆ ವಿಚಾರಣೆ ಆರಂಭವಾಯಿತು. ಆ ಸಂದರ್ಭದಲ್ಲಿ ಹಿರಿಯ ವಕೀಲರಾಗಿದ್ದ ಎಸ್.ಕೆ. ವೆಂಕಟರಂಗಯ್ಯಂಗಾರ್‍ಯರ ಮಧ್ಯಸ್ಥಿಕೆ ಕಾರಣದಿಂದ ಭೀಮಾಚಾರ್‍ಯರು ಈ ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡರು.

● ಎಚ್.ಎಚ್. ದೊರೆಸ್ವಾಮಿ

ಕೊಡಗು: ಪರಿಸರವ್ಯಾಧಿಗಳ ಉಪಟಳ


ರವಿ ಚಂಗಪ್ಪ

ಘಜನಿ ಮಹಮ್ಮದ್ ಭಾರತದ ಮೇಲೆ ನಿರಂತರವಾಗಿ ದಾಳಿ ಮಾಡಿದ್ದ, ಕಾರಣ ಆತನಿಗೆ ವೈಯಕ್ತಿಕವಾಗಿ ಲಾಭವಿತ್ತು. ಅದೇ ರೀತಿ ಕೊಡಗು ಜಿಲ್ಲೆಯಲ್ಲಿ ಇರುವಂತಹ ಪರಿಸರವಾ(ವ್ಯಾ)ದಿಗಳು ಹೈಟೆನ್ಷನ್ ವಿದ್ಯುತ್ ಮಾರ್ಗದ ಸಂಪರ್ಕದ ವಿಚಾರದಲ್ಲಿ ನಿರಂತರವಾಗಿ ನ್ಯಾಯಾಲಯದ ಕದ ತಟ್ಟುತ್ತಿದ್ದಾರೆ. ಪ್ರತೀ ಬಾರಿಯೂ ಸೋಲುತ್ತಿದ್ದಾರೆ. ಆದರೂ ಬೇರೆ ಬೇರೆ ರೀತಿಯಲ್ಲಿ ನ್ಯಾಯಾಲಯದ ಮೆಟ್ಟಿಲು ಏರುವ ಕೆಲಸವನ್ನು ಮಾಡುತ್ತಿದ್ದಾರೆ. ಸುಳ್ಳುಗಳನ್ನೇ ಬಂಡವಾಳವಾಗಿಸಿಕೊಂಡು, ನ್ಯಾಯಾಲಯದಲ್ಲಿ ಅರ್ಜಿಗಳನ್ನು ಹಾಕಿಕೊಂಡು, ಸಾಕಷ್ಟು ಬಾರಿ ಛೀಮಾರಿ ಹಾಕಿಸಿಕೊಂಡರೂ ಬುದ್ಧಿ ಬಾರದ ರೀತಿಯಲ್ಲಿ ಪ್ರತಿಭಟನೆ ಮತ್ತು ಹೋರಾಟಗಳನ್ನು ಮಾಡುತ್ತಿರುವುದರ ಹಿಂದೆ ಇರಬಹುದಾದ ಉದ್ದೇಶಗಳು ಏನು ಎಂಬುದು ಎಲ್ಲರಿಗೂ ಯಕ್ಷಪ್ರಶ್ನೆಯಾಗಿದೆ.

ಕರ್ನಾಟಕದಿಂದ ಕೇರಳದ ಕೋಯಿಕೋಡಿಗೆ ಹಾದುಹೋಗುವ 440 ಕೆ.ವಿ. ವಿದ್ಯುತ್ ಮಾರ್ಗ ಇದಾಗಿದ್ದು, 218 ಕಿ.ಮೀ.ನಷ್ಟು ಮಾರ್ಗದಲ್ಲಿ ಕೊಡಗು ಜಿಲ್ಲೆಯ 55 ಕಿ.ಮೀ.ನಲ್ಲಿ ಈ ಕಾಮಗಾರಿ ನಡೆಯಬೇಕಿದೆ. 2006ರಲ್ಲಿ ಇದರ ಕಾಮಗಾರಿಯು ಆರಂಭವಾಗಿದ್ದು, ಕೊಡಗು ಜಿಲ್ಲೆಯನ್ನು ಬಿಟ್ಟು, ಉಳಿದ ಪ್ರದೇಶದಲ್ಲಿ ಕರ್ನಾಟಕ ಹಾಗೂ ಕೇರಳದ ಭಾಗದಲ್ಲಿ ಪೂರ್ಣಗೊಂಡಿದೆ. ಕೊಡಗು ಜಿಲ್ಲೆಯಲ್ಲಿ ಮಾತ್ರ ಕಾಮಗಾರಿ ಆಗದೇ ಪವರ್‌ಗ್ರಿಡ್ ಸಂಸ್ಥೆಯವರು ಪ್ರತಿನಿತ್ಯ ನ್ಯಾಯಾಲಯ, ಪೊಲೀಸ್ ಠಾಣೆ ಎಂದೆಲ್ಲಾ ಓಡಾಡುವ ಪರಿಸ್ಥಿತಿ ಉಂಟಾಗಿದೆ. ಸರಕಾರಗಳಿಗೆ ಇಚ್ಛಾಶಕ್ತಿಯ ಕೊರತೆ ಇರುವುದರಿಂದ ಈ ಪರಿಸ್ಥಿತಿ ಇದೆ. ಹೈಟೆನ್ಷನ್ ವಿದ್ಯುತ್ ಮಾರ್ಗ ಒಂದು ರಾಷ್ಟ್ರೀಯ ಯೋಜನೆ.

ಈ ಯೋಜನೆಗೆ ಕೊಡಗು ಜಿಲ್ಲೆಯಲ್ಲಿ ಕೆಲವರು ವಿರೋಧವನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಪರಿಸರದ ಮುಖವಾಡವನ್ನು ಹೊತ್ತುಕೊಂಡು ಓಡಾಡುತ್ತಿರುವ ಕಾವೇರಿ ಸೇನೆ ಎಂಬ ಸಂಘಟನೆ ಇದರ ಹಿಂದೆ ಇದೆ. ಇವರ ಆರಂಭದ ಕಾರ್ಯಕ್ರಮ ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂಬುದಾಗಿತ್ತು, ಸ್ವತಃ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರ ಮತ್ತು ಗುತ್ತಿಗೆದಾರರ ಸಂಘದ ಅಧ್ಯಕ್ಷ ಆಗಿರುವ ಸ್ವಯಂಘೋಷಿತ ಕಾವೇರಿ ಸೇನೆಯ ಸಂಚಾಲಕ ರವಿ ಚಂಗಪ್ಪ ಲೋಕೋಪಯೋಗಿ ಇಲಾಖೆಯೇ ಭ್ರಷ್ಟಾಚಾರದ ಗೂಡಾಗಿರುವ ಕಾರಣ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಆಸಕ್ತಿ ಕಳೆದುಕೊಂಡು, ಹೆಚ್ಚು ಆಕರ್ಷಕವಾಗಿರುವಂತಹ ಮತ್ತು ವಿದೇಶಿ ಕಮಾಯಿ ಉಳ್ಳ ಪರಿಸರದ ಸಂರಕ್ಷಣೆಯ ಕಾರ್ಯಕ್ಕೆ ಕೈಹಾಕಿದ್ದಾರೆ.

ಯೋಜನೆ ಆರಂಭವಾದ ಕಾಲದಲ್ಲಿ ಕೊಡಗು ಜಿಲ್ಲೆಯ ಒಬ್ಬ ಶಾಸಕ ಹಾಗೂ ಒಬ್ಬ ವಿಧಾನ ಪರಿಷತ್ ಸದಸ್ಯ ಪವರ್‌ಗ್ರಿಡ್ ಸಂಸ್ಥೆಯವರ ಜೊತೆಯಲ್ಲಿ ವ್ಯವಹಾರ ಕುದುರಿಸಲು ಪ್ರಯತ್ನಿಸಿದ್ದರು. ಪವರ್‌ಗ್ರಿಡ್ ಸಂಸ್ಥೆ ಸರಕಾರಿ ಸಂಸ್ಥೆಯಾದರೂ ಯಾವುದಾದರೂ ರೀತಿಯಲ್ಲಿ ಹೊಂದಾಣಿಕೆ ಮಾಡಿ ಅವರ ಬೇಡಿಕೆಯ ಶೇ. 20ಕ್ಕೆ ಬಹುತೇಕ ಒಪ್ಪಿಗೆಯನ್ನು ಸೂಚಿಸುವ ವಿಚಾರಕ್ಕೆ ಮುಂದಾಗಿದ್ದರು. ಆದರೆ ಅಷ್ಟರಲ್ಲೇ ಚುನಾವಣೆ ಬಂದ ಕಾರಣ ಇದು ಯಾವುದೂ ನಡೆಯಲಿಲ್ಲ. ಹಾಗಾಗಿ ತಮ್ಮ ಬೇಡಿಕೆ ಈಡೇರದ್ದರಿಂದ, ಇವರುಗಳೇ ಕುಮ್ಮಕ್ಕು ನೀಡಿ ಪ್ರತಿಭಟನೆಗಳನ್ನು ನಡೆಸಲು ಪ್ರಾರಂಭಿಸಿದರು. ಯಾರ ಕುಮ್ಮಕ್ಕಿನಿಂದ ಈ ಪ್ರತಿಭಟನೆಗಳು ಆರಂಭವಾಗಿದ್ದವೋ ಇಂದು ಆ ಹೋರಾಟ ಅವರ ಕೈಮೀರಿ ಹೋಗಿದೆ.

ಪರಿಸರದ ಹೆಸರಿನಲ್ಲಿ ಹೋರಾಟ

ಪವರ್‌ಗ್ರಿಡ್ ಯೋಜನೆಯ ಒಟ್ಟು 55 ಕಿ.ಮೀ. ಪ್ರದೇಶದಲ್ಲಿ 6 ಕಿ.ಮೀ. ಪ್ರದೇಶ ಮೀಸಲು ಅರಣ್ಯವಾಗಿದೆ. ಸುಮಾರು 40 ಕಿ.ಮೀ.ನಷ್ಟು ಗದ್ದೆಯಾಗಿದ್ದರೆ ಉಳಿದ ಪ್ರದೇಶ ಕಾಫಿ ತೋಟ ಆಗಿದೆ. ಈಗಾಗಲೇ 2,000ದಷ್ಟು ಮರಗಳನ್ನು ಮೀಸಲು ಅರಣ್ಯದಲ್ಲಿ ಕಡಿಯಲಾಗಿದೆ. ಕಾಫಿ ತೋಟಗಳಲ್ಲಿ ಒಟ್ಟು 6,304 ಮರಗಳನ್ನು ಕಡಿಯಲಾಗುತ್ತದೆ. ಹೀಗೆ ಒಟ್ಟು 8,000 ಮರಗಳನ್ನು ಕಡಿಯಲಾಗುತ್ತದೆ. ಆದರೆ ಪರಿಸರವ್ಯಾಧಿಗಳು 50,000ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗುತ್ತದೆ ಎಂದು ಬೊಗಳೆ ಬಿಟ್ಟು, ಕಾಮಗಾರಿಯನ್ನು ಸ್ಥಗಿತಗೊಳಿಸುವ ಹೋರಾಟದಲ್ಲಿ ತೊಡಗಿದ್ದಾರೆ.


ಪರಿಸರದ ಪ್ರಶ್ನೆಗಳು ಯಾವಾಗ ಉದ್ಭವವಾದರೂ ಅದಕ್ಕೆ ಟಿಂಬರ್ ಲಾಬಿ ಅಥವಾ ಟಿಂಬರ್ ಮಾಫಿಯಾ ಎಂಬ ಹಣೆಪಟ್ಟಿಯನ್ನು ನೀಡಲಾಗುತ್ತದೆ. ಹೈಟೆನ್ಷನ್ ವಿದ್ಯುತ್ ಮಾರ್ಗದ ಸಂಪರ್ಕ ಕಲ್ಪಿಸುವುದು ಕೇಂದ್ರ ಸರಕಾರದ ಅಧೀನದಲ್ಲಿ ಇರುವಂತಹ ಪವರ್‌ಗ್ರಿಡ್ ಸಂಸ್ಥೆಯ ಕಾರ್ಯವಾಗಿದೆ. ಈ ಯೋಜನೆ ಕೇಂದ್ರ ಸರಕಾರದ್ದು. ಆದರೆ ಪರಿಸರವಾದಿಗಳು ಮಾತ್ರ ಈ ಯೋಜನೆ ರೂಪುಗೊಂಡದ್ದೇ ಟಿಂಬರ್ ಲಾಬಿಯ ಪ್ರಭಾವದಿಂದ ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ನೀಡುತ್ತಿದ್ದಾರೆ. ಕೊಡಗು ಜಿಲ್ಲೆಯ ಸಿದ್ದಾಪುರ ಗ್ರಾಮದಲ್ಲಿ ಇರುವ ಮರ ವ್ಯಾಪಾರಿಯೊಬ್ಬರಿಗೆ ಅನುಕೂಲ ಕಲ್ಪಿಸಲು ಈ ಯೋಜನೆ ಮಾಡುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಪರಿಸರದ ಹೆಸರಿನಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿ ವಿದೇಶದಿಂದ ಹಣ ತರಿಸಿಕೊಳ್ಳುವವರು ಹೈಟೆನ್ಷನ್ ವಿದ್ಯುತ್ ಮಾರ್ಗವೇ ವಿದೇಶಿ ಹಣ ಕಬಳಿಸುವ ಯತ್ನ ಎಂದು ಹೇಳಲು ತೊಡಗಿದ್ದಾರೆ. ಮೀಸಲು ಅರಣ್ಯದಲ್ಲಿ ಕಡಿದಿರುವ ಮರಗಳಿಗೆ ಮೌಲ್ಯವನ್ನು ಪಾವತಿಸಿದ ನಂತರ ಇಲಾಖೆ ಅದನ್ನು ತನ್ನ ಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋಗುತ್ತದೆ. ಅಲ್ಲಿ ಈ ಮರಗಳನ್ನು ಬಹಿರಂಗ ಹರಾಜು ಮಾಡಲಾಗುತ್ತದೆ.

ಹಾಗಿರುವಾಗ ಯಾವ ಟಿಂಬರ್ ಲಾಬಿಯ ಬಗ್ಗೆ ಇವರುಗಳು ಮಾತನಾಡುತ್ತಿದ್ದಾರೆ ಎಂಬುದು ಯಾರಿಗೂ ತಿಳಿಯದು. ಇವರಿಗೆ ಸ್ಥಳೀಯರ ಬೆಂಬಲ ದೊರೆಯದ ಕಾರಣ ಇವರ ಹೋರಾಟ ಮತ್ತು ಹಾರಾಟಗಳು ಮಂದಗತಿಯಲ್ಲಿ ಸಾಗಿದೆ.

ಪರಿಸರವ್ಯಾಧಿಗಳು ಬೇರೆ ಬೇರೆ ಹೆಸರಿನಲ್ಲಿ ಸಂಘಟನೆಗಳನ್ನು ಸ್ಥಾಪಿಸಿದ್ದಾರೆ. ಇವರಿಗೆ ವಿದೇಶದ ಹಣ ಯಥೇಚ್ಛವಾಗಿ ಹರಿದುಬರುತ್ತಿದೆ. ಹಾಗಾಗಿ ಒಂದಲ್ಲ ಒಂದು ಹೆಸರಿನಲ್ಲಿ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಾರೆ. ಇವರದೇ ಒಂದು ಸಂಸ್ಥೆಯಾದ ವೈಲ್ಡ್ ಲೈಫ್ ಫಸ್ಟ್ ಎಂಬ ಸಂಸ್ಥೆಯ ಮುಖ್ಯಸ್ಥ ಕರ್ನಲ್ ಮುತ್ತಣ್ಣ ಎಂಬವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ, ಮರಗಳನ್ನು ಕಡಿಯಲಾಗಿದೆ ಎಂದು ವಾದಿಸಿದ್ದರು. ಆಗ ಮುಖ್ಯ ನ್ಯಾಯಾಧೀಶರಾದ ವಘೇಲಾರವರು ಕಾನೂನಿನ ಉಲ್ಲಂಘನೆಯಾಗಿದೆಯೇ ಎಂದು ಪ್ರಶ್ನಿಸಿದ್ದರು. ಆನಂತರ ಮುತ್ತಣ್ಣನ ಅರ್ಜಿಯನ್ನು ವಜಾಗೊಳಿಸಿದ್ದರು. ತದ ನಂತರ ಮುತ್ತಣ್ಣ ಸರ್ವೋಚ್ಚ ನ್ಯಾಯಾಲಯದ ಹಸಿರು ಪೀಠದಲ್ಲಿಯೂ ಅರ್ಜಿಯನ್ನು ಸಲ್ಲಿಸಿದ್ದರು. ಹಸಿರು ಪೀಠ ಕೂಡ ಅವರ ಅರ್ಜಿಯನ್ನು ವಜಾಗೊಳಿಸಿತ್ತು.

ನ್ಯಾಯಾಲಯದ ಹೋರಾಟಗಳು ತಮಗೆ ಪ್ರಯೋಜನಕಾರಿ ಅಲ್ಲ; ಆದರೂ ಸಮಯ ವ್ಯಯ ಮಾಡಿ ಕಾಮಗಾರಿ ವೇಗದಲ್ಲಿ ಸಾಗದಂತೆ ಮಾಡಲು ಸಾಧ್ಯ ಎಂಬ ಕಾರಣಕ್ಕಾಗಿ ಮಾತ್ರ ಇವರುಗಳು ನ್ಯಾಯಾಲಯದ ಮೊರೆ ಹೋಗುತ್ತಿದ್ದಾರೆ. ಉಳಿದಂತೆ ಜನರ ದಿಕ್ಕುತಪ್ಪಿಸಿ, ಹೋರಾಟ, ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಕೊಡಗಿನ ಜನರಿಗೆ ಕಾಡುತ್ತಿರುವ ಪ್ರಶ್ನೆ ಏನೆಂದರೆ, ಸಾಧಾರಣವಾಗಿ ಯಾವುದೇ ಶ್ರೀಸಾಮಾನ್ಯನಿಗೆ ಉಚ್ಚ ನ್ಯಾಯಾಲಯಕ್ಕಾಗಲಿ, ಸರ್ವೋಚ್ಚ ನ್ಯಾಯಾಲಯಕ್ಕಾಗಲಿ ಹೋಗಲು ಸಾಧ್ಯವಿಲ್ಲ. ನ್ಯಾಯಾಲಯಗಳು ಅಷ್ಟೊಂದು ದುಬಾರಿ. ಹಾಗಿರುವಾಗ ಪ್ರತಿ ಬಾರಿಯೂ ನ್ಯಾಯಾಲಯದ ಮೆಟ್ಟಿಲು ಏರುವ ಇವರಿಗೆ ಆದಾಯ ಎಲ್ಲಿಂದ ಬರುತ್ತದೆ? ಜೊತೆಗೆ ಆಸಕ್ತಿಯಾದರೂ ಏನು ಎಂಬುದಾಗಿದೆ.

ಜಿಲ್ಲೆಯಲ್ಲಿ ಬೆಂಬಲ ದೊರೆಯದಿದ್ದಾಗ ಹಾಗೂ ಜಿಲ್ಲೆಯ ಇಬ್ಬರೂ ಶಾಸಕರು ಇವರ ಬ್ಲಾಕ್‌ಮೇಲ್ ತಂತ್ರಕ್ಕೆ ಮಣಿಯದಿದ್ದಾಗ, ಮಂಡ್ಯದ ಶಾಸಕ ಕೆ.ಎಸ್.ಪುಟ್ಟಣ್ಣಯ್ಯನವರನ್ನು ಇವರುಗಳು ಸಂಪರ್ಕಿಸಿ 'ಕೊಡಗು ಜಿಲ್ಲೆಯಲ್ಲಿ ಲಕ್ಷಾಂತರ ಮರಗಳನ್ನು ಕಡಿಯಲಾಗುತ್ತಿದೆ. ಹೀಗೆ ಮರ ಕಡಿದರೆ ಕೊಡಗಿನಲ್ಲಿ ಮಳೆಯಾಗುವುದಿಲ್ಲ. ಕೊಡಗಿನಲ್ಲಿ ಮಳೆಯಾಗದಿದ್ದರೆ ಮಂಡ್ಯಕ್ಕೆ ನೀರು ಇರುವುದಿಲ್ಲ' ಎಂದು ಚಿತಾವಣೆ ಮಾಡಿ, ಪುಟ್ಟಣ್ಣಯ್ಯ ಮತ್ತು ತಂಡದವರು ಕೊಡಗು ಜಿಲ್ಲೆಯಲ್ಲಿ ಪ್ರತಿಭಟನೆ ನಡೆಸುವಂತೆ ನೋಡಿಕೊಂಡರು. ತಾನು ರೈತಸಂಘದ ಪ್ರಶ್ನಾತೀತ ನಾಯಕ ಎಂದುಕೊಂಡು, ಎಲ್ಲಾ ವಾಮಮಾರ್ಗಗಳ ಮೂಲಕ ಶಾಸಕರಾದ ಪುಟ್ಟಣ್ಣಯ್ಯ ಕೊಡಗು ಜಿಲ್ಲೆಯಲ್ಲಿ ತನಗೆ ನೆಲೆಯೂರಲು ಅವಕಾಶ ಸಿಕ್ಕಿತು ಎಂದುಕೊಂಡು, ವಾಸ್ತವಾಂಶವನ್ನು ಅರಿಯುವ ಗೋಜಿಗೇ ಹೋಗದೆ, ಪ್ರತಿಭಟನೆಗೆ ಕೈಜೋಡಿಸಿದ್ದರು. ತನ್ನ ಕ್ಷೇತ್ರದಲ್ಲಿ ಆನೆ ಸತ್ತು ಬಿದ್ದಿರುವಾಗ ಕೊಡಗಿನಲ್ಲಿ ನೊಣ ಓಡಿಸಲು ಪುಟ್ಟಣ್ಣಯ್ಯ ಬಂದಿದ್ದರು. ಪರಿಸರದ ಬಗ್ಗೆ ತನಗೆ ಅಪಾರವಾದ ಕಾಳಜಿ ಇದೆ ಎಂದು ಅವರು ಹೇಳಿದ್ದರು. ಅವರ ಪರಿಸರದ ಈ ಅಪಾರ ಕಾಳಜಿಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ಈ ಯೋಜನೆಯ ಪರವಾಗಿ ಇರುವಂತಹ ಎ.ಕೆ.ಸುಬ್ಬಯ್ಯ 'ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುವ ಬದಲು, ಅರಣ್ಯವನ್ನು ಬೆಳೆಸಬಹುದಲ್ಲ' ಎಂದು ಪುಟ್ಟಣ್ಣಯ್ಯನವರಿಗೆ ಸೂಚಿಸಿದ್ದರು!


ಕರ್ನಲ್ ಮುತ್ತಣ್ಣ




ಸಂಸದ ಪ್ರತಾಪ್ ಸಿಂಹನ ಜೊತೆ ಪರಿಸರ ವ್ಯಾದಿಗಳು

ಖಾಸಗಿ ಕಾರ್ಯಕ್ರಮವೊಂದಕ್ಕೆ ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಕೊಡಗಿಗೆ ಬಂದಿದ್ದ ವೇಳೆಯಲ್ಲಿ ಅವರನ್ನೂ ಯಾಮಾರಿಸಿ ಅವರು ಕೂಡ ಈ ಯೋಜನೆಯ ವಿರುದ್ಧ ಹೇಳಿಕೆಯನ್ನು ನೀಡುವಂತೆ ಮಾಡಿದ್ದರು. ಜೊತೆಗೆ ನ್ಯಾಯಾಂಗ ಹೋರಾಟದಲ್ಲಿ ತಾನು ಬೆಂಬಲ ನೀಡುತ್ತೇನೆ ಎಂದು ಸಂತೋಷ್ ಹೆಗ್ಡೆ ಅವರಿಂದ ಹೇಳಿಸುವ ಮೂಲಕ ಅವರನ್ನೂ ತಮ್ಮ ಮಟ್ಟಕ್ಕೆ ಇಳಿಸಿದ್ದರು.

ತಜ್ಞರ ಸಮಿತಿಯ ರಚನೆ

ಕಳೆದ ಲೋಕಸಭಾ ಚುನಾವಣೆಯ ವೇಳೆಯಲ್ಲಿ ದಕ್ಷಿಣ ಕೊಡಗಿನಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗವನ್ನು ವಿರೋಧಿಸಿ ಅಹೋರಾತ್ರಿ ಪ್ರತಿಭಟನೆಯನ್ನು ಕಾವೇರಿ ಸೇನೆಯವರು ನಡೆಸಿದ್ದರು. ಇದರ ಉದ್ದೇಶ ಕೊಡಗು ಜಿಲ್ಲೆಯಲ್ಲಿ ಡೋಂಗಿ ಪರಿಸರವಾದಿಗಳ ಉಪಟಳವನ್ನು ತಡೆಯುವಲ್ಲಿ ಯಶಸ್ವಿಯಾಗಿರುವ ಭಾ.ಜ.ಪ. ಹಾಗೂ ಇಬ್ಬರು ಶಾಸಕರ ವಿರುದ್ಧ ಕತ್ತಿ ಮಸೆಯುವುದಾಗಿತ್ತು. ಕೊಡಗು ಜಿಲ್ಲೆಯ ಮಟ್ಟಿಗೆ ಈ ಡೋಂಗಿ ಪರಿಸರವಾದಿಗಳು ಕಾಂಗ್ರೆಸಿನ ಜೊತೆಯಲ್ಲಿ ಗುರುತಿಸಿಕೊಂಡಿದ್ದಾರೆ. ಹಾಲಿ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಬಿ.ಎಸ್.ತಮ್ಮಯ್ಯ ಕೂಡ ಈ ಗುಂಪಿನಲ್ಲಿ ಇರುವಂತಹ ವ್ಯಕ್ತಿ. ಜಿಲ್ಲೆಯ ಕಂಟಕಪ್ರಾಯವಾದ ಹಲವಾರು ವಿಚಾರಗಳಿಗೆ ಸೂತ್ರಧಾರಿಯಾಗಿ ಕಾರ್ಯ ನಿರ್ವಹಿಸುವ ತಮ್ಮು ಪೂವಯ್ಯ ಎಂಬ ವ್ಯಕ್ತಿ ಈ ಎಲ್ಲಾ ಷಡ್ಯಂತ್ರಗಳ ಹಿಂದೆ ಇರುವಂತಹ ವ್ಯಕ್ತಿ. ಬೇನಾಮಿ ಹೆಸರಿನಲ್ಲಿ ಕಾರ್ಯಾಚರಣೆ ಮಾಡುವುದರಲ್ಲಿ ಮತ್ತು ವಹಿವಾಟು ನಡೆಸುವುದರಲ್ಲಿ ಈತ ನಿಸ್ಸೀಮ.

ಕಳೆದ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಡೋಂಗಿ ಪರಿಸರವಾದಿಗಳೆಲ್ಲರೂ ಸ್ಪೀಕರ್ ಆಗಿದ್ದ ಕೆ.ಜಿ. ಬೋಪಯ್ಯ ವಿರುದ್ಧ ರಣಕಹಳೆ ಕೂಗಿ, ಕಾಂಗ್ರೆಸಿನ ಬಿ.ಟಿ.ಪ್ರದೀಪ್‌ಗೆ ಬೆಂಬಲ ನೀಡಿದ್ದರು. ಅವರ ಬೆಂಬಲವನ್ನು ನಿರಾಕರಿಸದೆ, ಅವರ ಜೊತೆಯಲ್ಲಿಯೇ ಗುರುತಿಸಿಕೊಂಡ ಕಾರಣ ಪ್ರದೀಪ್ ಗೆಲ್ಲಬಹುದಾದ ಸ್ಥಾನವನ್ನು ಕಳೆದುಕೊಂಡಿದ್ದರು. ಇಷ್ಟಕ್ಕೂ ಕಾಂಗ್ರೆಸಿಗರಿಗೆ ಬುದ್ಧಿ

ಡೋಂಗಿ ಸಂಶೋಧನೆಗಳು

ಈ ಯೋಜನೆ ಪ್ರಾರಂಭವಾದಾಗ 'ಹೈಟೆನ್ಷನ್ ವಿದ್ಯುತ್ ಮಾರ್ಗ ಹಾದುಹೋಗುವುದರಿಂದ ಆ ಪ್ರದೇಶದಲ್ಲಿ ವಾಸಿಸುತ್ತಿರುವವರಿಗೆ ಮೈಯಲ್ಲಿ ಕಜ್ಜಿಗಳು ಏಳುತ್ತದೆ' ಎಂದು ಕಾವೇರಿ ಸೇನೆಯವರು ಪ್ರಚಾರ ಮಾಡಲು ತೊಡಗಿದರು. ಈ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳದೆ ಇರುವುದರಿಂದ ಮತ್ತೊಂದು ಹೊಸ ವಿಷಯವನ್ನು ಪ್ರಸ್ತಾಪಿಸಿದರು. 'ಈ ಮಾರ್ಗದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಮಹಿಳೆಯರು ಗರ್ಭಿಣಿಯರಾದರೆ ಅವರಿಗೆ ಗರ್ಭಪಾತವಾಗುತ್ತದೆ' ಎಂದು ಹೇಳಿದರು. ಅದಕ್ಕೂ ಯಾರೂ ಕ್ಯಾರೇ ಅನ್ನದೆ ಇರುವಾಗ 'ಮರಗಳನ್ನು ಕಡಿದು ಲೂಟಿ ಮಾಡಲಾಗುತ್ತಿದೆ. ಪರಿಸರಕ್ಕೆ ಹಾನಿ ಇದೆ. ಮಳೆ ಕಡಿಮೆಯಾಗುತ್ತದೆ' ಎಂದು ಹೇಳತೊಡಗಿದರು. ಗರ್ಭಪಾತದ ವಿಚಾರವನ್ನು ಎಲ್ಲಿಯಾದರೂ ಇವರು ಕೇಂದ್ರ ಸರಕಾರದ ಗಮನಕ್ಕೆ ತಂದರೆ, ಜನಸಂಖ್ಯಾ ಸ್ಫೋಟದಿಂದ ಕಂಗೆಡುತ್ತಿರುವ ಸರಕಾರಗಳು ಇವರಿಗೆ ನೊಬೆಲ್ ಪಾರಿತೋಷಕವನ್ನು ನೀಡಬಹುದು.


ದ್ವಿಮುಖ ನೀತಿ

ಪರಿಸರದ ಹೋರಾಟ ನಡೆಸುವಾಗ 'ಮರಗಳು ಗಣಿಗಾರಿಕೆಗೆ ಅವಕಾಶ ನೀಡಬಾರದು' ಎಂದು ಹೇಳುವ ಕಾವೇರಿ ಸೇನೆಯ ರವಿ ಚಂಗಪ್ಪ ಇತ್ತೀಚೆಗೆ ಗುತ್ತಿಗೆದಾರರ ಸಂಘದವರು ಕೊಡಗಿನಲ್ಲಿ ಮರಗಳು ಸಿಗದೆ ಇರುವುದರ ಬಗ್ಗೆ ಹೋರಾಟಗಳನ್ನು ಮಾಡಿದಾಗ ಗುತ್ತಿಗೆದಾರರ ಜೊತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿದ್ದರು. ಆಗ ಜಿಲ್ಲಾಧಿಕಾರಿಗಳು 'ನೀವು ಮರಗಳು ತೆಗೆಯಬಾರದು ಎಂದು ಹೇಳಿಕೊಂಡು, ಪರಿಸರವಾದಿಗಳ ಜೊತೆಯಲ್ಲಿ ಬರುತ್ತೀರಿ. ಈಗ ಇವರ ಜೊತೆಯಲ್ಲಿ ಮರಗಳು ಬೇಕು ಎಂದು ಹೇಳುತ್ತೀರಿ. ನಿಮ್ಮ ನಿಲುವನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಿ. ನಿಮ್ಮೊಂದಿಗೆ ನನಗೆ ಚರ್ಚಿಸಲು ಆಗುವುದಿಲ್ಲ' ಎಂದು ಮಂಗಳಾರತಿ ಮಾಡಿದ್ದರು.

ಬಂದಿಲ್ಲ. ಲೋಕಸಭಾ ಚುನಾವಣೆಯ ವೇಳೆಯಲ್ಲಿ ಆಗ ಸಂಸದರಾಗಿದ್ದ ವಿಶ್ವನಾಥ್‌ರವರನ್ನು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರ ಮೂಲಕ ರಾಜ್ಯ ಸರಕಾರದ ಗಮನ ಸೆಳೆಯುವ ಪ್ರಯತ್ನವನ್ನು ಕಾಂಗ್ರೆಸಿಗರು ಮಾಡಿದ್ದರು. ಜೊತೆಗೆ ಪುಟ್ಟಣ್ಣಯ್ಯ ಹಾಗೂ ಎಂ.ಸಿ.ನಾಣಯ್ಯ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರಿ, ಡಿ.ಕೆ.ಶಿವಕುಮಾರ್‌ರವರು ಪ್ರತಿಭಟನೆ ನಡೆಸುವ ಸ್ಥಳಕ್ಕೆ ಭೇಟಿ ನೀಡುವಂತೆ ನೋಡಿಕೊಂಡಿದ್ದರು.

ಇದರ ಫಲವಾಗಿ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಕೊಡಗು ಜಿಲ್ಲೆಗೆ ಆಗಮಿಸಿ, ಸ್ಥಳ ಪರಿಶೀಲನೆ ಮಾಡಿದ ನಂತರ ಹೋರಾಟವನ್ನು ಕೈಬಿಡಲು ಮನವಿ ಮಾಡಿಕೊಂಡು, ಈ ಬಗ್ಗೆ ಪರಿಶೀಲನೆ ಮಾಡಲು ತಜ್ಞರ ಸಮಿತಿಯೊಂದನ್ನು ರಚಿಸುತ್ತೇವೆ ಎಂಬ ಘೋಷಣೆಯನ್ನು ಮಾಡಿದ್ದರು. ತಜ್ಞರ ಸಮಿತಿಯಲ್ಲಿ ಪರಿಸರವಾದಿಗಳ ಜೊತೆಯಲ್ಲಿಯೇ ಗುರುತಿಸಿಕೊಂಡಂತಹ ರಾಮನ್ ಸುಕುಮಾರನ್ ಸೇರಿದಂತೆ ಒಟ್ಟು ಮೂವರು ಇದ್ದರು. ಖ್ಯಾತ ಪರಿಸರವಾದಿ ಹಾಗೂ ಕೊಡಗು ಜಿಲ್ಲೆಯಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಪರಿಸರವಾದಿಗಳ ನಿಕಟವರ್ತಿಯಾಗಿರುವ ರಾಮನ್ ಸುಕುಮಾರನ್‌ರವರು ತಜ್ಞರ ಸಮಿತಿಗೆ ಬರುವ ಮುನ್ನ ಆಗಿನ ಪರಿಸರಖಾತೆಯ ಸಚಿವರಾಗಿದ್ದ ವೀರಪ್ಪ ಮೊಯ್ಲಿಯವರಲ್ಲಿ 'ಈ ಯೋಜನೆಯಿಂದ ಪರಿಸರಕ್ಕೆ ಹಾನಿ ಇದೆ. ಹಾಗಾಗಿ ಬದಲಿ ಮಾರ್ಗವನ್ನು ರೂಪಿಸಬೇಕು' ಎಂದು ಕೋರಿಕೊಂಡಿದ್ದರು. ಅವರ ಉಪಸ್ಥಿತಿಯಲ್ಲಿ ತಜ್ಞರ ಸಮಿತಿ ಯಾವ ರೀತಿಯ ವರದಿಯನ್ನು ನೀಡುತ್ತದೆ ಎಂಬ ಕುತೂಹಲ ಇತ್ತು. ದೋಂಗಿ ಪರಿಸರವಾದಿಗಳು ಬದಲಿ ಮಾರ್ಗಗಳನ್ನು ಸೂಚಿಸಿದ್ದರು. ಈ ಬದಲಿ ಮಾರ್ಗಗಳಲ್ಲಿ ಮೊದಲನೆಯದು 'ಬಿ' ಲೈನ್ ಮಾರ್ಗ ಮತ್ತು ಎರಡನೆಯದು ಭೂಮಿಯ ಒಳಗಿನಿಂದ ಹಾದುಹೋಗುವ ಮಾರ್ಗ. 'ಬಿ' ಲೈನ್ ಮಾರ್ಗವೆಂದರೆ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಮೂಲಕ ಹಾದುಹೋಗುವ ಮಾರ್ಗವಾಗಿತ್ತು. ತಾವು ಸೂಚಿಸುವ ಮಾರ್ಗವನ್ನು ತಜ್ಞರ ಸಮಿತಿ ನಿರಾಕರಿಸುತ್ತದೆ ಎಂಬ ಅರಿವು ಇದ್ದ ಪ್ರತಿಭಟನಾಕಾರರು ಸಮಿತಿ ವರದಿ ನೀಡುವ ಮುನ್ನವೇ ನಿರೀಕ್ಷಣಾ ಜಾಮೀನು ಪಡೆದಂತೆ ವರದಿ ತಮ್ಮ ಬೇಡಿಕೆಯ ವಿರುದ್ಧವಾಗಿ ಬಂದರೆ ಪ್ರತಿಭಟನೆಯನ್ನು ಮುಂದುವರೆಸುವುದಾಗಿ ಹೇಳಿದ್ದರು. ನಿರೀಕ್ಷೆಯಂತೆ ತಜ್ಞರ ಸಮಿತಿ ವ್ಯತಿರಿಕ್ತ ವರದಿ ನೀಡಿದ್ದರಿಂದ ಮತ್ತೆ ಪ್ರತಿಭಟನೆಯನ್ನು ಮುಂದುವರೆಸಿದರು.

ಎಲ್ಲಾ ನ್ಯಾಯಾಲಯ ಹಾಗೂ ಹಸಿರು ಪೀಠದ ತೀರ್ಪಿನ ಜೊತೆಯಲ್ಲಿ ತಜ್ಞರ ಸಮಿತಿಯು ಬದಲಿ



ಇಂಧನ ಸಚಿವ ಡಿ.ಕೆ. ಶಿವಕುಮಾರ್

ಮಾರ್ಗವಿಲ್ಲ ಎಂದು ಹೇಳಿರುವುದರಿಂದ, ಕರ್ನಾಟಕ ಸರಕಾರವು ಕಾಮಗಾರಿಯನ್ನು ಶೀಘ್ರವಾಗಿ ನಡೆಸಲು ಸಹಕಾರ ನೀಡಬೇಕಿತ್ತು. ಈ ಯೋಜನೆಯು ಕೇಂದ್ರ ಸರಕಾರದ ಯೋಜನೆಯಾದ ಕಾರಣ ಇದರಲ್ಲಿ ರಾಜ್ಯ ಸರಕಾರ ಕಾಮಗಾರಿ ನಡೆಸಲು ರಕ್ಷಣೆ ನೀಡುವುದನ್ನು ಬಿಟ್ಟು, ಬೇರೆ ಏನೂ ಮಾಡುವಂತೆ ಇಲ್ಲ. ಹಾಗಿದ್ದರೂ ರಾಜ್ಯ ಸರಕಾರ ಪ್ರತಿಯೊಂದು ಹಂತದಲ್ಲಿಯೂ ಕೊಡಗು ಜಿಲ್ಲೆಯ ಕಾಂಗ್ರೆಸಿನವರ ಒತ್ತಡಕ್ಕೆ ಮಣಿದು ವಿಳಂಬ ನೀತಿಯನ್ನು ಅನುಸರಿಸುತ್ತಾ ಪ್ರತಿಭಟನೆ ನಡೆಸುವವರಿಗೆ ಬೇಕಾದಂತಹ ಅಸ್ತ್ರಗಳನ್ನು ಒದಗಿಸುತ್ತಾ ಬಂದಿದೆ.

ಈಗ ಕಾಮಗಾರಿ ಮತ್ತೆ ಆರಂಭವಾಗಿದೆ. ಈ ಕಾಮಗಾರಿ ನಡೆಯುತ್ತಿರುವ ರೀತಿ ಗಮನಿಸಿದರೆ, ಸರಕಾರವೋ ಅಥವಾ ಪವರ್‌ಗ್ರಿಡ್ ಸಂಸ್ಥೆಯವರೋ ಈ ಹೋರಾಟ ನಡೆಸುತ್ತಿರುವವರ ಜೊತೆ ಕೈಜೋಡಿಸುತ್ತಿದ್ದಾರೆ ಎಂಬ ಗುಮಾನಿ ಬರುತ್ತದೆ. ಅಷ್ಟೊಂದು ಆಮೆಗತಿಯಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಕೇಂದ್ರ ಸರಕಾರ ಈ ಕಾಮಗಾರಿ ಗುರುತಿಸಿದ ಮಾರ್ಗದಲ್ಲಿಯೇ ಆಗಬೇಕು ಎಂದು ಹೇಳಿದೆ ಮತ್ತು ತ್ವರಿತವಾಗಿ ಕಾಮಗಾರಿಯನ್ನು ಮುಗಿಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶನವನ್ನು ನೀಡಿದೆ. ಹಾಗಾಗಿ ಜಿಲ್ಲಾಧಿಕಾರಿಗಳು ಮಧ್ಯವರ್ತಿಗಳ ಪ್ರವೇಶ ಇಲ್ಲದಂತೆ, ಪ್ರತಿಯೊಬ್ಬ ತಂತ್ರಸ್ಥನಾಗುವ ಭೂಮಾಲಿಕನನ್ನು ಕರೆಸಿ, ಅವರಿಂದ ಒಪ್ಪಿಗೆ ಪಡೆಯುವ ಮತ್ತು ಅವರಿಗೆ ಪರಿಹಾರದ ಮೊತ್ತವನ್ನು ಕೊಡುವ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಈ ಯೋಜನೆಯ ವಿಶೇಷತೆ ಏನೆಂದರೆ ಸಂಸ್ಥೆ ತೋಟದ ಮಾಲಿಕರಿಗೆ ಎಕ್ರೆಯೊಂದಕ್ಕೆ 18 ಲಕ್ಷ ರೂಪಾಯಿ ಪರಿಹಾರವನ್ನು ನೀಡುತ್ತದೆ. ಆದರೆ ತೋಟವನ್ನು ವಶಪಡಿಸಿಕೊಳ್ಳುವುದಿಲ್ಲ. ಪರಿಹಾರದ ಮೊತ್ತ ಪಡೆದ ನಂತರವೂ ಮಾಲಿಕತ್ವ ಜಮೀನಿನ ಮಾಲಿಕನ ಕೈಯಲ್ಲಿಯೇ ಇರುತ್ತದೆ. ಅವರಿಗೆ ಅಲ್ಲಿ ಕೃಷಿ ಮಾಡಲು ಮುಕ್ತ ಅವಕಾಶವಿದೆ. ಬತ್ತ ಬೆಳೆಯುವ ಗದ್ದೆಗೂ ಎಕ್ರೆಗೆ 1.50 ಲಕ್ಷ ರೂಪಾಯಿ ಪರಿಹಾರ ನೀಡಲಾಗುತ್ತದೆ. ಆದರೆ ಈ ಪರಿಹಾರದ ಮೊತ್ತವನ್ನು ಏರಿಸಬೇಕು ಎಂದು ತಜ್ಞರ ಸಮಿತಿ ಶಿಫಾರಸ್ಸು ಮಾಡಿದೆ.

ತಮ್ಮ ಎಲ್ಲಾ ಯತ್ನಗಳು ಮುಗಿದನಂತರ ಈಗ ಮತ್ತೆ ಸರ್ವೋಚ್ಚ ನ್ಯಾಯಾಲಯ ಹಾಗೂ ಸಿ.ಇ.ಸಿ. ಸಮಿತಿಯ ಮುಂದೆ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದು ಹೇಳುತ್ತಾ 'ಅರ್ಜಿಯ ವಿಲೇವಾರಿ ಆಗುವವರೆಗೆ ಕಾಮಗಾರಿಯನ್ನು ಮಾಡಬಾರದು' ಎಂದು ತಾವೇ ಸರಕಾರ ಎನ್ನುವ ರೀತಿಯಲ್ಲಿ ಪರಿಸರ ವ್ಯಾಧಿಗಳು ಹೇಳುತ್ತಿದ್ದಾರೆ. 'ಅರ್ಜಿ ಸಲ್ಲಿಕೆ ಆದನಂತರ ನ್ಯಾಯಾಲಯ ತಡೆಯಾಜ್ಞೆಯನ್ನೇನು ನೀಡಿಲ್ಲ. ಆದರೆ ನಮ್ಮ ಪರವಾಗಿ ಆದೇಶ ಬಂದರೆ ಆಗಿರುವ ಕಾಮಗಾರಿ ವ್ಯರ್ಥವಲ್ಲವೇ' ಎಂದು ಅರ್ಜಿದಾರರಾದ ಕರ್ನಲ್ ಸಿ.ಪಿ.ಮುತ್ತಣ್ಣ ಪ್ರಶ್ನಿಸುತ್ತಾರೆ. ಇವರ ಈ ಹೇಳಿಕೆ ಗಮನಿಸಿದರೆ ಇವರು ಸೈನ್ಯದಲ್ಲಿ ಏನು ಮಾಡುತ್ತಿದ್ದರು ಎಂಬ ಸಂಶಯ ಉದ್ಭವವಾಗುತ್ತದೆ.

ಈ ಹಿಂದೆ ಇಬ್ಬರು ಪ್ರಮುಖ ಸೈನ್ಯಾಧಿಕಾರಿಗಳು ಇಂತಹದೇ ಕಾರ್ಯಕ್ಕೆ ಬೆಂಬಲ ನೀಡುತ್ತಿದ್ದರು. ಆಗ ಅವರ ಬಗ್ಗೆ ವ್ಯಾಪಕವಾದ ಟೀಕೆ ಬಂದ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಅವರು ಬಹಿರಂಗವಾಗಿ ಇಂತಹ ಕಾರ್ಯಗಳಲ್ಲಿ ಗುರುತಿಸಿಕೊಳ್ಳುತ್ತಿಲ್ಲ. ಹಾಗಾಗಿ ಈ ಕರ್ನಲ್ ಈಗ ಹೋರಾಟದ ಮುಂಚೂಣಿಯಲ್ಲಿ ಇದ್ದಾರೆ. ಹಲವು ವಿಚಾರಗಳ ಬಗ್ಗೆ ಮಧ್ಯ ಪ್ರವೇಶಿಸಿ ಇವರೊಬ್ಬರೇ ಪರಿಸರದ ಬಗ್ಗೆ ಕಾಳಜಿ ಇರುವವರು ಎನ್ನುವಂತೆ ಖಾಸಗಿ ವಿಷಯಕ್ಕೂ ಹಸ್ತಕ್ಷೇಪ ಮಾಡಿ ಕಿರುಕುಳವನ್ನು ಶ್ರೀಸಾಮಾನ್ಯನಿಗೆ ನೀಡುತ್ತಿದ್ದಾರೆ.

ಬಹಳ ತಡವಾಗಿ ಕೇಂದ್ರ ಇಂಧನ ಸಚಿವರಾದ ಪಿಯೂಶ್ ಚಾವ್ಲಾರವರು 'ಈ ಕಾಮಗಾರಿ ಮುಗಿಸಲು ಈ ಕ್ಷೇತ್ರದ ಸಂಸದ ಪ್ರತಾಪ ಸಿಂಹರವರು ಬೆಂಬಲ ಕೊಡಿಸಬೇಕು. ವಿಳಂಬ ಮಾಡುವಂತೆ ಇಲ್ಲ, ಜನರ ಮನವೊಲಿಸಬೇಕು' ಎಂದು ಹೇಳಿದ್ದಾರೆ. ಸಮಸ್ಯೆ ಇರುವುದು ಯಾರ ಭೂಮಿಯ ಮೂಲಕ ಈ ಮಾರ್ಗವು ಹಾದುಹೋಗುತ್ತದೋ ಅವರಿಂದ ಅಲ್ಲ. ಬದಲಿಗೆ ಸಮಸ್ಯೆ ಆಗುತ್ತಿರುವುದು ಕೆಲಸಕ್ಕೆ ಬಾರದ ಕೆಲವು ವ್ಯಕ್ತಿಗಳು ಪ್ರತಿನಿತ್ಯ ಕ್ಯಾತೆ ತೆಗೆಯುತ್ತಿರುವುದರಿಂದ. ಸರಕಾರ ಈ ವಿಚಾರದಲ್ಲಿ ಗಟ್ಟಿ ನಿರ್ಧಾರವನ್ನು ತೆಗೆದುಕೊಂಡು, ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಅಗತ್ಯತೆ ಇದೆ.

● ಬಿ.ಎಸ್. ಮನು ಶೆಣೈ

ವಿಜ್ಞಾನವೂ ಸುಳ್ಳಂತಲ್ಲಾ!

ಥೂತ್ತೇರಿ

► ಯಾಹೂ

ಮಾನವಂತ ಹವ್ಯಕರೆಲ್ಲಾ ಒಂದೆಡೆ ಸೇರಿ ರಾಮಚಂದ್ರಾಪುರದ ರಾಘಣ್ಣನ ವಿಷಯವನ್ನು ಮನಬಿಚ್ಚಿ ಮಾತನಾಡಿ, ಮಠದಲ್ಲಿ ನಡೆದದ್ದು ಅತ್ಯಾಚಾರವೊ ಇಲ್ಲ ಅನಾಚಾರವೊ ಎಂಬ ವಿಷಯವನ್ನು ಗಂಭೀರವಾಗಿ ಚರ್ಚಿಸಿದರಂತಲ್ಲಾ. ಈ ಚರ್ಚೆಯಲ್ಲಿ ಭಾಗವಹಿಸಿದ ಪ್ರಸಿದ್ಧ ವಕೀಲರೊಬ್ಬರು "ರಾಘಣ್ಣ ಮಾಡಿರುವುದನ್ನು ಅತ್ಯಾಚಾರ ಎನ್ನುವುದಕ್ಕಿಂತ ಅನಾಚಾರ ಎನ್ನಬಹುದು. ಏಕೆಂದರೆ ಅತ್ಯಾಚಾರ ಎಂಬ ವಿಷಯದಲ್ಲಿ ಕೋರ್ಟ್ ವಿಚಾರಣೆ ನಡೆಸುತ್ತಿರುವುದರಿಂದ ಅದೇ ಪದ ಬಳಸಿದರೆ ಕಂಟೆಂಪ್ಟ್ ಕೋರ್ಟ್ ಆಗುತ್ತದೆ. ಅನಾಚಾರ ಎಂಬ ವಿಷಯದ ಮೇಲೆ ಚರ್ಚಿಸುವುದೊಳಿತು" ಎಂದರಂತಲ್ಲಾ. ಆಗ ಹವ್ಯಕರ ಹಿರಿತಲೆಗಳಲ್ಲದೆ ದಾರಿತಪ್ಪಿ ಹೋಗಿ ತ್ರಿಶಂಕುಗಾಣದಂತಾದ ಬುದ್ಧಿಜೀವಿ ರಾಜಕಾರಣಿ ಕೆ.ಹೆಚ್. ಶ್ರೀನಿವಾಸ್ ಕೂಡ "ಆ ಪದಕ್ಕೆ ನನ್ನ ಅನುಮೋದನೆಯಿದೆ" ಎಂದರಂತಲ್ಲಾ. ಆಗ ನುರಿತ ವಕೀಲರು ತಮ್ಮ ವಾದ ಮಂಡಿಸಿ, "ನೋಡಿ, ನಮ್ಮ ಸ್ವಾಮಿ ಅನಾಚಾರಿ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿವೆ. ನಮ್ಮದು ಮಾತಿನ ಚೂರಪ್ಪನ ಬುದ್ಧಿಜೀವಿ ಜನಾಂಗ. ಎಂತಹ ವಿಷಯವನ್ನೂ ಮಗ್ಗುಲಗಳಿದು ಮರು ವ್ಯಾಖ್ಯಾನ ನೀಡುವಷ್ಟು ಪಾಂಡಿತ್ಯ ನಮ್ಮವರಲ್ಲಿದೆ. ಆದರೆ ಈ ವಿಷಯದಲ್ಲಿ ಬಾಯಿ ಬಂದ್ ಮಾಡಿಕೊಂಡು ಸುಮ್ಮನಿರಬೇಕಾದ ಅನಿವಾರ್ಯ ಪ್ರಸಂಗ ಎದುರಾಗಿಬಿಟ್ಟಿದೆ. ಅದೇನೆಂದರೆ ಸ್ವಾಮಿಗಳು ಅನಾಚಾರ ಮಾಡಿರುವುದಕ್ಕೆ ಪಕ್ಕಾ ಸಾಕ್ಷಿಯಾಗಿ ಅವರ ವೀರ್ಯದ [illegible] ಮಾತನಾಡಿಬಿಟ್ಟಿವೆ. ಆದ್ದರಿಂದ ಇಂದ್ರಿಯ [illegible] ವಿಫಲರಾಗಿರುವ ಇಂತಹ ಸ್ವಾಮಿ ಗೌರವವಾಗಿ [illegible] ಜೀವನೋಪಾಯಕ್ಕೆ ಗೋವುಗಳನ್ನು ಸಾಕುತ್ತ [illegible] ಭಟ್ಟರ ಹೋಟೆಲಿಗೆ ಹಾಲು ಮಾರುವುದು [illegible]" ಎನ್ನಲಿಲ್ಲವಂತಲ್ಲಾ. ಇದರಿಂದ [illegible] ಮಠೋಪಜೀವಿಗಳು, "ಇದರಲ್ಲಿ [illegible]. ನಮ್ಮ ಗುರುಗಳ ವೀರ್ಯ ಕಳುವಾಗಿದೆ.



ಮೊದಲು ಆ ತನಿಖೆಯಾಗಲಿ" ಎಂದವನಂತಲ್ಲಾ, ಥೂತ್ತೇರಿ!

* * * *


ರಾಘವೇಶ್ವರನ ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಗಳ ಒಳ ಉಡುಪಿನಲ್ಲಿ ಪತ್ತೆಯಾದ ಸತ್ಯ ವೈಜ್ಞಾನಿಕವಾಗಿದ್ದರೂ ಅದನ್ನು ನಂಬದ ಮಠೋಪಜೀವಿಗಳು ವಿಜ್ಞಾನವನ್ನೆ ಅಲ್ಲಗಳೆಯುತ್ತಿದೆಯಂತಲ್ಲಾ. ಇಂತವರಿಗೆಲ್ಲಾ ಉತ್ತರ ನೀಡಿರುವ ನಮ್ಮ ಬುದ್ಧಿಜೀವಿ ರಾಜಕಾರಣಿ "ನೋಡಿ, ಜಗದ್ಗುರುವಾದವನು ತನ್ನಲ್ಲಿರುವ ಸಂಪತ್ತು, ಉಕ್ಕುವ ಯೌವನ ಮತ್ತು ರೂಪವನ್ನು ಹತ್ತಿಕ್ಕಿ ರಾಮನಂತೆ ಬದುಕಬೇಕು. ಆದರಿಲ್ಲಿ ಅದನ್ನೆ ಬಳಸಿಕೊಂಡು ಅಮಾಯಕ ಹೆಣ್ಣುಮಕ್ಕಳನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಈತ ರಾಮನಂತೆ ಏಕಸ್ತ್ರೀ ಸಂಪರ್ಕದಲ್ಲಿದ್ದರೆ ಪ್ರಕರಣ ಹೊರಬರುತ್ತಿತ್ತೊ ಇಲ್ಲವೊ ಹೇಳುವುದು ಕಷ್ಟ. ಆದರೆ ಅನಾಚಾರಕ್ಕೆ ನಿಷ್ಠೆಯಿರುವುದಿಲ್ಲ. ಆದ್ದರಿಂದಲೇ ಈತ ಅತ್ಯಾಚಾರದಲ್ಲಿ ಶತಕ ಬಾರಿಸಿರುವುದು. ಪ್ರವಚನವನ್ನು ಕೂಡ ಅತ್ಯಾಚಾರ ಅನಾಚಾರಗಳಿಗೆ ಬಳಸಿಕೊಳ್ಳುವುದು ಅಕ್ಷಮ್ಯ. ಇದರಿಂದ ಇನ್ನು ಮುಂದೆ ಪ್ರವಚನ ಅಂದರೆ ಅನಾಚಾರದ ಹಾಸಿಗೆಯ ಹುನ್ನಾರ ಅನ್ನುವಂತಾಗುತ್ತದೆ. ಈತನ ಏಕಾಂತದ ಗುಟ್ಟು ಇನ್ನಾದರೂ ಹೊರಬರಲಿ" ಎಂಬ ಮಾತುಗಳನ್ನು ಯಾರಿಗೂ ಅರ್ಥವಾಗದ ನವ್ಯ ಕಾವ್ಯದ ರೀತಿ ಹೇಳಿದರಂತಲ್ಲಾ. ಇದೆಲ್ಲಕ್ಕಿಂತ ಮುಖ್ಯವಾಗಿ ರಾಘವೇಶ್ವರ ಸ್ವಾಮಿ ತುಂಬ ಪ್ರಭಾವಿಯಾಗಿದ್ದು ಈತನ ಮಠಕ್ಕೆ ಬಂದು ಮೂರು ದಿನವಿದ್ದ ಕುಮಾರಸ್ವಾಮಿಯವರು ಹೋಗುವ ಮುನ್ನ ಸದರಿ ಸ್ವಾಮಿ ಕುಮಾರಣ್ಣನಿಗೆ ಒಂದು ಹಸುವನ್ನು ದಾನವಾಗಿ ಕೊಟ್ಟರಂತಲ್ಲಾ. ಅದನ್ನ ತೆಗೆದುಕೊಂಡು ಹೋದ ಕುಮಾರಣ್ಣ ಜಮೀರ್ ಅಹಮದ್‌ಗೆ ಕೊಟ್ಟರೂ ಅಥವಾ ಅವರೂ ರಾಘವನಂತೆ ಇನ್ನಾರಿಗಾದರೂ ದಾನ ಮಾಡಿದರೊ ಗೊತ್ತಿಲ್ಲ. ಆದರೆ ರಾಘವೇಶ್ವರನ ಮಠದಿಂದ ಹೋದ ಕೆಲವೇ ದಿನಗಳಲ್ಲಿ ಕುಮಾರಣ್ಣ ರಾಧಿಕಳನ್ನು ಪಡೆದು ಸ್ವಾಮಿ ಸ್ನೇಹದ ಪರಿಣಾಮಕ್ಕೆ ಗೌರವ ತಂದುಕೊಟ್ಟರಂತಲ್ಲಾ. ಅದೇನಾದರಾಗಲಿ ತನ್ನ ಕ್ಷೇತ್ರದಲ್ಲಿ ವಿಜ್ಞಾನದ ಯೋಗ ಎಬ್ಬಿಸಿದ ರಾಘಣ್ಣ ಅದೇ ವಿಜ್ಞಾನಕ್ಕೆ ಸಿಕ್ಕಿಬಿದ್ದು ಒದ್ದಾಡುತ್ತಿರುವುದೊಂದು ವಿಪರ್ಯಾಸವಲ್ಲವೆ, ಥೂತ್ತೇರಿ!!

* * * *

ಮುಸಲ್ಮಾನರಿಗೆ ಅಹಮ್ಮಾಲದಲ್ಲೊಬ್ಬ ಆಡಳಿತಾಧಿಕಾರಿ ನೇಮಿಸಿ ಎಂದು ಸುಪ್ರೀಂಕೋರ್ಟ್ ಸೂಚಿಸಿದ ಹಿನ್ನೆಲೆಯಲ್ಲಿ ಅಧ್ಯಾನಗೊಂಡ ಬೆಳಗಾವಿ ಅಧಿವೇಶನದ ಕೊನೆ ವೇಳೆಯಲ್ಲಿ ಸರಕಾರ ತರಾತುರಿಯಿಂದ ಸುಪ್ರೀಂ ಸೂಚನೆಯನ್ನು ಅನುಮೋದನೆಗೊಳಿಸಿತಂತಲ್ಲಾ. ಕೂಡಲೆ ಮಠಗಳ ಅಕ್ರಮ ಸಂತಾನದಂತಾಡಿದ ಚೆಡ್ಡಿ ಲೀಡರುಗಳು "ಮಠಗಳ ನಿಯಂತ್ರಣಕ್ಕೆ ಸರಕಾರ ಕೈಹಾಕಿದೆ. ಇನ್ನು ಮುಂದೆ ನೀವು ಏನೂ ಮಾಡುವಂತಿಲ್ಲ. ನಿಮ್ಮ ಅಕ್ರಮ ಭೂಮಿ ಕತೆ ಮುಗಿಯಿತು. ನಿಮ್ಮ ಅಕ್ರಮ ಸಂಬಂಧಗಳ ಕತೆಯೂ ಮುಗಿಯಿತು." ಎಂದು ಜರತಾರಿ ಜಗದ್ಗುರುಗಳ ಕಿವಿ ಚುಚ್ಚಿದರಂತಲ್ಲಾ. ಇದರ ಫಲವಾಗಿ ಸರಕಾರದ ಯಾವ ಮಸೂದೆಗಳನ್ನು ಓದದ, ಒಟ್ಟಿನಲ್ಲಿ ಏನನ್ನೂ ಓದದ ಜಗದ್ಗುರುಗಳು "ಹಾಗಾದರೆ ಒಂದನೇ ತಾರೀಖಿನಿಂದ ನಾವು ಬೀದಿಗಿಳಿದು ಹೋರಾಡುತ್ತೇವೆ" ಎಂದು ಬಿಟ್ಟರಂತಲ್ಲಾ. ಈ ಪೈಕಿ ಸೌಂದರ್ಯ ಸಾಧನಗಳನ್ನು ಮಾರಿ ಹಣ ಮಾಡುತ್ತಿರುವ ಮಾಜಿ ಸಂಸಾರಿಯಾದ ಸ್ವಾಮಿಯೊಬ್ಬ "ನಿಮ್ಮನ್ನು ಜನಗಳು ಆರಿಸಿದರೆ ನಮ್ಮನ್ನು ನಾವೇ ಆರಿಸಿಕೊಂಡಿದ್ದೇವೆ. ನಮ್ಮ ಅಧಿಕಾರ ಮುಟ್ಟಲು ಬಂದರೆ ನಿಮ್ಮನ್ನು ಮನೆಗೆ ಕಳಿಸುತ್ತೇವೆ" ಎಂದು ಚೀರಲಾರಂಭಿಸಿದನಂತಲ್ಲಾ. ಅದೇ ಹೊತ್ತಿಗೆ ನಿತ್ಯಾನಂದನ ಗಾಡ್‌ಫಾದರ್‌ನಂತಿರುವ ಕೊಳಕು ಬಟ್ಟೆ ಸ್ವಾಮಿಯೊಂದು "ಜಗದ್ಗುರುಗಳನ್ನು ಮುಟ್ಟಲು ಬಂದರೆ ನಿಮ್ಮನ್ನು ಈ ಜಗತ್ತಿನಿಂದಲೇ ಗಡಿಪಾರು ಮಾಡುತ್ತೇವೆ. ನಿಮ್ಮಂತಾದಿದ ಆಚಾರಿ ಎಂಬ ರಾಜಕಾರಣಿ ಏನಾಯ್ತು ಎಂಬುದನ್ನಾದರೂ ನೆನೆಸಿಕೊಂಡು ಸುಮ್ಮನಿರಿ" ಎಂದು ವದರಿದನಂತಲ್ಲಾ. ಈ ಮಸೂದೆಯನ್ನು ಹುಟ್ಟಿಸಿದ ಸುಮ್ಮಕ್ಕ ಜನರೂ "ಇದರ ವಿರುದ್ಧ ನಾವೂ ಹೋರಾಡುತ್ತೇವೆ" ಎನ್ನುತ್ತಿದ್ದಾರಂತಲ್ಲಾ, ಅದೇನಾದರಾಗಲಿ ಇಂತಹ [illegible] ಮಸೂದೆಗಳು ಮಂಡನೆಯಾಗುವ ಮುನ್ನ [illegible] ಜಗದ್ಗುರುಗಳೊಂದಿಗೆ [illegible] ಚಡ್ಡಿಗಳು ಹಬ್ಬಿಸುವ ಸುಳ್ಳು ಸುದ್ದಿಗೆ [illegible] ಮಾಡಿಕೊಂಡು [illegible] ಕೇಳುವ ಪ್ರಶ್ನೆಯಾಗಿದೆಯಲ್ಲಾ, ಥೂತ್ತೇರಿ!!!


ಮುಖ್ಯಮಂತ್ರಿ ಸಿದ್ದು

ಕಾಯ್ದೆ ಮದ್ದಿಗೆ ಚೆಡ್ಡಿಗಳ ವಿಷ


ಟಿ.ಬಿ. ಜಯಚಂದ್ರ


ಬೀದಿಗಿಳಿದ ಮೂರ್ಖ ಮಠಾಧೀಶರು

ಮಠವೊಂದರ ಉತ್ತರಾಧಿಕಾರಿ ಪ್ರಶ್ನೆ ಮತ್ತು ಪೀಠಾಧಿಪತಿಯ ಧರ್ಮಭ್ರಷ್ಟ ನಿರಂಕುಶ ದುಂಡಾವರ್ತಿಯ ವಿರುದ್ಧ ಸರ್ಕಾರಕ್ಕೆ ಅಧಿಕಾರವಿರಲೇಬೇಕೆಂಬ ಬೇಡಿಕೆಯಿಟ್ಟು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದವರೆಲ್ಲ ಬಹುತೇಕ ಸಂಘ ಪರಿವಾರದ ಮೂಲದವರೇ. ಸದರಿ ಅರ್ಜಿಯನ್ನು ಪರಿಶೀಲಿಸಿಯೇ ಕೋರ್ಟು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಯನ್ನು ರದ್ದುಗೊಳಿಸಿತು. ಇದರ ವಿರುದ್ಧ ಬಿಜೆಪಿ-ಜೆಡಿಎಸ್ ಆಧಿಪತ್ಯದ ಮುಜರಾಯಿ ಇಲಾಖೆಯೇ ಸುಪ್ರೀಂಕೋರ್ಟು ದೇವಾಲಯಗಳು, ಪೂಜಾ ಸ್ಥಳಗಳು ಮಾತ್ರವಲ್ಲದೆ ಮಠಗಳನ್ನೂ ಧಾರ್ಮಿಕ ಸಂಸ್ಥೆಗಳ ಪರಿವ್ಯಾಖ್ಯೆಗೆ ಒಳಪಡಿಸುವಂತೆ ಸರ್ಕಾರದ ಮುಜರಾಯಿ ಇಲಾಖೆಗೆ ಆದೇಶಿಸಿತ್ತು. ಆವತ್ತು ಬಿಜೆಪಿ ಹಿಡಿತದಲ್ಲಿದ್ದ ಮುಜರಾಯಿ ಇಲಾಖೆಯೇ ಇದಕ್ಕೆ ಸಮ್ಮತಿ ಸೂಚಿಸಿತ್ತು.

ಪ್ರಕರಣ-1

ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮೀಜಿ ದೈವಾಧೀನವಾಗುವುದಕ್ಕೂ ಮೂರು ವರ್ಷದ ಹಿಂದಿನಿಂದಲೇ ಹಾಸಿಗೆ ಹಿಡಿದರು. ದಿನ ಬಿಟ್ಟು ದಿನ ಡಯಾಲಿಸಿಸ್‌ಗೆ ಒಳಪಡಲೇಬೇಕು. ಅವರ ಎರಡೂ ಕಿಡ್ನಿಗಳು ವಿಫಲಗೊಂಡಿದ್ದವು. ಜೊತೆಗೆ ಆ ಸಂಬಂಧಿ ಇತರೇ ಕಾಯಿಲೆಗಳು ಬೇರೆ. ಇನ್ನೇನು ಮುಗಿದೇಹೋಯಿತು ಎನ್ನುವಾಗಲೇ ಆಘಾತಕಾರಿ ಸುದ್ದಿಯೊಂದು ಹೊರಬಿತ್ತು. ಸ್ವಾಮೀಜಿ ಮಠದ ಫಲವತ್ತಾದ ಆಸ್ತಿ, ಶಿಕ್ಷಣ ಸಂಸ್ಥೆಗಳನ್ನೆಲ್ಲ ಪ್ರತ್ಯೇಕಿಸಿ ಬೇರೆಯದೇ ಟ್ರಸ್ಟಿಗೆ ವರ್ಗಾಯಿಸಿ ಅದಕ್ಕೆ ಸ್ವಾಮಿಯೇ ಅಲ್ಲದ ಸನ್ಯಾಸಿಯಲ್ಲದ ಶೇಖರ್ ಸ್ವಾಮಿ ಉರ್ಫ್ ಪ್ರಕಾಶ್‌ನಾಥ ಎಂಬಾತನ ಆಧಿಪತ್ಯದ ಟ್ರಸ್ಟಿಗೆ ವರ್ಗಾಯಿಸಿದ್ದರು. ಉತ್ತರಾಧಿಕಾರಿ ನಿರ್ಮಲನಾಥರ ಪಾಲಿಗೆ ಉಳಿದದ್ದು ಹಳೇ ದೇವಸ್ಥಾನಗಳು ಮತ್ತು ನಾಮಕಾವಸ್ಥೆಯ ಶಾಖಾಮಠಗಳು ಮಾತ್ರ.

ಹಾಸಿಗೆ ಹಿಡಿದಿದ್ದ, ಬುದ್ಧಿ ಸ್ಥಿಮಿತದಲ್ಲಿಲ್ಲದ, ಮಾತಾಡುವುದಕ್ಕೂ ಆಗದ ಬಾಲಗಂಗಾಧರನಾಥ ಸ್ವಾಮೀಜಿ ಕೋಟಿ ಕೋಟಿ ಆದಾಯವುಳ್ಳ ಬಿಜಿಎಸ್ ಗ್ಲೋಬಲ್ ಮೆಡಿಕಲ್ ಕಾಲೇಜ್, ಸ್ಕೂಲುಗಳನ್ನೆಲ್ಲ ಹೇಗೆ ತಾನೇ ಶೇಖರ್ ಸ್ವಾಮಿಯ ಹೆಸರಿಗೆ ಬರೆಯಲು ಸಾಧ್ಯ? ಅಂತೂ ಒಕ್ಕಲಿಗ ಜನಾಂಗದ ಒಂದೂವರೆ ಸಾವಿರ ಕೋಟಿ ರೂಪಾಯಿಗಳ ಭರ್ಜರಿ ಸೊತ್ತು ಖಾಸಗಿ ವ್ಯಕ್ತಿಯೊಬ್ಬನ ಪಾಲಾಗಿಹೋಯಿತು. ಸದ್ಯ ದುಡ್ಡು ಕೊಡದೇ ಹೋದರೆ ಒಕ್ಕಲಿಗರಿಗೂ ಶೇಖರ್ ಸ್ವಾಮಿಯ ಸ್ಕೂಲು, ಕಾಲೇಜುಗಳಲ್ಲಿ ಪ್ರವೇಶವಿಲ್ಲ!

ಪ್ರಕರಣ -2

ಬಿಡದಿಯ ಧ್ಯಾನ ಪೀಠದ ನಿತ್ಯಾನಂದ ಆರತಿ ರಾವ್ ಅತ್ಯಾಚಾರದ ಕೇಸಿಗೆ ಸಂಬಂಧಪಟ್ಟಂತೆ ಜೈಲು ಪಾಲಾದನಲ್ಲ, ಪೀಠ ಅನಾಥವಾಗಿ ಅದು ಸೆಕ್ಯೂರಿಟಿ ಗಾರ್ಡುಗಳ ವಶವಾದರೂ ಕಳಂಕಿತ ಸ್ವಾಮಿಯ ಸ್ಥಾನಕ್ಕೆ ಸಚ್ಚಾರಿತ್ರನೊಬ್ಬ ಬರಲಿಲ್ಲ, ಇವತ್ತಿಗೂ ನಿತ್ಯಾನಂದನೇ ಬಿಡದಿ ಆಶ್ರಮಕ್ಕೆ ಧಣಿ ಮತ್ತು ಆತನೇ ಸ್ವಾಮೀಜಿ!

ಪ್ರಕರಣ-3

ಹವ್ಯಕರೇ ತಲೆಮಾರುಗಳಿಂದ ಕಟ್ಟಿ ಬೆಳೆಸಿದ ರಾಮಚಂದ್ರಾಪುರ ಮಠಕ್ಕೆ ಸದ್ಯ ರಾಘವೇಶ್ವರ ಭಾರತಿಯೇ ಏಕಚಕ್ರಾಧಿಪತಿ. ಮಠದ ಭಕ್ತೆಯೊಬ್ಬಳ ಮೇಲೆ ಅವ್ಯಾಹತವಾಗಿ ಅತ್ಯಾಚಾರಗೈದ ಹೀನಾತಿ ಆರೋಪ ಹೊತ್ತು ಪ್ರತಿನಿತ್ಯ ಕೋರ್ಟು, ಪೊಲೀಸು ವಾರಂಟು, ವಿಚಾರಣೆ ಎಂದೆಲ್ಲ ಕಳಂಕ ಹೊತ್ತರೂ ಆತನಿಂದ ಮಠಕ್ಕೆ ಮುಕ್ತಿಯಿಲ್ಲ, ಇತ್ತೀಚೆಗೆ ಹವ್ಯಕ ಜನಾಂಗದ ಮಾನವಂತರು, ಹಿರೀಕರು ಗಣ್ಯರೆಲ್ಲ ಸಭೆ ಸೇರಿ ಜನಾಂಗದ ಮಾನಮರ್ಯಾದೆ ಉಳಿಸುವುದಕ್ಕಾದರೂ ಕಳಂಕಿತ ಸ್ವಾಮಿ ಪೀಠತ್ಯಾಗ ಮಾಡಬೇಕು, ತನ್ನ ಮೇಲಿರುವ ಆರೋಪದಿಂದ ಮುಕ್ತನಾಗುವ ತನಕ ಸಚ್ಚಾರಿತ್ರನೊಬ್ಬನನ್ನು ಮಠದ ಸ್ವಾಮಿ ಪಟ್ಟಕ್ಕೆ ತರಬೇಕೆಂದು ಒತ್ತಾಯಿಸಿದರು. ಆದರೆ ಖದೀಮ ಸ್ವಾಮೀಜಿ ಈ ರೀತಿ ಪೀಠತ್ಯಾಗಕ್ಕೆ ಒತ್ತಾಯಿಸಿದವರ್‍ಯಾರೂ ಮಠಕ್ಕೆ ಸಂಬಂಧಪಟ್ಟವರಲ್ಲ, ಅವರಿಗೂ ಮಠಕ್ಕೂ ಏನೇನೂ ಸಂಬಂಧವಿಲ್ಲ ಎಂದು ತನ್ನ ಛೇಲಾಗಳನ್ನು ಛೂಬಿಟ್ಟು ಪ್ರತಿ ಹೇಳಿಕೆ ನೀಡಿಸಿಬಿಟ್ಟ!

ಪ್ರಕರಣ-4

ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರು ಹಾನಗಲ್ ಕುಮಾರ ಸ್ವಾಮಿ ಮಠ ಬಿಟ್ಟು ಪರಾರಿಯಾಗಿ ತಿಂಗಳು ತುಂಬುತ್ತಿದೆ. ಅವರೇ ಉತ್ತರಾಧಿಕಾರಿಯೆಂದು ನೇಮಿಸಿದ್ದ ದಿಂಗಾಲೇಶ್ವರರನ್ನು ಮತ್ತೊಂದು ಬಣ ಮಠದೊಳಕ್ಕೆ ಬಿಟ್ಟುಕೊಳ್ಳದೇ ದಾಂಧಲೆಗಿಳಿದಿದೆ. ಇಲ್ಲಿ ಹಕೀಕತ್ತಿರುವುದು ಮಠದ ಆಸ್ತಿಯ ಮಾರಾಟ ಮತ್ತು ಸ್ವಾಮೀಜಿ ಮಾಡಿಕೊಂಡ ಸಾಲದ ವಿಷಯದಲ್ಲಿ, ಬೇಕಾಬಿಟ್ಟಿ ಸಾಲ ಮಾಡಿಕೊಂಡ ಹಾಲೀ ಮಠಾಧಿಪತಿಗೆ ಇದ್ದಬದ್ದ ಆಸ್ತಿಯನ್ನೂ ಮಾರಿ ಹಾಕುವ ದುರಾಶೆ. ಮಠದ ಆಸ್ತಿ ಮಾರದಂತೆ ಭಕ್ತರೇ ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಮೇಲೆ ಸ್ವಾಮೀಜಿ ಉತ್ತರಾಧಿಕಾರಿ ಹುದ್ದೆಯನ್ನೇ ಮಾರಿ ಕೊಂಡರೆಂದು ಒಂದು ಗುಂಪು ಬೀದಿಗಿಳಿದರೆ ಮತ್ತೊಂದು ಗುಂಪು ಸ್ವಾಮಿ ಪರ ನಿಂತು ಮಾರಿದ ಆಸ್ತಿಯ ಪಾಲಿಗೆ ಜೊಲ್ಲು ಸುರಿಸುತ್ತಿದೆ.

ಸದ್ಯ ಮಠಾಧಿಪತಿಯೂ ನಾಪತ್ತೆ ಉತ್ತರಾಧಿಕಾರಿಯೂ ಅಡ್ರೆಸ್ಸಿಗಿಲ್ಲದ ಪರಿಸ್ಥಿತಿ ಮೂರು ಸಾವಿರ ಮಠದ್ದು. ಇಂಥ ದುರ್ಗತಿಗೆ ಸರ್ಕಾರವಾಗಲಿ, ಭಕ್ತಾದಿಗಳಾಗಲಿ ಮೂಕಪ್ರೇಕ್ಷಕರಾಗಬೇಕೆ?


-ಮೇಲ್ಕಂಡ ನಾಲ್ಕು ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದು ಮಠದ ಭಕ್ತಾದಿಗಳ ಅಸಹಾಯಕತೆ. ಒಂದು ಮಠದ ಅಥವಾ ಪೀಠವೆಂದರೆ ಅದು ಅಸಂಖ್ಯಾತ ಭಕ್ತಾದಿಗಳು ಅನುಯಾಯಿಗಳ ಶ್ರದ್ಧಾ ಕೇಂದ್ರ. ನಿರ್ದಿಷ್ಟ ಜಾತಿ ಸಮೂಹಗಳು ತಲೆಮಾರುಗಳಿಂದ ಕಟ್ಟಿ ಬೆಳೆಸಿದ ಶಕ್ತಿ ಕೇಂದ್ರಗಳು ಕೂಡ. ಇದರ ಪೀಠಾಧಿಪತಿನೊಬ್ಬ ಲಂಪಟನಾದರೆ, ಕಪಟಿಯಾದರೆ, ಧರ್ಮಭ್ರಷ್ಟನಾದರೆ ಅದರ ಭಕ್ತಾದಿಗಳು ಏನು ಮಾಡಬೇಕು? ಅಂಥ ದುರುಳನಿಂದ ಮಠ-ಪೀಠವನ್ನು ಕಾಪಾಡುವ ಯಾವುದೇ ಅಧಿಕಾರ ಭಕ್ತರಿಗಿಲ್ಲವೆ? ಇಲ್ಲವೆಂದ ಮೇಲೆ ಭಕ್ತರು, ಅನುಯಾಯಿಗಳ ಪರ ನ್ಯಾಯ ನೀಡುವ ಅಧಿಕಾರ ಸರ್ಕಾರಕ್ಕಾದರೂ ಇರಬೇಡವೆ? ಸರ್ಕಾರ ಧರ್ಮಸಂಸ್ಥಾಪನೆಗೆ ಭಕ್ತರ ಹಿತರಕ್ಷಣೆಗೆ ನಿಂತರೆ ಅದು ಹೇಗೆ ಮಠಮಾನ್ಯಗಳ ಮೇಲಿನ ನಿಯಂತ್ರಣಕ್ಕೆ ಕೈಯಿಟ್ಟಂತಾಗುತ್ತದೆ.

ಮಠವೊಂದನ್ನು ಸರ್ಕಾರ ತನ್ನ ವಶಕ್ಕೆ ಪಡೆಯುವುದಕ್ಕೂ, ಅದಕ್ಕೊಬ್ಬ ಆಡಳಿತಾಧಿಕಾರಿಯನ್ನು ತಾತ್ಕಾಲಿಕವಾಗಿ ನೇಮಿಸುವುದಕ್ಕೂ ವ್ಯತ್ಯಾಸವಿದೆ. ಸಹಕಾರ ಸಂಘಗಳು, ಗೃಹನಿರ್ಮಾಣ ಸಂಘಗಳು, ಸೊಸೈಟಿ, ಸಂಘ ಸಂಸ್ಥೆಗಳಲ್ಲಿ ಈ ಥರದ ಸಮಸ್ಯೆಗಳು ಉದ್ಭವಿಸಿದಾಗೆಲ್ಲ ಸರ್ಕಾರ ಆಡಳಿತಾಧಿಕಾರಿಯನ್ನು ನೇಮಿಸಿ ಸದಸ್ಯರ ಹಿತಕಾಯುವುದುಂಟು. ಹಾಗೆಯೇ ಮಠವೊಂದರ ಸೊತ್ತನ್ನು ಅದರ ಪೀಠಾಧಿಪತಿ ತನ್ನ ಸಂಬಂಧಿಕರಿಗೋ, ಪ್ರೇಯಸಿಯರ ಮಡಿಲಿಗೋ ಅಥವಾ ರಿಯಲ್ ಎಸ್ಟೇಟ್ ಲಾಭಕ್ಕೋ ಮಾರಹೊರಟರೆ ಭಕ್ತಾದಿಗಳ ಪರ ನಿಂತು ಸರ್ಕಾರ ಮಠದ ಹಿತರಕ್ಷಣೆಗೆ ಕೈಯಿಟ್ಟರೆ ಅದು ಹೇಗೆ ಧರ್ಮ ದ್ರೋಹ? ಇಲ್ಲಿ ದ್ರೋಹಿಗಳು ಯಾರು? ಹಿತರಕ್ಷಕರ್‍ಯಾರು?

ಸದ್ಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ 2014ಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಸರ್ಕಾರ ಹಿಂದೂ ಧರ್ಮವನ್ನೇ ನಾಶ ಮಾಡಲು ಹೊರಟಿದೆ ಎಂಬಂತೆ ಬಿಜೆಪಿ ಬೊಬ್ಬೆ ಹೊಡೆಯುತ್ತಿದೆ. ಈ ಬಗ್ಗೆ 2014ರ ಡಿಸೆಂಬರ್‌ನ ಬೆಳಗಾವಿ ಅಧಿವೇಶನದಲ್ಲಿ ಸಣ್ಣದೊಂದು ಚರ್ಚೆಗೂ ಆಸ್ಪದ ನೀಡದ ವಿರೋಧಿ ಬಿಜೆಪಿ ಮಠಮಾನ್ಯಗಳನ್ನು ಸರ್ಕಾರ ನಿಯಂತ್ರಿಸುವ ದುಸ್ಸಾಹಸಕ್ಕೆ ಕೈಯಿಟ್ಟಿದೆ ಎಂದೇ ಹುಯಿಲೆಬ್ಬಿಸಿದೆ. ಅಷ್ಟಕ್ಕೂ ವಿಧಾನಸಭೆಯಲ್ಲಿ ಕಾನೂನು ಸಚಿವ ಟಿ.ಬಿ. ಜಯಚಂದ್ರರು ತಿದ್ದುಪಡಿ ಮಂಡಿಸುತ್ತಿದ್ದರೆ ಅದನ್ನು ಕಾಟಾಚಾರಕ್ಕೆ ಕೇಳಿಸಿಕೊಳ್ಳುವಷ್ಟು ವ್ಯವಧಾನ ಬಿಜೆಪಿಗಿರಲಿಲ್ಲ.

ದುರಂತವೆಂದರೆ ಜೆಡಿಎಸ್ ನಾಯಕ ಕುಮಾರಸ್ವಾಮಿ ಕೂಡ ಈ ಬಗ್ಗೆ ತಲೆಬುಡ ವಿವೇಚಿಸದೇ ಸಂಘಪರಿವಾರದ ಷಡ್ಯಂತ್ರಕ್ಕೆ ಸಿಲುಕಿದ ಮಿಕವಾಗಿ ವರ್ತಿಸುತ್ತಿರುವುದು.

ಮೊನ್ನೆ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲ್ಪಟ್ಟ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ 2014ನ್ನು ಹಿಂದೂ ಧರ್ಮದ ಮೇಲಿನ ಕಾಂಗ್ರೆಸ್ ಸರ್ಕಾರದ ದೌರ್ಜನ್ಯ, ಸರ್ಕಾರ ಮಠಮಾನ್ಯಗಳ ಮೇಲೆ ನಿಯಂತ್ರಣ ಹೇರುತ್ತಿದೆ ಎಂಬಂತೆ ಬಿಜೆಪಿ ನಾಯಕರಾದ ಶೆಟ್ಟರ್, ಈಶ್ವರಪ್ಪ, ಸಿ.ಟಿ. ರವಿ ಕೂಗೆಬ್ಬಿಸಿದ್ದರಲ್ಲಿ ಯಾವುದೇ ಅಚ್ಚರಿಯಿಲ್ಲ, ಅದು ಸಂಘ ಪರಿವಾರದ ಕೇಸರಿ ಬುದ್ಧಿ.


ರಾಮಾಜೋಯಿಸ್


ಶೆಟ್ಟರ್


ಸಿ.ಟಿ. ರವಿ

ಆರೆಸ್ಸೆಸ್ ನೆರಳಿನಲ್ಲೇ ಬೇರು ಬಿಟ್ಟ ಪೇಜಾವರರೋ, ರಾಘವೇಶ್ವರನೋ ಅಥವಾ ಇನ್ನೊಂದು ಮಠದ ಕೋಟೇಶ್ವರನೋ ಈ ಬಗ್ಗೆ ಬಾಯಿಬಡಕೊಂಡಿದ್ದರೆ ಅದಕ್ಕೂ ಜನ ಸೊಪ್ಪು ಹಾಕುತ್ತಿರಲಿಲ್ಲ. ಆದರೆ ಹುಡಿಪುಡಿ ಲಿಂಗಾಯತ ಸ್ವಾಮಿಗಳ ಒಂದು ಗುಂಪು ವಿಶೇಷವಾಗಿ ಉತ್ತರ ಕರ್ನಾಟಕದ ಪುಡಿ ಪಟ್ಟ ಮಠಾಧಿಪತಿಗಳ ಮತ್ತೊಂದು ಕೂಟ ಮತ್ತು ಕೆಲ ದೇವಾಲಯಗಳ ಪುರೋಹಿತವರ್ಗ ಈ ಬಗ್ಗೆ ತಲೆಬುಡ ತಿಳಿಯದೇ ರಾಜಕೀಯಕ್ಕಿಳಿದಿರುವುದು.

"ಮುಸ್ಲಿಮರು, ಕ್ರಿಶ್ಚಿಯನ್ನರನ್ನು ಹೊರತುಪಡಿಸಿ ಕೇವಲ ಹಿಂದೂ ಮಠಮಾನ್ಯಗಳನ್ನೇ ಸರ್ಕಾರ ಏಕೆ ಗುರಿಯಾಗಿಸಿಕೊಂಡಿದೆ? ಕಾಂಗ್ರೆಸ್ ಸರ್ಕಾರ ಏನಿದ್ದರೂ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಮೂಗಿನ ನೇರಕ್ಕೇ ವರ್ತಿಸುತ್ತಿದೆ. ಅದು ಎಷ್ಟೆಂದರೂ ಹಿಂದೂ ವಿರೋಧಿ...." ಇತ್ಯಾದಿಯಾಗಿ ರಾಜ್ಯಾದ್ಯಂತ ಕೋಮು ಕಿಚ್ಚು ಹಚ್ಚಲು ಹೊರಟ ಬಿಜೆಪಿ, ಆರೆಸ್ಸೆಸ್, ವಿಶ್ವಹಿಂದೂ ಪರಿಷತ್‌ಗಳ ಷಡ್ಯಂತ್ರಕ್ಕೆ ಕಾಯ್ದೆಯನ್ನೇ ಓದದ, ವಿಧಾನ ಮಂಡಲದಲ್ಲಿ ಮಂಡಿಸಲ್ಪಟ್ಟ ತಿದ್ದುಪಡಿಯ ಕರಡನ್ನೂ ನೋಡದ ಖಾವಿಧಾರ ಗುಂಪು ಕುರಿಮಂದೆಯಂತೆ ಹಳ್ಳಕ್ಕೆ ಬೀಳುತ್ತಿರುವುದು ನಾಡಿನ ದುರಂತವೂ ಹೌದು, ಧರ್ಮದ ದುರ್ಗತಿಯೂ ಹೌದು.

ಅಷ್ಟಕ್ಕೂ ಸರ್ಕಾರ ತಂದ ತಿದ್ದುಪಡಿ ಹೇಳುತ್ತಿರುವುದಾದರೂ ಏನು?

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕ 1997ರ ವಿಧಿ 33ಕ್ಕೆ ಮಾಡಿದ ತಿದ್ದುಪಡಿ ಪ್ರಕಾರ ಯಾವುದೇ ಮಠವೊಂದರ ಪೀಠಾಧಿಪತಿ ಅಕಾಲ ಮರಣಕ್ಕೀಡಾಗಿ ಅದಕ್ಕೆ ಉತ್ತರಾಧಿಕಾರಿ ಇಲ್ಲದೇಹೋದ ಪಕ್ಷದಲ್ಲಿ ಮಠದ ಸೊತ್ತು, ಅಧಿಕಾರವು ಸ್ವಾರ್ಥಿಗಳು, ಸಮಾಜಘಾತುಕಶಕ್ತಿಗಳ ಕೈವಶವಾಗುವುದನ್ನು ತಪ್ಪಿಸಲು ಸರ್ಕಾರ ಮಧ್ಯ ಪ್ರವೇಶಿಸಬೇಕು ಮತ್ತು ಅದಕ್ಕೊಬ್ಬ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಹಾಗೊಮ್ಮೆ ನೇಮಕವಾಗಿದ್ದ ಉತ್ತರಾಧಿಕಾರಿ ದೈಹಿಕವಾಗಿ, ಮಾನಸಿಕವಾಗಿ ಅಸ್ವಸ್ಥನಾಗಿದ್ದರೆ ಆವಾಗಲೂ ಸರ್ಕಾರ ಮಠದ ಹಿತಾಸಕ್ತಿಯನ್ನು ರಕ್ಷಿಸಲೆಂದೇ ಆಡಳಿತಾಕಾರಿಯನ್ನು ನೇಮಿಸಬೇಕು.

ಇದರ ಹೊರತಾಗಿಯೂ ಉತ್ತರಾಧಿಕಾರಿ ವಿವಾದ ಬಗೆಹರಿಯದೇ ಹೋದರೆ ಅಥವಾ ಮಠಾಧಿಪತಿಯೇ ಸ್ವಯಂಪ್ರೇರಿತನಾಗಿ ದುಷ್ಟಶಕ್ತಿಗಳು, ಸ್ವಾರ್ಥಿಗಳು, ಬಲಾಢ್ಯರಿಂದ ಮಠದ ಸೊತ್ತು, ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಸರ್ಕಾರ ಮಠದ ಆಡಳಿತವನ್ನು ವಹಿಸಿಕೊಳ್ಳಬೇಕೆಂದು ಮನವಿ ಸಲ್ಲಿಸಿದರೆ ಅಂಥ ಪರಿಸ್ಥಿತಿಯಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕು. ಪರಿಸ್ಥಿತಿ ಸರಿಹೋಗುವ ತನಕ ಆಡಳಿತಾಧಿಕಾರಿಯನ್ನು ನೇಮಿಸಬೇಕು.

ಇದು ಮೊನ್ನೆ ಮಂಡಿಸಿದ ತಿದ್ದುಪಡಿಯ ಸಾರಾಂಶ. ಇದರಲ್ಲಿ ತಪ್ಪೇನಿದೆ. ಅಷ್ಟಕ್ಕೂ ಇಂಥದೊಂದು ತಿದ್ದುಪಡಿ ತರಬೇಕೆಂಬ ಪರಿಕಲ್ಪನೆಗೆ ಚಾಲನೆ ಕೊಟ್ಟದ್ದೇ ಬಿಜೆಪಿ ಸರ್ಕಾರ. ಬಿಜೆಪಿ-ಜೆಡಿಎಸ್ 20:20 ಸರ್ಕಾರವಿದ್ದಾಗ ಸಂಘ ಪರಿವಾರದ ಹಿತಾಸಕ್ತಿಗೆ ಅನುಗುಣವಾಗೆ ಕಾಯ್ದೆಗೆ ತಿದ್ದುಪಡಿಗೆ ಕೈಹಾಕಿದ್ದು ಬಿಜೆಪಿಯೆ. ಸೋಸಲೆ ವ್ಯಾಸರಾಜಮಠ, ಕೂಡ್ಲಿ ಶೃಂಗೇರಿ ಮಠದ ಪೀಠಾಧಿಪತಿಗಳ ಅನೈತಿಕ ಮತ್ತು ಧರ್ಮಭ್ರಷ್ಟ ಸ್ವೇಚ್ಛಾನುವರ್ತನೆಯ ವಿರುದ್ಧ ಬ್ರಾಹ್ಮಣ ಭಕ್ತಾದಿಗಳೇ ರೊಚ್ಚಿಗೆದ್ದು ಹೈಕೋರ್ಟ್ ಮೆಟ್ಟಿಲೇರಿದ್ದು 2006ರಲ್ಲಿ.

ಮಠವೊಂದರ ಉತ್ತರಾಧಿಕಾರಿ ಪ್ರಶ್ನೆ ಮತ್ತು ಪೀಠಾಧಿಪತಿಯ ಧರ್ಮಭ್ರಷ್ಟ ನಿರಂಕುಶ ಗುಂಡಾವರ್ತಿಯ ವಿರುದ್ಧ ಸರ್ಕಾರಕ್ಕೆ ಅಧಿಕಾರವಿರಲೇಬೇಕೆಂಬ ಬೇಡಿಕೆಯಿಟ್ಟು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದವರೆಲ್ಲ ಬಹುತೇಕ ಸಂಘ ಪರಿವಾರದ ಮೂಲದವರೇ. ಸದರಿ ಅರ್ಜಿಯನ್ನು ಪರಿಶೀಲಿಸಿಯೇ ಕೋರ್ಟು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಯನ್ನು ರದ್ದುಗೊಳಿಸಿತು. ಇದರ ವಿರುದ್ಧ ಬಿಜೆಪಿ-ಜೆಡಿಎಸ್ ಆಧಿಪತ್ಯದ ಮುಜರಾಯಿ ಇಲಾಖೆಯೇ ಸುಪ್ರೀಂಕೋರ್ಟು ದೇವಾಲಯಗಳು, ಪ್ರಾರ್ಥನಾಸ್ಥಳಗಳು ಮಾತ್ರವಲ್ಲದೆ ಮಠಗಳನ್ನೂ ಧಾರ್ಮಿಕ ಸಂಸ್ಥೆಗಳ ಪರಿಧಿಗೆ ಒಳಪಡಿಸುವಂತೆ ಸರ್ಕಾರದ ಮುಜರಾಯಿ ಇಲಾಖೆಗೆ ಆದೇಶಿಸಿತ್ತು. ಆವತ್ತು ಬಿಜೆಪಿ ಹಿಡಿತದಲ್ಲಿದ್ದ ಮುಜರಾಯಿ ಇಲಾಖೆಯೇ ಇದಕ್ಕೆ ಸಮ್ಮತಿ ಸೂಚಿಸಿತ್ತು.

ಮುಂದೆ ಬಿಜೆಪಿಯೇ ಅಧಿಕಾರಕ್ಕೆ ಬಂದು ಸದಾನಂದಗೌಡ ಮುಖ್ಯಮಂತ್ರಿಯಾಗಿದ್ದೇ ಸಂಘ ಪರಿವಾರದ ನಿರ್ದೇಶನದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಾಮಾಜೋಯಿಸರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಂತ್ರಣಕ್ಕೆ ಸರ್ಕಾರ ಏನೇನು ಕ್ರಮ ಕೈಗೊಳ್ಳಬೇಕೆಂದು ಕೂಲಂಕಷ ಅಧ್ಯಯನ ಮತ್ತು ಸಂಘ ಪರಿವಾರದ ಹಿತಾಸಕ್ತಿಗೆ ತಕ್ಕಂತೆ ಬಿಜೆಪಿ ಸರ್ಕಾರ ಏನೆಲ್ಲ ಕ್ರಮಕೈಗೊಳ್ಳಬೇಕೆಂದು ಲೆಕ್ಕ ಹಾಕಿಯೇ ರಾಮಾಜೋಯಿಸ್ ಸಮಿತಿ ಶಿಫಾರಸ್ಸು ಮಾಡಿತ್ತು.

ಆ ಪ್ರಕಾರ ಬಿಜೆಪಿ ಧಾರ್ಮಿಕ ಪರಿಷತ್ತನ್ನು ಅಸ್ತಿತ್ವಕ್ಕೆ ತಂದು ಕರ್ನಾಟಕದ ಸಕಲ ಮಠಮಾನ್ಯಗಳನ್ನೆಲ್ಲಾ ತನ್ನ ಮೂಗಿನ ನೇರಕ್ಕೆ ನಿಯಂತ್ರಿಸುವ ಹುನ್ನಾರವೂ ಇದರಲ್ಲಡಗಿತ್ತು. ಇದರರ್ಥ ಸಂಘ ಪರಿವಾರದ ತೆಕ್ಕೆಯಲ್ಲಿರುವ ಮಠಾಧಿಪತಿಗಳದ್ದೇ ನೇತೃತ್ವದ ಧಾರ್ಮಿಕ ಪರಿಷತ್ ರಚಿಸುವುದು ಮತ್ತು ಯಾರೆಲ್ಲ ಮಠಾಧಿಪತಿಗಳು ವೈದಿಕಶಾಹಿಯನ್ನು ವಿರೋಧಿಸುತ್ತಾರೋ ಅಂಥವರನ್ನು ಬಲಿ ಹಾಕುವುದು. ಆ ಪ್ರಕಾರವೇ ಆಗಿದ್ದರೆ ಉತ್ತರ ಕರ್ನಾಟಕದ ಬಹುತೇಕ ಲಿಂಗಾಯತ, ವೀರಶೈವ ಮಠಗಳೆಲ್ಲ ಕ್ರಾಂತಿಕಾರಿ ಬಸವ ತತ್ವದಿಂದ ವಿಮುಖರಾಗಿ ವೈದಿಕಶಾಹಿಗೆ ಶರಣಾಗಲೇಬೇಕಾದ ಅಪಾಯವಿತ್ತು.

ಸುದೈವವಶಾತ್ ಅಷ್ಟರೊಳಗೇ ಬಿಜೆಪಿ ಭಾನ್ಗಡಿಗಳಿಗೆ ಸಿಲುಕಿ ಸರ್ಕಾರವೇ ಜನಾಕ್ರೋಶದಲ್ಲಿ ಕೊಚ್ಚಿಹೋಯಿತು. ರಾಮಾಜೋಯಿಸ್ ಹೇಳಿಕೇಳೀ ಸಂಘ ಪರಿವಾರದ ಪರಮ ನಿಷ್ಠ, ಕರ್ನಾಟಕದ ಮಠಮಾನ್ಯಗಳನ್ನೆಲ್ಲ ಸಂಘ ಪರಿವಾರದ ಮೂಗಿನ ನೇರಕ್ಕೆ ನಿಯಂತ್ರಿಸುವ ಗುರಿಹೊತ್ತೇ ಧಾರ್ಮಿಕ ಪರಿಷತ್ ರಚನೆಯ ಅಧಿಕಾರವನ್ನು ಸರ್ಕಾರಕ್ಕೆ ಕಲ್ಪಿಸಿ ಶಿಫಾರಸ್ಸು ಮಾಡಿದ್ದರು. ಅಷ್ಟರಲ್ಲಿ ಬಿಜೆಪಿ ಸರ್ಕಾರವೇ ಪತನಗೊಂಡಿದ್ದರಿಂದ ಈಗ ಈ ಜವಾಬ್ದಾರಿ ಕಾಂಗ್ರೆಸ್ ಸರ್ಕಾರದ ತಲೆಗೆ ಸುತ್ತಿಕೊಂಡಿತ್ತು. ವಿಪರ್ಯಾಸವೆಂದರೆ ತನ್ನ ಐದು ವರ್ಷಗಳ ಅಧಿಕಾರದುದ್ದಕ್ಕೂ ಸುಪ್ರೀಂಕೋರ್ಟ್ ಕಣ್ಣಿಗೆ ಮಣ್ಣೆರಚಿಕೊಂಡೇ ಕಾಲಹರಣ ಮಾಡಿದ ಬಿಜೆಪಿ ಎಲ್ಲಿ ಶೂದ್ರ ಮಠಗಳೆಲ್ಲ ತನ್ನ ವಿರುದ್ಧ ರೊಚ್ಚಿಗೆದ್ದಾವೋ ಎಂದು ಧಾರ್ಮಿಕ ಪರಿಷತ್ ರಚನೆಗೆ ಕೈಹಾಕದೇ ಈಗದನ್ನು ಕಾಂಗ್ರೆಸ್ ತಲೆಗೆ ಕಟ್ಟುತ್ತಿದೆ.

ಸುದೈವವಶಾತ್ ಕಾಂಗ್ರೆಸ್ ಧಾರ್ಮಿಕ ಪರಿಷತ್ ರಚನೆಗೆ ಕೈಹಾಕದೇ ರಾಮಾಜೋಯಿಸ್ ಸಮಿತಿಯ ಶಿಫಾರಸ್ಸನ್ನೇ ಭಾಗಶಃ ಅಂಗೀಕರಿಸಿ ಕಾನೂನಿಗೆ ತಿದ್ದುಪಡಿ ತಂದಿದೆ. ಆ ಪ್ರಕಾರ ಮಠವೊಂದಕ್ಕೆ ಸರ್ಕಾರ ಆಡಳಿತಾಧಿಕಾರಿಯನ್ನು ನೇಮಿಸುವುದು ತಾತ್ಕಾಲಿಕ ಅವಧಿಗೆ ಮಾತ್ರವೇ ಹೊರತು ಶಾಶ್ವತವಲ್ಲ. ಮಠವೊಂದನ್ನು ವಶಪಡಿಸಿಕೊಳ್ಳುವುದಕ್ಕೂ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೂ ಇರುವ ವ್ಯತ್ಯಾಸವನ್ನು ಬೀದಿಗಿಳಿದು ಬೊಬ್ಬೆಹಾಕುತ್ತಿರುವವರು ಕಂಡೂಕಾಣದಂತೆ ಮರೆಮಾಚುತ್ತಿರುವುದು ಆತ್ಮವಂಚನೆಯಲ್ಲದೆ ಮತ್ತೇನಲ್ಲ.

ಇಲ್ಲಿ ಸಿದ್ದು ಸರ್ಕಾರ ರಾಜಕೀಯವಾಗಿ ಯಮಾರಿರುವುದು ತಿದ್ದುಪಡಿಗೂ ಮುನ್ನ ಈ ಬಗ್ಗೆ ಸಾರ್ವಜನಿಕ ಚರ್ಚೆ ನಡೆಸದೇ ಹೋಗಿದ್ದು. ರಾಮಾಜೋಯಿಸ್ ಸಮಿತಿಯ ಹುನ್ನಾರ, ಸಂಘ ಪರಿವಾರದ ಷಡ್ಯಂತ್ರ, ಅಧಿಕಾರದಲ್ಲಿದ್ದ ಬಿಜೆಪಿಯ ಕಾರಸ್ಥಾನಗಳ ಬಗ್ಗೆ ವಿಶೇಷವಾಗಿ ವೀರಶೈವ ಬಸವಾದಿ ಮಠಗಳಿಗೆ ತಿಳಿಪಳಿಕೆಯುದ್ದಿದ್ದರೆ ಹೀಗಾಗುತ್ತಿರಲಿಲ್ಲ. ಆದರಲ್ಲೂ ಶೂದ್ರ ಮಠಗಳಂತೂ ಇದರ ಅನಿವಾರ್ಯತೆಯನ್ನು ಮನಗಂಡಿರುತ್ತಿದ್ದವು. ಇವ್ಯಾವುದನ್ನೂ ಮಾಡದೆ ಏಕಾಏಕಿ ವಿಧಾನಮಂಡಲದಲ್ಲಿ ಸರ್ಕಾರ ತಿದ್ದುಪಡಿ ಮಂಡಿಸಿದ್ದರ ಹಿಂದೆ ಮತ್ತೂ ಒಂದು ಕಾರಣವಿತ್ತು. ಅದು 2015 ಜನವರಿ 13ಕ್ಕೆ ಸುಪ್ರೀಂಕೋರ್ಟ್ ಇದರ ಅಂತಿಮ ವಿಚಾರಣೆ ನಿಗದಿಗೊಳಿಸಿದ್ದು!

ಈಗ ಬಿಜೆಪಿಯ ಕಪಟತಂತ್ರಕ್ಕೆ ಕಾಂಗ್ರೆಸ್ ಸರ್ಕಾರ ತಲೆಕೊಡಬೇಕಾಗಿದೆ. ತನ್ನ ಮಾತಿನ ಪರಿಣಾಮ ಅರಿಯದೇ ಕುಮಾರಸ್ವಾಮಿ ಬಿಜೆಪಿಯ ಷಡ್ಯಂತ್ರಕ್ಕೆ ಸಿಲುಕಿಬಿದ್ದಿದ್ದಾರೆ. ತಮಾಷೆಯೆಂದರೆ ರಾತ್ರೋರಾತ್ರಿ ನಿದ್ದೆಯಿಂದೆದ್ದವರಂತೆ ತಿದ್ದುಪಡಿ ವಿರುದ್ಧ ಬೀದಿಗಿಳಿದು ಬೊಬ್ಬೆ ಹೊಡೆಯುತ್ತಿರುವ ಯಾವುದೇ ಮಠಾಧೀಶನನ್ನು ನಿಲ್ಲಿಸಿ "ನೀವು ಕಾಯ್ದೆಯನ್ನು ಓದಿದ್ದೀರಾ...?" ಎಂದು ಕೇಳಿ ನೋಡಿ. ಆತನಿಂದ ಉತ್ತರವಿಲ್ಲ. ಹೋಗಲಿ "ಕಾಯ್ದೆ ಏನು ಹೇಳುತ್ತದೆ ಗೊತ್ತಾ?" ಎಂದರೆ ತಡಬಡಾಯಿಸುತ್ತಾನೆ. ಲಂಪಟ ಮಠಾಧೀಶನೊಬ್ಬ ಭಕ್ತಾದಿಗಳ ಕಾಣಿಕೆ ರೂಪದ ಮಠದ ಸೊತ್ತನ್ನು ತನ್ನ ಪ್ರೇಯಸಿಯೊಬ್ಬಳ ಹೆಸರಿಗೆ ಬರೆಯಹೊರಟರೆ ಅದರ ವಿರುದ್ಧ ಭಕ್ತನೊಬ್ಬ ಸರ್ಕಾರಕ್ಕೆ ದೂರು ಕೊಡಬಾರದೆ?

ಸರ್ಕಾರ ಈ ಬಗ್ಗೆ ಪೀಠಾಧಿಪತಿಯಿಂದ ವಿವರಣೆ ಕೇಳುವುದೂ ಅಪರಾಧವೆ? ಹಾಸಿಗೆ ಹಿಡಿದು ಬುದ್ಧಿ ಸ್ತಿಮಿತವಿಲ್ಲದ ವಯೋವೃದ್ಧ ಸ್ವಾಮಿಯ ಮೋಸದ ವಿಲ್ಲನ್ನು ಭಕ್ತಾದಿಗಳೂ ಒಪ್ಪಬೇಕೆ? ಸಾವಿರಾರು ಕೋಟಿಯ ಮಠದ ಸೊತ್ತು ಖಾಸಗಿ ಆಸಾಮಿಯೊಬ್ಬನ ಪಾಲಾದರೆ ಅದನ್ನು ಅನುಯಾಯಿಗಳು ಪ್ರಶ್ನಿಸಬಾರದೆ? ಮಠದ ಭಕ್ತೆಯನ್ನೇ ಮುಕ್ಕುವ ಸ್ವಾಮೀಜಿ ವಿರುದ್ಧ ಆತನ ಜನಾಂಗ ಮೂಕರಂತೆ ಕೈಕಟ್ಟಿ ಕೂರಬೇಕೆ? ಮಠ ಯಾರದ್ದು? ಸ್ವಾಮಿಯ ಖಾಸಗಿ ಸೊತ್ತೆ? ಆಡಳಿತಾಧಿಕಾರಿ ಬಂದರೆ ಅದು ಹೇಗೆ ವಶಪಡಿಸಿಕೊಂಡಂತಾಯ್ತು? ಕಾಯ್ದೆಗೆ ತಿದ್ದುಪಡಿಯೆಂಬುದು ರೋಗಕ್ಕೆ ಮದ್ದಲ್ಲವೆ? ಅದರ ವಿರುದ್ಧ ಪ್ರತಿಭಟಿಸುವವರು ಯಾರ ಹಿತಾಸಕ್ತಿಯನ್ನು ಕಾಯ ಹೊರಟಿದ್ದಾರೆ? ಮದ್ದನ್ನೇ ವಿಷ ಎಂದು ಬೊಬ್ಬೆ ಹಾಕುವವರ ತಾಳಕ್ಕೆ ತಕ್ಕಂತೆ ಕುಣಿಯುವ ಮೂರ್ಖ ಮಠಾಧೀಶರನ್ನು ಭಕ್ತನೇಕೆ ಇನ್ನೂ ಸಹಿಸಿಕೊಂಡಿರಬೇಕು?

- ಡಾ. ಸೋಮನಾಥ್



ಅಪಪ್ರಚಾರ ಮತ್ತು ವಾಸ್ತವ


ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಮಸೂದೆ 2014 ರ ಪ್ರಕಾರ ಯಾವುದೇ ಮಠ, ಪೀಠ, ಅದರ ಸೊತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಸರ್ಕಾರಕ್ಕಿಲ್ಲ. ಮಠದ ಉದ್ದೇಶ, ಪರಂಪರೆ, ಭಕ್ತಾದಿಗಳ ಹಿತಾಸಕ್ತಿಗಳನ್ನು ಕಾಪಾಡುವುದು ಸರ್ಕಾರದ ಕರ್ತವ್ಯವೇ ಹೊರತು ವಶಪಡಿಸಿಕೊಳ್ಳುವ ಅಧಿಕಾರವಿಲ್ಲ. ಅಷ್ಟಕ್ಕೂ ಸರ್ಕಾರ ಸ್ವಯಂಪ್ರೇರಣೆಯಿಂದ ಇದ್ಯಾವುದನ್ನೂ ಮಾಡುವಂತಿಲ್ಲ. ಮಠದ ಯಾರೇ ಅನುಯಾಯಿ ಅಥವಾ ಭಕ್ತ ದತ್ತಿ ಆಯುಕ್ತರಿಗೆ ದೂರು ನೀಡಿದ ಪಕ್ಷದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕಾಗುತ್ತದೆ.


ಮಠದ ಆಡಳಿತ ಧರ್ಮದಂತೆ ನಡೆಯುತ್ತಿಲ್ಲ ಅಥವಾ ಅನ್ಯಾಯ, ಅನಾಚಾರಗಳೇ ತಾಂಡವವಾಡುತ್ತಿವೆ ಎಂದು ಭಕ್ತರ ದೂರಿನ ಮೂಲಕ ಸರ್ಕಾರದ ಗಮನಕ್ಕೆ ಬಂದರೆ ಸಾಕು ದತ್ತಿ ಆಯುಕ್ತರು ಮಠಕ್ಕೆ ನೋಟಿಸು ನೀಡಬೇಕು. ಆಯುಕ್ತರ ನೋಟಿಸಿಗೆ ಮಠಾಧಿಪತಿಗೆ ಅಥವಾ ಮಠದ ವ್ಯವಸ್ಥಾಪಕರು 45 ದಿನಗಳೊಗೆ ಸಮಜಾಯಿಷಿ ನೀಡಬೇಕು. ನಿಗದಿತ ಅವಧಿಯಲ್ಲಿ ಉತ್ತರ-ಸಮಜಾಯಿಷಿ ಬಾರದೇ ಹೋದರೆ ಸರ್ಕಾರ ಆಯುಕ್ತರ ಮೂಲಕ ವರದಿ ತರಿಸಿಕೊಂಡು ಅದರ ಆಧಾರದ ಮೇಲೆ ಆಡಳಿತಾಧಿಕಾರಿಯನ್ನು ನೇಮಿಸಬಹುದು.

ಹಾಗೊಮ್ಮೆ ಮಠ ಅಥವಾ ಪೀಠದ ಕಡೆಯಿಂದ ನಿಗದಿತ ಅವಧಿಯಲ್ಲಿ ಉತ್ತರ ಬಂದರೆ ಅದನ್ನು ಪರಿಶೀಲಿಸಲು ಅಧಿಕಾರಿಯೊಬ್ಬನನ್ನು ನೇಮಿಸಬಹುದು. ಅಧಿಕಾರಿಯು ವಸ್ತುಸ್ಥಿತಿ ಪರಿಶೀಲಿಸಿದ ನಂತರವೇ ಆಯುಕ್ತರಿಗೆ ಸರ್ಕಾರ ಮಧ್ಯಪ್ರವೇಶಿಸಬೇಕೇ ಬೇಡವೇ ಎಂದು ವರದಿ ನೀಡಬೇಕು. ಈ ವರದಿ ಆಧಾರದ ಮೇಲೆ ಸರ್ಕಾರ ಕ್ರಮ ಜರುಗಿಸಬೇಕು. ಮಠಕ್ಕೆ ಆಡಳಿತಾಧಿಕಾರಿ ನೇಮಿಸಿದ ಅವಧಿಯಲ್ಲಿ ಅದರ ಆಸ್ತಿ, ಆದಾಯ, ಹಣವನ್ನು ಆ ಮಠದ ಸಂಪ್ರದಾಯ ಆಚರಣೆ ಧಾರ್ಮಿಕ ವಿಧಿವಿಧಾನಗಳು ಮತ್ತು ಮಠದ ಆಸ್ತಿ-ಹಿತಾಸಕ್ತಿಯ ರಕ್ಷಣೆಗಲ್ಲದೆ ಬೇರೆ ಉದ್ದೇಶಕ್ಕೆ ಬಳಸುವಂತಿಲ್ಲ. ಮಠದ ಹೆಚ್ಚುವರಿ ಆದಾಯವನ್ನು ಅದೇ ಮಠದ ತತ್ವಪ್ರಸಾರ, ಧಾರ್ಮಿಕ ಉದ್ದೇಶಕ್ಕಷ್ಟೇ ಬಳಸತಕ್ಕದ್ದು.

ಇದು ತಿದ್ದುಪಡಿಯ ಮುಖ್ಯ ಉದ್ದೇಶ. ಇಲ್ಲಿ ಮಠದ ಹಿತಾಸಕ್ತಿಗಳಾಗಲಿ, ಅದರ ಭಕ್ತರ ಉದ್ದೇಶಕ್ಕಾಗಲಿ ಯಾವ ಆತಂಕ ಅಪಾಯವಿದ್ದೆ? ಮಠ ಮತ್ತು ಅದರ ಪರಂಪರೆಯನ್ನು ಸರ್ಕಾರವೇ ನಿಂತು ಸಂರಕ್ಷಿಸ ಹೊರಡುವುದು ಹೇಗೇ ತಾನೇ ಧರ್ಮವಿರೋಧಿಯಾಗಲು ಸಾಧ್ಯ?

ಮತ್ತೆ ಚಿರತೆಯೆಡೆಗೆ

ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ನಾವು ಒಂದು ಗಂಟೆ ಕಾದೆವು. ಹುಲಿ ಮತ್ತೆ ಬರುವುದಿಲ್ಲವೆಂದು ನನಗೆ ಖಚಿತವಾಗಿತ್ತು, ಆಗ ಒಂದು ಮೈಲು ದೂರದಿಂದ ಹುಲಿಯ ಕೂಗು ಕೇಳಿಸಿತು. ಬೇಸರದಿಂದ ನಾವು ಸಾಮಾನುಗಳೊಡನೆ ಕಾರಿಗೆ ಹಿಂತಿರುಗಿದೆವು. ಬೀರೂರಿಗೆ ಹೊರಟಿದ್ದ ಒಂದು ಬಸ್‌ನ್ನು ಹಿಂಬಾಲಿಸುತ್ತಾ ಚಿರತೆಗಾಗಿ ನಾವು ಮೊದಲು ಕಾದಿದ್ದ ಸ್ಥಳದ ಹತ್ತಿರ ಬಂದೆವು. ಅಲ್ಲಿ ನಮಗೆ ಒಂದು ಆಶ್ಚರ್ಯ ಕಾದಿತ್ತು, ಮುಂದೆ ಹೋಗುತ್ತಿದ್ದ ಬಸ್ಸಿನ ಹೆಡ್‌ಲೈಟ್ ಬೆಳಕಿನಲ್ಲಿ ಚಿರತೆಯ ಕಣ್ಣುಗಳು ಹೊಳೆಯುತ್ತಿದ್ದವು. ಅದು ತಾನು ಕೊಂದ ಪ್ರಾಣಿಯನ್ನು ಉತ್ಸಾಹದಿಂದ ತಿನ್ನುತ್ತಿತ್ತು. ಬಸ್ಸಿನ ಚಾಲಕ ಕೂಡ ಚಿರತೆಯನ್ನು ನೋಡಿ ಬ್ರೇಕ್ ಹಾಕಿದಾಗ ದೊಡ್ಡ ಶಬ್ದಮಾಡುತ್ತಾ, ಹಿಂದಿನಿಂದ ಧೂಳೆಬ್ಬಿಸುತ್ತಾ ಬಸ್ಸು ನಿಂತಿತು.

ಆಲ್ಫೀ ಮತ್ತು ನಾನು ಕಾರಿನಿಂದಿಳಿದು ಮುಂದೆ ಹೋದಾಗ ಚಿರತೆ ಆಗಲೇ ಅಲ್ಲಿಂದ ನುಸುಳುತ್ತಾ ಹೋಗಿ ಮುಂದಿದ್ದ ಹೊಲದ ಮಧ್ಯಭಾಗದಲ್ಲಿತ್ತು, ಆಲ್ಫೀ ಅದರತ್ತ ಬಂದೂಕನ್ನು ಚಲಾಯಿಸಿದ. ಒಮ್ಮೆ ಘರ್ಜಿಸುತ್ತಾ ಗಾಳಿಯಲ್ಲಿ ಹಾರಿದ ಚಿರತೆ ಇನ್ನೂ ಹೆಚ್ಚಿನ ವೇಗದಲ್ಲಿ ಅಲ್ಲಿಂದ ನೆಗೆದು ಕಾಣೆಯಾಯಿತು.

ನಾವು ತಪ್ಪು ಮಾಡಿದ್ದೆವು. ನಾವು ಮೊದಲೇ ಮಾಡಿದ್ದ ಮರೆಯಲ್ಲಿ ಆಲ್ಫೀ ಹೋಗಿ ಮತ್ತೆ ಕುಳಿತುಕೊಳ್ಳಬೇಕಾಗಿತ್ತು, ನಂತರ ನಾನು ಕಾರನ್ನು ಚಲಾಯಿಸುತ್ತಾ ಬಸ್ಸಿನ ಹಿಂದೆ ಹೋಗಿಬಿಟ್ಟಿದ್ದರೆ ಚಿರತೆ ಶವದ ಹತ್ತಿರ ಪುನಃ ಬರುತ್ತಿತ್ತು. ಆಗ ಅದನ್ನು ಹೊಡೆಯುವುದು ಆಲ್ಫೀಗೆ ಸುಲಭವಾಗುತ್ತಿತ್ತು. ನಾನು ಆಲ್ಫೀಗೆ ಸರಿಯಾಗಿ ಮಾರ್ಗದರ್ಶನ ಮಾಡಿರಲಿಲ್ಲ, ಪರಿಣಾಮವಾಗಿ ಚಿರತೆಯನ್ನು ನಾವು ಗಾಯಗೊಳಿಸಿ ಉಳಿಸಿದ್ದೆವು.

ಆಗಿಹೋದ ತಪ್ಪಿಗೆ ಮರುಗಿ ಪ್ರಯೋಜನವಿಲ್ಲವೆಂದು ನಾವು ರಾತ್ರಿ ತಂಗಲು ಬೀರೂರಿನ ಪ್ರವಾಸಿ ಬಂಗಲೆಗೆ ಬಂದೆವು. ಮರುದಿನ ಬೆಳಗ್ಗೆ ಮತ್ತೆ ಅದೇ ಸ್ಥಳಕ್ಕೆ ಬಂದು ನಾವು ಚಿರತೆಯ ಜಾಡನ್ನು ಹಿಡಿದು ಹೊರಟೆವು. ಹೊಲದ ತುದಿಯಲ್ಲಿ ತೆಳುವಾಗಿ ಕಂಡ ರಕ್ತದ ಗುರುತುಗಳು ದಟ್ಟವಾಗುತ್ತಾ ಕೊನೆಗೆ ಒತ್ತಾದ ಪೊದೆಗಳಲ್ಲಿ ಮರೆಯಾಗಿತ್ತು, ಇಲ್ಲಿ ನಮಗೆ ಸವಾಲೊಂದು ಎದುರಾಗಿತ್ತು.

ಚಿರತೆಗೆ ಹೊಡೆದ ಗುಂಡು ಅದರ ಹೊಟ್ಟೆಯ ಭಾಗಕ್ಕೆ ತಗುಲಿರಬೇಕು. ಹಾಗಾಗಿ ರಕ್ತಸ್ರಾವ ನಿಧಾನವಾಗಿ ಹೆಚ್ಚಾಗಿದ್ದು ಚಿರತೆ ದಟ್ಟವಾದ ಲಂಟಾನ ಪೊದೆಗಳ ನಡುವೆ ತೆವಳಿಕೊಂಡು ಹೋಗಿತ್ತು, ಪೊದೆಗಳ ಒಳಗೆ ಕಾಡುಹಂದಿ ಮಾಡಿದ್ದ ಕಾಲುಹಾದಿಯಲ್ಲಿ ಅದು ಮುಂದೆ ಹೋಗಿರಬೇಕು. ಆದರೆ ನಾವು ಲಂಟಾನ ಮುಳ್ಳುಗಳ ಒಳಗೆ ಹೋಗಬೇಕಾದರೆ ಅಂಬೆಗಾಲಿನಲ್ಲಿ ತೆವಳಬೇಕಾಗಿತ್ತು.


ಬಂದೂಕನ್ನು ನನ್ನ ಮುಂದೆ ನೆಲದ ಮೇಲಿಟ್ಟುಕೊಂಡು ಮುಂದೆ ತಳ್ಳುತ್ತಾ ನಾನು ಲಂಟಾನ ಪೊದೆಯೊಳಗೆ ತೆವಳಿಕೊಂಡು ಮುಂದೆ ಹೋಗತೊಡಗಿದೆ. ಆಲ್ಫೀ ನನ್ನನ್ನು ಹಿಂಬಾಲಿಸುತ್ತಿದ್ದ. ಹೀಗೆ ಸುಮಾರು 75 ಗಜ ಮುಂದೆ ಹೋದಾಗ, ಎದುರಿನ ತಿರುವಿನಲ್ಲಿ ಮರೆಯಾಗಿ ಕುಳಿತಿದ್ದ ಚಿರತೆ ಒಮ್ಮೆಲೆ ಆಕ್ರಮಣ ಮಾಡಿತು. ನಾನು ಕೂಡಲೆ ಬಂದೂಕನ್ನು ಗುರಿ ಹಿಡಿಯುವಷ್ಟರಲ್ಲಿ ಅದರ ಮೂತಿ ನಳಿಕೆಗೆ ಇನ್ನೇನು ತಾಕುವಂತಿತ್ತು, ಹಾರಿಸಿದ ಗುಂಡು ನೇರವಾಗಿ ಚಿರತೆಯ ತಲೆಯನ್ನು ಹೊಕ್ಕು ಹಿಂದಿನ ಚಿಪ್ಪನ್ನು ಕಿತ್ತೆಸೆಯಿತು. ಮಿದುಳಿನ ದ್ರವಗಳು ಹೊರಗೆ ಹರಿತೊಡಗುತ್ತಿದ್ದಂತೆ ಅದು ಸತ್ತುಬಿದ್ದಿತು.



ಮುಂದಿನ ಹತ್ತು ದಿನಗಳಲ್ಲಿ ಯೆಮ್ಮೆಯದೊಡ್ಡಿಯಿಂದ ಆರು ಮೈಲು ದೂರದಲ್ಲಿ ಒಂದು ಪ್ರಾಣಿ ಮಾತ್ರ ಬಲಿಯಾಗಿತ್ತು, ನಾವು ಆ ಸ್ಥಳಕ್ಕೆ ಹೋಗಿ ನೋಡುವಷ್ಟರಲ್ಲಿ ಸಂಜೆಯಾಗಿದ್ದು ಹದ್ದುಗಳು ಶವದ ಅವಶೇಷಗಳನ್ನು ಸಂಪೂರ್ಣವಾಗಿ ತಿಂದು ಮುಗಿಸಿದ್ದವು. 40 ಗಜ ದೂರದಲ್ಲಿದ್ದ ಮರವೊಂದರಲ್ಲಿ ಆಲ್ಫೀ ಮಧ್ಯರಾತ್ರಿಯವರೆಗೂ ಕುಳಿತು ಕಾಯುತ್ತಿದ್ದ, ಆದರೆ ಹುಲಿ ಅತ್ತ ಕಡೆ ಮುಖಹಾಕಲಿಲ್ಲ, ಹನ್ನೊಂದನೆಯ ದಿನ ಬೆಳಗ್ಗೆ ನಾವು ಬೆಂಗಳೂರಿಗೆ ಹಿಂತಿರುಗಿದೆವು.

ಬೇಜವಾಬ್ದಾರಿ ಕಾರ್ ಶಿಕಾರಿಗಳು

ಸಮಯ ಹಾಗೆಯೇ ಕಳೆಯಿತು. ಒಂದು ಕತ್ತಲು ರಾತ್ರಿಯಲ್ಲಿ ಲಿಂಗದಹಳ್ಳಿಯಿಂದ ಬೀರೂರಿಗೆ ಹೋಗುವ ರಸ್ತೆಯಲ್ಲಿ ನಾಲ್ಕು ಜನ "ಕಾರ್ ಶಿಕಾರಿಗಳು" ತಮ್ಮ ವಾಹನದಲ್ಲಿ ಹೊರಟರು. "ಕಾರ್ ಶಿಕಾರಿಗಳು" ಎಂದರೆ ಕಾಡಿನಲ್ಲಿ ಹೋಗುವಾಗ ನೆಲದ ಮೇಲೆ ಕಾಲಿಡದೆ ಕಾರಿನಲ್ಲಿಯೇ ಕುಳಿತು ದೊಡ್ಡದಾದ ಸ್ಪಾಟ್‌ಲೈಟ್‌ಗಳ ಬೆಳಕಿನಲ್ಲಿ ಬೇಟೆಯಾಡುವವರು. ಇವರಿಗೆ ದುಷ್ಟಮೃಗಗಳ ಜಾಡು ಹಿಡಿದು ಬೇಟೆಯಾಡುವ ವೈಜ್ಞಾನಿಕ ವಿಧಾನ ತಿಳಿದಿರುವುದಿಲ್ಲ ಹಾಗೂ ಕಾಡು ಮತ್ತು ಪ್ರಕೃತಿಯ ಸೌಂದರ್ಯವನ್ನು ಸವಿಯುವ ಆಸಕ್ತಿಯೂ ಇರುವುದಿಲ್ಲ, ಇವರು ಮಾಡುವ ಏಕೈಕ ಕೆಲಸವೆಂದರೆ ತಮ್ಮ ಸ್ಪಾಟ್‌ಲೈಟ್‌ಗಳ ಪ್ರಖರ ಬೆಳಕನ್ನು ರಸ್ತೆಯ ಬದಿಯ ಕಾಡಿನಲ್ಲಿ ಹಾಯಿಸಿ ಅಲ್ಲಿ ಕಾಣುವ ಕಣ್ಣುಗಳ ಕಡೆ ಗುಂಡುಗಳ ಮಳೆ ಸುರಿಸುವುದು. ಅಲ್ಲಿರುವುದು ಯಾವ ಪ್ರಾಣಿ, ಅದು ಗಂಡೋ ಹೆಣ್ಣೋ, ಮರಿಯೋ ಬೆಳೆದದ್ದೋ, ಎನ್ನುವ ಯಾವ ವಿಚಾರವನ್ನು ಅವರು ಗಮನಿಸುವುದಿಲ್ಲ, ಕೊಲ್ಲುವ ಅಥವಾ ಗಾಯಗೊಳಿಸುವ ಏಕೈಕ ತೃಷೆಯಿಂದ ಅವರು ಬಂದೂಕನ್ನು ಚಲಾಯಿಸುತ್ತಾರೆ. ಇಂತಹ ಕೃತ್ಯಗಳು ಕಾನೂನುಬಾಹಿರವಾಗಿದ್ದರೂ ನಡೆಯುತ್ತಲೇ ಇರುತ್ತದೆ. ಅವತ್ತಿನ ರಾತ್ರಿ ರಸ್ತೆಯ ಹತ್ತಿರ ಹುಲಿಯೊಂದರ ಎರಡು ಬಿಳಿಯ ಕಣ್ಣುಗಳನ್ನು ಕಂಡ ಕಾರ್ ಶಿಕಾರಿಗಳು ಅದರತ್ತ ಎರಡು ಗುಂಡು ಹಾರಿಸಿದರು. ಹುಲಿ ನೆಗೆದು ಮರೆಯಾಯಿತಾದರೂ ಅದರ ಕೆಳ ದವಡೆಗೆ ಬಲವಾದ ಏಟು ಬಿದ್ದಿತ್ತು, ಈ ಬೇಟೆಗಾರರು ಹುಲಿಯನ್ನು ಹಿಂಬಾಲಿಸಿ ಅದರ ಯಾತನೆಯನ್ನು ಕೊನೆಗೊಳಿಸುವ ಪ್ರಯತ್ನ ಮಾಡದೆ ಬೇರೆ ಪ್ರಾಣಿಗಳನ್ನು ಹುಡುಕಿಕೊಂಡು ಹೊರಟರು.



ಗಾಯಗೊಂಡ ಹುಲಿ ಸರಿಯಾಗಿ ಆಹಾರವನ್ನೂ ತಿನ್ನಲಾಗದೆ ಮುಂದಿನ ಎರಡು ತಿಂಗಳು ತೀವ್ರವಾದ ಯಾತನೆಯನ್ನ ಅನುಭವಿಸಿರಬೇಕು. ಬೇಟೆಯ ಪ್ರಾಣಿಗಳ ಮೇಲೆ ದವಡೆಗಳಿಂದ ಬಿಗಿಯಾದ ಹಿಡಿತವನ್ನು ಸಾಧಿಸಲಾಗದ ಹುಲಿಗೆ ತನ್ನ ಮಾಮೂಲಿನ ಆಹಾರವನ್ನು ಗಳಿಸಿಕೊಳ್ಳುವುದು ಕಷ್ಟವಾಗಿರಬೇಕು.

ನರಭಕ್ಷಕನ ಉಗಮ

ಮೂರು ತಿಂಗಳ ನಂತರ ಒಂದು ದಿನ ಆ ಹುಲಿ ಕಾಡಿನಲ್ಲಿ ಮೇಯಲು ಬಿಟ್ಟಿದ್ದ ಕುರಿಗಳ ಗುಂಪಿನಿಂದ ಒಂದನ್ನು ಹಿಡಿಯಲು ಯತ್ನಿಸಿತು. ಸಂಪೂರ್ಣ ಎಚ್ಚರಿಕೆಯಿಂದ ಒಂದು ದಷ್ಟಪುಷ್ಟ ಕುರಿಯ ಕಡೆ ಹಾರಿ ತನ್ನ ಪಾದಗಳ ಉಗುರಿನಿಂದ ಅದನ್ನು ಹೊಡೆದು ಕೊಲ್ಲಲು ಯತ್ನಿಸಿತು. ಹತ್ತಿರದಲ್ಲೇ ನಿಂತಿದ್ದ ಕುರಿಕಾಯುವ ಹುಡುಗ ಧೈರ್ಯದಿಂದ ಹುಲಿಯ ಕಡೆ ತನ್ನ ದೊಣ್ಣೆಯನ್ನು ಬೀಸಿದ. ಆಕಸ್ಮಿಕವಾಗಿ ಅದು ಹುಲಿಗೆ ತಗುಲಿದಾಗ ಹುಲಿ ಕುರಿಯನ್ನು ಬಿಟ್ಟು ಕೋಪದಿಂದ ಕುರಿಕಾಯುವವನ ಮೇಲೆ ಆಕ್ರಮಣ ಮಾಡಿತು. ಅವನ ಭಯದ ಕೂಗಾಟದ ನಡುವೆಯೂ ಹುಲಿ ತನ್ನ ಅಂಗಾಲುಗಳಿಂದ ಅವನನ್ನು ಮತ್ತೆ ಮತ್ತೆ ಹೊಡೆದು ಸಾಯಿಸಿತು.

ಆಗ ಹುಲಿಗೆ ಕುರಿ ಮತ್ತು ಆ ಮನುಷ್ಯ ಇಬ್ಬರ ಶವದಲ್ಲಿ ಒಂದನ್ನು ತಿನ್ನುವ ಆಯ್ಕೆ ಇತ್ತು, ಮಾನವನ ನೆತ್ತರ ರುಚಿಯನ್ನು ಪ್ರಥಮ ಬಾರಿ ನೋಡಿದ ಹುಲಿ ಅವನನ್ನೇ ಆಯ್ಕೆ ಮಾಡಿಕೊಂಡು ಶವವನ್ನು ಕಾಡಿನತ್ತ ಎಳೆದುಕೊಂಡು ಹೋಯಿತು. ಹೀಗೆ ಯೆಮ್ಮೆಯದೊಡ್ಡಿಯ ಭಯಾನಕ ನರಭಕ್ಷಕನ ಉಗಮವಾಗಿತ್ತು.

ಇದರ ಕಾರ್ಯಕ್ಷೇತ್ರ ಸುತ್ತಲಿನ 250 ಚದರ ಮೈಲುಗಳಲ್ಲಿ ಹಬ್ಬಿತ್ತು, ಬೀರೂರು ಲಿಂಗದಹಳ್ಳಿ, ಭಗವದ್ಕೋಟೆ, ಸಾಂತವೇರಿ, ಬಾಬಾಬುಡನ್‌ಗಿರಿ ಬೆಟ್ಟಗಳು, ಸಕ್ಕರೆಪಟ್ಟಣಗಳವರೆಗೂ ಈ ಹುಲಿಯಿಂದ ಮನುಷ್ಯರು ಕೊಲ್ಲಲ್ಪಟ್ಟಿದ್ದಾರೆಂದು ವರದಿಗಳೂ ಬರತೊಡಗಿದವು. ತೀವ್ರವಾಗಿ ಹೆಚ್ಚಿದ ನರಬಲಿಗಳು ಒಂದು ನಿರ್ದಿಷ್ಟ ಮಾರ್ಗದಲ್ಲಿ ನಡೆಯುತ್ತಿದ್ದು, ಎಲ್ಲಾ ಸಾವುಗಳು ಹುಲಿಯ ಮಾಮೂಲಿನ ಕೊಲ್ಲುವ ರೀತಿಯಾದ ಕುತ್ತಿಗೆಯನ್ನು ಮುರಿಯುವುದರಿಂದ ಆಗಿರದೆ, ಅದರ ಪಾದಗಳ ಏಟಿನಿಂದ ಆಗಿತ್ತು, ಶವಗಳ ಮಾಂಸವನ್ನು ಮೇಲಿನ ದವಡೆಯನ್ನು ಮಾತ್ರ ಉಪಯೋಗಿಸಿ ವಿಚಿತ್ರ ರೀತಿಯಲ್ಲಿ ಹುಲಿ ತಿಂದಿರುತ್ತಿತ್ತು ಮತ್ತು ಒಂದೇ ಶವದ ಕಡೆ ಎರಡನೇ ಬಾರಿ ಸುಳಿಯುತ್ತಿರಲಿಲ್ಲ, ಅಂದರೆ ಹುಲಿ ತನ್ನ ಕೆಳಗಿನ ದವಡೆಯನ್ನು ಉಪಯೋಗಿಸಲಾಗದೆ ತಿನ್ನುವುದಕ್ಕೆ ಬಹಳ ಕಷ್ಟಪಡುತ್ತಿತ್ತು.

ನರಭಕ್ಷಕನ ಉಗಮವಾದ ಮೇಲೆ ಸಾಕುಪ್ರಾಣಿಗಳನ್ನು ಕೊಲ್ಲುತ್ತಿದ್ದ ಹುಲಿಯ ಚಟುವಟಿಕೆಗಳು ಒಮ್ಮಿಂದೊಮ್ಮೆಲೆ ಆಶ್ಚರ್ಯಕರವಾಗಿ ನಿಂತುಹೋದವು. ಇದರಿಂದ ಸಾಕುಪ್ರಾಣಿಗಳನ್ನು ಕೊಲ್ಲುತ್ತಿದ್ದ ಹುಲಿಯೇ ನರಭಕ್ಷಕನಾಗಿ ಮಾರ್ಪಟ್ಟಿದೆ ಎಂದು ಜನರು ನಂಬಿಕೊಂಡರು. ಕಾರ್ ಶಿಕಾರಿಗಳ ದುಸ್ಸಾಹಸ ಯಾರಿಗೂ ಗೊತ್ತಾಗಿರಲಿಲ್ಲ, ಆದರೆ ಆ ಶಿಕಾರಿಗಳಲ್ಲಿ ಒಬ್ಬ ಒಮ್ಮೆ ತಾವು ಹುಲಿಯೊಂದಕ್ಕೆ ಗುಂಡುಹಾರಿಸಿ ಗಾಯಗೊಳಿಸಿದ್ದುದಾಗಿ ಬಡಾಯಿ ಕೊಚ್ಚಿಕೊಂಡ. ನಂತರ ಹಳೆಯ ಘಟನೆಗಳನ್ನು ಜೋಡಿಸಿದಾಗ ಮೇಲೆ ಹೇಳಿದ ವಿಷಯಗಳು ಸ್ಪಷ್ಟವಾದವು. ಈ ನರಭಕ್ಷಕ ತನ್ನ ಮಾಮೂಲಿನ ಮಾರ್ಗದಲ್ಲಿ ಚಲಿಸುತ್ತಾ ಊರಿನ ಹೊರವಲಯಗಳಲ್ಲಿ ಮತ್ತು ಹಾದಿಗಳಲ್ಲಿ ಮನುಷ್ಯರನ್ನು ಬಲಿತೆಗೆದುಕೊಳ್ಳುತ್ತಿತ್ತು, ವರ್ತಮಾನ ಪತ್ರಿಕೆಗಳಲ್ಲಿ ಬಂದ ವರದಿಗಳ ಆಧಾರದ ಮೇಲೆ ನಕಾಶೆಯಲ್ಲಿ ಗುರುತುಹಾಕಿಕೊಳ್ಳುತ್ತಾ ನಾನು ಮೇಲಿನ ಮಾಹಿತಿ ಸಂಗ್ರಹಿಸಿದ್ದೆ. ಹುಲಿಯ ಕಾರ್ಯಕ್ಷೇತ್ರದ ಕೇಂದ್ರ ಹೊಗರಕಾನು ಎಂಬ ಬೆಟ್ಟಗಳ ಇಳಿಜಾರಿನಲ್ಲಿದ್ದ ಸ್ಥಳವಾಗಿತ್ತು, ನಿರ್ಜನವಾಗಿದ್ದ ಈ ಬೆಟ್ಟದ ಕಾಡುಗಳಲ್ಲಿ ಆಶ್ರಯ ಪಡೆದಿದ್ದ ಹುಲಿ ಸುತ್ತಲಿನ ಜನವಸತಿಯುಳ್ಳ ಪ್ರದೇಶಗಳಲ್ಲಿ ನರಬಲಿಯನ್ನು ತೆಗೆದುಕೊಳ್ಳುತ್ತಿತ್ತು, ಇಲ್ಲಿಯವರೆಗೆ 27 ಜನರನ್ನು ಅದು ಕೊಂದಿದ್ದು ಮೂರು ಅಥವಾ ನಾಲ್ಕು ತಿಂಗಳಿಗೊಮ್ಮೆ ತನ್ನ ಹಳೆಯ ಬೇಟೆಯ ಸ್ಥಳಕ್ಕೆ ಮತ್ತೆ ಹಿಂತಿರುಗುತ್ತಿತ್ತು.

ಬೇಟೆಯ ಸಿದ್ಧತೆ

ಈ ಹುಲಿಯನ್ನು ಬೇಟೆಯಾಡುವ ಪ್ರಯತ್ನದಲ್ಲಿ ನಾನು ಹೊಗರೆಹಳ್ಳಿ ಗ್ರಾಮವನ್ನು ನನ್ನ ಕೇಂದ್ರವಾಗಿಟ್ಟುಕೊಳ್ಳಲು ನಿರ್ಧರಿಸಿದೆ. ಹೊಗರೆಹಳ್ಳಿ ಬೀರೂರು ಮತ್ತು ಲಿಂಗದಹಳ್ಳಿಯ ಮಧ್ಯದಲ್ಲಿದ್ದು ಹೊಗರಕಾನು ಬೆಟ್ಟದ ಬುಡದಿಂದ ಕೇವಲ ಮೂರು ಮೈಲು ದೂರವಿತ್ತು, ನನಗೆ ಸುತ್ತಮುತ್ತಲಿನ ಕಾಡುಗಳು ಚೆನ್ನಾಗಿ ಪರಿಚಯವಿತ್ತು, ಇಲ್ಲಿನ ಜನರ ಸಂಪರ್ಕವೂ ಚೆನ್ನಾಗಿದ್ದು ಅವರಿಂದ ಸಾಕಷ್ಟು ಸಹಕಾರ ಸಿಗುತ್ತಿತ್ತು. ಅಷ್ಟೇ ಅಲ್ಲದೆ ಈ ಹಿಂದೆ ಹುಲಿ ಈ ದಾರಿಯಲ್ಲಿ ಹೋಗುವಾಗ ಹಳ್ಳಿಯ ಯಾವುದಾದರೂ ವ್ಯಕ್ತಿಯನ್ನು ಬಲಿತೆಗೆದುಕೊಂಡಿದ್ದು, ಅದು ಮತ್ತೆ ಇಲ್ಲಿಗೆ ಭೇಟಿ ನೀಡುವುದು ನಿಶ್ಚಿತವಾಗಿತ್ತು.

ಹುಲಿ ಹೊಗರೆನಹಳ್ಳಿಗೆ ಮುಂದಿನ ಭೇಟಿ ನೀಡಬಹುದಾದ ದಿನವನ್ನು ಅಂದಾಜು ಮಾಡಿಕೊಂಡು ಅದಕ್ಕೆ ಹದಿನೈದು ದಿವಸ ಮೊದಲು ನಾನು ಅಲ್ಲಿಗೆ ತಲುಪಿದೆ. ಇದರಿಂದ ನನಗೆ ಎಲ್ಲಾ ಮಾಹಿತಿ ಸಂಗ್ರಹಿಸಿ ಬೇಟೆಯ ಯೋಜನೆಯನ್ನು ತಯಾರಿಸಲು ಸಾಕಷ್ಟು ಸಮಯ ಸಿಕ್ಕಿತ್ತು. ಹಳ್ಳಿ ಸಾಕಷ್ಟು ದೊಡ್ಡದಾಗಿದ್ದರೂ ಜನಸಂಖ್ಯೆಯೇನೂ ಹೆಚ್ಚಾಗಿರಲಿಲ್ಲ, ಇಲ್ಲಿನ ಮನೆಗಳನ್ನು ಕೆಂಪು ಕಲ್ಲಿನಿಂದ ಕಟ್ಟಲಾಗಿದ್ದು ಎರಡು ದೇವಸ್ಥಾನಗಳೂ ಈ ಊರಿನಲ್ಲಿತ್ತು, ಒಂದು ದಿಕ್ಕಿನಲ್ಲಿ ಪೊದೆಕಾಡುಗಳಿದ್ದ ಹೊಗರಕಾನು ಇದ್ದರೆ ಮತ್ತೊಂದು ದಿಕ್ಕಿನಲ್ಲಿ ಸುಂದರವಾದ ದೊಡ್ಡ ಕೆರೆಯಿತ್ತು, ಮೂರನೆಯ ದಿಕ್ಕಿನಲ್ಲಿ ಅಡಿಕೆ, ಬಾಳೆ ಮತ್ತು ತೆಂಗಿನಮರದ ತೋಪುಗಳಿದ್ದವು. ಕೆಲವು ಕಡೆ ಭತ್ತದ ಗದ್ದೆಗಳೂ ಇದ್ದವು. ಇಡೀ ಪ್ರದೇಶಕ್ಕೆ ನಾಲೆಗಳ ಮೂಲಕ ಕೆರೆಯ ನೀರು ಸರಬರಾಜು ಆಗುತ್ತಿತ್ತು, ಬೀರೂರು ಲಿಂಗದಹಳ್ಳಿಯ ಕಡೆಯ ರಸ್ತೆಯಲ್ಲಿ ಮಳೆ ನೀರಿನ ಮೇಲೆ ಆಧಾರಿತವಾದ ಒಣಬೇಸಾಯದ ಹೊಲಗಳಿದ್ದವು.

ನೀವೆಲ್ಲಾ ಊಹಿಸಲು ಸಾಧ್ಯವಾಗುವಂತೆ ಹೆಚ್ಚಿನ ಸಾವುಗಳು ಅಡಿಕೆ ತೆಂಗಿನ ತೋಟಗಳು ಮತ್ತು ಪೊದೆಕಾಡುಗಳು ಇದ್ದ ದಿಕ್ಕಿನಲ್ಲಿ ಸಂಭವಿಸಿತ್ತು. ಹುಲಿ ಹೊಲ ಗದ್ದೆಗಳಿದ್ದ ಬಯಲು ಪ್ರದೇಶದ ಕಡೆ ಹೋಗುತ್ತಿರಲಿಲ್ಲ. ಇಲ್ಲಿನ ಜನ ಸೂರ್ಯಾಸ್ತಕ್ಕೆ ಮೊದಲೇ ಮನೆಯೊಳಗೆ ಸೇರಿಕೊಳ್ಳುವ ಅಭ್ಯಾಸ ಮಾಡಿಕೊಂಡಿದ್ದರಿಂದ ಹುಲಿ ಮಧ್ಯಾಹ್ನದ ಕೊನೆಯ ಭಾಗದಲ್ಲಿ ಬೇಟೆಯಾಡುತ್ತಿತ್ತು. ಹೆಜ್ಜೆಗುರುತುಗಳು ಸೂಚಿಸಿದಂತೆ ಹುಲಿ ಬೆಳಗಿನ ಜಾವದಲ್ಲಿ ಊರಿನ ಹೊರವಲಯದ ಮನೆಗಳ ಹತ್ತಿರ ಬಂದಿದ್ದರೂ ಗಟ್ಟಿಯಾದ ಮರದ ಬಾಗಿಲನ್ನು ಹೊಂದಿದ್ದ ಆ ಕಲ್ಲಿನ ಮನೆಗಳ ಒಳಗೆ ನುಗ್ಗಲು ಅದಕ್ಕೆ ಸಾಧ್ಯವಾಗಿರಲಿಲ್ಲ.

ಹುಲಿ ಹೊಗರೆಹಳ್ಳಿಗೆ ಮತ್ತೆ ಯಾವಾಗ ಬರುತ್ತದೆ ಎಂದು ಖಚಿತವಾಗಿ ಹೇಳುವುದು ಸಾಧ್ಯವಿರಲಿಲ್ಲ, ಯಾವುದಾದರೂ ಊರಿನಲ್ಲಿ ಒಮ್ಮೆ ಬೇಟೆಯಾಡಿದ ನಂತರ ಅದು ಮುಂದಿನ ಊರಿಗೆ ಹೋಗಿಬಿಡುತ್ತಿತ್ತು, ಹಾಗಾಗಿ ನಿಖರವಾದ ಬೇಟೆಯ ಯೋಜನೆಯನ್ನು ತಯಾರಿಸುವುದು ಕಷ್ಟಕರವಾಗಿತ್ತು, ಹುಲಿಯ ಮುಂದಿನ ಭೇಟಿಯ ಸಮಯದಲ್ಲಿ ನಾನೇ ಬಲಿಯಂತೆ ಕಾಣಿಸಿಕೊಂಡು ಅದನ್ನು ಆಕರ್ಷಿಸುವುದು ನನಗಿದ್ದ ಒಂದೇ ದಾರಿಯಾಗಿತ್ತು, ಇದರ ಬಗೆಗೆ ನನಗೆ ಬಹಳ ಹಿಂಜರಿಕೆ ಇದ್ದರೂ ಅನ್ಯಮಾರ್ಗವೇ ಇರಲಿಲ್ಲ.

(ಮುಂದುವರೆಯುವುದು)

ವರಾಹ ಪುರಾಣವೆಂಬ ಹೊಸ ನಾಟಕ

ನಾಟಕ ವಿಮರ್ಶೆ

▶ ಪ್ರೊ. ಶಿವರಾಮಯ್ಯ

'ವರಾಹ ಪುರಾಣ'ವೆಂಬ ಹೊಸ ನಾಟಕವೊಂದನ್ನು ರೂಪಾಂತರ ತಂಡವು ಡಿಸೆಂಬರ್ 21, 2014ರಂದು ಭಾನುವಾರ ಕಲಾಗ್ರಾಮದಲ್ಲಿ ರಂಗಪ್ರಯೋಗ ಮಾಡಿತು. ಕಥೆ ಜಂಬಣ್ಣ ಅಮರಚಿಂತರ ಕುರುಮಯ್ಯ ಮತ್ತು ಅಂಕುಶದೊಡ್ಡಿ ಕಾದಂಬರಿ ಆಧಾರಿತ. ರಂಗರೂಪ, ನಿರ್ದೇಶನ ಸಿದ್ಧರಾಮ ಕೊಪ್ಪರ್ ಅವರದು. ನಿರ್ವಹಣೆ ಕೆ.ಎಸ್.ಡಿ.ಎಲ್. ಚಂದ್ರು ಅವರದ್ದು.

ರೂಪಾಂತರ 25 ವರ್ಷಗಳಿಂದ ನಿರಂತರವಾಗಿ ಕ್ರಿಯಾಶೀಲವಾಗಿರುವ ಹವ್ಯಾಸಿ ನಾಟಕ ತಂಡ. ಕನ್ನಡ ಸಾಹಿತ್ಯ ಲೋಕದ ಮಹತ್ತರ ಲೇಖಕರ ಕಥೆ, ಕಾವ್ಯ ಕಾದಂಬರಿಗಳನ್ನು ರಂಗಕ್ಕೆ ಅಳವಡಿಸಿ ಪ್ರಯೋಗಿಸುವ ಮೂಲಕ ಹೆಸರು ಮಾಡಿದೆ. ಇದೀಗ ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ರೂಪಾಂತರ ಪ್ರಸ್ತುತ ಯುವ ನಿರ್ದೇಶಕರಿಗೆ ನಾಟಕ ನಿರ್ದೇಶನದ ಅವಕಾಶ ಕಲ್ಪಿಸುತ್ತಿದೆ. ನಾಟಕ ಬೆಂಗಳೂರು ಉತ್ಸವ - 2014ರ ಅಂಗವಾಗಿ ಯುವ ನಿರ್ದೇಶಕ ಸಿದ್ಧರಾಮ ಕೊಪ್ಪರ್‌ರವರು 'ವರಾಹ ಪುರಾಣ' ನಾಟಕವನ್ನು ನಿರ್ದೇಶಿಸಿದ್ದಾರೆ.


ಈ ದೇಶ ವಿಭಿನ್ನ ಸಂಸ್ಕೃತಿಗಳ ತವರು. ಅಂಚಿಗೆ ತಳ್ಳಲ್ಪಟ್ಟ ಎಷ್ಟೋ ಸಂಸ್ಕೃತಿಗಳಲ್ಲಿ ಕೊರವ ಜನಾಂಗವೂ ಒಂದು. ಈ ಜನಾಂಗದಲ್ಲಿ ಬೇರೂರಿರುವ ಬಡತನ, ಅಜ್ಞಾನ, ಅಂಧಶ್ರದ್ಧೆ ಅವಿವೇಕಗಳನ್ನು ಕುರಿತ ಕುರುಮಯ್ಯ ಮತ್ತು ಅಂಕುಶದೊಡ್ಡಿ ಕಾದಂಬರಿ ಊಳಿಗಮಾನ್ಯ ಸಮಾಜದ ಅವಘಡಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಕಾದಂಬರಿ ಸಮಕಾಲೀನ ಸಮಸ್ಯೆಗಳಿಗೆ ಒಡ್ಡಿಕೊಳ್ಳುತ್ತಾ ರಜಾಕರ ಕಾಲದ ಹೈದರಾಬಾದ್ ಕರ್ನಾಟಕದ ಫ್ಯೂಡಲ್ ಸಮಾಜದ ನೆನಪುಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡಿದೆ. ಇಂದಿನ ಸಂದರ್ಭಕ್ಕೆ ಅಳವಟ್ಟ ವರಾಹ ಪುರಾಣ ವರ್ತಮಾನದ ಓಟಿನ ರಾಜಕಾರಣವನ್ನೂ, ದೇವಾಲಯ ಸಂಸ್ಕೃತಿಯ ಒಳಸುಳಿ ಕ್ರೌರ್ಯವನ್ನೂ, ಹೆಣ್ಣಿನ ಪರಿತಾಪವನ್ನೂ, ಬಡವರ ಅನುಪಾತವನ್ನೂ ಎದೆ ಕಲಕುವಂತೆ ಹಿಡಿದಿಡುತ್ತದೆ. ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ಆಶಯವನ್ನು ಹೊತ್ತ ನಾಟಕದ ಅಂತ್ಯ ಪರಿಣಾಮಕಾರಿಯಾಗಿದೆ.

ಜಂಬಣ್ಣನವರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯು ಈ ನೆಲದ ಬುಡಕಟ್ಟು ಜನಾಂಗಗಳಲ್ಲಿ ಒಂದಾದ ಕೊರವರ ಬದುಕನ್ನು ಕುರಿತು ಹೇಳುತ್ತದೆ. ಹಂದಿ ಸಾಕುವ ಕಸುಬಿನಿಂದ ಇವರಿಗೆ 'ಹಂದಿ ಕೊರಚ' ಎಂಬ ಹೆಸರೂ ಇದೆ. ವರಾಹ ಪುರಾಣದ ಸಂಕೇತ ಇದು. ಈ ಜನರ ಬದುಕಿನಲ್ಲಿರುವ ನ್ಯಾಯ, ನಂಬುಗೆ, ಪ್ರೀತಿ, ವಿಶ್ವಾಸ, ದುಡಿಮೆ, ದುಃಖ, ಕುಡಿತ, ಕುಣಿತ, ಕಾದರ, ಮತ್ತಿತರ ತರಲೆ ತಾಪತ್ರಯಗಳು ಮುಂತಾದುವನ್ನೆಲ್ಲ ಇಲ್ಲಿ ಹಿಡಿದಿಡಲಾಗಿದೆ.


ಕಾದಂಬರಿಯು ಸಾದರಪಡಿಸುವಂತೆ ಕೊರವರು ಕೂಡ ಇತರ ಆದಿವಾಸಿ ಬುಡಕಟ್ಟು ಜನಾಂಗಗಳಂತೆಯೆ ಆರ್ಥಿಕವಾಗಿ ಗಟ್ಟಿಯಾಗಲು, ಸಾಮಾಜಿಕವಾಗಿ ತಲೆಯೆತ್ತಲು ಮಾಡುವ ಪ್ರಯತ್ನಗಳೆಲ್ಲ ವಿಫಲವಾಗಿ, ವಂಶಪಾರಂಪರ್ಯವಾಗಿ ಪಡೆಸಿಕೊಂಡು ಬಂದಿದ್ದ ಬಿಜಲಿ (ಪೆಟ್ರೋಮ್ಯಾಕ್ಸ್‌ಲೈಟ್) ಹೊರುವ ಕಂಬಗಳಾಗಿ ಅದರಡಿಯಲ್ಲಿಯೆ ಕರಗಿಹೋಗುತ್ತಿದ್ದಾರೆ. ಭವಿಷ್ಯವೇ ಇಲ್ಲದ ಇಂಥ ಬಡವರನ್ನು ಕುರಿತು ಬರೆಯುವುದೇನಿದೆ? ಎಂದರೆ ಜಂಬಣ್ಣನವರಿಗೆ ಅದೇ ವಸ್ತುವಾಗಿದೆ. ರಾಯಪುರದ ಬಳಿ ಇರುವ ಎರಡು ಬೆಟ್ಟಗಳ ನಡುವಿನ ತಗ್ಗು ಪ್ರದೇಶದಲ್ಲಿ ಅಂಕುಶದೊಡ್ಡಿ ಇದೆ. ಹಿಂದೆ ಇದು ಲಂಬಾಣಿಗಳ ತಾಂಡೆಯಾಗಿತ್ತು. ಅದಕ್ಕೂ ಮೊದಲು ರಾಜರು ಖೆಡ್ಡಾದಲ್ಲಿ ಹಿಡಿದು ತರಿಸಿದ ಆನೆಗಳಿಗೆ ಇಲ್ಲಿ ಅಂಕುಶ ಇಟ್ಟು ಪಳಗಿಸುತ್ತಿದ್ದ ಕಾರಣ ಅದಕ್ಕೆ ಅಂಕುಶದೊಡ್ಡಿ ಎಂಬ ಹೆಸರು ಬಂದಿದೆ. ಅಲೆಮಾರಿ ಬುಡಕಟ್ಟು ಜನಾಂಗಗಳಿಗೂ ಕಾಡಿನಲ್ಲಿ ಅಂಡಲೆಯುವ ಆನೆಗಳಿಗೂ ಸಾಮ್ಯ ಇದೆ. ನಾಗರಿಕತೆ ಪ್ರಬಲವಾದಂತೆ ಈ ಅಲೆಮಾರಿಗಳೂ, ಕಾಡಿನ ಆನೆಗಳೂ ಸತತವಾಗಿ ಪರಾಕ್ರಮಣಕ್ಕೆ ಒಳಗಾಗಿದ್ದಾರೆ ಎಂಬ ಧ್ವನಿಯೂ ಕಾದಂಬರಿಯ ಹೆಸರಿನಿಂದ ಪ್ರತೀತವಾಗುತ್ತದೆ.

ಈ ಅಂಕುಶದೊಡ್ಡಿಯ ಕೊರವರು ಹಂದಿ ಸಾಕುವುದಲ್ಲದೆ, ಈಚಲಗರಿ ಕಡ್ಡಿಗಳಿಂದ ಚಾಪೆ, ತಡಿಕೆ, ಬುಟ್ಟಿ, ಬುಟ್ಟಿಗಳನ್ನು ಮಾಡಿ ಹೊಟ್ಟೆ ಹೊರೆಯುತ್ತಿದ್ದವರು. ದೊಡ್ಡವರ ಸಭೆ ಸಮಾರಂಭಗಳಲ್ಲಿ ಬಿಜಲಿ ಹೊರುವುದು ಇವರಿಗೆ ಅನಿವಾರ್ಯ ಜೀತಗಾರಿಕೆಯಾಗಿತ್ತು. ಕುರುಮಯ್ಯ ಅಂಕುಶದೊಡ್ಡಿಗೆ ಹಿರಿಯ ತಲೆ. ಕಥೆಗೆ ಅವನೇ ಕೇಂದ್ರಬಿಂದು. ಅನೇಕಾನೇಕ ಘಟನಾವಳಿಗಳು ಅವನ ಸಾಕ್ಷಿ ಪ್ರಜ್ಞೆಯ ಮೂಲಕ ಹಾದುಹೋಗುತ್ತವೆ. ಕೊರವರ ನೀತಿ ನಡಾವಳಿಗಳಿಗೆ ಇವನು ಜೀವಂತ ಪ್ರತೀಕ. ಅವನ ಮಾತು, ನಡೆ, ನ್ಯಾಯ, ತೀರ್ಪು, ಅಲಿಖಿತ ಶಾಸನವಾಗಿ, ಕಾನೂನಾಗಿ ಕಾರ್ಯಗತವಾಗುವುದುಂಟು. ಒಂದು ಸಮಾಜ ಎಂದಮೇಲೆ ಅದಕ್ಕೊಂದು ವ್ಯವಸ್ಥೆ ಇರುತ್ತದೆ. ಅನೇಕ ವೇಳೆ ಈ ವ್ಯವಸ್ಥೆ ವ್ಯಕ್ತಿಯ ಸ್ವಾತಂತ್ರ್ಯವನ್ನೇ ಹತ್ತಿಕ್ಕಿ ಬಿಡುತ್ತದೆಯಷ್ಟೆ. ಇಲ್ಲಿ ಆದದ್ದು ಅದೇ.

ಅಂಥ ಸನ್ನಿವೇಶಗಳು ಕೆಲವು ಇಲ್ಲಿ ಎದುರಾಗುತ್ತವೆ. ಒಂದೆರಡನ್ನು ಇಲ್ಲಿ ಪ್ರಸ್ತಾಪಿಸಬಹುದು. ಮಾರೆಪ್ಪ ಕ್ಷಯರೋಗಿ. ಅವನ ಹೆಂಡತಿ ಬುಡ್ಡಮ್ಮನಿಗೆ ಕುದಿಯುವ ಯೌವನ. ಅವರಿಗೆ ಒಂದು ಕೈ ಕೂಸು ಇದೆ. ಆದರೆ ಹಾಸಿಗೆ ಪಥ್ಯ ಹಿಡಿದ ಗಂಡನಿಂದ ಅವಳ ದೈಹಿಕ ಕಾವು ತಣ್ಣಗಾಗುವಂತಿರಲಿಲ್ಲ. ಬ್ರಹ್ಮಚಾರಿಯಾಗಿದ್ದು ಕುಸ್ತಿ ತಾಲೀಮು ಮಾಡಿ ಕೊಬ್ಬಿ ಕಬ್ಬಿಣದಂತಿದ್ದ ದೊಡ್ಡಿಯ ಯುವಕ ಜಂಬಯ್ಯ ಎಂಬುವವನೊಂದಿಗೆ ಕದ್ದು ಮುಚ್ಚಿ ಹೋಗುತ್ತಿದ್ದಳು. ಸಿಕ್ಕಿಬಿದ್ದರು, ಕೇಸು ಪಂಚಾಯಿತಿ ಕಟ್ಟೆಗೆ ಏರಿತು. ದೇಹ ಮಾನದ ದೃಷ್ಟಿಯಿಂದ ಜಂಬಯ್ಯ ಮತ್ತು ಬುಡ್ಡೆಮ್ಮ ಇವರ ನಡವಳಿಕೆ ಸರಿ ಇರಬಹುದು. ಆದರೆ ಕೊರವರ ಸಮಾಜ ಇದನ್ನು ಸಹಿಸದು. ಅದು ಅಲ್ಲಿನ ವ್ಯವಸ್ಥೆ. ಕುರುಮಯ್ಯನ ಅಂತರಂಗದಲ್ಲಿ ಸಾಕ್ಷಿಪ್ರಜ್ಞೆಯ ಕಡಗೋಲು ಕಡೆಯಲಾರಂಭಿಸಿತು.



ಹೆಂಗುಸರಿಗೆ ಮನ್ಯಾಗ ಉಣ್ಣಾಕ, ಉಡಾಕ ಏಟಿದ್ರೇನು.... ಅಸಲು ಇರದಿದ್ರೆ (ಪು-21) ಎಂದು ಕುರುಮಯ್ಯ ಖರೆ ಚಿಂತಿಸಿದ. ಇತ್ತ ಜಂಬಯ್ಯ ಬುಡ್ಡೆಮ್ಮನನ್ನು 200 ರೂ.ಗಳಿಗೆ ಕೊಂಡುಕೊಂಡ. ಅಪ್ಪನೆಂಬ ಪ್ರತಿಷ್ಠೆಯಿಂದ ಮಾರೆಪ್ಪ



ಮಗುವನ್ನು ಕೊಡದಾದ. ತಾಯಿ ಮಗು ಅಗಲಿದರು. ಆದರೆ ಹೀಗೇ ಕೆಲಕಾಲ ಬುಡ್ಡೆಮ್ಮನೊಂದಿಗೆ ಬಾಳು ಮಾಡಿದ ಜಂಬಯ್ಯ ಬಡತನದ ಬಾಳು ಸಾಕಾಗಿ ಅವಳನ್ನು ಇನ್ನೊಬ್ಬ ಮುದುಕನಿಗೆ ಮಾರಾಟ ಮಾಡಲು ಅವನಿಂದ ಅಡ್ವಾನ್ಸ್ ಪಡೆದ. ಇದು ಕುರುಮಯ್ಯನಿಗೆ ಅಮಾನವೀಯ ಎನಿಸಿದರೂ ಏನೂ ಮಾಡಲಾರದಾದ. ಗಂಡಸರ ಬೇಜವಾಬ್ದಾರಿ ವರ್ತನೆಗೆ ಬೇಸತ್ತ ಬುಡ್ಡೆಮ್ಮ ತನ್ನ ಮಗುವನ್ನು ಕಟ್ಟಿಕೊಂಡು ಬಾವಿಗೆ ಹಾರಿಕೊಂಡು ಬಿಟ್ಟಳು. ಈ ಘಟನೆ ಕುರುಮಯ್ಯನ ಮೇಲೆ ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಯಜಮಾನ ಪಟ್ಟ ಕಲ್ಪಿಸಿಕೊಂಡ ಕುರುಮಯ್ಯ ಮನಸ್ಸಿಲ್ಲದ ಮನಸ್ಸಿನಿಂದ ಜಂಬಯ್ಯನನ್ನು ಅಂಕುಶದೊಡ್ಡಿಯಿಂದ ಬಹಿಷ್ಕರಿಸಿ ಬಿಡಲು ಅಪ್ಪಣೆ ಮಾಡಿದ. ಇಂಥ ಅನೇಕ ನ್ಯಾಯ ತೀರ್ಮಾನಗಳನ್ನು ನೀಡಬೇಕಾದ ಅನಿವಾರ್ಯತೆ ಅವನಿಗೆ.

ಇತರೇತರ ಸಮಾಜಗಳಲ್ಲಿರುವಂತೆ ಕೊರವ ಜನಾಂಗದಲ್ಲೂ ಹೆಣ್ಣನ್ನು ತುಚ್ಛವಾಗಿ ನಡೆಸಿಕೊಳ್ಳುವುದು, ದನಕುರಿಗಳನ್ನು ಮಾರಾಟ ಮಾಡುವಂತೆ ಅವಳನ್ನು ಮಾರಾಟ ಮಾಡುವುದೂ ನಡೆಯುತ್ತದೆ. ಇಂಥ ಸಾಮಾಜಿಕ ಕಳಂಕವನ್ನು ಅಂಟಿಸಿಕೊಂಡೇ ನಮ್ಮ ಪ್ರಜಾಪ್ರಭುತ್ವ ಮುಂದುವರಿಯುತ್ತಿದೆ. ಕುರುಮಯ್ಯನ ಹೆಂಡತಿ ಹನುಮವ್ವ ಬುಡ್ಡಮ್ಮನನ್ನು ಅವಳ ಎರಡನೇ ಗಂಡ ಜಂಬಯ್ಯ ಮಾರಾಟ ಮಾಡಲು ನಿಶ್ಚಯಿಸಿದಾಗ ಅರಚಾಟ, ಸಂಕಟವನ್ನು ನೋಡಿ ತಾಳಲಾರದೆ ಸಮಾಧಾನ ಮಾಡುವಾಗ ಹೇಳುವ ಮಾತುಗಳು ಪುರಾಣದ ಸೀತೆ, ದ್ರೌಪದಿಯ ಮಾತುಗಳಿಗೆ ಏನೇನೂ ಕಡಿಮೆ ಇಲ್ಲ. "ಹೆಂಗುಸಾಗಿ ಹುಟ್ಟಬಾರ್ದು; ಹುಟ್ಟಿದ್ರೆ ಸೈತ ಕೊರವರ ಮಂದ್ಯಾಗ ಹುಟ್ಟಬಾರ್ದು; ಯಾಕ ಹುಟ್ಟಿದನೋ, ಆ ದ್ಯಾವ್ರು....ಅವ್ನ ಗುಡಿಗೀಟು ಮಣ್ಣಾಕ ಕಲ್ಲಾಕ" (ಪು-83). ಹೆಣ್ಣಿನ ನೋವು ಹೀಗೆ ಪ್ರತಿಭಟನೆಯ ಸೊಲ್ಲಾಗಿ ಮನುಷ್ಯ ಕುಲವನ್ನೇ ಪ್ರಶ್ನಿಸುತ್ತದೆ, ದೈವವನ್ನೇ ಧಿಕ್ಕರಿಸುತ್ತದೆ. ಆ ಘಟನೆಗಳು ವಯೋವೃದ್ಧನೂ ಕುಲವೃದ್ಧನೂ ಆದ ನಮ್ಮ ಕುರುಮಯ್ಯನನ್ನು ಹಿಂಡುತ್ತವೆ. ಮಾರೆಪ್ಪ ತನಗಿಂತ ಹೀನನಾದ ಹೊಲೆ ಮಾದಿಗರ ಮನೆಯ ತಿಂದಿ ತಿಂದನೆಂಬ ದೂರಿನ ಕಾರಣಕ್ಕೆ ಯಜಮಾನ ಕುರುಮಯ್ಯ ಅವನನ್ನು ದಂಡಿಸಬೇಕಾಗುತ್ತದೆ.

ಜಲಪ್ರಳಯವಾದಾಗ ಅಂಕುಶದೊಡ್ಡಿ ಕೊಚ್ಚಿಕೊಂಡು ಹೋಗುತ್ತದೆ. ಆಗ ಆಶ್ರಯಕ್ಕೆ ಬೆಟ್ಟದ ಮೇಲಿನ ಶಂಭುಲಿಂಗೇಶ್ವರ ಸ್ವಾಮಿಯ ದೇವಾಲಯ ಹೊಕ್ಕರು. ದೈವಕ್ಕೆ ಮೈಲಿಗೆಯಾಯಿತೆಂದು ಕುಲೀನರು ಹಾಹಾಕಾರ ಹಾಕಿ ಕೊರವರು ಆ ಪರಿಸರದಿಂದಲೇ ದೂರ ಹೋಗುವಂತೆ ಹುನ್ನಾರ ಮಾಡಿದರು. ಅಷ್ಟರಲ್ಲಿ ದುಡಿದು ಹಾಕುತ್ತಾನೆಂದು ನಂಬಿ ನಗರದಲ್ಲಿ ಓದಿಸಲು ಕಳುಹಿಸಿದ್ದ ಒಬ್ಬನೇ ಮಗ ಕ್ರಿಶ್ಚಿಯನ್ ಹುಡುಗಿಯನ್ನು ಕಟ್ಟಿಕೊಂಡು ಮುಂಬೈಗೆ ಹೋದನೆಂಬ ಸುದ್ದಿ ಬರುತ್ತದೆ. ಅಂತೂ ಕುರುಮಯ್ಯ ಮತ್ತು ಹನುಮವ್ವ ಇವರ ಬದುಕಿನ ಬವಣೆ ತಪ್ಪುವ ಕುರುಹುಗಳೇ ಇಲ್ಲವಾಗುತ್ತದೆ.

ಕುರುಮಯ್ಯನ ವೈಯಕ್ತಿಕ ದುರಂತದೊಂದಿಗೆ ಕೊರವರ ಸಮಾಜವೂ ವಿಘಟಿತವಾಗುತ್ತ ಹೋಗುತ್ತದೆ. ಮೇಲುಜಾತಿಯ ಫ್ಯೂಡಲ್ ಸ್ವಭಾವನ ಜನ ಬಡ ಕೊರವರ ಒಗ್ಗಟ್ಟನ್ನು ಒಡೆದು ಅವರು ಅಂಕುಶದೊಡ್ಡಿಯಿಂದ ಕಾಲು ತೆಗೆಯುವಂತೆ ಕರಾಮತ್ತು ಮಾಡುತ್ತಾರೆ. ಭ್ರಷ್ಟ ರಾಜಕಾರಣದ, ತುಚ್ಛ ಜಾತೀಯತೆಯ ಚದುರಂಗದಾಟದಲ್ಲಿ ಕೊರವ ಜನ ಕುದುರೆ ಕಾಲ ಲಾಳಗಳಂತೆ ಉದುರುದುರಿ ಹೋಗುತ್ತಾರೆ. ಕುಶಾಲಪ್ಪ ಮತ್ತು ಸಂಶಾಲಪ್ಪ ಇವರ ಮಧ್ಯೆ ಬೆಳೆಯುವ ದಾಯಾದಿ ಮತ್ಸರ, ರಾಜಕೀಯ ಇಬ್ಬಂದಿತನ ಹಾಗೂ ಸ್ವಾರ್ಥ ಸಾಧಕ ಬುದ್ಧಿ ಕೊರವರ ಅಸ್ತಿತ್ವವನ್ನೇ ಹಾಳುಗೆಡುವುತ್ತದೆ. ಇವರಿಬ್ಬರ ಕಡೆಯ ಆಳುಕಾಳುಗಳ ಜಗಳ ಪೈಪೋಟಿಗಳು ನೆಮ್ಮದಿಯಾಗಿದ್ದ ಅಂಕುಶದೊಡ್ಡಿಗೆ ಶಾಂತಿಭಂಗ ತರುತ್ತದೆ. ಜೋಳದ ಸುಗ್ಗಿಯಲ್ಲಿ ಸೊಪ್ಪೆ ಕಾಳು ಕೂಡಿಸಿಕೊಳ್ಳಲು ಹೋದ ಕೊರವರನ್ನು ಕುಶಾಲಪ್ಪನ ಕಡೆಯ ಬಾಡಿಗೆ ಬಂಟರು ಕೊಳ್ಳೆ ಹೊಡೆದು ದನಗಳಿಗೆ ಬಡಿದಂತೆ ಬಡಿದುಹೋಗುತ್ತಾರೆ. ಇದಕ್ಕೆಲ್ಲ ಕಾರಣ ಹಂದಿಗೊಬ್ಬರವನ್ನು ತನಗೆ ಬಿಟ್ಟು ಸಂಶಾಲಪ್ಪನಿಗೆ ಇವರು ಹೆಚ್ಚು ಬೆಲೆಗೆ ಮಾರಿಕೊಂಡರು ಎಂಬುದಾಗಿರುತ್ತದೆ. ಹೆಚ್ಚು ಬೆಲೆ ಸಿಗುವ ಕಡೆ ತಮ್ಮ ಗೊಬ್ಬರವನ್ನು ಮಾರಲೂ ಇವರಿಗೆ ಸ್ವಾತಂತ್ರ್ಯವಿಲ್ಲ. ಸಾಲಕ್ಕೆ ಬಡ್ಡಿಗೆ ಅವರ ದುಡಿಮೆ ಸಾಲದಾಗುತ್ತದೆ.

ಟಿ.ಡಿ.ಬಿ.ಯ ಅಧ್ಯಕ್ಷ ಯಂಕನಗೌಡ ಮತ್ತು ಸಂಶಾಲಪ್ಪ ಇವರ ಕೈಮೇಲಾಗುತ್ತ ಹೋಗುವುದು; ಎಂ.ಎಲ್.ಎ. ಚುನಾವಣೆಯಲ್ಲಿ ಸಂಶಾಲಪ್ಪ ಕೊರವರ ಓಟಿನ ಮೇಲೆ ನಿಗಾಇಟ್ಟು 'ಗೆದ್ದು ಬಂದರೆ ಜನತಾ ಮನೆಗಳನ್ನು ಕಟ್ಟಿಸಿ ಕೊಡುತ್ತೇನೆ' ಎಂದು ಆಶ್ವಾಸನೆ ಕೊಡುವುದು; ಹೆಂಡದಂಗಡಿಗೆ ಪ್ರಶಸ್ತವಾದ ಸ್ಥಳ ಅಂಕುಶದೊಡ್ಡಿ ಎಂಬುದನ್ನು ಅರಿತ ಇವರಿಬ್ಬರು ಕೊರವರನ್ನು ಅಲ್ಲಿಂದ ಸ್ಥಳಾಂತರಿಸಲು ಮಾಡುವ ಉಪಾಯವೆಂದರೆ ಶಂಭುಲಿಂಗೇಶ್ವರ ಸ್ವಾಮಿಯ ಅವಕೃಪೆಗೆ ಪಾತ್ರರಾದ ಈ ಕೊರವರು ಇಲ್ಲಿಂದ ದೂರಹೋಗಲೇಬೇಕೆಂಬುದು. ರೋಗ ಬಂದು ಹಂದಿ ಸಾಯುವುದು ಮತ್ತು ಮುನಿಸಿಪಾಲಿಟಿಯವರು ಉಳಿದ ಹಂದಿಗಳಿಗೆ ಕಂಡಲ್ಲಿ ಗುಂಡಿಡುವುದು ಮುಂತಾದ ಅವಘಡಗಳ ಕಾರಣ ಕೊರವರ ಬದುಕು ಕಂಗಾಲಾಗಿ ಹೋಗುತ್ತದೆ. ತಾವೇ ಕಷ್ಟಬಿದ್ದು ತೋಡಿದ ಝರಿ ಬೆಟ್ಟದ ಬಾವಿಯಿಂದ ನೀರು ಕುಡಿಯಲೂ ಅವರಿಗೆ ಅದೃಷ್ಟವಿಲ್ಲದೆ ದೂರ ಹೋಗಬೇಕಾಗಿ ಬಂದ ಸಂದರ್ಭದಲ್ಲಿ ಕುರುಮಯ್ಯ ಬೆಟ್ಟದ ಲಿಂಗೇಶ್ವರ ದೇವರನ್ನು ಕುರಿತು ರೋಷದಿಂದ ವಿಕಂಪಿಸಿ ಹೇಳುವ ಮಾತು ಶತಶತಮಾನದಿಂದ ತುಳಿತಕ್ಕೆ ಅವಮಾನಕ್ಕೆ ಒಳಗಾದವರ ಯಾತನೆಯನ್ನು, ಸಿಟ್ಟನ್ನು, ಮುದುಗಟ್ಟ ಧ್ವನಿಸುತ್ತದೆ. "ಅಲೆ! ಬೆಟ್ಟದ ಮ್ಯಾಗಿನ ಈಶ್ವರ ದ್ಯಾವ್ರೇ... ಮೇಲ್ಜಾತಿ ಮಂದೆಲ್ಲ ನಿನ್ನ ಹೆಣ್ಮಕ್ಕಳೇನು? ನಾವೆಲ್ಲ ಮಿಂದ್ರುಗುಟ್ಟಿದ ಮಕ್ಕಳೇನು? ಬೊಗಳಿಸ್" (ಪು-136) ಎಂದು ಅತ್ತ ಕಾಲೆತ್ತಿ ಕಲ್ಲುಬೀಸಿ ಒಗೆಯುವುದು ಬಡವರ ಒಡಲಿನ ಪ್ರತಿಭಟನೆಯ ಸಂಕೇತವಾಗಿದೆ. ಕುರುಮಯ್ಯನ ಆವೇಶ ಕಂಡು ಜನ ದಂಗಾಗಿಹೋಗುತ್ತಾರೆ.

ಈಚೆಗೆ ಕೊರವರಿಗೆ ಹಂದಿಗಳಿಂದ ಬರುವ ಆದಾಯವೂ ಇಲ್ಲದೆ ಹೊಟ್ಟೆಪಾಡಿಗಾಗಿ ಅಂಕುಶದೊಡ್ಡಿಯ ಅಜುಬಾಜಿನಲ್ಲಿದ್ದ ಈಚಲ ಗರಿ ಕಡ್ಡಿಗಳನ್ನು ತಂದು ಚಾಪೆ, ಬುಟ್ಟಿ, ತಟ್ಟಿ ನೇಯ್ದು ಹೊಟ್ಟೆ ಹೊರೆಯುವುದಕ್ಕೂ ನಿರ್ಬಂಧವೇರ್ಪಟ್ಟಿತು. ಹೆಂಡದ ಗುತ್ತಿಗೆದಾರರು ಈಚಲ ಮರಗಳನ್ನು ಮುಟ್ಟಬಾರದೆಂದು ಕಟ್ಟಪ್ಪಣೆ ಮಾಡಿದರು. ತಾನೇತಾನಾಗಿ ಬೆಳೆದು ಅನಾದಿಕಾಲದಿಂದ ದೀನದಲಿತರ ಆಶ್ರಯ ಸಸ್ಯಗಳಾಗಿದ್ದ ಈಚಲ ಮರಗಳು ಮಾಮಲೆದಾರ ಯಂಕನಗೌಡನ ಖಾಸಗಿ ಆಸ್ತಿ ಎಂಬಂತಾದವು. ಸಾಮಾಜಿಕ ಆಸ್ತಿಯಾಗಿದ್ದ ಸಸ್ಯ ಪರಿಸರ ಹೀಗೆ ಗುತ್ತಿಗೆದಾರರ ಒಡೆತನಕ್ಕೆ ಒಳಪಡುವ ಸಾಮಾಜಿಕ ಸ್ಥಿತ್ಯಂತರಕ್ಕೆ ಇಲ್ಲಿಯ ಈಚಲ ವನವೇ ಸಾಕ್ಷಿ. ಕಡೆಗೆ ಸಾಲುಬೆಟ್ಟಗಳ ಕಾಡು ಪ್ರದೇಶದಲ್ಲಿ ಬೀಡು ಬಿಟ್ಟ ಕೊರವರು ತುತ್ತುಹಿಟ್ಟಿಗೂ ಗತಿಕೆಟ್ಟು ಉಳ್ಳವರ ಮನೆ ಎದುರು ಕೈಯೊಡ್ಡಿ ನಿಲ್ಲುವ ದುಃಸ್ಥಿತಿಗೆ ಬಂದಿಳಿದರು. ಹೆಣ್ಣು ಮಕ್ಕಳು ಮೈಮಾರಿಕೊಂಡು ಸಂಸಾರ ನಿರ್ವಹಿಸುವ ಸ್ಥಿತಿಗೆ ಬಂದರು. ಇಂಥ ಹೊತ್ತಿನಲ್ಲಿ ನೋಟು ಚೆಲ್ಲಿ ಓಟು ಪಡೆದು ಗೆದ್ದ ಎಂ.ಎಲ್.ಎ. ಸಂಶಾಲಪ್ಪನ ಮೆರವಣಿಗೆಯಲ್ಲಿ ಜರ್ಝರಿತ ದೇಹದ ವೃದ್ಧ ಕುರುಮಯ್ಯ ಬಿಜಲಿ ಹೊರುವುದಕ್ಕೆ ಹೋಗಿ ಕುಸಿದು ಬೀಳುತ್ತಾನೆ. ದವಲ್ಯಾ ಎಂಬುವನ ಹನ್ನೆರಡು ವರ್ಷದ ಹುಡುಗ "ತಾತಯ್ಯ ತಾತಯ್ಯಾ..... ನಾನು ಬೆಳಕು ಮುಟ್ಟಿಸಿ..... ಬರ್ತೀನಿ .... ನೀನು ಇಲ್ಲೆ ಕುಂತ್ಗ" (ಪು-149) ಎಂದು ಸಮಾಧಾನ ಹೇಳಿ ಬಿಜಲಿ ಹೊತ್ತು ಮುಂದೆ ಸಾಗುತ್ತಾನೆ. ಆದರೆ ಬೆಳಕು ಹೊತ್ತವರು ಯಾರೆಂದು ಗೊತ್ತಾಗುವುದೇ ಇಲ್ಲ. ಯಾಕೆಂದರೆ ಬೆಳಕು ಹೊತ್ತವರು ಬೆಳಕಿನಡಿಯ ಕತ್ತಲಲ್ಲಿ ಕಾಣದೆ ಹೋಗುತ್ತಾರೆ. ಜೀತಚಕ್ರ ಕೊರವರ ಬದುಕಿನಲ್ಲಿ ಮತ್ತೊಂದು ಸುತ್ತು ಸುತ್ತಿ ಬರುತ್ತದೆ. ಹಾಗಾದರೆ ಇವರಿಗೆ ಈ ಬವಣೆಯಿಂದ ಮುಕ್ತಿ ಇಲ್ಲವೆ? ಎಂಬ ಪ್ರಶ್ನೆ ಹಾಗೆ ಉಳಿಯುತ್ತದೆ.

ಬಂಡಾಯ ಸಾಹಿತಿ ಜಂಬಣ್ಣ ಅಮರಚಿಂತರ ಮಹತ್ವದ ಕಾದಂಬರಿ ಕುರುಮಯ್ಯ ಮತ್ತು ಅಂಕುಶದೊಡ್ಡಿ, ದಶಕಗಳ ಹಿಂದೆ ರಚಿತವಾದ ಹೈದರಾಬಾದ್-ಕರ್ನಾಟಕದತ್ತಣ ಬದುಕಿನ ದಟ್ಟ ಚಿತ್ರವನ್ನು ಅದರ ಮೂಲ ಲೇಖಕರ ಆಶಯಕ್ಕನುಗುಣವಾಗಿ ವರಾಹ ಪುರಾಣ ನಾಟಕದಲ್ಲಿ ದೃಶ್ಯೀಕರಿಸಲಾಗಿದೆ. ಕಾದಂಬರಿಯನ್ನು ನಾಟಕ ರೂಪಕ್ಕೆ ಅಳವಡಿಸಿ ಸಮರ್ಥವಾಗಿ ನಿರ್ದೇಶಿಸಿದ್ದಾರೆ ಸಿದ್ಧರಾಮ ಕೊಪ್ಪರ್. ಹಾಗಾಗಿ ಇದರಿಂದ ರೂಪಾಂತರ ನಾಟಕ ತಂಡವು ರಂಗಭೂಮಿಗೆ ಇನ್ನೊಬ್ಬ ನಿರ್ದೇಶಕನ ಅನ್ವೇಷಣೆ ಮಾಡಿಕೊಟ್ಟಂತಾಯಿತು. ವೃತ್ತಿಯಲ್ಲಿ ನಗರ ಸಾರಿಗೆ ಬಸ್ ಕಂಡಕ್ಟರಾದ ಸಿದ್ಧರಾಮ ಪ್ರವೃತ್ತಿಯಲ್ಲಿ ರಂಗಭೂಮಿ ಪ್ರಿಯ. ಕೊಪ್ಪರ್ ಈಗಾಗಲೇ ನೇಪಥ್ಯ ಕಲಾವಿದನಾಗಿ ಹೆಸರಾದವರು. ಕೆ.ವೈ.ನಾರಾಯಣಸ್ವಾಮಿಯವರ ಚಕ್ರರತ್ನ ನಾಟಕಕ್ಕೆ ನಿರ್ಮಿಸಿದ ಬಾಹುಬಲಿ ಪ್ರತಿಮೆ ಈತನ ಯುವ ಪ್ರತಿಭೆಗೆ ಮುನ್ನುಡಿ ಬರೆಯಿತು. ಪ್ರಸ್ತುತ ಕಲಾಗ್ರಾಮದ ರಂಗಗೃಹ ಕಿಕ್ಕಿರಿದು ತುಂಬಿರುವುದನ್ನು ಕಂಡರೆ ಸಾಮಾಜಿಕ ನ್ಯಾಯ ಬದ್ಧತೆಯ ನಾಟಕಗಳನ್ನು ಜನ ಪ್ರೋತ್ಸಾಹಿಸುತ್ತಾರೆ ಎಂದಾಯಿತು.

ಭೂಮಿಕೆಯಲ್ಲಿರುವ ಸೂರ್ಯಕಾಂತ ಗುಣಕಿಮಠ (ಕುರುಮಯ್ಯ), ಮಹೇಶ್. ಟಿ.ಆರ್. (ಜಂಬಯ್ಯ), ಮಹದೇವ್/ಯಶವಂತ್ (ಮಾರೆಪ್ಪ), ಸಿತಾರ/ರಶ್ಮಿ (ಹನುಮಕ್ಕ), ರವಿಕಿರಣ್ (ದವಲಪ್ಪ), ಅಜಯಕುಮಾರ್ (ಸಂಶಾಲಪ್ಪ), ತೇಜಸ್/ವಾದಿರಾಜ್ (ಕುಶಾಲಪ್ಪ), ಮಹಾಲಕ್ಷ್ಮಿ (ಬುಡ್ಡಮ್ಮ), ಮುಂತಾಗಿ ಎಲ್ಲ [illegible] ರೀತಿಯಲ್ಲಿ ಅಭಿನಯ ನೀಡಿರುತ್ತಾರೆ. [illegible] ಸೊಗಡು. ಸಿರಿವಂತಿಕೆ [illegible] ಹೋಗುವಂತಹುದು. ರಾಮಚಂದ್ರ ಹಡಪದ ಸಂಗೀತದ [illegible] ಇಂಥ ನಾಟಕಗಳಿಗೆ ಒಪ್ಪುವಂತದ್ದು. ಉಳಿದಂತೆ ವಸ್ತ್ರಾಲಂಕಾರ, [illegible] ಮುಂತಾಗಿ ನೇಪಥ್ಯದಲ್ಲಿ ದುಡಿದವರನ್ನೂ ನೆನೆಯಬೇಕು. ಒಟ್ಟಾರೆ ವರಾಹ ಪುರಾಣ ಒಂದು ಯಶಸ್ವೀ ಪ್ರಯೋಗ. ನಿರ್ದೇಶಕನಿಗೆ ಒಳ್ಳೆ ಭವಿಷ್ಯವಿದೆ ●

ಭಗವದ್ಗೀತೆ ಸ್ತ್ರೀ ವೈಶ್ಯ ಶೂದ್ರ ದ್ವೇಷಿ ಗ್ರಂಥ

ಭಾರತ ಸರ್ಕಾರದ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರು ಭಗವದ್ಗೀತೆ ಭಾರತದ ರಾಷ್ಟ್ರೀಯ ಧರ್ಮಗ್ರಂಥವಾಗಬೇಕು (08-12-2014) ಎಂದು ಹೇಳಿದ್ದರಿಂದ ಚರ್ಚೆ ಶುರುವಾಗಿದೆ. ಸಂಸತ್ತಿನಲ್ಲಿ ಆಡಳಿತೇತರ ಪಕ್ಷಗಳಿಗೆ ಸೇರಿದ ಕೆಲವು ಸಂಸದರು ಈ ಹೇಳಿಕೆಯನ್ನು ಖಂಡಿಸಿದ್ದಾರೆ. ಮಾಧ್ಯಮಗಳಲ್ಲಿ ಮಾತುಕತೆ ಈ ಬಗ್ಗೆ ನಡೆಯುತ್ತಿದೆ. ಆದರೆ ಯಾರೂ ಗೀತೆಯಲ್ಲಿ ಏನಿದೆ? ಅದು ಇರುವುದು ಯಾರ ಪರ ಅಥವಾ ವಿರುದ್ಧ? ಎಂಬುದರ ಕಡೆ ಗಮನ ಹರಿಸಿಲ್ಲ.

ಎಂಟನೆಯ ಶತಮಾನದಲ್ಲಿ ಶಂಕರಾಚಾರ್ಯ, ಹನ್ನೊಂದನೆಯ ಶತಮಾನದಲ್ಲಿ ರಾಮಾನುಜಾಚಾರ್ಯ ಮತ್ತು ಹದಿಮೂರನೆಯ ಶತಮಾನದಲ್ಲಿ ಮಧ್ವಾಚಾರ್ಯ ವ್ಯಾಖ್ಯಾನ ಬರೆದಿದ್ದರಿಂದ ಭಗವದ್ಗೀತೆ ಪ್ರಚಾರವಾಗತೊಡಗಿತು. ಆದರೆ ಹಳ್ಳಿಗಾಡಿನ ಜನರಿಗೆ ಇದೇನು ಅಂತ ಇವತ್ತಿಗೂ ಗೊತ್ತಿಲ್ಲ.

ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿವೆ. ಒಟ್ಟು ಏಳು ನೂರು ಶ್ಲೋಕಗಳಿವೆ. ಮೊದಲು ಮುನ್ನೂರು ಶ್ಲೋಕಗಳಿದ್ದವು. ಆಮೇಲೆ ಉಳಿದ ಶ್ಲೋಕಗಳನ್ನು ರಚಿಸಿ ಸೇರಿಸಲಾಯಿತು. ಇದು ಮೂರು ಹಂತಗಳಲ್ಲಿ ಈಗಿನ ರೂಪಕ್ಕೆ ಬಂತು ಎಂದು ಸಂಶೋಧನೆಗಳಲ್ಲಿ ವಾದವಿವಾದ ಇವೆ.


'ಭಗವದ್ಗೀತೆ' ರಚನೆ ಆಗಿದ್ದು ಸುಮಾರು ಕ್ರಿಸ್ತಶಕ ಮೂರನೆಯ ಶತಮಾನದಲ್ಲಿ ಎಂಬುದು ಸ್ವದೇಶಿ ಮತ್ತು ವಿದೇಶಿ ವಿದ್ವಾಂಸರ ಸಾಮಾನ್ಯ ಅಭಿಪ್ರಾಯ. ಕ್ರಾಂತಿಕಾರಕ ಬುದ್ಧಧಮ್ಮ ಉಚ್ಛ್ರಾಯ ಸ್ಥಿತಿಗೇರಿ ಆ ಹೊತ್ತಿಗೆ ಇಳಿಮುಖವಾಗುತ್ತಿತ್ತು. ಬುದ್ಧ ಸೈದ್ಧಾಂತಿಕವಾಗಿ ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ (ನೋಡಿ: ಅಸ್ಸಲಾಯನ ಸುತ್ತ, ವಸೆತ್ತ ಸುತ್ತ, ಈಸುಕರಿ ಸುತ್ತ), ತನ್ನ ಸಂಘ ವ್ಯವಸ್ಥೆಯಲ್ಲಿ ಅದನ್ನು ಇಲ್ಲದಂತೆ ಮಾಡಿದ್ದನು. ಬೌದ್ಧರ ಜನಸಂಖ್ಯೆ ಮೂರನೇ ಎರಡು ಭಾಗದಷ್ಟು ಇತ್ತು. (2014 ರ ಏಪ್ರಿಲ್ ಮೇ ತಿಂಗಳ ಸಂಸತ್ ಚುನಾವಣೆಯಲ್ಲಿ ಭಾಜಪ ಪಡೆದ ಒಟ್ಟು ಮತ ಶೇಕಡ 31. ಅಂದರೆ ಭಾರತ ಇಂದಿಗೂ ಸುಪ್ತವಾಗಿ ಬುದ್ಧಮಯವಾಗಿದೆ ಎಂದು ಅರ್ಥ, ಅಲ್ಲವೆ?) ಬೌದ್ಧ ಸಂಘದಲ್ಲಿ ಈ ದೇಶದ ಎಲ್ಲ ಜನರು ಪಾಲ್ಗೊಂಡು ಭಾರತವನ್ನು ಅತ್ಯಂತ ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿದ್ದರು. ಇದನ್ನು ಸಹಿಸದ ವೈದಿಕ ಮತಾಂಧತೆ ಸಂಘವನ್ನು ನಾಶ ಮಾಡಲು ಸನ್ನಾಹ ನಡೆಸುತ್ತಿತ್ತು. ಪ್ರತಿ ಕ್ರಾಂತಿಗೆ ಪ್ರಣಾಳಿಕೆಯಾಗಿ ಭಗವದ್ಗೀತೆ ಸೃಷ್ಟಿಯಾಯಿತು. ಇದಕ್ಕೆ ಪುರಾವೆಯಾಗಿ 'ನಿರ್ವಾಣ' ಪದ ಗೀತೆಯಲ್ಲಿ ಪದೇ ಪದೇ (2. 72; 5. 24-26) ಬಳಕೆಯಾಗಿರುವುದು ಕಾಣುವುದು. ಗೀತೆಗಿಂತ ಹಿಂದಿನ ಬ್ರಾಹ್ಮಣ ಮತ ಗ್ರಂಥಗಳಲ್ಲಿ 'ನಿರ್ವಾಣ' ಶಬ್ಧ ಪ್ರಯೋಗವಾಗಿರುವುದು ಕಾಣುವುದಿಲ್ಲ. (ಈ ವಿಷಯವಾಗಿ ಬಲ್ಲವರು ತಿಳಿಸಿದರೆ ಕೃತಜ್ಞತೆಯಿಂದ ಈ ಅಭಿಪ್ರಾಯ ತಿದ್ದಿಕೊಳ್ಳುತ್ತೇನೆ.) ಬುದ್ಧಧಮ್ಮದಲ್ಲಿ 'ನಿರ್ವಾಣ' ಆಧ್ಯಾತ್ಮಿಕ ಅನುಭವದ ಅತ್ಯುನ್ನತ ಸ್ಥಿತಿ ಎಂಬುದು ಗೊತ್ತಿರುವ ವಿಚಾರ.

ಭಗವದ್ಗೀತೆ ರಚನೆಯ ಮನಸ್ಸು ಬಹಳ ಹಿಕಮತ್ತಿನಿಂದ ಕೂಡಿದೆ. ಇದನ್ನು ಹೇಳುವವನು ಕೃಷ್ಣ ಕೇಳುವವನು ಅರ್ಜುನ, ಬರೆಯುವವನು ವ್ಯಾಸ - ಮೂವರೂ ಅಬ್ರಾಹ್ಮಣರು. ಕೃಷ್ಣ ಗೊಲ್ಲ (ಯಾದವ), ಅರ್ಜುನ ಕ್ಷತ್ರಿಯ, ವ್ಯಾಸ ಬೆಸ್ತ (ಮೀನುಗಾರ್ತಿಯ ಮಗ). ವ್ಯಾಸ ಎಂದರೆ ಒಬ್ಬನೇ ವ್ಯಾಸ ಅಲ್ಲ. ಪರಂಪರೆಯಲ್ಲಿ ಇಪ್ಪತ್ತೊಂಬತ್ತು ವ್ಯಾಸರಿದ್ದಾರೆ, ಮುಂದೆ ವ್ಯಾಸನಾಗುವ ಚಿರಂಜೀವಿ ಅಶ್ವತ್ಥಾಮ ಸೇರಿದಂತೆ. ನಾಲ್ಕು ವೇದಗಳನ್ನು ವರ್ಗೀಕರಿಸಿದ ವ್ಯಾಸ, ಹದಿನೆಂಟು ಪುರಾಣಗಳು, ಹದಿನೆಂಟು ಉಪಪುರಾಣಗಳು, ಬ್ರಹ್ಮಸೂತ್ರಗಳು, ಮಹಾಭಾರತ, ಭಗವದ್ಗೀತೆ ಇಷ್ಟೆಲ್ಲವನ್ನು ಬರೆದ ವ್ಯಾಸ ಒಬ್ಬನೇ ಅಲ್ಲ. ಇವು ಅನೇಕ ಶತಮಾನಗಳಲ್ಲಿ ಆಗಿರುವ ಕೆಲಸ. ವ್ಯಾಸ ಎಂಬುದು ಒಂದು ಪದವಿ: ಪ್ರಾಂಶುಪಾಲ, ಉಪಕುಲಪತಿ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಎನ್ನುವ ಹಾಗೆ.) ವ್ಯಾಸ ಹೆಸರಿನ ಈ ಬರಹಗಾರರಿಗೆ ಸಂಖ್ಯೆ ಹದಿನೆಂಟರ ಮೇಲೆ ಏನೋ ಮೋಹ ಅಥವಾ ಆಕರ್ಷಣೆ ಇರುವಂತೆ ಕಾಣುತ್ತದೆ. ಮಹಾಭಾರತದಲ್ಲಿ ಹದಿನೆಂಟು ಪರ್ವಗಳು, ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳು, ಕುರುಕ್ಷೇತ್ರ ಯುದ್ಧ ನಡೆದದ್ದು ಹದಿನೆಂಟು ದಿನಗಳು, ಹದಿನೆಂಟು ಪುರಾಣಗಳು, ಹದಿನೆಂಟು ಉಪ ಪುರಾಣಗಳು-ಹೀಗೆ ಹದಿನೆಂಟರ ಸಂಖ್ಯೆ ಪ್ರಧಾನವಾಗಿದೆ. ಮೇಲು ನೋಟಕ್ಕೆ ಗೀತೆ ವೈದಿಕರ ಕೃತಿಯಲ್ಲ ಎಂಬ ಭ್ರಮೆ ಉಂಟಾಗುವುದು ಸಹಜ. ಆದರೆ ಗೀತೆಯಲ್ಲಿ ತುಂಬಿರುವುದೆಲ್ಲ ಬ್ರಾಹ್ಮಣ ಮತವೇ ಹೊರತು ಬೇರಾವುದೂ ಅಲ್ಲ. ವ್ಯಾಸ ಎಂಬ ಹೆಸರಿನಲ್ಲಿ ಬ್ರಾಹ್ಮಣ ಮತಾಂಧನಾದ ಮಹಾಬ್ರಾಹ್ಮಣ ಬರೆದ ಕೃತಿ ಭಗವದ್ಗೀತೆ. ಗೀತೆಯಲ್ಲಿ ಸಾಂಖ್ಯ ಸಿದ್ಧಾಂತ, ಕರ್ಮ, ಭಕ್ತಿ, ಧ್ಯಾನ, ಸಂನ್ಯಾಸ ಇತ್ಯಾದಿಗಳೆಲ್ಲ ಇವೆ. ಆದರೆ ಇವೆಲ್ಲ ಚರ್ಚೆಗೆ ಮಾತ್ರ ಬರುತ್ತವೆ. ಈ ಪಂಥೀಯರಿಗೆ ನಮ್ಮ ತತ್ವಗಳೂ ಇದರಲ್ಲಿ ಸೇರಿವೆ ಎಂಬ ಸಮಾಧಾನ ಕೊಡುತ್ತದೆ ಗೀತೆ. ಕೊನೆಗೆ ಗೀತೆಯಲ್ಲಿ ಮನ್ನಣೆ ದಕ್ಕಿರುವುದು ಚಾತುರ್ವರ್ಣವನ್ನು ಪ್ರತಿಪಾದಿಸುವ ಮಾನ್ಯ ಮಾಡುವ ಜಾರಿಗೊಳಿಸುವಂಥ ವೈದಿಕ ಧರ್ಮಕ್ಕೆ ಮಾತ್ರ ಎಂಬುದರಲ್ಲಿ ಯಾವುದೇ ಸಂಶಯವೂ ಉಳಿಯುವುದಿಲ್ಲ.

ಬುದ್ಧನ ಕ್ರಾಂತಿಕಾರಿ ಚಳವಳಿ ಜಾತಿಯ ಅಮಾನುಷತೆ ಮತ್ತು ಕ್ರೌರ್ಯಗಳನ್ನು ಚೆನ್ನಾಗಿ ಅಳಿಸಿಹಾಕಿತ್ತು. ಜಾತಿ ಅಪ್ರಸ್ತುತ, ಎಲ್ಲ ಮಾನವರೂ ಒಂದೇ ಸಮಾನ ಎಂಬ ಮನೋಧರ್ಮವನ್ನು ರೂಢಿಗೆ ತಂದಿದ್ದು ಬುದ್ಧ ಸಂಸ್ಕೃತಿಯ ಮಹಾ ಸಾಧನೆ.

ಜಾತಿ ವ್ಯವಸ್ಥೆಯನ್ನು ಭಗವದ್ಗೀತೆ ಏಕೆ ಇಷ್ಟೊಂದು ಪ್ರಬಲವಾಗಿ ಪ್ರತಿಪಾದಿಸುತ್ತದೆ ಎಂದರೆ ಅದಕ್ಕೆ ಐತಿಹಾಸಿಕ ಮತ್ತು ಸಾಮಾಜಿಕ ಕಾರಣಗಳಿವೆ. ಭಗವದ್ಗೀತೆ ಪ್ರಾರಂಭವಾಗುವುದೇ ಕುಲಕ್ಷಯ (1. 38-40 ಜಾತಿ ನಾಶ), ವರ್ಣಸಂಕರ(1. 41-44 ಜಾತಿ ಬೆರಕೆ)ಗಳನ್ನು ತಡೆಗಟ್ಟುವುದಕ್ಕಾಗಿ. (2. 38-44) ಕುಲಕ್ಷಯ ಮತ್ತು ವರ್ಣಸಂಕರಗಳನ್ನು ತಡೆಯಬೇಕೆಂದು ಅರ್ಜುನ ನಾನು ಯುದ್ಧ ಮಾಡುವುದಿಲ್ಲ (2. 46-7) ಎಂದು ಕೃಷ್ಣನಿಗೆ ಹೇಳಿ ಬಿಲ್ಲುಬಾಣಗಳನ್ನು ರಥದಲ್ಲಿ ಹಾಕಿ ಕುಳಿತುಕೊಳ್ಳುತ್ತಾನೆ.

ಸ್ವತಃ ಅರ್ಜುನನೇ ಅಲ್ಲದೆ ಪಾಂಡವರೆಲ್ಲ ವರ್ಣಸಂಕರದಿಂದ ಹುಟ್ಟಿದವರು ಎಂಬುದನ್ನು ಮರೆಯಬಾರದು. ದೇವತೆಗಳೆಂಬ ಜನಾಂಗದ ವೀರರ ಜೊತೆ ಕುಂತಿ ಮತ್ತು ಮಾದ್ರಿಯರು ಬೆರೆತದ್ದರಿಂದಲೇ ಪಾಂಡವರು ಹುಟ್ಟಿದ್ದು. ಹಾಗಾಗಿ ಹೊಸ ರಕ್ತ ಸಂಬಂಧದಿಂದ ಸಂತಾನ ಶಕ್ತಿಯುತವಾಯಿತು. ಪಾಂಡವರು



ವೀರಾಧಿವೀರರಾದರು.

ರೈತರು ಬೆಳೆ ಮಾಡುವಾಗ ಈ ವರ್ಷ ಹಾಕಿದ ಜಮೀನಿಗೆ ಅದೇ ಬೆಳೆಯನ್ನು ಮರು ವರ್ಷ ಹಾಕುವುದಿಲ್ಲ, ಏಕೆಂದರೆ ಬೆಳೆ ಚೆನ್ನಾಗಿ ಬೆಳೆಯುವುದಿಲ್ಲ, ಫಸಲು ಹುಲುಸುವುದಿಲ್ಲ ಎಂದು ವೈಜ್ಞಾನಿಕ ಕಾರಣ ಕೊಡುತ್ತಾರೆ. ಒಂದೇ ಜನಾಂಗದೊಳಗೆ ಮದುವೆ ಸಂಬಂಧಗಳು ನಡೆದರೆ ಮಕ್ಕಳು ಪಾಂಡುವಿನಂತೆ ನಪುಂಸಕರು, ಧೃತರಾಷ್ಟ್ರನಂತೆ ಕುರುಡರೂ ಆಗಬಹುದು. ಇಂಥ ವೈಜ್ಞಾನಿಕ ಸತ್ಯವನ್ನೇ ಗೀತೆ ತಿರಸ್ಕರಿಸುತ್ತದೆ. ಆದ್ದರಿಂದ ಗೀತೆ ಮಾನವ ವಿರೋಧಿ ಗ್ರಂಥ.

ಗೀತೆಯ ಮುಂದಿನ ಮಾತು ಬಹಳ ಪ್ರಖ್ಯಾತವಾಗಲು ಮಹಾತ್ಮ ಗಾಂಧೀಜಿ ಅವರ ಪ್ರಚಾರ ಕಾರಣ ಎನ್ನಬೇಕು.

ಕರ್ಮಣ್ಯೇವ ಅಧಿಕಾರಃ ತೇ ಮಾ ಫಲೇಷು ಕದಾಚನ
ಮಾ ಕರ್ಮಫಲ ಹೇತುಃ ಭೂಃ ಮಾ ತೇ ಸಂಗಃ
ಅಸ್ತು ಅಕರ್ಮಣಿ. (2. 47.)

"ಕರ್ಮ ಮಾಡುವುದಕ್ಕೆ ನಿನಗೆ ಅಧಿಕಾರ, ಕರ್ಮಫಲದಲ್ಲಿ ಎಂದಿಗೂ ಇಲ್ಲದಿರಲಿ. ಕರ್ಮಫಲಕ್ಕೆ ಕಾರಣನಾಗದೇ ಇರು. ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿ ಆಗದಿರಲಿ."

ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡು ಎಂದು ಕೃಷ್ಣ ಹೇಳುತ್ತಾನೆ. ಆದರೆ ಅವನೇ ಅರ್ಜುನನಿಗೆ ಹೀಗೆ ಹೇಳುತ್ತಾನೆ:

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ
ತಸ್ಮಾತ್ ಉತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ. (2. 37.)

"ಅರ್ಜುನ ಯುದ್ಧದಲ್ಲಿ ಸತ್ತರೆ ಸ್ವರ್ಗವನ್ನು ಪಡೆಯುತ್ತಿ; ಇಲ್ಲ, ಗೆದ್ದರೆ ಭೂಮಂಡಲವನ್ನು ಅನುಭವಿಸುತ್ತೀಯ. ಆದ್ದರಿಂದ ಯುದ್ಧ ಮಾಡಲು ನಿರ್ಧಾರ ಮಾಡು. ಎದ್ದೇಳು."

ಹೀಗೆ ಕೃಷ್ಣ ಆಸೆಗಳನ್ನು ಅವನ ಮುಂದಿಡುವನು. ಆದ್ದರಿಂದ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡು ಎಂದರೆ ಅದು ವಿರೋಧಾಭಾಸವಾಗುತ್ತದೆ. ಕರ್ಮಫಲದ ಆಸೆ ಇಲ್ಲದೆ ಪ್ರಪಂಚದಲ್ಲಿ ಯಾರೂ ಕೆಲಸ ಮಾಡುವುದಿಲ್ಲ. ಕೃಷ್ಣನದು ಅರ್ಥಹೀನ ಮಾತು. ಜೀತದಾಳಿಗೆ ಹೇಳುವ ಮಾತು ಇದು. ಆಳು ಜೀತ ಮಾಡುತ್ತಾನೆ, ದುಡಿಯುತ್ತಾನೆ; ಲಾಭವೆಲ್ಲ ಯಜಮಾನನಿಗೇ ಹೋಗುತ್ತದೆ. ದುಡಿಮೆಗಾರನಿಗೆ ದುಡಿದದ್ದೇ ಲಾಭ! ಕೃಷ್ಣನದು ಜೀತಗಾರಿಕೆ ಮುಂದುವರೆಸುವ ಮಾತು. ಗೀತೆ ದರಿದ್ರ ದುಷ್ಟ ಗ್ರಂಥ. ಗೀತೆ ಶ್ರಮಜೀವಿಗಳನ್ನು ತುಳಿಯುವ ಸಂದೇಶ ಸಾರುತ್ತಿದೆ.

ಭಗವದ್ಗೀತೆಯ ಪ್ರೇಮಿಗಳು ಮತ್ತು ಆರಾಧಕರೆಲ್ಲರೂ ಸಾಮಾನ್ಯವಾಗಿ ಸ್ಥಿತಪ್ರಜ್ಞ ಸ್ಥಿತಿಯನ್ನು ಅಪಾರವಾಗಿ ಹೊಗಳಿದ್ದಾರೆ. ಇದೇ ಕೃತಿಯ ಸಾರ ಮತ್ತು ಸಂದೇಶ ಎಂದೂ ಹೇಳುವುದುಂಟು. ಈ ಕೃತಿಯ ಎರಡನೆಯ ಅಧ್ಯಾಯದಲ್ಲಿ ಸ್ಥಿತಪ್ರಜ್ಞನನ್ನು ವರ್ಣಿಸಲಾಗಿದೆ. ಈ ಹದಿನೆಂಟು ಶ್ಲೋಕಗಳಲ್ಲಿ (2. 55-72.) ಕೃಷ್ಣ ಹೇಳುವುದಾದರೂ ಏನು? ಎಂದು ನಿಸ್ಪೃಹ ಮನಸ್ಸಿನಿಂದ ಪರೀಕ್ಷಿಸಿದರೆ ಇಷ್ಟು ಗೊತ್ತಾಗುತ್ತದೆ: ಯಾವ ಆಸಕ್ತಿಯೂ ಇಲ್ಲದೆ ನಿನ್ನಲ್ಲೇ ಸಂತೋಷವಾಗಿ ಬದುಕು. ನಿನ್ನ ಎಲ್ಲಾ ಇಂದ್ರಿಯಗಳನ್ನೂ ಮನಸ್ಸನ್ನೂ ಹತೋಟಿಯಲ್ಲಿ ಇಟ್ಟುಕೊ. ಯಾವುದಕ್ಕೂ ತಲೆ ಕೆಡಿಸಿಕೊಳ್ಳಬೇಡ. ಸುಖದುಃಖಗಳನ್ನು, ಸೋಲು ಗೆಲುವುಗಳನ್ನು ಸಮಾನಾಗಿ ಕಾಣು. ನೀನು ಹೀಗಿದ್ದರೆ ನಿನಗೆ ಬ್ರಹ್ಮ ನಿರ್ವಾಣ ಲಭಿಸುತ್ತದೆ. ಇದನ್ನು ಸ್ಥಿತಪ್ರಜ್ಞ ಸ್ಥಿತಿ ಎಂದು ಕರೆಯಲಾಗಿದೆ.

ಹದಿನೆಂಟು ಶ್ಲೋಕಗಳಲ್ಲಿ ಕೃಷ್ಣ ಹೇಳಿರುವ ಅಂಶಗಳ ಸಾರವನ್ನು ಅತ್ಯಂತ ಸಂಕ್ಷಿಪ್ತವಾಗಿ ಕೊಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಇದರಲ್ಲಿ ಸಮಾಜದ ದೇಶದ ಪ್ರಪಂಚದ ಸ್ಥಿತಿಗತಿಗಳಿಗೂ, ವ್ಯಕ್ತಿಗೂ ಏನೇನೂ ಸಂಬಂಧವೇ ಇಲ್ಲ ಎನ್ನುವಂತಿದೆ ಕೃಷ್ಣನ ದಿವ್ಯ ಸಂದೇಶ! ಜೀವನದಲ್ಲಿ 'ಸ್ವಾರ್ಥಿಯಾಗಿರು' ಎನ್ನುತ್ತಾನೆ ಕೃಷ್ಣ! ಲೋಕದಲ್ಲಿರುವ ಅನ್ಯಾಯ, ಅಸಮಾನತೆ, ಸುಲಿಗೆ, ಶೋಷಣೆ, ದಾಸ್ಯ ಪಾರತಂತ್ರ್ಯ, ದಬ್ಬಾಳಿಕೆ, ಬಡತನ, ಮೋಸ, ಮೇಲುಕೀಳು, ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಮುಂತಾದವುಗಳನ್ನೆಲ್ಲ ಹೋಗಲಾಡಿಸುವುದು ಹೇಗೆ? ಇದಕ್ಕೆ ಗೀತೆಯಲ್ಲಿ ಉತ್ತರವಿಲ್ಲ. ಕಷ್ಟದಲ್ಲಿರುವವರಿಗೆ ಸಹಾಯ ಮಾಡು, ದುಃಖಿಗಳಿಗೆ ನೆರವಾಗು, ತುಳಿತಕ್ಕೊಳಗಾದವರನ್ನು ಬಿಡಿಸು, ಸಹ ಮಾನವರ ಬಗ್ಗೆ ಪ್ರೀತಿವಿಶ್ವಾಸ ಸ್ನೇಹ ಅನುಕಂಪ ಬೇಕು ಎಂದು ಕೃಷ್ಣ ಹೇಳುವುದಿಲ್ಲ. ಅವನು ಕೊಡುವ ಸ್ಥಿತಪ್ರಜ್ಞ ಚಿತ್ರಣ ಹೇಗಿದೆ ಎಂದರೆ ಉಸಿರಾಡುವ ಶವದಂತಿದೆ. ಸ್ಥಿತಪ್ರಜ್ಞನ ಅವಸ್ಥೆಯನ್ನು ಗೀತೆ 'ಸಮಾಧಿ' (2. 54-58.; 2.68) ಎಂದು ಕರೆಯುತ್ತದೆ. 'ಸಮಾಧಿ'ಗೆ ಏಕಾಗ್ರತೆ ಎಂಬ ಅರ್ಥದಿಂದ ಹಿಡಿದು ಗೋರಿ ಎಂಬುದರವರೆಗಿನ ಬೇಕಾದಷ್ಟು ಅರ್ಥಗಳಿವೆ. ಗೀತೆಯ ಈ ಹದಿನೆಂಟು ಶ್ಲೋಕಗಳಲ್ಲಿ 'ಸಮಾಧಿ'ಯನ್ನು ವಿವರಿಸಿರುವುದನ್ನು ನೋಡಿದರೆ ಜೀವಂತ ಶವ ಕಾಣುತ್ತದೆ. ಇಂಥ 'ಸಮಾಧಿ' ಸ್ಥಾನದಿಂದ ಸಮಾಜಕ್ಕೆ ಏನೂ ಪ್ರಯೋಜನ ಇಲ್ಲ. ಇದು ಸಂಪೂರ್ಣ ತಿರಸ್ಕಾರಕ್ಕೆ ಅರ್ಹವಾಗಿದೆ. ಇದನ್ನು ಮರೆ ಮಾಚಲು ಕೃಷ್ಣ ದೇವರ ಮೇಲೆ ಭಾರ ಹಾಕು, ಆ ಸರ್ವೋತ್ತಮ ನಾನೇ ಎಂದು ಬಡಬಡಿಸುತ್ತಾನೆ:

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ. (4. 8.)

"ಸಾಧುಗಳ ಸಂರಕ್ಷಣೆಗಾಗಿ ದುಷ್ಟರ ಸಂಹಾರಕ್ಕಾಗಿ ಮತ್ತು ಧರ್ಮ ಸಂಸ್ಥಾಪನೆಯ ಉದ್ದೇಶಕ್ಕಾಗಿ ನಾನು ಪ್ರತಿ ಯುಗದಲ್ಲಿ ಅವತರಿಸುತ್ತೇನೆ."

ಇಂಥ ಮಾತುಗಳನ್ನು ಹರಡಿದ್ದರಿಂದ ದೇಶದ ಜನರು ಎಲ್ಲಕ್ಕೂ ಅವನು ಅಂದರೆ ದೇವರು ಬರುತ್ತಾನೆಂದುಕೊಂಡು ಕ್ರಿಯಾಶೀಲತೆಯನ್ನು ಕಳೆದುಕೊಂಡು ನಿಶ್ಶಕ್ತರಾದರು. ಹೀಗಾಗಿ ಕಳೆದ ಒಂದೂವರೆ ಸಾವಿರ ವರ್ಷಗಳಿಂದ (ಕ್ರಿ.ಶ. ಮೂರನೆಯ ಶತಮಾನದಿಂದ ಇಲ್ಲಿಯವರೆಗೆ) ಭಗವದ್ಗೀತೆ ದೇಶದ ಮೇಲೆ ಕೆಟ್ಟ ಪರಿಣಾಮ ಮಾಡಿದೆ. ಗೀತೆಯಲ್ಲಿ ನೆಂಟರಿಷ್ಟರನ್ನೆಲ್ಲ ಕೊಲ್ಲುವ ನಕಾರಾತ್ಮಕ ಕ್ರಿಯೆ ಇದೆಯೇ ಹೊರತು ರಾಷ್ಟ್ರವನ್ನು ಕಟ್ಟುವ ಸಕಾರಾತ್ಮಕ ಧೋರಣೆಯಿಲ್ಲ. ಕೊಲ್ಲುವ ಮಾತನಾಡುವ ಕೃಷ್ಣ ಜ್ಞಾನಿ ಅಲ್ಲ; ಸಂತನಲ್ಲ, ಸಂತರು ಮತ್ತು ಜ್ಞಾನಿಗಳು ಸಂಹಾರವನ್ನು ತಪ್ಪಿಸುತ್ತಾರೆ.

ಮನುಸ್ಮೃತಿಗಿಂತ (ಕ್ರಿ.ಪೂ. 185) ಭಗವದ್ಗೀತೆ (ಕ್ರಿ.ಶ. ಮೂರನೆಯ ಶತಮಾನ) ಹೆಚ್ಚು ಭಯಂಕರವಾದ ಗ್ರಂಥ. ಇಂಥ ಗೀತೆಯನ್ನು ಒಪ್ಪಿಕೊಳ್ಳುವವರು ಅವಿವೇಕಿಗಳು ಎಂದುಕೊಂಡು ಸುಮ್ಮನಾದರೆ ಭಾರಿ ಅನಾಹುತವಾಗುತ್ತದೆ. ಪಟ್ಟಭದ್ರಹಿತಾಸಕ್ತಿಗಳು ತಮ್ಮ ಹಿತಸಾಧನೆಗಾಗಿ ಏನು ಬೇಕಾದರೂ ಮಾಡಲು ನಿಂತಿವೆ ಎಂದು ಜಾಗ್ರತರಾಗುವುದು ಒಳ್ಳೆಯದು. ಭಗವದ್ಗೀತೆ ಯಥಾಸ್ಥಿತಿವಾದವನ್ನು ವೈಭವೀಕರಿಸುವ ಗ್ರಂಥ.

ಮನುಸ್ಮೃತಿ ಒರಟಾಯಿತು ಎಂದೇನೋ ಮೃದು ಮಧುರವಾದ ಸಂಗೀತಮಯ ಕಾವ್ಯಭಾಷೆಯಲ್ಲಿ ಭಗವದ್ಗೀತೆಯನ್ನು ಬರೆಯಲಾಗಿದೆ. ಓದುಗರನ್ನು ಆಕರ್ಷಿಸಲು ಮಾಡಿರುವ ಉಪಾಯ ಇದು. ಗೀತೆಯದು ಬಹಳ ಸುಂದರವಾದ ಭಾಷೆ. ಆದರೆ ಅದೆಲ್ಲ ಅಪಾಯಕಾರಿಯಾಗಿರುವುದನ್ನು ಅರಿಯಬೇಕಾಗಿದೆ.

ಭಗವದ್ಗೀತೆಯ 11ನೇ ಅಧ್ಯಾಯವನ್ನು 'ವಿಶ್ವರೂಪ ದರ್ಶನ' ಎಂದು ಕರೆಯಲಾಗಿದೆ. ಆದರೆ ಇಲ್ಲಿ ನೀಡಿರುವ ವಿವರಗಳು ಮತ್ತು ಹೆಸರುಗಳು ಭಾರತಕ್ಕೆ ಸೀಮಿತಗೊಂಡಿವೆ. ವಿದೇಶಗಳ ಹೆಸರುಗಳು ಇಲ್ಲಿ ಬಂದಿಲ್ಲ ಎನ್ನುವುದಕ್ಕೆ ಕಾರಣ ಕೃಷ್ಣನೇ "ಯತ್ ಯತ್ ವಿಭೂತಿಮತ್ ಸತ್ವಂ ಶ್ರೀಮತ್ ಊರ್ಜಿತಂ ಏವ ವಾ ತತ್ ತತ್ ಏ ಅವಗಚ್ಛ ಮಮ ತೇಜೋಂಶ ಸಂಭವಂ (10. 41.) - ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ, ಶ್ರೀಯುಕ್ತವಾಗಿದೆಯೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅದೆಲ್ಲವೂ ನನ್ನ ತೇಜಸ್ಸಿನ ಅಂಶದಿಂದ ಬಂದುದೆಂದು ತಿಳಿದುಕೊ" ಎಂದು ಹೇಳುತ್ತಾನೆ. ಆದರೆ ಅವು ಯಾವುವೂ ಇಲ್ಲಿ ಕಾಣವು. ಆದ್ದರಿಂದ 'ವಿಶ್ವರೂಪ ದರ್ಶನ' ಎನ್ನದೆ 'ಸಂಕ್ಷಿಪ್ತ ಭಾರತ ರೂಪದರ್ಶನ' ಎಂದು ಕರೆಯುವುದು ಸೂಕ್ತವಾಗಿದೆ. ಗೀತಕಾರನ ಭೌಗೋಳಿಕ ಜ್ಞಾನವೆಲ್ಲ ಕೇವಲ ಭರತಖಂಡಕ್ಕೆ ನಿಂತಿರುವುದನ್ನು ಗಮನಿಸಬೇಕು. ಇದು ಹೇಗೆ ವಿಶ್ವರೂಪ ಆದೀತು?

ಇಂಥ ಸಂಕುಚಿತ 'ವಿಶ್ವರೂಪ ದರ್ಶನ'ವನ್ನು (11. 10-46.) ಬಹಳ ಅದ್ಭುತ ಎಂದು ಕೊಂಡಾಡಲಾಗಿದೆ. ಆದರೆ ಇದನ್ನು ಓದುವಾಗಲೆಲ್ಲ ಚಂಡಿ ಹಿಡಿದ ಇಲ್ಲವೆ ಮೊಂಡು ಮಕ್ಕಳ ಚಿತ್ರ ನನಗೆ ನೆನಪಾಗುತ್ತದೆ. ಮಕ್ಕಳು ಮಾತು ಕೇಳದಿದ್ದರೆ ಅವರನ್ನು ತಹಬಂದಿಗೆ ತರಲು ಹಿರಿಯರು 'ಗುಮ್ಮ ಕರೀತೀನಿ. ಗುಮ್ಮ ಬಂತು ಗುಮ್ಮ!' ಎಂದು ಬೆದರಿಸುವುದುಂಟು. ಹಾಗೆ ಅರ್ಜುನನ ಪ್ರಶ್ನೆಗಳಿಗೆ (1. 31-46.) ಕೃಷ್ಣ ಉತ್ತರ ಹೇಳದೆ ಅವನನ್ನು ಹೆದರಿಸಲು 'ವಿಶ್ವರೂಪ' ಎಂಬ ಭಯಂಕರ ದೃಶ್ಯ ತೋರಿಸುತ್ತಾನೆ. ಅದರ ಪ್ರಕಾಶ ಸಹಸ್ರ ಸೂರ್ಯರು ಆಕಾಶದಲ್ಲಿ ಬಂದಂತಿತ್ತು (11. 12.) ಎಂದು ಹೇಳಲಾಗಿದೆ. ಒಬ್ಬ ಸೂರ್ಯನ ಬಿಸಿಲಿನ ಝಳವನ್ನು ಸಹಿಸಿಕೊಳ್ಳುವುದು ಕಷ್ಟ, ಅಂಥದರಲ್ಲಿ ಸಾವಿರ ಸೂರ್ಯರ ಪ್ರಭೆಯನ್ನು ಅರ್ಜುನ ಹೇಗೆ ಸಹಿಸಿದ? ಅವನು ಸೂರ್ಯನ ಉರಿಗೆ ಸುಟ್ಟು ಹೋಗಲಿಲ್ಲವೇ? ಎಂದು ಪ್ರಶ್ನೆ ಏಳುವುದು ಸಹಜ. ಈ ಸಂದರ್ಭದಲ್ಲಿ ಅರ್ಜುನ ಪದೇಪದೇ ನನಗೆ ಭಯವಾಗುತ್ತಿದೆ (11. 20-36.) ಎಂದು ನಡುಗುತ್ತ ಹೇಳುತ್ತಾನೆ. ಭಯ ಹುಟ್ಟಿಸುವುದು ಒಳ್ಳೆಯ ಸಾಹಿತ್ಯವಲ್ಲ, ಒಳ್ಳೆಯ ತತ್ವಜ್ಞಾನವಲ್ಲ. ಧೈರ್ಯ ಮತ್ತು ನಿರ್ಭೀತಿಯನ್ನು ನೆಡುವುದೇ ಅತ್ಯುತ್ತಮ ಜ್ಞಾನ. ಹೆದರಿಕೆಯಿಂದ ಅರ್ಜುನ ಕೊನೆಗೆ ಕೃಷ್ಣ ಹೇಳಿದುದನ್ನೆಲ್ಲ ಸುಮ್ಮನೆ ಒಪ್ಪಿಕೊಳ್ಳುತ್ತಾನೆ.

ಸಂವಾದ ಪ್ರಾರಂಭವಾಗುವ ಮೊದಲೇ ಅರ್ಜುನ ಹೀಗೆಂದಿರುವನು: "ಶಿಷ್ಯಃ ತೇ ಅಹಂ ಶಾಧಿ ಮಾಂ ತ್ವಾಂ ಪ್ರಪನ್ನಂ (2. 7.) ನಾನು ನಿನ್ನ ಶಿಷ್ಯ. ನಿನಗೆ ಶರಣಾಗಿದ್ದೇನೆ. ನನಗೆ ಬೋಧಿಸು."

ಕೊನೆಯಲ್ಲಿ ಕೃಷ್ಣನಿಗೆ ಅರ್ಜುನ ಹೇಳುವುದು ಹೀಗೆ:
ನಷ್ಟೋ ಮೋಹಃ ಸ್ಮ?ತಿಃ ಲಬ್ಧಾ ತ್ವತ್ ಪ್ರಸಾದಾತ್ ಮಯಾಚ್ಯುತ ಸ್ಥಿತಃ ಅಸ್ಮಿ ಗತ ಸಂದೇಹಃ ಕರಿಷ್ಯೇ ವಚನಂ ತವ. (18. 73.)

"ಅಚ್ಯುತನೆ, ನಿನ್ನ ದಯೆಯಿಂದ ನನ್ನ ಭ್ರಾಂತಿ ಹೋಯಿತು. ಅರಿವು ಬಂತು. ಸಂದೇಹ ಇಲ್ಲದವನಾಗಿದ್ದೇನೆ. ನಿನ್ನ ಮಾತನ್ನು ನಡೆಸುತ್ತೇನೆ."

ಮೊದಲೇ ಕೃಷ್ಣನ ಗುರುತ್ವವನ್ನು ಅರ್ಜುನ ಒಪ್ಪಿಕೊಂಡಿರುವುದರಿಂದ ಕೊನೆಗೂ ಅವನು ಅದೇ ಮಾತನ್ನು ಹೇಳುವುದರಿಂದ ಗೀತೆಯಲ್ಲಿ ಏನೂ ಬೆಳವಣಿಗೆ ಇಲ್ಲ. ಗೀತೆ ರಚನೆಯಾಗುವುದಕ್ಕಿಂತ ಮುನ್ನವೇ ಚಾಲ್ತಿಯಲ್ಲಿ ಇದ್ದ ಎಲ್ಲಾ ತತ್ವಶಾಖೆಗಳ ಪುನರುಚ್ಚಾರ ಗೀತೆಯಲ್ಲಿ ಬಂದಿದೆ. ಗೀತೆಯ ಒಂದೊಂದು ಅಧ್ಯಾಯದಲ್ಲಿ ಒಂದೊಂದು ತತ್ವವನ್ನು ಹೇಳಲಾಗಿದೆ. ಒಂದು ಅಧ್ಯಾಯಕ್ಕೂ ಇನ್ನೊಂದು ಅಧ್ಯಾಯಕ್ಕೂ ಸಂಬಂಧವಿಲ್ಲ. ಭಗವದ್ಗೀತೆಯಲ್ಲಿ ಹೊಸ ಬೆಳಕಿಲ್ಲ. ಅದರಲ್ಲಿ ಜಾತಿವ್ಯವಸ್ಥೆಯ ಕೊಳಕು ತುಂಬಿದೆ. ಗೀತೆ ಹಿಂದೂ ದರ್ಶನಗಳ ಒಂದು ಕೋಷ್ಟಕ ಅಥವಾ ಅಡಕ ಅಷ್ಟೆ.

ನಿಜವಾದ ಆಧ್ಯಾತ್ಮ ಜ್ಞಾನವನ್ನು ಕೃಷ್ಣ ತಪಸ್ಸು ಮಾಡಿ ಗಳಿಸಿದ್ದ ಎಂಬುದಕ್ಕೆ ಗೀತೆಯಲ್ಲಿ ವಿವರಗಳಿಲ್ಲ. ಉದಾಹರಣೆಗೆ ಬುದ್ಧ ತನ್ನ ಸುತ್ತಗಳಲ್ಲಿ, ಪರಮಹಂಸರು 'ಶ್ರೀರಾಮಕೃಷ್ಣ ವಚನ ವೇದ'ದಲ್ಲಿ, ವಿವೇಕಾನಂದರು ತಮ್ಮ ಬರಹಗಳಲ್ಲಿ ಸಾಕ್ಷಾತ್ಕಾರ ಪಡೆಯಲು ನಡೆಸಿದ ಶ್ರಮಗಳನ್ನು ವಿವರಿಸಿದ್ದಾರೆ. ಕೃಷ್ಣನಿಗೆ ಇಂಥ ಅನುಭವ ಆಗಿಲ್ಲ. ಅವನು ಕಿರಿಯವನಾಗಿದ್ದಾಗ ಗೋಪಿಕೆಯರ ಸಂಗಡದಲ್ಲಿದ್ದ; ತಾರುಣ್ಯದಲ್ಲಿ ಎಂಟು ಜನ ಪಟ್ಟಮಹಿಷಿಯರು ಮತ್ತು ಹದಿನಾರು ಸಾವಿರ ಹೆಂಡತಿಯರ ಜೊತೆಗಿದ್ದ; ಕೊನೆಗೆ ಕುರುಕ್ಷೇತ್ರದಲ್ಲಿ ಅರ್ಜುನನ ಸಾರಥಿಯಾಗಿ ರಥ ನಡೆಸಿದ. ಇಂಥವನು ಹೇಗೆ ಆಧ್ಯಾತ್ಮ ಜೀವಿಯಾಗುತ್ತಾನೆ? ಆಧ್ಯಾತ್ಮ ಜೀವನಕ್ಕೆ ಪರಿಶುದ್ಧತೆ, ಕಾಮನಿಗ್ರಹ ಅತ್ಯಂತ ಅವಶ್ಯಕ. ಇದಾವುದೂ ಇಲ್ಲದ ಕೃಷ್ಣ ಜ್ಞಾನಿ ಅಲ್ಲ. ಅವನು ವೈದಿಕ ಧರ್ಮಕ್ಕೆ ತೀರ ಅನನುಕೂಲವಾದ ಬುದ್ಧ ಧಮ್ಮವನ್ನು ಹಿಮ್ಮೆಟ್ಟಿಸಿ ಚಾತುರ್ವರ್ಣ ಧರ್ಮವನ್ನು ನೆಲೆಗೊಳಿಸಿದ್ದರಿಂದ ಬ್ರಾಹ್ಮಣರು ಅವನನ್ನು ದೇವರನ್ನಾಗಿ ಮಾಡಿದ್ದಾರೆ. ದೇವರಾಗಲು ಕೃಷ್ಣನಿಗೆ ಯಾವ ಅರ್ಹತೆಯೂ ಇಲ್ಲ. ಏಕೆಂದರೆ ಕೃಷ್ಣನಿಗೆ ಪಾವಿತ್ರ್ಯವಿಲ್ಲ, ಇಂದ್ರಿಯ ನಿಗ್ರಹ ಇಲ್ಲ, ಪರಮ ಜ್ಞಾನವಿಲ್ಲ. ಅವನು ಇನ್ನೊಬ್ಬನ ಹೆಂಡತಿಯಾಗಿದ್ದ ರಾಧೆಯನ್ನು ಹಾರಿಸಿಕೊಂಡು ಬಂದವನು (ನೋಡಿ: ಭಾಗವತ). ಬ್ರಾಹ್ಮಣರು ತಾವು ಮೇಲು ಎಂದು

...ಳೆಯುತ್ತಿದ್ದಾರೆ. ಅಬ್ರಾಹ್ಮಣರು ತಾವು ಕೀಳು ಎಂದು ...ಳೆಯುತ್ತಿದ್ದಾರೆ. ಹೀಗೆ ಇವರು ಕೊಳೆಯುತ್ತಿರುವುದರಿಂದ ...ೀ ದೇಶವೇ ಗಬ್ಬೆದ್ದು ನಾರುತ್ತಿದೆ. ಇವರು ...ೆಯಬೇಕಾದರೆ ಜಾತಿ ವ್ಯವಸ್ಥೆಯನ್ನು ನಿರ್ನಾಮ ...ಾಡಬೇಕು. ಇವರೆಲ್ಲ ಸುಮಧುರವಾಗಿ ಸುವಾಸನೆ ...ರಬೇಕಾದರೆ ಜಾತಿರಹಿತ ಮದುವೆಗಳಾಗುವುದು ಅವಶ್ಯಕ. ...ಹ್ಮಣರು ದೇಶವನ್ನು ಕೊಟ್ಟಾರು, ಜಾತಿಯನ್ನು ಬಿಡರು!

ವಿಚಾರ ಮನುಷ್ಯನನ್ನು ಎಲ್ಲ ಬಂಧನಗಳಿಂದ ...ುಗಡೆಗೊಳಿಸುವ ಸುಜ್ಞಾನ. ಅಂಥ ಜ್ಞಾನ ಗೀತೆಯಲ್ಲಿ ...ದುಬರುವುದಿಲ್ಲ.

"ನಹಿ ಜ್ಞಾನೇನ ಸದೃಶಂ ಪವಿತ್ರಂ ಇಹ ವಿದ್ಯತೇ ... 38) ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದದ್ದು ...ತ್ರವಾದದ್ದು ಇಲ್ಲ." ಪ್ರತ್ಯೇಕವಾಗಿ ನೋಡಿದಾಗ ಇದು ...ರ್ವತ್ರಿಕ ಮಹತ್ವವುಳ್ಳ ಮಾತು. ಆದರೆ ಗೀತೆಯಲ್ಲಿ ...ನ ಎಂದರೆ ಮಾನವ ಜ್ಞಾನ ಅಲ್ಲ, ಅದು ಚಾತುರ್ವರ್ಣ ...ಕಟ್ಟಿನ ಒಳಗೆ ಬದುಕುವ ಜ್ಞಾನ. ಎಲ್ಲಾ ಮೇರೆಗಳನ್ನು ...ೀರಿ ಬೆಳಗುವ ಜ್ಞಾನವಲ್ಲ ಅದು. ಏಕೆಂದರೆ ಕೃಷ್ಣ ...ತೆಯಲ್ಲಿ ಎಲ್ಲೂ ಎಲ್ಲಾ ಸಾಮಾಜಿಕ ನಿರ್ಬಂಧಗಳನ್ನು ...ೆದುಕೊಂಡು ಬೆಳಗಬೇಕೆಂದು ಹೇಳುವುದಿಲ್ಲ, ಗೀತೆಯಲ್ಲಿ ...ರ್ಮ ಎಂದರೆ ಸನಾತನ ಚಾತುರ್ವರ್ಣ ಧರ್ಮ ಎಂದು ...ರ್ಥ. ಮಾನವರೆಲ್ಲ ಒಂದು ಎಂಬ ಮಾನವ ಧರ್ಮಕ್ಕೆ ...ದರಲ್ಲಿ ಜಾಗ ಇಲ್ಲ. 'ಸ್ವಧರ್ಮ' ಕುರಿತು ಗೀತೆಯಲ್ಲಿ ...ಳ ಮಾತುಗಳಿವೆ. (3. 35. ; 18. 47) ಸ್ವಧರ್ಮವನ್ನು ...್ಯಾಖ್ಯಾನಕಾರರು ಮನಸೋ ಇಚ್ಛೆ ವಿವರಿಸಿದ್ದಾರೆ. ಪಠ್ಯವೇ ...ುಖ್ಯ ಮತ್ತು ಅಂತಿಮ ಹಾಗೂ ಅಧಿಕೃತ. ...್ಯಾಖ್ಯಾನಗಳಾಗಲೀ ವಿಮರ್ಶೆಗಳಾಗಲೀ ಅಲ್ಲ. ಆದ್ದರಿಂದ ... ಪದವನ್ನು ಗೀತೆಯ ಸಂದರ್ಭದಲ್ಲೇ ...ರ್ಥಮಾಡಿಕೊಳ್ಳುವುದು ಒಳ್ಳೆಯದು. ಗೀತೆಯ ...ಕಟ್ಟಿನಲ್ಲಿ 'ಸ್ವಧರ್ಮ' ಎಂದರೆ ಜಾತಿ ಎಂದೇ ಅರ್ಥ ...ರ್ಯಾಯವಾಗುತ್ತದೆ. ಅರ್ಜುನನಿಗೆ ಕೃಷ್ಣ ಹೇಳುತ್ತಾನೆ:

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ...ುಷ್ಠಿತಾತ್

ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ...ಯಾವಹಃ. (3. 35.)

"ಗುಣ ಇಲ್ಲದ ಸ್ವಧರ್ಮ ಚೆನ್ನಾಗಿ ಆಚರಿಸಿದ ಬೇರೆ ...ರ್ಮಕ್ಕಿಂತ ಒಳ್ಳೆಯದು. ಸ್ವಂತ ಧರ್ಮದಲ್ಲಿ ಸಾಯುವುದು ...ಯಸ್ಕರವಾದುದು. ಪರಧರ್ಮ ಭಯಂಕರವಾಗಿದೆ."

ಮುಂದೆ (18. 47.) ಇದೇ ನುಡಿಯನ್ನು ಕೃಷ್ಣ ...ಡಿಯುತ್ತಾನೆ. ಇಲ್ಲಿ ಸ್ವಧರ್ಮ ಯಾವುದು? ಪರಧರ್ಮ ...ಾವುದು? ಎಂದು ಕೃಷ್ಣ ಬಿಡಿಸಿ ಹೇಳಿಲ್ಲ. ಆದರೆ ...ಗವದ್ಗೀತೆ ರಚನೆಯಾದ ಸಂದರ್ಭ ಅವಲೋಕಿಸಿದರೆ ...ಯುತ್ತದೆ. ಸ್ವಂತ ಧರ್ಮ ಅಂದರೆ ಚಾತುರ್ವರ್ಣ ...ವಸ್ಥೆಯ ಜಾತಿ ಧರ್ಮ. ಪರಧರ್ಮ ಎಂದರೆ ಬುದ್ಧ ...ಮ್ಮ. ಆ ಸಂದರ್ಭದಲ್ಲಿ ಬ್ರಾಹ್ಮಣ ಮತಕ್ಕೆ ಸವಾಲಾಗಿದ್ದುದ್ದು ...ಗೂ ಅದನ್ನು ಮೀರಿಸಿ ಚೆನ್ನಾಗಿ ಬೆಳೆದದ್ದು ಮತ್ತು ...ರತವನ್ನು ವ್ಯಾಪಿಸಿದ್ದು ಬುದ್ಧ ಧಮ್ಮ ಎಂದು ಸ್ಪಷ್ಟವಾಗಿ ...ಿದುಕೊಳ್ಳಬೇಕು.

ಅಥ ಚೇತ್ ತ್ವಂ ಇಮಂ ಧರ್ಮ್ಯಂ ಸಂಗ್ರಾಮಂ ನ ...ಿಷ್ಯಸಿ

ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಂ ...ಾಪ್ಸ್ಯಸಿ. (2. 33.)

"ಯುದ್ಧವು ಕ್ಷತ್ರಿಯನಿಗೆ ಸ್ವಧರ್ಮ ಎಂದು ತಿಳಿದ ...ತರವೂ ನೀನು ಯುದ್ಧ ಮಾಡದಿದ್ದರೆ ಸ್ವಧರ್ಮವನ್ನೂ ...ರ್ತಿಯನ್ನೂ ಹಾಳು ಮಾಡಿಕೊಂಡು ಪಾಪವನ್ನು ...ಡೆಯುತ್ತೀಯೆ. ಆದ್ದರಿಂದ ನೀನು ಯುದ್ಧ ಮಾಡು" ...ಂದು ಅರ್ಜುನನಿಗೆ ಕೃಷ್ಣ ಪುಸಲಾಯಿಸುತ್ತಾನೆ. ಹಾಗಾಗಿ ...ಧರ್ಮ ಎಂದರೆ ಕ್ಷತ್ರಿಯ ಜಾತಿ ಮತ್ತು ಪ್ರತಿಯೊಬ್ಬನ ...ತಿ ಎಂದು ಅರ್ಥ ಬರುತ್ತದೆ. ಕ್ಷತ್ರಿಯ ಧರ್ಮದ ...ಕಾರ ಕೊಲ್ಲಲು ಪ್ರೇರೇಪಿಸುವ ಕೃಷ್ಣನನ್ನು ದೇವರು ...ಾಡಲಾಗಿದೆ. ಅಪರಾಧ ಕಾನೂನು ಸಂಹಿತೆ ದೃಷ್ಟಿಯಲ್ಲಿ ...ಷ್ಟ ಕೃತ್ಯ ಪ್ರೇರಕ ಕೃಷ್ಣ ಮಹಾನ್ ತಪ್ಪಿತಸ್ಥ! ಘೋರ ...ಪರಾಧಿ. ಇಂಥ ಭಗವದ್ಗೀತೆಯನ್ನು ರಾಷ್ಟ್ರದ ಧರ್ಮ ...ಥ ಎಂದು ಕೇಂದ್ರ ಸರ್ಕಾರ ಘೋಷಿಸಿದರೆ ಹತ್ಯೆ ...ಡುವ ಮನಸ್ಸುಳ್ಳ ಪಕ್ಷ ಮತ್ತು ಸಂಘಟನೆಗಳಿಗೆ ಹಾಗೂ ...ರಿಗೆ ರಾಜ ರಹದಾರಿ ನೀಡಿದಂತಾಗುತ್ತದೆ. ಯಾವ ...ಯಿಂದ ನೋಡಿದರೂ ಭಗವದ್ಗೀತೆ ರಾಷ್ಟ್ರೀಯ ಧರ್ಮ ...ಥವಾಗಲು ಲಾಯಕ್ಕಾಗಿಲ್ಲ.

ಗೀತೆಯಲ್ಲಿ ಕೃಷ್ಣ ಹೀಗೆ ಹೇಳುತ್ತಾನೆ: ಮಾಂ ಹಿ ...ರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ

...್ತ್ರಿಯೋ ವೈಶ್ಯಾಃ ತಥಾ ಶೂದ್ರಾಃ ತೇ ಅಪಿ ಯಾಂತಿ ...ಾಂ ಗತಿಮ್. (9. 32.)

"ಅರ್ಜುನ, ಪಾಪ ಯೋನಿಜರಾದ ಸ್ತ್ರೀಯರು ವೈಶ್ಯರು ...ಗೆ ಶೂದ್ರರು ಸಹ ನನ್ನನ್ನು ಆಶ್ರಯಿಸಿ ಮೋಕ್ಷವನ್ನು ...ಯುತ್ತಾರೆ."

ಜಾತೀಯತೆ, ಮೇಲುಕೀಳು ಮುಂತಾದವುಗಳೆಲ್ಲ ಎತ್ತಿ ...ಯುವ ಭಗವದ್ಗೀತೆಯಲ್ಲಿ ಸ್ವಚ್ಛ ಮನಸ್ಥಿತಿ ಇಲ್ಲ. ...ಗವಂತ ಬೋಧಿಸಿದ್ದು ಎಂದುಕೊಂಡರೆ ಏನೂ ...ವಾಗುವುದಿಲ್ಲ, ಭೇದಭಾವ ಮಾಡುವವನು ಭಗವಂತನೇ ... ತಂದೆತಾಯಿಗಳು ತಮ್ಮ ಮಕ್ಕಳನ್ನು ...ಗಿಸುತ್ತಾರೆಯೋ? ಅಮಾನುಷ ಅಸಮಾನತೆಯನ್ನು ಹೇಳುವ ಭಗವಂತ ನನಗೆ ಬೇಕಿಲ್ಲ.

ಜೀವ ಹಿಂಡುವ ಸಾಮಾಜಿಕ ಕಟ್ಟುಪಾಡುಗಳನ್ನು ಅದಲಿತವನ್ನು ಧಿಕ್ಕರಿಸಿ ಹೋರಾಡಿದ್ದರಿಂದಲೇ ಪ್ರಪಂಚದಲ್ಲಿ ಕ್ರಾಂತಿಗಳಾಗಿವೆ. ಬದಲಾವಣೆಯನ್ನು ಬಯಸದ ಜಡ ಮನಸ್ಸುಗಳು ಯಾವಾಗಲೂ ಇದ್ದೇ ಇರುತ್ತವೆ. ಅವುಗಳಿಗೆ ದುಡಿಮೆಗಾರರ ದುಡಿಮೆಯ ಎಲ್ಲಾ ಲಾಭಗಳು ಬೇಕು. ಆದರೆ ದುಡಿಮೆಗಾರರು ಅವರ ಸಮ ಆಗುವುದು ಬದುಕುವುದು ಅವರಿಗೆ ಇಷ್ಟವಿಲ್ಲ. ನನ್ನನ್ನು ಆಶ್ರಯಿಸಿದವರಿಗೆಲ್ಲ ಮೋಕ್ಷವನ್ನು-'ಪರಾಂ ಗತಿಂ'ಯನ್ನು ಕೊಡುತ್ತೇನೆ ಎಂದು ಕೃಷ್ಣ ಹೇಳುತ್ತಾನೆ. ಉತ್ತಮಾಧಮ ಸಮಸ್ಯೆ ಇರುವುದು ಈ ಲೋಕದಲ್ಲೇ ಹೊರತು, ಸತ್ತ ನಂತರ ಅಲ್ಲ (ಗೀತೆ 2.28). ಆಗ ಮುಕ್ತಿ ಸಿಗುತ್ತದೆಯೋ ಇಲ್ಲವೋ! ಅದನ್ನು ಬಲ್ಲವರು ಯಾರು? ಮುಕ್ತಿ ಎಂದರೇನು? ಎಷ್ಟಕ್ಕೂ ಮುಕ್ತಿ ಎನ್ನುವುದೇ ಮಹಾ ಮೋಸ! ವಿಜ್ಞಾನ ಚಂದ್ರಲೋಕ, ಮಂಗಳ ಲೋಕಗಳಿಗೆ ಹೋಗಿ ಬಂದಿದೆ. ಧರ್ಮಗ್ರಂಥಗಳು ಹೇಳುವ ಸ್ವರ್ಗ, ಕೈಲಾಸ, ವೈಕುಂಠ ಅಲ್ಲಿ ಕಂಡು ಬಂದಿಲ್ಲ, ಕೃಷ್ಣನ ಹೆಸರಿನಲ್ಲಿ ಪಾಪಯೋನಿಗಳು, ಪುಣ್ಯ ಯೋನಿಗಳು ಎಂದು ಮಾಡಿರುವ ವಿಭಜನೆಯೇ ಮಾನವ ಜನಾಂಗಕ್ಕೆ ಎಸಗಿರುವ ದ್ರೋಹ. ಮುಕ್ತಿ ಸದ್ಗತಿ ಮುಂತಾದ ಮಾತುಗಳನ್ನು ಎಲ್ಲಾ ಮತಗ್ರಂಥಗಳು ಹೇಳುತ್ತವೆ. ಗೀತೆಯೂ ಅದನ್ನೇ ಉಚ್ಚರಿಸುತ್ತದೆ. ದೇವರು, ಶಿವ, ಅಲ್ಲಾ, ಫಾದರ್ ಯಾರೂ ಗೋಚರವಾಗಿಲ್ಲದಿರುವುದನ್ನು ಅರಿಯಲೇಬೇಕು. ಇದೆಲ್ಲ ಜನರನ್ನು ವಂಚಿಸುವ ಮಾಯಾತಂತ್ರ, ಎಲ್ಲಾ ಮತಗ್ರಂಥಗಳು ಮತ್ತು ದೇವರುಗಳನ್ನು ನಿರಾಕರಿಸಿ, ಇರುವುದು ಇದೊಂದೇ ಲೋಕ; ಇಲ್ಲಿ ನಾವೆಲ್ಲರೂ ಸುಖ, ಶಾಂತಿ, ಸಾಮರಸ್ಯದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು ಎಂದು ಭಾವಿಸುವುದು ವಿವೇಕಯುತವಾದುದು.

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಶಃ (4. 13.). ಗುಣಕರ್ಮಗಳ ಮೇಲೆ ಚಾತುರ್ವರ್ಣಗಳನ್ನು ವಿಭಾಗ ಮಾಡಿದ್ದೇನೆ ಎನ್ನುತ್ತಾನೆ ಕೃಷ್ಣ ನಿಜ. ಆದರೆ ಗುಣಗಳು ಮೂರು – ಸತ್ವ, ರಜಸ್ಸು, ತಮಸ್ಸು. ಇದನ್ನು ಕೃಷ್ಣನೇ 'ಗುಣತ್ರಯ ವಿಭಾಗ ಯೋಗ' ಎಂಬ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿದ್ದಾನೆ.

ಹಾಗಾದರೆ ನಾಲ್ಕು ವರ್ಣಗಳು ಹೇಗೆ ಬಂದವು? ಗೀತೆಯಲ್ಲಿ ಇಂಥ ಗೊಂದಲಗಳು ಬೇಕಾದಷ್ಟಿವೆ. ಆದ್ದರಿಂದ ಯಾವ ರೀತಿ ಹೇಳಿದರೂ ಚಾತುರ್ವರ್ಣ ಅಸಮಾನತೆಯ ವ್ಯವಸ್ಥೆ ಶೂದ್ರರಿಗೆ ಸ್ತ್ರೀಯರಿಗೆ ವೈಶ್ಯರಿಗೆ ಗುಲಾಮಗಿರಿ ವಿಧಿಸುವ ಏರ್ಪಾಡು.

ಕೃಷ್ಣ ತನ್ನ ಜನರಿಗೆ ಇಂದ್ರನನ್ನು ಪೂಜಿಸಬೇಡಿ. ಗೋವರ್ಧನಗಿರಿಯನ್ನು ಪೂಜಿಸಿ ಎಂದು ಹೇಳಿದ. ಇಂದ್ರ ವೈದಿಕ ದೇವತೆಗಳಲ್ಲಿ ಅತ್ಯಂತ ಪ್ರಮುಖನಾದವನು. ಅವನನ್ನು ತಿರಸ್ಕರಿಸುವ ಮೂಲಕ ಕೃಷ್ಣ ವೈದಿಕ ಮತವನ್ನು ತಿರಸ್ಕರಿಸಿದ್ದನು. ಅಂಥವನು ಹೇಗೆ ಚಾತುರ್ವರ್ಣವನ್ನು ಒಪ್ಪಿಕೊಳ್ಳಲು ಸಾಧ್ಯ?

ಚಾತುರ್ವರ್ಣವನ್ನು ಕೃಷ್ಣ ಒಪ್ಪಿಕೊಂಡಿದ್ದರಿಂದ ಅವನನ್ನು ದೇವರನ್ನಾಗಿ ಪುರೋಹಿತರು ಮಾಡಿದ್ದಾರೆ. ಇಲ್ಲದಿದ್ದರೆ ಅವನನ್ನೂ ಜಾತಿಯನ್ನು ನಿರಾಕರಿಸಿದ ಬುದ್ಧನನ್ನು ತಿರಸ್ಕರಿಸಿದಂತೆ ತಿರಸ್ಕರಿಸುತ್ತಿದ್ದರು. ಯಾವ ತಾರತಮ್ಯ ಇಲ್ಲದೆ ಮನುಷ್ಯರೆಲ್ಲ ಒಂದೇ ಎಂದು ಬೋಧಿಸುವ ಧರ್ಮಗ್ರಂಥ ಧಮ್ಮಪದ ಒಂದೇ.

ಮತ್ತೆ ಗೀತೆಯ ಹದಿನೆಂಟನೆಯ ಅಧ್ಯಾಯದ 41 ರಿಂದ 48 ರವರೆಗಿನ ಶ್ಲೋಕಗಳು ನಾಲ್ಕು ವರ್ಣಗಳಲ್ಲಿ ಪ್ರತಿಯೊಂದು ವರ್ಣದ ಲಕ್ಷಣಗಳನ್ನು ಹೇಳಿ ಎಲ್ಲಾ ಜನರನ್ನೂ ಕೃಷ್ಣ ವರ್ಗೀಕರಿಸುತ್ತಾನೆ. ಆದರೆ ವಾಸ್ತವದಲ್ಲಿ ಇದು ಸಾಧ್ಯವಿಲ್ಲ; ಎಂದೂ ನಡೆದಿಲ್ಲ. ಹಿಂದೂ ಮತ ಹುಟ್ಟಿನಿಂದ ಸ್ವಭಾವವನ್ನು ಗುರುತಿಸುತ್ತದೆಯೇ ಹೊರತು ಗುಣದಿಂದಲ್ಲ. ಸ್ತ್ರೀಯರು ವೈಶ್ಯರು ಮತ್ತು ಶೂದ್ರರು "ಪಾಪ ಯೋನಿಜರು" ಎಂದು ಸ್ಪಷ್ಟವಾಗಿ ಇಲ್ಲಿ ಹುಟ್ಟನ್ನೇ ಹೇಳಿದ್ದಾನೆ. ಆದ್ದರಿಂದ ಅವನ 'ಗುಣಕರ್ಮ' ವಿಭಜನೆಯ ಮಾತು ಸುಳ್ಳಾಯಿತು. ಪಾಪಯೋನಿಜರು ಎಂದರೆ ಪಾಪಿಗಳು, ಅಶುದ್ಧರು, ಕೊಳಕರು ಎಂದು ಅರ್ಥ. ಸ್ತ್ರೀಯರು ಎನ್ನುವ ಅವನ ಮಾತಿನಲ್ಲಿ ಬ್ರಾಹ್ಮಣ ಹೆಂಗಸರು ಸಂಪೂರ್ಣ ಸೇರಿದ್ದಾರೆ.

ಮಹಾಜ್ಞಾನಿ ಮತ್ತು ಪರಿಶುದ್ಧ ಚಾರಿತ್ರ್ಯದ ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಹಿಂದೂಗಳು ಬ್ರಾಹ್ಮಣ ಎಂದು ಒಪ್ಪಿಕೊಳ್ಳುವುದಿರಲಿ ಗುರುತಿಸಲೂ ವಿಫಲರಾದರು. ಆದ್ದರಿಂದ ಚಾತುರ್ವರ್ಣ ಗುಣದ ಮೇಲೆ ನಿಂತಿದೆ ಎಂಬುದು ಭ್ರಮಾತ್ಮಕ ತಿಳಿವಳಿಕೆ.

ಇಂದಿಗೂ ಸಂತಶ್ರೇಷ್ಠ ಕನಕದಾಸರನ್ನು ಉಡುಪಿಯ ದೇವಸ್ಥಾನ ಮತ್ತು ಮಠಗಳು ಹೇಗೆ ಕಾಣುತ್ತಿವೆ? ಜಾತಿ ಬ್ರಾಹ್ಮಣಮತದ ಕಾಣಿಕೆ.

ಕೃಷ್ಣ ಚಾತುರ್ವರ್ಣದ ದಬ್ಬಾಳಿಕೆಯ ವ್ಯವಸ್ಥೆಯಲ್ಲಿ ಭೇದಭಾವ ಮಾಡುತ್ತಾನೆ. ಭೇದಭಾವ ಮಾಡುವವನು ಖಂಡಿತ ಜ್ಞಾನಿ ಅಲ್ಲ, ಅವನು ಅಜ್ಞಾನಿ. ಮಾನವರೆಲ್ಲ ಒಂದು ಎಂದು ಹೇಳಿದ ಅಖಂಡ ಮಾನವತಾವಾದಿಯಾದ ಮಹಾಜ್ಞಾನಿ ಬುದ್ಧದೇವ, ಸಂಪ್ರದಾಯ ಸಮಾಜ ಅಸ್ಪೃಶ್ಯ ಎಂದು ಕರೆಯುವ ಚುಂದನ ಮನೆಯಲ್ಲಿ ಊಟ ಮಾಡಿದರು. ಬಸವಣ್ಣ ತಾನು ಮಾದಾರ ಚನ್ನಯ್ಯನವರ ಮನೆಯ ಮಗ ಎಂದು ಹೆಮ್ಮೆಪಟ್ಟರು. ಅವರ ಸಮಕಾಲೀನ ಎಲ್ಲ ಮಹಾಶರಣರು ತಾರತಮ್ಯವಿಲ್ಲದೆ ಬಾಳಿದರು. ಶ್ರೀ ರಾಮಕೃಷ್ಣ ಪರಮಹಂಸರು ಹರಿಯನ ಕಕ್ಕಸ್ಸನ್ನು ತಮ್ಮ ಜಟೆಯಲ್ಲಿ ಒರೆಸಿ ಜಾತಿಯ ಪಾಪವನ್ನು ಕಳೆದುಕೊಂಡರು. ಸ್ವಾಮಿ ವಿವೇಕಾನಂದರು ಚಪ್ಪಲಿ ಹೊಲಿಯುವವನ ಮನೆಯ ಊಟ ಮಾಡಿ ಜಗದ್ವಂದ್ಯರಾಗಿದ್ದನ್ನು ಅನುಸರಿಸಬೇಕು. ಹೀಗೆ ಹೋಲಿಸಿದಾಗ ಜಾತಿ ಬೋಧಿಸುವ ಕೃಷ್ಣ ಅತ್ಯಂತ ಸಣ್ಣವನಾಗುತ್ತಾನೆ. ಕೃಷ್ಣನಿಗೆ ಖಂಡಿತ ಜ್ಞಾನೋದಯವಾಗಿರಲಿಲ್ಲ, ಆದ್ದರಿಂದ ಕೃಷ್ಣನಿಗೆ ಪೂಜೆ ಸಲ್ಲದು. ಅವನು ತಿರಸ್ಕಾರಯೋಗ್ಯನು.

ಈಗ ಕ್ಷತ್ರಿಯವರ್ಗ ಇಲ್ಲ. ಆದ್ದರಿಂದ ಹಿಂದೂಗಳ ಜನಸಂಖ್ಯೆಯಲ್ಲಿ ಬ್ರಾಹ್ಮಣರು ಇರುವುದು ಕೇವಲ ಶೇಕಡ ನಾಲ್ಕು ಮಂದಿ. ಇವರ ಅರ್ಧಭಾಗ ಸ್ತ್ರೀವರ್ಗವನ್ನು ತೆಗೆದರೆ ಉಳಿಯುವುದು ಬರೀ ಎರಡು ಪರ್ಸೆಂಟ್. ಆದ್ದರಿಂದ ಭಗವದ್ಗೀತೆ ನೂರಕ್ಕೆ ತೊಂಬತ್ತೆಂಟು ಮಂದಿಗೆ ಸಂಪೂರ್ಣ ವಿರುದ್ಧವಾಗಿದೆ. ಇಂಥ ಗ್ರಂಥ ರಾಷ್ಟ್ರ ಧರ್ಮಗ್ರಂಥ ಆಗಬೇಕೇನು?

ಕೃಷ್ಣ ಹೇಳುವಂತೆ ಬ್ರಾಹ್ಮಣ ಹೆಂಗಸರು ಪಾಪಿಷ್ಠರಾದರೆ ಪಾಪಿಷ್ಠ ಹೊಟ್ಟೆಯಲ್ಲಿ ಪುಣ್ಯವಂತ ಬ್ರಾಹ್ಮಣರು ಹೇಗೆ ಹುಟ್ಟಲಿಕ್ಕೆ ಸಾಧ್ಯ? ಬ್ರಾಹ್ಮಣರಲ್ಲದವರೆಲ್ಲಾ ಪಾಪಿಗಳಾದರೆ ಬ್ರಾಹ್ಮಣರೂ ಪಾಪಿಗಳಾಗಲೇಬೇಕು. ಆದರೆ ಅವರೇ ಧರ್ಮ, ಕರ್ಮ ನಿರ್ಣಯಿಸುವ ವ್ಯವಸ್ಥೆ ಮಾಡಿಕೊಂಡಿರುವುದರಿಂದ ತಮ್ಮನ್ನು ಮಾತ್ರ ಪುಣ್ಯವಂತರು ಎಂದು ಬರೆದುಕೊಂಡಿದ್ದಾರೆ. ಕ್ಷತ್ರಿಯರನ್ನು ಪುಣ್ಯವಂತರು ಎಂದು ಇಲ್ಲಿ ಹೇಳಲಾಗಿದೆ. ಏಕೆಂದರೆ ಕ್ಷತ್ರಿಯರು ಶಸ್ತ್ರಸಜ್ಜಿತರಾದುದರಿಂದ ಬ್ರಾಹ್ಮಣರನ್ನು ಹಣಿದಿದ್ದರು. ಆ ಭಯದಿಂದ ಕ್ಷತ್ರಿಯರನ್ನು ಪಾಪಿಗಳು ಎಂದಿಲ್ಲ.

ಕುರುಕ್ಷೇತ್ರ ಯುದ್ಧದಲ್ಲಿ ಮಾತ್ರ ಕೃಷ್ಣ ಮೋಸ ಮಾಡಲಿಲ್ಲ. ಅವನು ಭಗವದ್ಗೀತೆಯಲ್ಲೂ ಮೋಸದ ನುಡಿಗಳನ್ನು ಆಡಿದ್ದಾನೆ. ಮುಂದಿನ ಶ್ಲೋಕದಲ್ಲಿ ಕೃಷ್ಣ ಹೀಗೆ ಹೇಳಿರುವನು:

ಕಿಂ ಪುನಃ ಬ್ರಾಹ್ಮಣಾಃ ಪುಣ್ಯಾ ಭಕ್ತಾಃ



ರಾಜರ್ಷಯಃ ತಥಾ

ಅನಿತ್ಯಂ ಅಸುಖಂ ಲೋಕಂ ಇಮಂ ಪ್ರಾಪ್ಯ ಭಜಸ್ವ ಮಾಂ. (9. 33.)

"ಪುಣ್ಯಯೋನಿಜರಾದ ಭಕ್ತರೂ ಆದ ಬ್ರಾಹ್ಮಣರು ಮತ್ತು ರಾಜರ್ಷಿಗಳು ಮುಕ್ತಿಯನ್ನು ಪಡೆಯುವರೆಂದು ಹೇಳುವ ಅಗತ್ಯ ಏನಿದೆ? ಅನಿತ್ಯವೂ ಅಸುಖವೂ ಆದ ಮನುಷ್ಯ ಜನ್ಮವನ್ನು ಹೊಂದಿರುವ ನೀನು ನನ್ನನ್ನು ಭಜಿಸು."

ಹೀಗೆ ಕೃಷ್ಣ ಖಚಿತವಾಗಿ ಬ್ರಾಹ್ಮಣರು ಮತ್ತು ಕ್ಷತ್ರಿಯರು ಪುಣ್ಯವಂತರು; ಎಲ್ಲಾ ಸ್ತ್ರೀಯರು, ವೈಶ್ಯರು, ಶೂದ್ರರು ಪಾಪಿಗಳು ಎಂದು ಭೇದಭಾವ ಮಾಡಿದ್ದಾನೆ. ಇದು ಅಮಾನುಷವಾದ ವಿಭಜನೆ; ಅನೈತಿಕ ವಿಭಜನೆ. ಈ ವಿಭಜನೆಗೆ ಕೃಷ್ಣ ಯಾವ ಲಕ್ಷಣಗಳನ್ನೂ ಮಾನದಂಡಗಳನ್ನೂ ಹೇಳಿಲ್ಲ, ಆದ್ದರಿಂದ ಇದು ಕಾಡು ಮೃಗೀಯ ಬರ್ಬರ ರಾಕ್ಷಸ ದೃಷ್ಟಿ. ಗೀತೆಯಲ್ಲಿ ಸಮಾನತೆ ಇಲ್ಲ, ಮಾನವೀಯತೆ ಇಲ್ಲ, ಆದ್ದರಿಂದ ಎಲ್ಲ ಸ್ತ್ರೀಯರು ವೈಶ್ಯರು ಶೂದ್ರರು ತಮಗೆ ಅವಮಾನ ಮಾಡುವ ಭಗವದ್ಗೀತೆಯನ್ನು ತಿರಸ್ಕರಿಸಬೇಕು. ಆಗ ಅವರು ಆತ್ಮಗೌರವವುಳ್ಳ ಜನರಾಗುತ್ತಾರೆ.

ಗೀತೆಯಲ್ಲಿ ಗೊಂದಲಗಳು ಮತ್ತು ತಪ್ಪುಗಳು ಇರುವುದನ್ನು ಈಗ ನೋಡೋಣ:

"ಜಾತಸ್ಯ ಹಿ ಧ್ರುವೋ ಮೃತ್ಯುಃ, ಧ್ರುವಂ ಜನ್ಮ ಮೃತಸ್ಯ ಚ (2. 27.) ಹುಟ್ಟಿದವನಿಗೆ ಮರಣ ನಿಶ್ಚಯ; ಮತ್ತು ಸತ್ತವನಿಗೆ ಹುಟ್ಟು ನಿಶ್ಚಯ." ಅಂದರೆ ಒಬ್ಬ ಸತ್ತರೆ ಒಬ್ಬ ಹುಟ್ಟುತ್ತಾನೆ ಎಂದಾಯಿತು.

ಕೃಷ್ಣನ ಈ ಮಾತು ನಿಜವಿದ್ದರೆ ಭಾರತದ ಜನಸಂಖ್ಯೆ ಹೇಗೆ ಹೆಚ್ಚಿತು? ಕವಿ ಬೇಂದ್ರೆ "ಮೂವತ್ತು ಮೂರು ಕೋಟಿ" ಎಂದು (ಕಳೆದ ಶತಮಾನದ ಮೂವತ್ತರ ದಶಕದಲ್ಲಿ?) ಹಾಡಿದ್ದರು. ದೇಶದ ಜನಸಂಖ್ಯೆ ಈಗ ಸುಮಾರು ನೂರ ಇಪ್ಪತ್ತ ಮೂರು ಕೋಟಿಗೂ ಹೆಚ್ಚಿದೆ! ಹೇಗೆ ಹೆಚ್ಚಾಯಿತು? ಕೃಷ್ಣನ ಮಾತು ಹಾಗೂ ಅವನು ಕೊಡುವ ಆತ್ಮತತ್ವ (2. 19-30.) ಸಂಪೂರ್ಣ ಸುಳ್ಳಲ್ಲವೇ?

ಆತ್ಮ ಅಮರ (2, 18-24.) ಎಂದು ಕೃಷ್ಣ ವಿವರವಾಗಿ ಹೇಳುತ್ತಾನೆ. ಆದರೆ ಅವನೇ ಹೀಗೂ ಅನ್ನುತ್ತಾನೆ: ಅವ್ಯಕ್ತ ಆದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ ಅವ್ಯಕ್ತ ನಿಧನಾನಿ ಏವ ತತ್ರ ಕಾ ಪರಿದೇವನಾ. (2, 28.)

"ಅರ್ಜುನ, ಜೀವಿಗಳು ಹುಟ್ಟುವುದಕ್ಕೆ ಮೊದಲು ಕಾಣಿಸುವುದಿಲ್ಲ, ಮಧ್ಯದಲ್ಲಿ ಹುಟ್ಟಿದ ಮೇಲೆ ಕಾಣಿಸಿಕೊಳ್ಳುತ್ತವೆ. ಸತ್ತ ಮೇಲೆ ಸಹ ಕಾಣಿಸುವುದಿಲ್ಲ, ಈ ವಿಷಯದಲ್ಲಿ ಶೋಕವೇನು?"

ಇವನ್ನು ನೋಡಿದರೆ ಕೃಷ್ಣ ತನ್ನ ಮಾತನ್ನು ತಾನೇ ಅಲ್ಲಗಳೆಯುವುದು ತಿಳಿಯುತ್ತದೆ. ಕೃಷ್ಣನ ನಿಲುವೇನು? ಆತ್ಮ ಇದೆ ಅಂತಾನೋ, ಇಲ್ಲ ಅಂತಾನೋ?

ಭಗವದ್ಗೀತೆ ಪರಿಪೂರ್ಣ ಗ್ರಂಥ ಅಲ್ಲ, ಭಗವದ್ಗೀತೆ ಸಂಪ್ರದಾಯವನ್ನು ಸ್ಥಿರೀಕರಿಸುವ ಪ್ರಗತಿ ವಿರೋಧಿ ಗ್ರಂಥ. ಭಗವದ್ಗೀತೆ ಶೇ. 98 ಮಂದಿಗೆ ಸಂಪೂರ್ಣ ಆಘಾತಕಾರಿಯಾಗಿದೆ. ಉಳಿದ ಶೇ. 2 ರಷ್ಟು ಜನರಿಗೆ ಮಾತ್ರ ಅನುಕೂಲವಾಗಿರುವುದು. ಇವರು ಪುಣ್ಯಯೋನಿಜರಾದುದರಿಂದ ಏನು ಕೇಡು ಮಾಡಿದರೂ ಅದು ತಪ್ಪಲ್ಲ! ಪಾಪಯೋನಿಜರು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಅವರಿಗೆ ಏಳಿಗೆ ಇಲ್ಲ! ಎಂಥ ಭಯಂಕರ ತತ್ವಜ್ಞಾನ ಕೃಷ್ಣನದು! ಇಂಥ ಭಗವದ್ಗೀತೆ ಹೇಗೆ ಪವಿತ್ರ? ಇಲ್ಲ, ಭಗವದ್ಗೀತೆ ಅತ್ಯಂತ ಅಪವಿತ್ರ ಗ್ರಂಥ ಎಂದು ತಿಳಿಯುವ ಅಗತ್ಯ ಹೆಚ್ಚಾಗಿದೆ. ಗೀತೆಯಲ್ಲಿ ಆಧ್ಯಾತ್ಮಿಕ ಅಂಶಗಳು ಇವೆ ಎಂದು ಹೇಳಬಹುದು. ಆದರೆ ಅವುಗಳಿಗೆ 'ಪಾಪಯೋನಿಜ'ರಿಗೆ ಪ್ರವೇಶ ಇಲ್ಲ ಎಂದಮೇಲೆ ಅವುಗಳಿಂದ ಪ್ರಯೋಜನ ಏನು? ಆದ್ದರಿಂದ ಕೃಷ್ಣ ಬುದ್ಧಿವಂತನಾಗು, ಜ್ಞಾನಿಯಾಗು, ಆಳುವ ವರ್ಗವಾಗು ಎಂದು ಹೇಳುವುದಿಲ್ಲ, ಬದಲಿಗೆ ಆಳುವ ವರ್ಗಕ್ಕೆ ಅಧೀನನಾಗಿರುವಂತೆ ದಾಸನಾಗು, ಭಕ್ತನಾಗು, ಶರಣಾಗು ಎಂದು ಮತ್ತೆ ಮತ್ತೆ ಒತಾಯಿಸುತ್ತಾನೆ:

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು

ಮಾಂ ಏವ ಏಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ. (9. 34.)

"ನನ್ನಲ್ಲಿಯೇ ಮನಸ್ಸುಳ್ಳವನಾಗಿರು, ನನ್ನ ಭಕ್ತನಾಗಿರು, ನನ್ನನ್ನು ಪೂಜಿಸುವವನಾಗಿರು; ನನ್ನನ್ನು ನಮಿಸುತ್ತಿರು. ನಾನೇ ಅಂತಿಮ ಗತಿ ಎಂದು ತಿಳಿದು ನನ್ನಲ್ಲಿ ಮನಸ್ಸನ್ನು ನೆಟ್ಟರೆ ನನ್ನನ್ನು ಪಡೆಯುವೆ."

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು

ಮಾಂ ಏವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಸಿ ಮೇ. (18. 65.)

"ನನ್ನಲ್ಲಿಯೇ ಮನಸ್ಸಿಡು. ನನ್ನ ಭಕ್ತನಾಗಿರು. ನನ್ನನ್ನು ಆರಾಧಿಸು. ನನಗೆ ನಮಿಸು. ನನ್ನನ್ನೇ ಹೊಂದುವೆ. ಸತ್ಯವಾಗಿ ಪ್ರಮಾಣ ಮಾಡಿ ಹೇಳುತ್ತೇನೆ. ನೀನು ನನಗೆ ಪ್ರಿಯನಾಗಿರುವೆ."

ನನಗೆ ಶರಣಾಗತನಾಗು ಎಂದು ಕೃಷ್ಣ ಮತ್ತೆ ಮತ್ತೆ ಒತ್ತಿ ಒತ್ತಿ ಅರ್ಜುನನಿಗೆ ಆದೇಶಿಸುತ್ತಾನೆ:

ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ

ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ. (18. 66.)

"ಎಲ್ಲಾ ಧರ್ಮಗಳನ್ನು ಪರಿತ್ಯಜಿಸಿ ನನ್ನೊಬ್ಬನಲ್ಲೇ ಶರಣಾಗು. ನಿನ್ನ ಎಲ್ಲ ಪಾಪಗಳನ್ನು ನಾನು ಹೋಗಲಾಡಿಸುತ್ತೇನೆ. ದುಃಖಿಸಬೇಡ."

ಅಪಿ ಚೇತ್ ಸುದುರಾಚಾರೋ ಭಜತೇ ಮಾಂ ಅನನ್ಯಭಾಕ್

ಸಾದುಃ ಏವ ಸ ಮಂತವ್ಯಃ ಸಮ್ಯಕ್ ವ್ಯವಸಿತೋ ಹಿ ಸಃ. (9. 30.)

"ಮಹಾ ದುರಾಚಾರಿಯಾಗಿದ್ದರೂ ಅನನ್ಯ ಭಕ್ತಿಯಿಂದ ನನ್ನನ್ನು ಭಜನೆ ಮಾಡಿದರೆ ಅವನು ಸಾಧು ಎಂದೇ ತಿಳಿಯಬೇಕು. ಏಕೆಂದರೆ ಅವನು ನಿಶ್ಚಯ ಬುದ್ಧಿ ಉಳ್ಳವನಾಗಿರುತ್ತಾನೆ."

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವತ್ ಶಾಂತಿಂ ನಿಗಚ್ಛತಿ

ಕಾಂತೇಯ ಪ್ರತಿ ಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ. (9. 31.)

"ಅರ್ಜುನ ಅವನು ಬೇಗ ಧರ್ಮಾತ್ಮನಾಗುತ್ತಾನೆ; ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ. ನನ್ನ ಭಕ್ತ ನಾಶ ಆಗುವುದಿಲ್ಲ, ತಿಳಿದುಕೊ."


ಇಲ್ಲಿ, ಮನುಷ್ಯ ಏನು ದುರಾಚಾರ ಬೇಕಾದರೂ ಮಾಡಬಹುದು, ಕೃಷ್ಣ ಕಾಪಾಡುತ್ತಾನೆ, ಎಂಬ ಅಭಯ ಇದೆ. ಇದು ಪಾಪಕೃತ್ಯಗಳಿಗೆ ಪ್ರಚೋದನೆ ಅಲ್ಲದೆ ಮತ್ತೇನು? ಪುಣ್ಯದ ಕೆಲಸ ಮಾಡು ಎಂದು ಕೃಷ್ಣ ಹೇಳುವುದಿಲ್ಲ. ಪುಣ್ಯ ಕೆಲಸ ಎಂದರೆ ಕೃಷ್ಣನ ದೃಷ್ಟಿಯಲ್ಲಿ ಯುದ್ಧದಲ್ಲಿ ಜನರನ್ನು ಕೊಲ್ಲುವುದು, ಅಷ್ಟೆ. "ಶತ್ರು ಸೈನ್ಯದ ಎಲ್ಲರನ್ನೂ ನಾನು ಆಗಲೇ ಕೊಂದಿದ್ದೇನೆ. ನೀನು ನೆಪವಾಗು" ಎಂದು ಅರ್ಜುನನಿಗೆ ಕೃಷ್ಣ ತಿಳಿಸುವನು (11. 33).

ಆದ್ದರಿಂದ ಭಕ್ತಿಯ ಹೆಸರಿನಲ್ಲಿ ಭಗವದ್ಗೀತೆ ಬೋಧಿಸುವುದು ಗುಲಾಮಗಿರಿಯನ್ನೇ ಹೊರತು ಸ್ವಾಮಿಗಿರಿಯನ್ನಲ್ಲ, ಭಕ್ತಿ ಎಂದರೆ ವೈಭವೀಕೃತ ಗುಲಾಮಗಿರಿ, ಉಳಿದುದೆಲ್ಲ ಬರಿ ತೋರಿಕೆ. ದೇವರ ಹೆಸರಿನಲ್ಲಿ ಜನಸಾಮಾನ್ಯರನ್ನು ಸದೆಬಡಿದಿರುವ, ಬಡಿಯುತ್ತಿರುವ ಅದ್ಭುತ ಆಯುಧ ಭಗವದ್ಗೀತೆ. ಧರ್ಮ ಮತ್ತು ದೇವರ ಕಲ್ಪನೆ ಅನುಸರಣೆ ಅರ್ಚನೆ ಬೋಧನೆಗಳು ಮುಗ್ಧ ಜನರಿಗೆ ಆಕಾಶ ತೋರಿಸಿ ಅಧೋಗತಿಗೆ ತಳ್ಳುವ, ಅವರನ್ನು ಸುಲಿಸಿ ಬಲಿ ತೆಗೆದುಕೊಳ್ಳುವ ಕ್ರೂರ ಕುತಂತ್ರ ಕೃತ್ಯಗಳು.

ಭಗವದ್ಗೀತೆ ಅನಾಹುತಕಾರಿ ಗ್ರಂಥ; ನಿಷ್ಕಾರವಾದ ಅನರ್ಥಕಾರಿ ಕೃತಿ.

– ಪ್ರೊ. ಕೆ.ಎಸ್. ಭಗವಾನ್

ಮಣ್ಣು ಮತ್ತು ಮಾನವರ ಸಂಬಂಧಗಳು



ಡಾ. ಟಿ.ಎಸ್. ಚನ್ನೇಶ್
channeshts@gmail.com

ಈ ವರ್ಷ 2015ನ್ನು ಅಂತರರಾಷ್ಟ್ರೀಯ ಮಣ್ಣಿನ ವರ್ಷವಾಗಿ ಆಚರಿಸಲಾಗುತ್ತಿದೆ. ಮಣ್ಣು ದಿನೇ ದಿನೇ ತನ್ನ ತಾಜಾತನವನ್ನು ಕಳೆದುಕೊಳ್ಳುತ್ತಿರುವ ಹೊತ್ತಿನಲ್ಲಿ ನಾಗರಿಕತೆಗಿರುವ ಜವಾಬ್ದಾರಿಯನ್ನು ನೆನಪಿಸುವುದು ಮತ್ತು ಹೆಚ್ಚಿಸುವುದು ಇದರ ಉದ್ದೇಶ. ಈಗಿರುವ ಪರಿಸ್ಥಿತಿಯಲ್ಲಿ ಕಳೆದುಕೊಳ್ಳುತ್ತಿರುವ ಮಣ್ಣಿನ ಮೂಲಭೂತ ಶಕ್ತಿಯನ್ನು ಉಳಿಸಿಕೊಳ್ಳದೆ ನಾಗರಿಕತೆಗೆ ಬೇರೆ ಗತಿಯೇ ಇಲ್ಲ. ಹೀಗಾಗಿ ಮಣ್ಣಿನ ಮರು ಚರ್ಚೆಯನ್ನು ಆರಂಭಿಸಲಾಗುತ್ತಿದೆ. ನಮ್ಮ ಅಭಿವೃದ್ಧಿಯ ಬೆಳವಣಿಗೆಗಳನ್ನು ಮಣ್ಣಿಗೆ ಸಮೀಕರಿಸಿ ನೋಡಿದರೆ ಈ ಸಮಸ್ಯೆ ಸುಲಭವಾಗಿ ಅರ್ಥವಾಗುತ್ತದೆ. ಮಾನವನ ಯಾವುದೇ ನಾಗರಿಕತೆಯ ಹುಟ್ಟು ಅಥವಾ ವಿಕಾಸ ಮಣ್ಣಿನ ಗುಣಗಳನ್ನು ಆಧರಿಸಿಯೇ ನಡೆದಿದೆ. ಜಗತ್ತಿನ ಎಲ್ಲಾ ನಾಗರಿಕತೆಗಳೂ ಫಲವತ್ತಾದ ಮಣ್ಣಿರುವ ಜಾಗಗಳಲ್ಲಿಯೇ ವಿಕಾಸಗೊಂಡಿವೆ. ನದಿ ಬಯಲುಗಳು ನೀರಿನ ತಾಣಗಳು ಎನ್ನುವ ಸಾಮಾನ್ಯ ಅಂಶ ಹೊರತುಪಡಿಸಿದರೆ ಅವು ಪ್ರಮುಖವಾಗಿ ಫಲವತ್ತಾದ ನೆಲಗಳೂ ಹೌದು ಎಂಬುದು ಮುಖ್ಯವಾಗಿದೆ. ಇಡೀ ಭೂಮಿಯಲ್ಲಿ ಎಲ್ಲವೂ ಮಣ್ಣಿಗೆ ಅಥವಾ ನೀರಿಗೆ ಸೇರಿದ್ದು ಎನ್ನುವುದು ತಿಳಿದ ವಿಷಯವೇ! ಹಾಗಾಗಿ ಎಲ್ಲಾ ನಾಗರಿಕತೆಗಳ ನೆಲವೂ ಮಾನವರ ಸಂಬಂಧವನ್ನು ಆಯಾ ನೆಲದೊಂದಿಗೆ ಗಟ್ಟಿಗೊಳಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದೆ. ನಾಗರಿಕತೆ ಎನ್ನುವುದು ಕೇವಲ ವಿಕಾಸದ ಹಿನ್ನೆಲೆಯಲ್ಲಿ ಮಾತ್ರವಷ್ಟೇ ಅಲ್ಲ ಆಧುನಿಕ ಪ್ರಪಂಚದ ನಾಗರಿಕ ಸಮಾಜದ ಕಟ್ಟುವಿಕೆಯೂ ನೆಲವನ್ನು ಆಧರಿಸಿಯೇ ನಡೆದಿದೆ. ಈ ಕಟ್ಟುವಿಕೆಯು ಮಾನವರು ಮಣ್ಣಿನೊಡನೆ ಗ್ರಹಿಸಿದ, ಆ ಮೂಲಕ ವಿಕಸಿಸಿಗೊಂಡ ಸಂಬಂಧಗಳೊಡನೆ ನೇರವಾದ ಪ್ರಭಾವಕ್ಕೆ ಒಳಪಟ್ಟಿವೆ. ಇದೇ ಸಂಬಂಧಗಳೇ ನಮ್ಮ ಮತ್ತು ಮಣ್ಣಿನ ನಡುವಿನ ಸಹಚರ್ಯವನ್ನು ಬಿಗಿಗೊಳಿಸುತ್ತಾ ನಿರಂತರ ವಿಕಾಸದಲ್ಲಿವೆ. ಸಂಬಂಧಗಳು ಎಂದರೆ ಭೌತಿಕ ಸಂಬಂಧಗಳು, ರಸಾಯನಿಕ ಸಂಬಂಧಗಳು, ಜೈವಿಕ ಸಂಬಂಧಗಳು ಮತ್ತು ಭಾವನಾತ್ಮಕ ಸಂಬಂಧಗಳು ಎಂಬುದಾಗಿ ನೋಡಲು ಸಾಧ್ಯವಿದೆ. ಈ ಹೊಸ ವರ್ಷದ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿರುವ ನಮ್ಮ ಮತ್ತು ಮಣ್ಣಿನ ಸಹಚರ್ಯವನ್ನು ವಿಜ್ಞಾನದ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡುವ ಉದ್ದೇಶದಿಂದ ಒಂದು ಚಿತ್ರಣವನ್ನು ನಿಮ್ಮೊಂದಿಗೆ ಹಂಚುತ್ತಿರುವೆ.

ಭೌತಿಕ ಸಂಬಂಧಗಳು

ನಮಗೆ ಯಾರಾದರೂ ಪರಿಚಯಗೊಂಡರೆ, ಸಹಜವಾಗಿ ಮೊದಲು ಕೇಳುವುದೇ ಯಾವ ಊರು? ಎಂಬ ಪ್ರಶ್ನೆಯನ್ನು! ಅಂದರೆ ಯಾವ ನೆಲಕ್ಕೆ ಸೇರಿದವರು ಎಂಬರ್ಥದಲ್ಲಿ, ಎಲ್ಲಿಗೆ ಸೇರಿದವರು ಎಂಬ ವಿಶ್ಲೇಷಣೆಯು ಅವರು ಹುಟ್ಟಿ ಬೆಳೆದ ಅಥವಾ ಬದುಕನ್ನು ಸಾಗಿಸಿದ ನೆಲವನ್ನು ಪ್ರತಿನಿಧಿಸುತ್ತದೆ. ಆ ನೆಲದ ಭಾಗವಾಗಿ ಅವರ ಪರಿಚಯವಾಗುತ್ತದೆ. ಈ ಭೌತಿಕ ಸಂಬಂಧಗಳು ನೇರವಾಗಿ ಮಾನವರು ನೆಲದೊಡನೆ ಹೊಂದಿದ ಹೆಚ್ಚೂಕಡಿಮೆ ತಾವು ಹುಟ್ಟಿನಿಂದ, ವಾಸದ ಹಿನ್ನೆಲೆಯಿಂದ ಅಥವಾ ತಮ್ಮ ಜೀವನವನ್ನು ಕಟ್ಟಿಕೊಂಡ ಬಗೆಯಿಂದ ರೂಪುಗೊಂಡದ್ದು. ಮುಖ್ಯವಾಗಿ ತಾವು ನೆಲೆಕಂಡ ನೆಲವೆಂದರೂ ಆದೀತು. ಈ ಭೌತಿಕ ಸಂಬಂಧಗಳು ಅವರು ನೇರವಾಗಿ ತಮ್ಮ ನೆಲೆ ಅಥವಾ ಬಹುವಾಗಿ ಇರುವ ಸ್ಥಳವನ್ನು ಒಳಗೊಂಡದ್ದಾಗಿದೆ. ಒಂದು ನೆಲಕ್ಕೆ ಸೇರಿದವರು ಅದನ್ನು ಬಿಡಬೇಕಾದ ಅನಿವಾರ್ಯ ಬಂದಾಗ ಈ ಭೌತಿಕ ಸಂಬಂಧ ತೀವ್ರವಾಗಿ ಗ್ರಹಿಕೆಗೆ ಬರುತ್ತದೆ. ನೆಲದ ಭೌತಿಕ ಸಂಬಂಧವು ಅನೇಕ ರೀತಿಯಲ್ಲಿ ವ್ಯಕ್ತವಾಗುತ್ತದೆ. ಅಂದರೆ ಭಿನ್ನ ಭಿನ್ನವಾಗಿ ಅದು ಗೋಚರವಾಗುವುದನ್ನು ಕಾಣಬಹುದು. ವಿವಿಧ ವೃತ್ತಿಗಳನ್ನು ಆಶ್ರಯಿಸಿದವರನ್ನು ವಿವಿಧ ರೀತಿಯಲ್ಲಿ ಈ ಭೌತಿಕ ಸಂಬಂಧ ಕಾಡುತ್ತದೆ. ಕವಿಗೆ ತನ್ನ ಜನ್ಮಸ್ಥಳ ಮುಖ್ಯವಾದರೆ, ರಾಜನಿಗೆ ರಾಜಧಾನಿ ಅಥವಾ ರಾಜ್ಯಭಾರ ಮಾಡಿದ ಸ್ಥಳ ಮುಖ್ಯವಾಗುವುದು. ಆದರೆ ಸಂತನಿಗೆ ಸಮಾಧಿಸ್ಥಳ ಮುಖ್ಯವಾಗುವುದು.

ಜನಸಾಮಾನ್ಯರಿಗೂ ತಮ್ಮ ನೆಲದ ಭೌತಿಕ ಸಂಬಂಧಗಳನ್ನು ಗುರುತಿಸುತ್ತೇವೆ. ಹಲವು ಸಾಧಕರು ತಮ್ಮ ತಮ್ಮ ಸಾಧನಾ ಸ್ಥಳಗಳ ಬಗೆಗೆ ಭೌತಿಕ ಹಾಗೂ ಭಾವನಾತ್ಮಕ ಸಂಬಂಧವನ್ನು ತೀವ್ರವಾಗಿ ಹೊಂದಿರುತ್ತಾರೆ. ಆಯಾ ಸ್ಥಳಗಳ ಬಗೆಗೆ ಭಾವನಾತ್ಮಕವಾದ ಬಾಂಧವ್ಯವನ್ನು ಅನುಭವಿಸುತ್ತಾರೆ. ಅನೇಕ ಸಾಂಪ್ರದಾಯಿಕ ಸಂದರ್ಭಗಳನ್ನು ನೆಪಮಾಡಿ ಆಯಾ ಸ್ಥಳಗಳನ್ನು ಸಂದರ್ಶಿಸುವ ನಿಲುವನ್ನೂ ಕಾಣುತ್ತೇವೆ. ತವರುಮನೆಯ ಭೌತಿಕ ಸಂಬಂಧಕ್ಕೆಂದೇ ಅನೇಕ ಹಬ್ಬಗಳು ವಿಕಾಸಗೊಂಡಿರುವ ಹಿನ್ನೆಲೆಯುಳ್ಳ ಸಮಾಜ ನಮ್ಮದು. ಶ್ರಾವಣ ಮಾಸವೇ ಪೂರ್ತಿಯಾಗಿ ಹೆಣ್ಣುಮಕ್ಕಳು ತಮ್ಮ ತವರನ್ನು ನೆಪಮಾಡಿ ಸಂದರ್ಶಿಸಲು ಕಾರಣವನ್ನು ಕೊಟ್ಟಿದೆ. ಈ ಸಂಪ್ರದಾಯಗಳೆಲ್ಲಾ ಕಾಲಾಂತರದಲ್ಲಿ ಬದಲಾಗುತ್ತಾ ನಡೆದಿದ್ದರೂ ಅನೇಕ ಕಡೆಗಳಲ್ಲಿ ಇರುವುದನ್ನೂ ಕಾಣುತ್ತೇವೆ. ಏನೆಂದರೂ ಭೌತಿಕ ಸಂಬಂಧಗಳಂತೂ ನೆಲದ ಜತೆ ಒಂದು ಊರಿನ ರೂಪದಲ್ಲಿ ಉಳಿದಿರುವುದಂತೂ ಸತ್ಯ. ಈ ಭೌತಿಕ ಸಂಬಂಧವು ತಾವು ನೆಲಕ್ಕೆ ಸೇರಿದವರೆಂಬ ಭಾವವನ್ನು ಹೇಳುವ ಸಾಧನವಾಗಿದೆ.

ರಸಾಯನಿಕ ಸಂಬಂಧಗಳು

ಮಾನವರನ್ನು ತುಂಬಾ ಸರಳವಾಗಿ ಮಣ್ಣಿನ ಭಾಗವಾಗಿ ನೋಡಲು ಸಾಧ್ಯವಿದೆ. ಕಾರಣ ರಸಾಯನಿಕವಾಗಿ ಮಣ್ಣು



ಮತ್ತು ಮಾನವರ ಸಂಬಂಧ ಬಹಳ ಗಾಢವಾಗಿದೆ. ಅನೇಕಾನೇಕ ರಸಾಯನಿಕ ವಸ್ತುಗಳ ಸಂಕೀರ್ಣ ವ್ಯವಸ್ಥೆಯಾದ ಮಾನವರ ಶರೀರಕ್ಕೆ ಅಗತ್ಯವಾದ ಎಲ್ಲಾ ಮೂಲವಸ್ತುಗಳನ್ನೂ ಹೆಚ್ಚೂಕಡಿಮೆ ಮಣ್ಣಿನಿಂದಲೇ ಪಡೆಯಲಾಗುತ್ತದೆ. ನಾವು ಮಾನವ ಶರೀರವನ್ನು ರಸಾಯನಿಕವಾಗಿ ವಿಶ್ಲೇಷಿಸಿದರೆ ಅದರಲ್ಲಿ ಕಾಣಬರುವ ವಿವಿಧ ಮೂಲವಸ್ತುಗಳಲ್ಲಿ ಬಹುಪಾಲು ಮಣ್ಣಿನಿಂದ ಪಡೆದವುಗಳಾಗಿವೆ. ಕೆಲವನ್ನು ನೀರಿನಿಂದ ಪಡೆದಿರುತ್ತೇವೆ. ತಾಯಿಯ ಗರ್ಭದಲ್ಲೂ ತಾಯಿಯು ಉಣ್ಣುವ ಆಹಾರದ ಆಧಾರದಲ್ಲೇ ಹೊಟ್ಟೆಯಲ್ಲಿನ ಶಿಶುವು ಬೆಳೆಯುತ್ತಾ ಮಗುವಾಗಿ ಹೊರಬಂದು ದೊಡ್ಡದಾಗುತ್ತದೆ. ಇಡೀ ಜೀವನದ ಆಹಾರವು ಒಂದಲ್ಲಾ ಒಂದು ಅರ್ಥದಲ್ಲಿ ಮಣ್ಣಿನ ಆಶ್ರಯದಿಂದಲೇ ಬೆಳೆದು ಬಂದಿದೆ.

ಕೃಷಿಯು ಜೀವ ಜಾತಿಯ ಹೊಟ್ಟೆ ಹೊರೆಯುವ ಜವಾಬ್ದಾರಿಯನ್ನು ಹೊತ್ತಿರುವ ಹಿನ್ನೆಲೆಯಲ್ಲಿ – ಮಣ್ಣನ್ನು ಎಲ್ಲಾ ಜೀವಿಗಳ ಹೊಟ್ಟೆ – ಎಂದೇ ವ್ಯಾಖ್ಯಾನಿಸುತ್ತಾರೆ. ರಸಾಯನಿಕ ಚಕ್ರಗಳ ಮೂಲಕ ಮತ್ತು ಜೈವಿಕ ಚಕ್ರಗಳ ಮೂಲಕ ಮಣ್ಣಿಗೆ ತನ್ನ ಫಲವತ್ತತೆಯನ್ನು ಕಾಪಾಡಿಕೊಳ್ಳುವ ಮತ್ತು ಆ ಮೂಲಕ ನಿರಂತರವಾಗಿ ತನ್ನ ಮೇಲೆ ಬೆಳೆದ ಗಿಡಗಳಿಗೆ ಪೋಷಕಾಂಶಗಳನ್ನು ಒದಗಿಸುವ ಗುಣವಿದೆ. ಅದಕ್ಕೆಂದೇ ತನ್ನಲ್ಲಿ ನೀರನ್ನು ಹಿಡಿದಿಟ್ಟುಕೊಂಡು ತೇವಾಂಶವನ್ನು ಸಸಿಗಳಿಗೆ ಒದಗಿಸುವ ಕ್ರಿಯೆಯನ್ನು ಅನುಸರಿಸುತ್ತದೆ. ಇದರಿಂದಲೇ ರಸಾಯನಿಕಗಳು ಕರಗಿ ಸಸ್ಯದೇಹಕ್ಕೆ ಸೇರಲು ಸಾಧ್ಯವಾಗಿದೆ. ಇದಕ್ಕಾಗಿ ಮಣ್ಣಿನಲ್ಲಿ ಸಾಕಷ್ಟು ಸಾವಯವ ವಸ್ತು ಅಥವಾ ಇಂಗಾಲದ ವಸ್ತು ಇರಬೇಕಾಗುತ್ತದೆ. ನಿಸರ್ಗದಲ್ಲಿ ಇದು ಯಾವುದೇ ಜೀವಿ ಸತ್ತ ಮೇಲೆ ಮರಳಿ ಮಣ್ಣಿಗೆ ಸೇರುವ ಸರಳ ತತ್ವದ ಆಧಾರದಲ್ಲಿ ನಡೆಯುತ್ತಿರುತ್ತದೆ. ಅದೇ ರೀತಿಯಲ್ಲಿ ಸಾಧ್ಯವಾದಷ್ಟು ಉಳಿಕೆಗಳನ್ನು ಮರಳಿ ಮಣ್ಣಿಗೆ ಸೇರಿಸುವುದರ ಮೂಲಕ ಕಾಪಾಡಿಕೊಳ್ಳಬೇಕು. ಯಾವುದೇ ಸಸಿಯು ತನಗೇನು ಬೇಕೋ ಅದನ್ನು ತಾನು ಹುಟ್ಟಿ ಬೆಳೆದ ನೆಲದಿಂದ ಪಡೆದಿರುತ್ತದೆ. ಆದ್ದರಿಂದ ಅದು ಸತ್ತ ಮೇಲೂ ಉಳಿಕೆಗಳನ್ನು ಅದೇ ನೆಲಕ್ಕೆ ಕೊಡಬೇಕಾದ್ದು ಪ್ರಕೃತಿ ಧರ್ಮ. ಆ ಮೂಲಕ ಆ ಮಣ್ಣಿನ ಹಾಗೂ ನೆಲದ ಫಲವತ್ತತೆಯನ್ನೂ ಉಳಿಸಿಕೊಟ್ಟ ಹಾಗಾಗುತ್ತದೆ. ಜತೆಯಲ್ಲಿ ಮಣ್ಣಿನಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವ ಗುಣವನ್ನು ಹೆಚ್ಚಿಸಲೂ ಸಹಾಯವಾಗುತ್ತದೆ. ಇದರಿಂದ ಅಲ್ಲಿನ ಜೀವಿಗಳಿಗೆ ಸುಸ್ಥಿರತೆಯ ಸಾಧ್ಯತೆಯೂ ಹೆಚ್ಚುತ್ತದೆ.

ರಸಾಯನಶಾಸ್ತ್ರದ ಬೆಳವಣಿಗೆಗಳು ಮತ್ತು ತಿಳಿವಳಿಕೆಗಳು ಹೆಚ್ಚಿದಂತೆಲ್ಲಾ, ಅದರ ಅನ್ವಯಗಳೂ ಹೆಚ್ಚಿದವು. 20 ನೇ ಶತಮಾನದ ಕೃಷಿಯು ಬಂಡವಾಳಶಾಹಿ ಗುಣಗಳನ್ನು ಅಪ್ಪಿ ಹಿಡಿದು ಬೃಹತ್ತಾಗಿ ಬೆಳೆದಿದೆ. ಇಂದು ಅದು ಒಂದು ಉತ್ಪಾದಕ ಜಗತ್ತಾಗಿ ಅಗಾಧ ಪ್ರಮಾಣದ ಪರಿಕರಗಳನ್ನು ಬಳಸುವ ಅಥವಾ ಹೊಂದಿರುವ ವಹಿವಾಟಾಗಿದೆ. ಇವು ಕೇವಲ ರಸಾಯನಿಕಗಳು ಮಾತ್ರವಲ್ಲದೆ ಅವುಗಳನ್ನೂ ನಿರ್ದೇಶಿಸುವ ತಳಿಗಳನ್ನು ಒಳಗೊಂಡಿವೆ. ಇಂದು ಅನೇಕ ಒಳಸುರಿಗಳು ಪ್ರಮುಖವಾಗಿ ಗೊಬ್ಬರಗಳು, ಕೀಟನಾಶಕ, ಇತ್ಯಾದಿ ರಸಾಯನಿಕಗಳು ಅಲ್ಲದೆ ರಸದೂತಗಳು ಮೊದಲಾದವು ಜನಪ್ರಿಯವಾಗಿ ಮಾರುಕಟ್ಟೆಯಲ್ಲಿ ಲಭ್ಯ. ಈಗ ಈ ವಹಿವಾಟಿನಿಂದಾಗಿ ರಸಾಯನಿಕ ಸಂಬಂಧಗಳು ವೇಗವಾಗಿ ಬದಲಾಗುತ್ತಾ ಒಂದು ಪ್ರಭೇದದಿಂದ ಮತ್ತೊಂದಕ್ಕೆ ಸೇರುತ್ತಾ ಸಾಗುತ್ತಿರುವುದರಿಂದ ಅವುಗಳ ನಡುವಿನ ಹಾಗೂ ಭೂಮಿಯ ಜತೆಗಿನ ಸಂಬಂಧವು ಗಟ್ಟಿಯಾಗುತ್ತಾ ಸಾಗುತ್ತದೆ. ಇದೊಂದು ನಿರಂತರ ಪ್ರಕ್ರಿಯೆ. ಈ ನೆಲದ ಮೇಲೆ ನಿವಾಸಿಗಳಾದ ಎಲ್ಲಾ ಜೀವಿಗಳ ಆಹಾರದ ಜವಾಬ್ದಾರಿಯನ್ನು ಹೊತ್ತ ಈ ಮಣ್ಣಿನ ಕಾರಣದಿಂದಲೇ ರಸಾಯನಿಕವಾಗಿ ಮೂಲವಸ್ತುಗಳ ಹಾಗೂ ಅವುಗಳ ಸಂಯುಕ್ತಗಳಾಗಿ ನಡೆದೇ ಇರುತ್ತದೆ. ಈ ರಸಾಯನಿಕಗಳ ಬದಲಾವಣೆಯು ಒಂದು ವ್ಯವಸ್ಥೆಯಿಂದ ಮತ್ತೊಂದಕ್ಕೆ ನಿರಂತರವಾಗಿಸಿ ಮಣ್ಣು ಮತ್ತು ಮಾನವರ -ಇನ್ನೂ ಹದವಾಗಿ ಎಲ್ಲಾ ಜೀವಿಗಳ- ರಸಾಯನಿಕ ಸಂಬಂಧವನ್ನು ಸದಾ ಉಳಿಸಿಕೊಂಡಿದೆ.

ಜೈವಿಕ ಸಂಬಂಧಗಳು

ಆಹಾರದ ಆಯ್ಕೆ ನಿಸರ್ಗ ಕಲಿಸಿದ ಪಾಠ. ತಿನ್ನುವುದೇನಿದ್ದರೂ ತನ್ನಿಚ್ಛೆ. ಅದಕ್ಕೆಂದೇ ನೈಸರ್ಗಿಕ ಹುಡುಕಾಟವು ಪರಿಸರವನ್ನು ಅವಲಂಬಿಸಿದೆ. ಆದ್ದರಿಂದ ನಿಸರ್ಗವೂ ಹೊಟ್ಟೆಗೆ ಅನುವಾಗುವಂತೆಯೇ ಸಸ್ಯಗಳನ್ನು ವಿಕಾಸಗೊಳಿಸಿ ಕೊಟ್ಟಿದೆ. ಸುಮಾರು 2000 ಬಗೆಯ ಸಸ್ಯಗಳನ್ನು ನಾವು ಸುಲಭವಾಗಿ ತಿನ್ನಬಹುದೆಂಬ ಅಂದಾಜಿದೆ. ಆದಾಗ್ಯೂ ಹೆಚ್ಚು ಕಡಿಮೆ 200 ಬಗೆಯ ಗಿಡಮರಗಳನ್ನು ನಾವು ಹೆಚ್ಚು ಹೆಚ್ಚು ಬೆಳೆಸುತ್ತೇವೆ. ಅದರಲ್ಲಿ 20 ಬೆಳೆಗಳನ್ನು ವಾಣಿಜ್ಯವಾಗಿ ಬೆಳೆಯುತ್ತೇವೆ. ಆದರೂ ಪ್ರತೀ ದಿನದ ತಿನಿಸಿನಲ್ಲಿ ಕೇವಲ ಎರಡು ಸಸ್ಯಗಳು ಬಹುಪಾಲು ಆಹಾರವನ್ನು ನಿರ್ದೇಶಿಸುತ್ತವೆ. ನಿಸರ್ಗ ಕೊಟ್ಟ ಅಗಾಧ ಆಹಾರದ ತಿನಿಸುಗಳಲ್ಲಿ ಕೇವಲ ಕೆಲವನ್ನೇ ನಮ್ಮ



ಬಹುಮುಖ್ಯ ಆಹಾರವನ್ನಾಗಿ ಮಾಡಿಕೊಂಡು ಜೀವನವನ್ನು ನಡೆಸುತ್ತದ್ದೇವೆ. ಆ ಮೂಲಕ ನಾವು ಈ ಜೈವಿಕ ಪರಂಪರೆಯಲ್ಲಿ ವಿಭಿನ್ನವಾಗಿ ಬೆಳೆಯುತ್ತಾ ಸಾಗುತ್ತಿದ್ದೇವೆ. ಇಲ್ಲವಾದಲ್ಲಿ ನಾವೂ ಸಹ ಈ ಜೈವಿಕ ಪ್ರಪಂಚದ ಭಾಗವಾಗಿ ಎಲ್ಲ ಜೀವಿಗಳಂತೆ ಜೀವಿಸುವ ಸಾಧ್ಯವಿತ್ತು. ಇಷ್ಟಾದರೂ ನಾವೇನು ಈ ಜೈವಿಕತೆಯಿಂದ ಸಂಪೂರ್ಣವಾಗಿ ದೂರವಾಗಿಲ್ಲ. ಹಾಗೂ ದೂರವಾಗಲು ಸಾಧ್ಯವಿಲ್ಲ.

ಮಣ್ಣಿನ ಆರೋಗ್ಯವೇ ಎಲ್ಲರ ಆರೋಗ್ಯ


ಮಣ್ಣಿನ ಆರೋಗ್ಯವೇ ನಮ್ಮ ನಿಮ್ಮೆಲ್ಲರ ಆರೋಗ್ಯ! ನಮ್ಮ ಆರೋಗ್ಯ ದಿನನಿತ್ಯ ನಾವು ತಿನ್ನುವ ತುತ್ತಿನ ಮೇಲೆ ನಿಂತಿದೆ ಅಂದರೆ ಆಶ್ಚರ್ಯವೇನಿಲ್ಲ. ಆರೋಗ್ಯಪೂರ್ಣ ತುತ್ತನ್ನು ಒದಗಿಸುವ ಮಣ್ಣಿನ ಪಾಲನ್ನು ವೈಜ್ಞಾನಿಕ ಹಿನ್ನೆಲೆಯಿಂದ ಅದರ ಬೆಳವಣಿಗೆಗಳಿಂದ ಗಮನಿಸಿದರೆ ಇದು ಸಂಪೂರ್ಣ ಸತ್ಯ ಎನಿಸದೇ ಇರದು. ಕಾರಣ ನಮ್ಮ ಎಲ್ಲಾ ಆಹಾರಾಂಶಗಳ ಮೂಲ ಮಣ್ಣು. ಹಾಗಾಗಿ ನಮ್ಮ ಆರೋಗ್ಯವು ಮಣ್ಣಿನ ಹಿನ್ನೆಲೆಯಿಂದ ವಿಕಾಸಗೊಂಡಿದೆ. ಇದನ್ನು ವಿವರವಾಗಿ ನೋಡುವ ಕ್ರಮವು ಇತ್ತೀಚೆಗೆ ಆರಂಭವಾಗಿದೆ. ಅನೇಕ ಅವಶ್ಯಕ ಮೂಲವಸ್ತುಗಳನ್ನೊಳಗೊಂಡಂತೆ, ವಿವಿಧ ಖನಿಜಾಂಶಗಳು, ವಿಟಮಿನ್ನುಗಳು ಮುಂತಾದ ಸತ್ವಭರಿತ ತಯಾರಿಯಲ್ಲಿ ಮಣ್ಣಿನ ಪಾತ್ರವು ಹಿರಿದು. ನಾವು ತಿನ್ನುವ ಬಹುಪಾಲು ತಿನಿಸುಗಳು ಮಣ್ಣಿನಿಂದ ಅಥವಾ ಮಣ್ಣಿನ ನೆರವಿನಿಂದ ಬಂದವು. ನಮ್ಮ ಆರೋಗ್ಯ ಈ ಎಲ್ಲಾ ಜೈವಿಕ ಉತ್ಪನ್ನಗಳ ಮೇಲೆ ನಿಂತಿರುವ ಹಿನ್ನೆಲೆಯಲ್ಲಿ ಮಣ್ಣನ್ನೂ ಆರೋಗ್ಯದ ಪರಂಪರೆಯಲ್ಲಿ ನೋಡಬೇಕಾಗುತ್ತದೆ. ಇತ್ತೀಚೆಗೆ ನಮ್ಮ ಆಹಾರದಲ್ಲಿ ಸತುವಿನ ಕೊರತೆಯು ಹೆಚ್ಚಾಗಿ ಕಾಣಬರುತ್ತಿವುದಕ್ಕೆ ಕಾರಣ ಅದು ನೆಲದಲ್ಲೂ ಇರದಿರುವುದು.

ನಮ್ಮದು ಜೈವಿಕ ಸಂಪತ್ತನ್ನು ಆಧರಿಸಿದ ನಾಗರಿಕತೆ. ಇಲ್ಲಿನ ಬಹುಪಾಲು ಜೀವನವು ಜೈವಿಕತೆಯನ್ನು ಅವಲಂಬಿಸಿಯೇ ನಡೆಯುತ್ತದೆ. ಹಾಗಾಗಿ ಈ ಜೈವಿಕ ಪ್ರಪಂಚದ ನೆಲೆಯನ್ನು ಬಿಟ್ಟು ಜೈವಿಕತೆಯೇ ಇರಲಾರದು. ಇದರಿಂದಾಗಿ ಜೀವ ಪ್ರಪಂಚದ ಸಂಬಂಧಗಳು ಮಣ್ಣಿನ ಜತೆಗೆ ಬೆಸೆದಿವೆ. ಇದು ಕೇವಲ ನಾವು ತಿನ್ನುವ ಅನ್ನ ಮಾತ್ರವೇ ಅಲ್ಲ, ಇಲ್ಲಿನ ಬಹುಪಾಲು ಜೀವಿಗಳ ಜತೆಗೆ ನಮ್ಮ ಸಂಬಂಧವಿದೆ. ಈ ಎಲ್ಲಾ ಜೀವಿಗಳೂ ಮಣ್ಣಿನಿಂದ ನೇರವಾದ ಸಂಬಂಧವನ್ನು ವಿಕಾಸಗೊಳಿಸಿ, ಉಳಿಸಿ ಬೆಳೆಸಿಕೊಂಡು ಸಾಗುತ್ತವೆ. ಇದೊಂದು ನಿರಂತರ ಜೈವಿಕ ಕ್ರಿಯೆಯೇ ಆಗಿದೆ. ಹೀಗೆ ಮಣ್ಣಿಗೂ ಮಾನವರಿಗೂ ಜೈವಿಕವಾದ ಅನುಭಾವ ಸಂಬಂಧ ನಿರಂತರತೆಯನ್ನು ಉಳಿಸಿಕೊಂಡು ಸಾಗುತ್ತಿದೆ. ಅದನ್ನು ಅರಿಯುವ ಮಾನವರ ಪ್ರಯತ್ನ ಮಾತ್ರ ಇನ್ನೂ ಹೆಚ್ಚಬೇಕಾಗಿದೆ. ಕಾರಣ ಪ್ರಕೃತಿಯು ಅರಿತಷ್ಟು ನಿಗೂಢವಾಗಿಯೇ ಮುಂದುವರೆಯುತ್ತಿದೆ. ಇನ್ನೂ ಅದರ ವಿವರಗಳು ಅರಿಯಬೇಕಿದೆ.

ಭಾವನಾತ್ಮಕ ಸಂಬಂಧಗಳು

ಭೌತಿಕ ಸಂಬಂಧವು ಭಾವನಾತ್ಮಕ ಸಂಬಂಧವನ್ನು ಉಂಟುಮಾಡುವಲ್ಲಿ ಬಹುಪಾಲು ಪಾತ್ರವನ್ನು ವಹಿಸುತ್ತದೆ. ಹಲವಾರು ಕಾರಣಗಳಿಂದ ಮನುಷ್ಯನು ಯಾವುದಾದರೂ ನೆಲಕ್ಕೆ ಈ ಭಾವನಾತ್ಮಕ ಸಂಬಂಧವನ್ನು ವಿಕಸಿಸಿಕೊಳ್ಳಲು ನೆರವಾಗಬಹುದು. ತನ್ನ ಬದುಕಿನ ಯಾವುದೇ ಘಟನೆ ಅಥವಾ ಯಾರೊಡನೆಯ ಸಂಬಂಧ ಕಾರಣವಾದೀತು. ಹೌದು. ಅನೇಕ ಜನರು ಯಾವುದಾದರು ಒಂದು ನೆಲಕ್ಕೆ ಭಾವನಾತ್ಮಕವಾಗಿ ಹಚ್ಚಿಕೊಂಡಿರುತ್ತಾರೆ. ಇದು ಕೇವಲ ನೆಲೆಯನ್ನು ಕಂಡುಕೊಂಡ ಕಾರಣವಷ್ಟೇ ಎಂದು ಹೇಳಲು ಸಾಲುವುದಿಲ್ಲ, ಅದಕ್ಕಿಂತಲೂ ಹೆಚ್ಚಿನದಾದ ನೆಮ್ಮದಿಯನ್ನು ಕಂಡ ಅನುಭವವೂ ಇದರ ಜತೆಗೆ ಸೇರಿರುವ ಸಾಧ್ಯತೆಯೂ ಇದೆ. ಅಲ್ಲದೇ ಅನೇಕ ಕಾರಣಗಳಿಂದ ತಮ್ಮ ಸಾಧನೆಯ ಕ್ಷೇತ್ರವಾದರಂತೂ ತೀರಿತು ಭಾವನೆಗಳ ಅತಿರೇಕವನ್ನು ಕಾಣಬಹುದಾಗಿದೆ. ಇದು ಅವರು ಪ್ರೀತಿ ಪಟ್ಟು ಅನುಭವಿಸಿದ ನೆಲದ ವಿಶೇಷವೆಂದರೆ ತಪ್ಪಾಗದು. ಹಲವಾರು ಜನರು ಆಸ್ಪತ್ರೆಯಲ್ಲಿರುವಾಗ ಇನ್ನೇನು ಸಾವು ಸಂಭವಿಸುವುದು ಗ್ಯಾರಂಟಿ ಎನಿಸಿದಾಗ ಸಾಧ್ಯವಾದಷ್ಟು ಬೇಗ ಮನೆಗೆ ಹೋಗಲು ಹವಣಿಸುತ್ತಾರೆ. ಮನೆಯಲ್ಲಿ ಅಥವಾ ಅವರ ಊರಿನಲ್ಲಿ ಸಾವನ್ನು ಹೊಂದಲು ಅಪೇಕ್ಷೆ ಉಳ್ಳವರಾಗಿರುತ್ತಾರೆ. ಇದು ಕೇವಲ ತಮಾಷೆಯ ಸಂಗತಿಯಲ್ಲ, ಅವರು ಅಷ್ಟೊಂದು ಭಾವನಾತ್ಮಕವಾಗಿ ಆ ನೆಲದೊಂದಿಗೆ ಸಂಬಂಧವನ್ನು ಹೊಂದಿರುತ್ತಾರೆ. ಇದೇ ಕಾರಣಕ್ಕೆ ಎಲ್ಲೋ ಮರಣಹೊಂದಿದ ಮಂದಿಯನ್ನು ಹುಟ್ಟೂರಿಗೆ ಕೊಂಡೊಯ್ಯುವ ಸಂಪ್ರದಾಯವನ್ನು ಕಾಣಬಹುದು. ಸಾಮಾನ್ಯವಾಗಿ ಹುಟ್ಟೂರಲ್ಲಿ ಸಂಸ್ಕಾರ ಮಾಡುವ ಸಂಗತಿಗಳೂ ಇಂತಹ ಭಾವನಾತ್ಮಕ ಹಿನ್ನೆಲೆಯಲ್ಲಿಯೇ ವಿಕಾಸಗೊಂಡಿವೆ.

ತುಂಬಾ ಆಸಕ್ತಿದಾಯಕವಾದ ನಿದರ್ಶನ ಒಂದು ಇಲ್ಲಿದೆ. ನಮ್ಮ ದೇಶದ ಹಾಲಿನ ಉತ್ಪಾದನೆಯಲ್ಲಿ



ಕ್ರಾಂತಿಯನ್ನುಂಟುಮಾಡಿ, ಅಸಂಖ್ಯಾತ ಡೈರಿಗಳನ್ನು ಕಟ್ಟಲು ಕಾರಣರಾದ ಡಾ. ವರ್ಗೀಸ್ ಕುರಿಯನ್ ಕೇರಳ ನಾಡಿನವರು. ಆದರೆ ಆಚಾನಕ್ಕಾಗಿ ಅವರು ಗುಜರಾತ್‌ನಲ್ಲಿ ನೆಲೆ ನಿಂತು ಆನಂದ್‌ನಲ್ಲಿ ತಮ್ಮ ಕಾರ್ಯ ಆರಂಭಿಸಿದರು. ಮುಂದೆ ಅವರು ಇಡೀ ದೇಶದ ಬಹು ಮುಖ್ಯ ಸಂಸ್ಥೆಯ ಮುಖ್ಯಸ್ಥರಾದರೂ ಅದರ ಮುಖ್ಯನೆಲೆಯನ್ನು ಆನಂದ್‌ನಲ್ಲಿಯೇ ಸ್ಥಾಪಿಸಲು ಭಾರತ ಸರ್ಕಾರಕ್ಕೆ ಕೇಳಿಕೊಂಡರು. ಅಷ್ಟೇ ಅಲ್ಲ, ನಮ್ಮ ರಾಷ್ಟ್ರವಲ್ಲದೆ ಅನ್ಯ ದೇಶಗಳು ಅವರ ಸಹಕಾರ ಕೋರಿದಾಗ 'ಆನಂದ್‌ನಿಂದ ನಿಭಾಯಿಸುವುದಾದ ಯಾವುದೇ ಕೆಲಸ ಹೇಳಿ ಅಡ್ಡಿಯಿಲ್ಲ' ಎನ್ನುವಂತೆ ಮಾತಾಡುತ್ತಿದ್ದರು. ಹಾಗೆಯೇ ನಡೆದುಕೊಂಡರು. ತಮ್ಮ ಅಂತಿಮ ಯಾತ್ರೆಯೂ ಆನಂದ್‌ನಲ್ಲಿಯೇ ಎನ್ನುವುದು ಅವರ ಸಾಧನಾ ಸ್ಥಳಕ್ಕೆ ಅವರಿತ್ತ ಗೌರವಪೂರ್ವಕ ಭಾವನಾತ್ಮಕ ಸಂಬಂದವಲ್ಲದೇ ಮತ್ತೇನೂ ಅಲ್ಲ. ಆನಂದ್‌ನಲ್ಲಿಯೇ ಅವರ ಅಂತಿಮ ಸಂಸ್ಕಾರವೂ ಜರುಗಿತು. ಆನಂದ್ ಎಂದರೆ ಕುರಿಯನ್ ಎನ್ನುವಂತಾಗಿರುವುದು ಕೂಡ ಇಂತಹ ಭಾವನಾತ್ಮಕವಾದ ಸಹಜ ಕಾರಣಕ್ಕೇ.

ಹಲವಾರು ಸಂತರು ತಮ್ಮ ತಮ್ಮ ಅಂತಿಮ ನೆಲೆಯನ್ನು ತಾವೇ ನಿರ್ಧರಿಸಿಕೊಂಡ ಅನೇಕ ಸಂಗತಿಗಳು ಕರ್ನಾಟಕ ರಾಜ್ಯಾದ್ಯಂತ ಕಾಣಬಹುದು. ಈ ನೆಲೆಗಳೆಂದರೆ ಕೇವಲ ಅವರ ಜೀವನಕ್ಕೆ ಅಷ್ಟೇ ಅಲ್ಲದೆ ಅವರ ಸಮಾಧಿಯನ್ನೂ ಹೊಂದ ಬಯಸುವ ಸ್ಥಳಗಳೂ ಆಗಿವೆ. ನೆಲದ ಜತೆಯ ಭಾವನಾತ್ಮಕ ಸಂಬಂಧವು ಜೀವದಷ್ಟೇ ಸಾವಯುವವಾದುದು. ಅದರ ಜತೆಗಿನ ಬಾಂಧವ್ಯ ಯಾವಾಗಲೂ ಕಾಡುವಂತಹದ್ದು. ಹೀಗೆ ಭಾವನಾತ್ಮಕವಾದ ಮಣ್ಣಿನ ಸಂಬಂಧವೂ ನಮ್ಮ ಬೆಳವಣಿಗೆಯ ಜತೆಗೆ ಸಾಂಸ್ಕೃತಿಕ ಹೊಂದಾಣಿಕೆಯ ನೆಮ್ಮದಿಯನ್ನೂ ಕಾಪಾಡಿದೆ.

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅರ್ಧನಾರೀಶ್ವರ: ಸಂಭೋಗದಿಂದ ಸಮಾಧಿ

ಶೈವ ಕಥಾನಕಗಳಲ್ಲಿ ಬಹಳಷ್ಟು ಬಾರಿ ಶಿವ ಮತ್ತು ಪಾರ್ವತಿಯರ ನಡುವೆ ಸ್ಪರ್ಧೆ, ಸಂಘರ್ಷಗಳು ನಡೆದಿರುವ ಉದಾಹರಣೆಗಳನ್ನು ಉಲ್ಲೇಖಿಸುತ್ತಾರೆ. ಸೋಲು ಮತ್ತು ಗೆಲುವುಗಳ ಬಗ್ಗೆ ಮಾತಾಡುತ್ತಾರೆ. ಪಗಡೆಯ ಆಟದಲ್ಲಾಗಲಿ, ಯಾರೋ ಒಬ್ಬ ಭಕ್ತನಿಗೆ ಆಶ್ರಯ ಕೊಡುವುದರಲ್ಲಾಗಲಿ, ನೃತ್ಯದಲ್ಲಾಗಲಿ- ಹೀಗೆ ನಾನಾಕಾರಣಗಳಿಂದ ಅವರಿಗೆ ಸಂಘರ್ಷವುಂಟಾಗಿ, ಸಾಮಾನ್ಯವಾಗಿ ಶಿವನಿಗೆ ಗೆಲುವು ಉಂಟಾಗುತ್ತದೆ. ಹಲವು ಬಾರಿ ಶಿವನು ಪಾರ್ವತಿಗೆ ಪಾಠ ಹೇಳಿಕೊಡುವ ಶಿಕ್ಷಕನಾಗಿ ರೂಪಾಂತರ ಹೊಂದಿದರೆ ಮತ್ತೆ ಕೆಲವು ಬಾರಿ ಅಧ್ಯಾತ್ಮದ ಗುರುವಾಗಿ ಬೋಧಿಸುತ್ತಾನೆ. ಲಾಸ್ಯವೆಂಬುದು ಹೆಣ್ಣಿಗೆ ಸಹಜವೂ ಮತ್ತು ಸರಳವೂ ಆಗಿದೆ ಎಂದು ನಾವು ಭಾವಿಸಿದರೆ, ಪಾರ್ವತಿಗೆ ಶಿವನೇ ಗುರುವಾಗಿ ಈ ಲಾಸ್ಯವನ್ನು ಬೋಧಿಸಿದವನು ಎಂದು ಪುರಾಣಗಳಲ್ಲಿ ಹೇಳಲಾಗುತ್ತದೆ. ಏಕೆಂದರೆ ಇಲ್ಲಿ ಶಿವನೇ ಪ್ರಪ್ರಥಮ ನಾಟ್ಯಾಚಾರ್ಯನೆಂಬುದಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳುವ ಅಗತ್ಯವಿರುವುದಕ್ಕಿಂತ ಲೋಕಮಾತೆ, ಸಾಕ್ಷಾತ್ ಶಕ್ತಿಸ್ವರೂಪಿಣಿಯಾದರೂ ಪಾರ್ವತಿಯೆಂಬ ಸ್ತ್ರೀಯು ಸ್ತ್ರೀಯೇ ಎಂಬ ಧ್ವನಿ ಕೇಳಿಸುತ್ತಿರುತ್ತದೆ.

ಒಮ್ಮೆ ಶಿವ ಮತ್ತು ಪಾರ್ವತಿಯರಲ್ಲಿ ನೃತ್ಯ ಸ್ಪರ್ಧೆ ಉಂಟಾದಾಗ ಶಿವನು 'ಲಲಾಟತಿಲಕಕರಣ' ಎಂದರೆ ಕಾಲನ್ನು ಮೇಲಕ್ಕೆ ನೇರವಾಗಿ ಎತ್ತುವ ಮೂಲಕ ತನ್ನ ನೃತ್ಯ ಭಂಗಿಯನ್ನು ಪ್ರದರ್ಶಿಸಿ ಪಾರ್ವತಿಯನ್ನು ಗೆಲ್ಲುವವನಾದನು. ಒಟ್ಟಾರೆ ಪಾರ್ವತಿಯೆಂಬ ಸ್ತ್ರೀಯನ್ನು ಶಿವನೆಂಬ ಪುರುಷನು ಶತಾಯಗತಾಯ ಸೋಲಿಸಿಯೇ ತೀರಬೇಕೆಂಬುದು ತಾತ್ಪರ್ಯ.

ಹಿಂದೆ ತಾಯಿಯಿಂದ ಮಗುವಿಗೆ ರಕ್ತ, ಮಾಂಸಗಳಾದಿಯಾಗಿ ಮೃದುವಾಗಿರುವುದೆಲ್ಲವೂ ಬಂದಿದ್ದು ತಂದೆಯ ಧಾತುವಿನಿಂದ ಮೂಳೆ, ನರ ಇತ್ಯಾದಿಗಳೆಲ್ಲಾ ಬಂದಿರುವವು ಎಂಬ ಪರಿಕಲ್ಪನೆ ಇದ್ದಿರಬಹುದು. ಪಾರ್ವತಿಯು ನಿನ್ನ ತಾಯಿಯಿಂದ ನಿನಗೆ ಲಭ್ಯವಾದವೆಲ್ಲವೂ ನಿನ್ನಿಂದ ತೊಲಗಲಿ ಎಂಬ ಶಾಪವನ್ನು ಕೊಡುವಳು. ಅದರಂತೆ ಅವನ ರಕ್ತ ಮಾಂಸಗಳೆಲ್ಲವೂ ಹೀರಿ ಹೋಗಿ ಬರಿಯ ತೊಗಲು, ಮೂಳೆ ಮತ್ತು ನರಗಳಿಂದ ಕೂಡಿದವನಾಗಿರುವನು. ಆಗ ಶಿವನು ಅವನ ಆಧಾರಕ್ಕೆಂದು ಮೂರನೆಯ ಕಾಲೊಂದನ್ನು ನೀಡುವನು.

ಶಕ್ತಿಯಿಲ್ಲದ ಶಿವನಿಗೆ ಆರಾಧನೆಯಿಲ್ಲ. ಶಿವನ ಲಿಂಗವೂ ಕೂಡ ಸ್ತ್ರೀಯ ಯೋನಿಯ ಸಂಕೇತವಾದ ಎಲೆಯಾಕಾರದ ಪಾಣಿಪೀಠದ ಮೇಲೆಯೇ ನಿಲ್ಲುತ್ತದೆ. ಈ ಪಾಣಿಪೀಠವು ಎರಡೂ ಲಿಂಗಗಳ ದೇವತೆಗಳ ವಿಗ್ರಹಕ್ಕೆ ಮೂಲವಾಗಿಯೇ ನಿಂತಿರುವುದು, ಸ್ತ್ರೀಯಾಗಲಿ, ಪುರುಷನಾಗಲಿ ಅವನ ಮೂಲ ಸ್ತ್ರೀಯೇ ಎಂದು.

ಇಷ್ಟರ ಮಟ್ಟಿಗಿನ ಸ್ತ್ರೀ ಪ್ರಾಧಾನ್ಯತೆಯನ್ನು ಶೈವಾಗಮ ಬೋಧಿಸುತ್ತದೆ.

ಹಾಗಾಗಿ ಶಿವ ಸಂಬಂಧಿ ತತ್ವಗಳಿಗೆ ಹೆಣ್ಣು, ಸಂಸಾರ, ಭೂಮಿ, ಮೈಥುನ ಇವುಗಳಾವುವೂ ಹೇಯವಲ್ಲ, ವರ್ಜ್ಯವಲ್ಲ. ಅಂತಹ ಮಡಿವಂತಿಕೆಯೇ ಮೈಲಿಗೆ ಅವರಿಗೆ.

ಮಹಿಳೆ ಶೂದ್ರಳೆಂದು ಕರೆಯುವ ಸ್ತ್ರೀಯ ಕುರಿತಾದ ವೈದಿಕರ ಮಡಿವಂತಿಕೆಯ ಕುರಿತು ಬೃಹದಾರಣ್ಯಕೋಪನಿಷತ್ತು ಎತ್ತುವ ವಿಚಾರವನ್ನು ನೋಡಿ. "ಅವನು ಭಯಪಟ್ಟನು. ಆದುದರಿಂದ ಏಕಾಕಿಯಾದವನು (ಈಗಲೂ) ಭಯಪಡುತ್ತಾನೆ. 'ನನಗಿಂತ ಬೇರೆಯಾದುದು ಇಲ್ಲದಿರುವಾಗ

ಪ್ರಜಾಪತಿಯು ತನ್ನ ದೇಹದಿಂದ ಬೇರಾಗಿ ಬಂದ ಶತರೂಪೆಯನ್ನು ವರಿಸಲು ಬೆನ್ನಟ್ಟಿ ಹೋದ. ಆದರೆ, ಪಶುಪತಿಯು ಹೊರಗಿದ್ದ ಸ್ತ್ರೀರೂಪವನ್ನು ತನ್ನೊಳಗೆ ಬರಮಾಡಿಕೊಂಡ. ಪ್ರತ್ಯೇಕಿಸಲು ಸಾಧ್ಯವಾಗದಂತೆಯೇ ಮಾಡಿಕೊಂಡ. ಪ್ರಜಾಪತಿಯಲ್ಲಿ ಅಧಿಪತ್ಯ ಸ್ಥಾಪಿಸುವಂತಹ ಬೆನ್ನಟ್ಟುವಿಕೆಯಾದರೆ, ಪಶುಪತಿಯಲ್ಲಿ ಸ್ವೀಕೃತಿಯಲ್ಲಿ ಮಿಲವಾಗುವ ಪ್ರಕ್ರಿಯೆ.

ಶಿವ ಮತ್ತು ಶಕ್ತಿಯರ ಪಾಠವು ಇಲ್ಲಿಗೇ ಮುಗಿಯುವುದಿಲ್ಲ. ಯಾವೊಂದು ಗಂಡಸೂ ಸಂಪೂರ್ಣ ಪುರುಷನಲ್ಲ ಹಾಗೆಯೇ ಯಾವೊಂದು ಹೆಣ್ಣೂ ಸಂಪೂರ್ಣ ಸ್ತ್ರೀಯಲ್ಲ. ಎರಡರ ಸಮಾಗಮ ಮತ್ತು ಮಿಳಿತದಿಂದಲೇ ಮಗುವಾಗಿದ್ದು, ಮೇಲೆ ಕಾಣುವ ಲಿಂಗ ಲಕ್ಷಣಗಳು ಪ್ರಧಾನ ಭೂಮಿಕೆಯಲ್ಲಿದ್ದು, ಮತ್ತೊಂದು ಲಿಂಗ ಲಕ್ಷಣ ಅಂತರ್ಗತವಾಗಿರುತ್ತದೆ" ಎಂಬ ವಿಚಾರವೂ ಇಲ್ಲಿ ಸ್ತ್ರೀ ಪುರುಷರನ್ನು ಪ್ರತ್ಯೇಕಿಸಿ ನೋಡುವ ಲಿಂಗವಾದಿಗಳಿಗೆ ಅರ್ಥವಾಗುವುದಿಲ್ಲ.

ಇನ್ನೂ ಮುಂದುವರಿದು ಸೃಷ್ಟಿ ಮತ್ತು ಲಯಗಳ ಕಡೆಗೆ ಹೊರಳಿದರೆ, ಪ್ರಕೃತಿ ಅಥವಾ ಹೆಣ್ಣು ಸೃಷ್ಟಿಯಾಗಿಯೂ ಮತ್ತು ಆಕಾಶ ಅಥವಾ ಪುರುಷನು ಲಯವಾಗಿಯೂ ಪ್ರತಿಮೆಗಳನ್ನು ತಾಳುತ್ತಾರೆ. ಸೃಷ್ಟಿಯಲ್ಲಿ ಯಾವುದೇ ಸಗುಣದ ವಸ್ತು ಮತ್ತು ಜೀವವು ಉಗಮವಾದ ನಂತರ ಆಕಾಶವೆಂಬ ನಿರ್ಗುಣದಲ್ಲಿ ಲಯವಾಗುತ್ತದೆ. ಅರ್ಧನಾರೀಶ್ವರ ಪರಿಕಲ್ಪನೆಯಲ್ಲಿ ಸೃಷ್ಟಿ ಅಥವಾ ಸಗುಣ ಅಥವಾ ಪ್ರಕೃತಿಯೆಂಬ ಪರಿಕಲ್ಪನೆಯೂ, ಲಯ ಅಥವಾ ನಿರ್ಗುಣ ಅಥವಾ ಪುರುಷನೆಂಬ ಪರಿಕಲ್ಪನೆಯೂ ಒಟ್ಟಾಗಿ ಅಬೇಧ್ಯವಾಗಿದ್ದು ಭಿನ್ನಗುಣಗಳ ಒಟ್ಟು ಅಸ್ತಿತ್ವವನ್ನು ಸೂಚಿಸುತ್ತದೆ.

ಎನ್ನುತ್ತಾರೆ. ಒಬ್ಬ ಪುರುಷನು ವಿಜ್ಞಾನ, ಕಲೆ, ಸಾಹಿತ್ಯ ಯಾವುದೇ ಕ್ಷೇತ್ರದಲ್ಲಾಗಲಿ ಸೃಷ್ಟಿಸಬೇಕು ಎಂಬ ಮನಸ್ಸು ಮಾಡಿದಾಗ ಅಥವಾ ಸೃಜನಶೀಲನಾದಾಗ ಅವನಲ್ಲಿರುವ ಪ್ರಕೃತಿಯ ಅಂಶವೇ ಅಥವಾ ಶಕ್ತಿಯೇ ಕೆಲಸ ಮಾಡಬೇಕೆಂದು ಭಾವಿಸುತ್ತಾರೆ.


ಅವರ ತಾತ್ವಿಕ ನಿರೂಪಣೆಯಲ್ಲಿಯೇ ಹೇಳುವುದಾದರೆ "ಶಿವನ ಚಿತ್ತಿನಲ್ಲಿ ಸೃಷ್ಟಿ ಮಾಡಬೇಕೆಂಬ ಲೀಲೆ" ಮೂಡಿದಾಗ ಹೊಮ್ಮಿದ ನಾದಘೋಷದ ಜೊತೆಜೊತೆಗೇ ಚಿತ್ಕಳೆ ಮಿಂಚಿರುತ್ತದೆ. ಈ ಚಿತ್ಕಳೆ, ಚಿನ್ನಾದಗಳನ್ನು ಗುಡುಗು ಮಿಂಚುಗಳಿಗೆ ಹೋಲಿಸುವರು. ಇಂಥಾ ಚಿತ್ಕಲೆ ಮತ್ತು ಚಿನ್ನಾದಗಳೆರಡೂ ಸಮರಸಾನಂದಗೊಂಡು ಚಿದ್ಬಿಂದು ಉದಿಸುತ್ತದೆ. ಈ ಚಿದ್ಬಿಂದುವನ್ನು ಮಿಂಚು ಗುಡುಗಿನ ನಂತರದ ಸುರಿಯುವ ಮಳೆಗೆ ಹೋಲಿಸುವರು.


ಈ ಚಿನ್ನಾದ, ಚಿತ್ಕಳೆ, ಚಿದ್ಬಿಂದುಗಳನ್ನೇ ಕ್ರಮವಾಗಿ ಅ-ಉ-ಮ್ ಎಂಬ ಪ್ರಣವಾಕ್ಷರಗಳೆನ್ನುವರು. ಈ ಮೂರೂ ಪ್ರಣವಾಕ್ಷರಗಳೂ ಸೇರಿ ಆದ ಓಂಕಾರದಿಂದಲೇ ಎಲ್ಲಾ ಸೃಷ್ಟಿ ಕಾರ್ಯವೂ ನಡೆದಿದೆಯೆಂಬ ಕಲ್ಪನೆ ವೀರಶೈವರಲ್ಲೂ ಉಂಟು.


ಅ ಎಂಬ ನಾದಸ್ವರೂಪಿಯೇ ಶಿವ, ಮ್ ಎಂಬ ಬಿಂದು ಸ್ವರೂಪವೇ ಶಕ್ತಿ ಈ ಎರಡನ್ನೂ ಕೂಡಿಸುವ ಉ-ಕಾರವೇ ಕಳೆ.

ಶಿವತತ್ತ್ವಾವಸ್ಥೆಯಲ್ಲಿ ಅ ಮತ್ತು ಮ್‌ಗಳಿಗೆ ಕಳಾರೂಪಿಯಾದ ಉಕಾರವು ಅನುವಾಗದೇ ಇರುವುದರಿಂದ ಶಿವ ಮತ್ತು ಶಕ್ತಿ ಸಂಗಮವಾಗುವುದಿಲ್ಲವೆಂಬಂತಾಗಿ ಸೃಷ್ಟಿಕಾರ್ಯಕ್ಕೆ ಈ ಶಿವತತ್ತ್ವ ಕೇವಲ ಆಹ್ವಾನರೂಪ ಮಾತ್ರವಾಗಿರುತ್ತದೆ. ನಂತರ ಸಮ್ಮತಿಸಿದ ಆ ಉಮೆಯೊಡನೆ









ಸ್ತ್ರೀ ಪ್ರಾಧಾನ್ಯತೆ ಮತ್ತು ಪುರುಷ ಪ್ರಾಧಾನ್ಯತೆಗಳ ನಡುವೆ ಇರುವ ಸಂಘರ್ಷದ ಚಿತ್ರಣಗಳ ಜೊತೆಗೆ ಸಹಜವಾಗಿ, ನೈಸರ್ಗಿಕವಾಗಿ ಮತ್ತು ಸರಳವಾಗಿ ಇದ್ದಂತಹ ಸ್ತ್ರೀ ಎಂಬ ಪ್ರಕೃತಿಗೆ ಶಿಷ್ಟಾಚಾರ ಮತ್ತು ಸಮಾಜದ ರೂಢಿ ಮತ್ತು ನೀತಿಗಳನ್ನು ಬೋಧಿಸುವವನು ಪುರುಷನೇ ಆಗಿರುತ್ತಾನೆ. ತನ್ನ ಧೋರಣೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಹೆಣ್ಣಿಗೆ ತಕ್ಕುನಾದ ಶಿಕ್ಷಣವನ್ನು ಕೊಡುವವನು ಪುರುಷ!

ಆದರೆ, ಸ್ತ್ರೀ ಮತ್ತು ಪುರುಷ ಪ್ರಾಧಾನ್ಯತೆಯ ಸಂಘರ್ಷದ ಬಲಘಟ್ಟವು ಶಿಥಿಲವಾಗುತ್ತಾ ಮತ್ತೊಂದು ಬಗೆಯ ಅರಿವು ಮೂಡಿದ ಬಗೆಯ ಕಥೆ ನೋಡಿ.

ಶಿವ ಮತ್ತು ಪಾರ್ವತಿಯ ಮದುವೆಯಾದ ನಂತರ ಶಿವನ ಆಪ್ತ ಗಣಗಳಲ್ಲಿ ಒಬ್ಬನಾದ ಭೃಂಗಿಯು ಶಿವನಿಗೆ ಮಾತ್ರ ಪ್ರದಕ್ಷಿಣೆಯನ್ನು ಹಾಕಿ ನಮಸ್ಕರಿಸಲು ಮುಂದಾಗುವನು. ಶಿವನು "ಶಕ್ತಿಯನ್ನೂ ಸೇರಿಸಿ ಆರಾಧಿಸು, ಅವಳಿಲ್ಲದೇ ನಾನು ಅಪೂರ್ಣ" ಎಂದು ಹೇಳುತ್ತಾನೆ. ಆದರೆ ಭೃಂಗಿಯು ಪೂರ್ವಾಗ್ರಹಪೀಡಿತ ಮನಸ್ಥಿತಿ ಇದಕ್ಕೆ ಒಪ್ಪುವುದಿಲ್ಲ. ಆಗ ಶಿವನು ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುತ್ತಾನೆ. ಇದರಿಂದ ಇಬ್ಬರಿಗೂ ಸೇರಿಸಿಯೇ ಪ್ರದಕ್ಷಿಣೆ ಹಾಕಬೇಕಾಗುವುದು ಎಂದು. ಆದರೆ ಭೃಂಗಿ ದುಂಬಿಯ ರೂಪ ತಾಳಿ ಶಿವನ ಶಿರವನ್ನಷ್ಟೇ ಪ್ರದಕ್ಷಿಣೆ ಹಾಕುವ ಹಟಮಾರಿತನ ತೋರುವನು. ಆಗ ಶಿವನು ಪಾರ್ವತಿಯೊಂದಿಗೆ ತನ್ನನ್ನು ಸೇರಿಸಿಕೊಂಡು ಅರ್ಧನಾರೀಶ್ವರನ ರೂಪ ತಳೆಯುತ್ತಾನೆ. ಆಗ ಭೃಂಗಿಗೆ ಶಿವನನ್ನೂ ಮತ್ತು ಪಾರ್ವತಿಯನ್ನೂ ಅಂದರೆ ಪುರುಷನನ್ನೂ ಮತ್ತು ಶಕ್ತಿಯನ್ನೂ ಪ್ರತ್ಯೇಕಿಸಿ ಆರಾಧಿಸಲು ಸಾಧ್ಯವಿಲ್ಲ ಎಂಬಂತೆ ಆಗುತ್ತದೆ.

ನಾನು ಯಾವುದಕ್ಕೆ ಹೆದರಬೇಕು?' ಎಂದು ಆ ಇವನು ಆಲೋಚಿಸಿದನು. ಆದರಿಂದಲೇ ಅವನ ಭಯವು ಹೊರಟುಹೋಯಿತು. ಏಕೆಂದರೆ ಅವನು ಯಾವುದಕ್ಕೆ ಹೆದರಬೇಕಾಗಿತ್ತು? ಎರಡನೆಯವರಿಂದಲೇ ಭಯವುಂಟಾಗುತ್ತದೆ." (1.4.2)

"ಅವನು ರಮಿಸಲೇ ಇಲ್ಲ. ಆದುದರಿಂದ ಏಕಾಕಿಯಾದವನು ರತಿಯನ್ನು ಪಡೆಯುವುದಿಲ್ಲ. ಅವನು ಎರಡನೆಯದನ್ನು ಬಯಸಿದನು. ಅವನು ಆಲಿಂಗಿತರಾದ ಸ್ತ್ರೀ-ಪುರುಷರಷ್ಟೇ ಪ್ರಮಾಣವುಳ್ಳವನಾದನು. ಅವನು ಈ ಶರೀರವನ್ನೇ ಎರಡಾಗಿ ಮಾಡಿ ಬೀಳಿಸಿದನು. ಆ ವಿಭಜನೆಯಿಂದ ಪತಿಪತ್ನಿಯರಾದರು. ಆದುದರಿಂದ ಈ ಶರೀರವು ಅರ್ಧವಾಗಿರುವ ಬೀಜದಂತೆ ತನ್ನ ಅರ್ಧವಾಗಿದೆ ಎಂದು ಯಾಜ್ಞವಲ್ಕ್ಯನು ಹೇಳಿರುವನು. ಆದುದರಿಂದ ಈ ಆಕಾಶವು ಸ್ತ್ರೀಯಿಂದ ಪೂರ್ಣವಾಗುತ್ತದೆ. ಅವನು ಅವಳೊಂದಿಗೆ ಬೆರೆತನು. ಅದರಿಂದ ಮನುಷ್ಯರು ಹುಟ್ಟಿದರು. (1.4.3)

ಇದನ್ನು ಪ್ರಜಾಪತಿಯೆಂಬ ಬ್ರಹ್ಮನ ಕಡೆಯಿಂದಲೂ, ಪಶುಪತಿಯಾದ ಶಿವನ ಕಡೆಯಿಂದಲೂ ವಿಚಾರ ಮಾಡಿದರೆ ಶೈವ ಸಿದ್ಧಾಂತದ ಸ್ತ್ರೀ ಪ್ರಾಧಾನ್ಯತೆ ಅರ್ಥವಾಗುತ್ತದೆ.

ಭಯವೆಂಬುದು ಎರಡರಿಂದ ಉಂಟಾಗುತ್ತದೆ. ಇಲ್ಲಿ ಭಯ ಪಡುವವನು ಮತ್ತು ಭಯಗೊಳಿಸುವಂಥದ್ದು ಲೌಕಿಕವಾಗಿಯಾದರೂ, ತಾತ್ವಿಕವಾಗಿಯಾದರೂ ಎರಡೆಂಬುದು ಇದ್ದಲ್ಲಿ ಭಯ ಅಥವಾ ಸಂಘರ್ಷವೆಂಬುದು. ಎರಡೆಂಬುದು ಇಲ್ಲದೇ ಹೋದರೆ ಯಾರು ಯಾರಿಗೆ ಅಥವಾ ಯಾವುದಕ್ಕೆ ಭಯ ಪಡಬೇಕು ಅಥವಾ ಸಂಘರ್ಷವನ್ನು ಹೊಂದಬೇಕು?

ಸ್ತ್ರೀ-ಪುರುಷರ ಏಕಾಸ್ತಿತ್ವವನ್ನು ಧ್ವನಿಸುವ ಸಿದ್ಧಾಂತವೆಂದರೆ ಅದು ತಂತ್ರದಲ್ಲಿ. ಅಭಿನವ ಗುಪ್ತ, ಭಾಸ್ಕರಾಚಾರ್ಯ, ಲಕ್ಷ್ಮೀದ್ರರೇ ಮೊದಲಾದ ತಂತ್ರ ಶಾಸ್ತ್ರ ವಿಶಾರದರು ಶಿವ ಶಕ್ತಿಯರ ಏಕ ಅಸ್ತಿತ್ವವನ್ನು ಧ್ವನಿಸುವ ತಂತ್ರಶಾಸ್ತ್ರವನ್ನು ನೇರವಾಗಿ ವಿವರಿಸುತ್ತಾರೆ. ಸ್ಕಂದ ಪುರಾಣದಲ್ಲಿ ಹೇಳುವಂತೆ ಶಕ್ತಿಯು ಶಿವನ ಅಥವಾ ಶಕ್ತಿಮನ್‌ನ ಪ್ರತ್ಯೇಕ ಭಾಗವಲ್ಲ. ಇಬ್ಬರೂ ಸಮಪ್ರಮಾಣದಲ್ಲಿ ಜಗತ್ತಿನ ಶಕ್ತಿಯ ಭಾಗವಾಗಿದ್ದಾರೆ.

ಪ್ರತಿಯೊಂದರಲ್ಲಿಯೂ ಈ ಸಮಪ್ರಮಾಣದ ಅಂಶ ಅಥವಾ ವಸ್ತುಗಳಿವೆ. ಋಗ್ವೇದದಲ್ಲಿಯೂ ಇದನ್ನು ಮಿಥುನೀಕರ್ಣವೆಂದು (16-17; 8. 15.6, 10.86) ಪದೇಪದೇ ಉಲ್ಲೇಖವಾಗುತ್ತದೆ. ನೀರು ಮತ್ತು ಮೋಡದ ಉದಾಹರಣೆಯಿಂದ ಸ್ತ್ರೀ ಮತ್ತು ಪುರುಷರ ಅನನ್ಯತೆಯನ್ನು, ಅನ್ಯೋನ್ಯತೆಯನ್ನೂ ವಿವರಿಸುತ್ತಾರೆ. ಋಗ್ವೇದದಲ್ಲಿ ಪುರುಷನೆಂದರೆ ಆಕಾಶವೆಂದೂ ಮತ್ತು ಸ್ತ್ರೀ ಎಂದರೆ ಭೂಮಿಯೆಂದೂ ಕರೆಯುತ್ತಾ ಇಬ್ಬರ ಮಿಲನವನ್ನು ಉಲ್ಲೇಖಿಸುತ್ತಾ ಹೋಗುವುದು ಬಹಳ ಹಳೆಯ ಉಪಮಾಲಂಕಾರ.

ಆಧ್ಯಾತ್ಮಿಕವಾದ ತಂತ್ರ ಸಾಧನೆಯಲ್ಲಿ ಇದರ ಪಾತ್ರವನ್ನು ಸ್ತ್ರೀ ಎಂಬ ಶಕ್ತಿ ಮತ್ತು ಪುರುಷ ಎಂಬ ಶಿವನ ಮಿಲನದ ಪ್ರಾತಿನಿಧ್ಯವನ್ನು ಸ್ಪಷ್ಟವಾಗಿಯೇ ಪ್ರದರ್ಶಿಸುತ್ತಾರೆ.

ಶಕ್ತಿ ಅಥವಾ ಶಿವತತ್ತ್ವದಲ್ಲಿ ಶಿವ ಮತ್ತು ಶಕ್ತಿಯರ ಕೂಡುವಿಕೆಯ ಮಿಲನ ಬಿಂದುವನ್ನು ಮಹತ್ವದ್ದೆಂದು ಪರಿಗಣಿಸುತ್ತಾರೆ. ಲಯದ ಪ್ರತಿನಿಧಿಯಾದ ಶಿವನಲ್ಲಿ ಸೃಷ್ಟಿಯನ್ನು ಮಾಡಬೇಕೆಂಬ ಸಂಕಲ್ಪ ಉಂಟಾದಾಗಲೇ ನಾದ ಘೋಷವು ಹೊಮ್ಮುತ್ತಾ ಚಿತ್ಕಳೆಯು ಮಿಂಚುತ್ತದೆ

ಮಹೇಶ್ವರನು ಆಡಿದ ಲೀಲೆಯೇ ಈ ಚರಾಚರ ಪ್ರಪಂಚದ ವಿಸ್ತಾರ.


ಈ ಪರಿಕಲ್ಪನೆಯೇ ಶಿವನಾಗಿ ವರ್ತಿಸುವ ಪುರುಷನು ತನ್ನ ತಾಂತ್ರಿಕ ಸಾಧನೆಯಲ್ಲಿ ಸ್ತ್ರೀಯನ್ನು ಅತ್ಯಂತ ಗೌರವದಿಂದ ಆಹ್ವಾನಿಸುವನು. ಯೋನಿ ಪೂಜೆ ಮಾಡುವನು. ನಂತರ ಸಂಭೋಗವನ್ನು ಮಾಡುವನು. ಆಗ ಅಂತಹ ಸಂಭೋಗದಿಂದ ಸಮಾಧಿ!

ಇನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಗಂಡು ಮತ್ತು ಹೆಣ್ಣಿನ ಸಂಭೋಗದಿಂದ ಉಂಟಾಗುವ ಸಮಾಧಿಯ ಪ್ರತಿಮೆಯೇ ಅರ್ಧನಾರೀಶ್ವರವೂ ಹೌದು. ನಿರ್ಗುಣವಾದ ಅಸ್ತಿತ್ವದ ಬಿಂದುವೆಂಬ ಚುಕ್ಕಿಯನ್ನು ಇಡುವ ಬದಲು ಕಲಾತ್ಮಕವಾಗಿ ಅರ್ಧಪುರುಷ ದೇಹ ಮತ್ತು ಅರ್ಧ ಸ್ತ್ರೀದೇಹದ ಸಗುಣವಾದ ಸಂಕೇತಗಳನ್ನು ತೋರಿಸುವರು. ಇಂಥಾ ಸೂಕ್ಷ್ಮತೆಗಳನ್ನು ಅರಿಯದ ಪುರುಷ ಪುರೋಹಿತರು ಸ್ತ್ರೀಯರನ್ನು ದೂರಿಟ್ಟು, ಮೈಲಿಗೆಯೆಂದು ದೂರುತ್ತಾರೆ. ಹುಟ್ಟು ಎಂಬ ಸೃಷ್ಟಿ, ಅದೇ ಪ್ರಕೃತಿ. ಸಾವು ಎಂಬ ಲಯ, ಅದೇ ಆಕಾಶ ಅಥವಾ ಪುರುಷ.

ಇವೆರಡೂ ಮನುಷ್ಯನ ಬದುಕಿನ ನೈಸರ್ಗಿಕವಾದ ಮತ್ತು ಆಧ್ಯಾತ್ಮಿಕವಾದಂತಹ ಎರಡು ಕೊನೆಗಳು. ಈ ಹುಟ್ಟಿನ ಮತ್ತು ಸಾವಿನ ಅಂಶಗಳೆರಡೂ ಪ್ರಾಕೃತಿಕವಾದ್ದರಿಂದ ಅವುಗಳಲ್ಲಿ ಯಾವುದೇ ಮೈಲಿಗೆಯನ್ನು ಆರೋಪಿಸದಿರುವುದು ಶಿವತತ್ತ್ವದ ವಿಚಾರ.

ಹುಟ್ಟಿನ ಮೈಲಿಗೆಗೆ ಪುರುಡು ಎಂದೂ, ಸಾವಿನ ಮೈಲಿಗೆಗೆ ಸೂತಕವೆಂದೂ ಆರೋಪಿಸುವುದು ಶಿವನ ಅಥವಾ ಶಕ್ತಿಯ ಅನುಯಾಯಿಗಳಿಗೆ ನಿಷಿದ್ಧ. ●

ನಗರಗಳಿಗೆ ಸೀಮಿತವಾದ 'ಅಭಿವೃದ್ಧಿ'



ಸಿನಿಮಾ ನಟನಟಿಯರ ಅತಿಯಾದ ಆರಾಧನೆ ಭಾರತದ ಒಂದು ವಿಶಿಷ್ಟ ಸಂಪ್ರದಾಯ. ಈ ಭಕ್ತಿ ಕೆಲವೊಮ್ಮೆ ಮಂದಿರ ನಿರ್ಮಾಣ, ನಿತ್ಯಪೂಜೆಗಳಂತಹ ಪರಾಕಾಷ್ಠೆಯ ಮಟ್ಟಕ್ಕೆ ಹೋಗುವುದನ್ನೂ ಕಾಣಬಹುದು! ಇದಕ್ಕೆ ಬಹುಶಃ ಹೀರೊಗಳ ಡೈಲಾಗ್ ಮತ್ತು ವಿಲನ್‌ಗಳನ್ನು ನೆಲಕಚ್ಚಿಸುವ ಫೈಟಿಂಗ್ ಸೀನ್‌ಗಳೆ ಕಾರಣವೆಂದು ತೋರುತ್ತದೆ. ಇವತ್ತು ಕೆಲವು ನಿರ್ದಿಷ್ಟ ಜನವರ್ಗಗಳು ಮೋದಿ ಎಂಬ ರಾಜಕೀಯ ನಾಯಕನನ್ನು ಇದೇ ರೀತಿ ಓರ್ವ ಸೂಪರ್ ಹೀರೊನ ಮಾದರಿಯಲ್ಲಿ ಆರಾಧಿಸುತ್ತಿರುವುದೇಕೆಂದರೆ ಆತನ ನಟನೆಯ ಮಾತುಗಳೆಲ್ಲ ಬರೀ ಬೂಸಿ. ಆತ ಟಾಂಟಾಂ ಮಾಡಿದ್ದ 'ಗುಜರಾತ್ ಮಾದರಿ ಅಭಿವೃದ್ಧಿ' ಸರ್ವರನ್ನೂ ಒಳಗೊಳ್ಳುವ ಮಾದರಿಯಲ್ಲ. ಅದು ಕೇವಲ ಉಳ್ಳವರಿಗೆ, ಮಧ್ಯಮ ವರ್ಗಗಳಿಗೆ ಮತ್ತು ನಗರವಾಸಿಗಳಿಗಷ್ಟೆ ಸೀಮಿತವಾಗಿದೆ. ಈ ಕಟು ಸತ್ಯವನ್ನು ಅರಿಯಬೇಕಿದ್ದರೆ ಆ ಕುರಿತ ವಸ್ತುನಿಷ್ಠ ವರದಿಗಳನ್ನು ಓದಬೇಕು. ಉದಾಹರಣೆಗೆ ಅಹಮದಾಬಾದ್ ನಗರವನ್ನೆ ತೆಗೆದುಕೊಳ್ಳೋಣ. ನಗರದೊಳಗಿನ ರಸ್ತೆಗಳೆಲ್ಲವೂ ನುಣುಪಾಗಿ ಥಳಥಳಿಸುತ್ತಿವೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆ (ಬಿಆರ್‌ಟಿಎಸ್) ಠಾಕುಠೀಕಾಗಿದೆ. ರಸ್ತೆ ಮಧ್ಯದಲ್ಲಿ ಬಸ್ಸುಗಳಿಗೆಂದೆ ಪ್ರತ್ಯೇಕ ಲೇನ್‌ಗಳಿವೆ. ಆದರೆ ನಗರ ಮಿತಿ ದಾಟಿ ಹೊರಹೋಗಿ ಅಹಮದಾಬಾದ್ ಜಿಲ್ಲೆಗೆ ಒಂದು ಸುತ್ತು ಬಂದರೆ ಜಿಲ್ಲೆಯಿಡೀ ಹೊಂಡಮಯ ರಸ್ತೆಗಳು. ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದೆ ಜನ ಶೇರ್ ಆಟೋಗಳಲ್ಲಿ ಪ್ರಯಾಣಿಸಬೇಕಾದ ಪರಿಸ್ಥಿತಿ ಇದೆ.



ರಾಜ್ಯದ ಇನ್ನೂ ಒಳಭಾಗಕ್ಕೆ ಹೋದರೆ ಪರಿಸ್ಥಿತಿ ಇನ್ನಷ್ಟು ಕೆಟ್ಟದಾಗಿದೆ. ಉದಾಹರಣೆಗೆ ಛೋಟಾ ಉದೇಪೂರ್ ಎಂಬ ಆದಿವಾಸಿ ಬಾಹುಳ್ಯ ಜಿಲ್ಲೆಯಲ್ಲಿರುವ ಹಿರನ್ ನದಿಗೆ ಒಂದಾದರೂ ಸೇತುವೆ ಇಲ್ಲ. ಮಕ್ಕಳು ಆಚೆ ದಡದಲ್ಲಿರುವ ಸ್ಕೂಲುಗಳಿಗೆ ಹೋಗಬೇಕಾದರೆ ಹೊಳೆ ಈಸಿಕೊಂಡೆ ಹೋಗಬೇಕು. ಅದೇ ಅಹಮದಾಬಾದ್ ನಗರದೊಳಗಾದರೆ ಸಬರಮತಿ ನದಿಗಡ್ಡವಾಗಿ ಒಂದಲ್ಲ, ಎರಡಲ್ಲ, ಏಳು ಸೇತುವೆಗಳನ್ನು ನಿರ್ಮಿಸಲಾಗಿದೆ!

ಮೋದಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ 2005ನ್ನು 'ನಗರಾಭಿವೃದ್ಧಿ ವರ್ಷ' ಎಂದು ಘೋಷಿಸಿ ನಗರಪ್ರದೇಶಗಳ ಅಭಿವೃದ್ಧಿ ಮಿಷನ್ ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಿದ್ದ. ಇದರ ವತಿಯಿಂದ ಸುಮಾರು 2000 ಚದರ ಕಿಲೊಮೀಟರ್ ವ್ಯಾಪ್ತಿ ಪ್ರದೇಶಗಳಲ್ಲಿ ಏಳು ಬೃಹತ್ತಾದ ವಿಶೇಷ ಹೂಡಿಕೆ ವಲಯಗಳನ್ನು ಸ್ಥಾಪಿಸಲಾಗುತ್ತಿದೆ. ಇಷ್ಟು ಸಾಲದೆಂಬಂತೆ ಇಂತಹ ಇನ್ನೂ ಆರು ವಲಯಗಳನ್ನು ಸ್ಥಾಪಿಸಲು ಚಿಂತನೆ ನಡೆಯುತ್ತಿದೆ. ಜೊತೆಗೆ ನಿರ್ಮಾಣ ಹಂತದಲ್ಲಿರುವ ಗುಜರಾತ್ ಅಂತರರಾಷ್ಟ್ರೀಯ ಹಣಕಾಸು ಟೆಕ್ ಸಿಟಿ (ಗಿಫ್ಟ್ ಸಿಟಿ) ಮತ್ತು ಔದ್ಯಮಿಕ ನಗರಿ ಧೊಲೆರಾಗಳನ್ನು ಹೈಟೆಕ್ ನಗರಗಳು ಎಂಬುದಾಗಿ ಪ್ರಚಾರ ಮಾಡಲಾಗಿದೆ. ನಗರ ಕೇಂದ್ರಿತ ಅಭಿವೃದ್ಧಿಯ ಭಾಗವಾಗಿ ವಡೋದರಾ, ಧೊಲೆರಾ, ಸೂರತ್‌ನಂತಹ ನಗರಗಳ ನಡುವೆ ಬೃಹತ್ತಾದ ನಾಲ್ಕು ಲೇನ್‌ಗಳ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ. ಅಹಮದಾಬಾದ್, ಧೊಲೆರಾ ನಡುವೆ ಮೆಟ್ರೊ ರೈಲು ಓಡಿಸಲೂ ಸಿದ್ಧತೆಗಳಾಗುತ್ತಿವೆ.


ಮೋದಿ ಆಡಳಿತದ ದಶಕವೊಂದರಲ್ಲೆ (2001-10) ಗುಜರಾತಿನಲ್ಲಿ ನಗರವಾಸಿಗಳ ಸಂಖ್ಯೆ ಶೇಕಡಾ 5ರಷ್ಟು ಹೆಚ್ಚಾಗಿದೆ. ಇದು ಹಿಂದಿನ ದಶಕಗಳಿಗಿಂತಲೂ ಜಾಸ್ತಿ. ಅಕ್ಕಪಕ್ಕದ ಗ್ರಾಮೀಣಪ್ರದೇಶಗಳ ಜನ ಗಾಂಧಿನಗರ, ಅಹಮದಾಬಾದ್, ಸೂರತ್ ನಗರಗಳಿಗೆ ವಲಸೆ ಬಂದಿರುವುದರಿಂದ ಆ ನಗರಗಳ ಜನಸಂಖ್ಯೆಯಲ್ಲಿ ದೊಡ್ಡ ಪ್ರಮಾಣದ ಏರಿಕೆಯಾಗಿದೆ. 2011ರ ಜನಗಣತಿ ವರದಿ ಪ್ರಕಾರ ಇವತ್ತು ಪ್ರತಿ 1000 ಗುಜರಾತಿಗಳ ಪೈಕಿ 426 ಜನ ನಗರಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಹಳ್ಳಿ ಮತ್ತು ಪಟ್ಟಣಗಳಲ್ಲಿ ಆಗುತ್ತಿರುವ ಹೂಡಿಕೆಯ ಪ್ರಮಾಣವನ್ನು ಹೋಲಿಸಿ ನೋಡಿದಾಗ ವಸ್ತುಸ್ಥಿತಿಯ ಅರಿವಾಗುತ್ತದೆ.

2007ರಲ್ಲಿ ಆರಂಭವಾಗಿರುವ, 2022ರಲ್ಲಿ (15 ವರ್ಷಗಳಲ್ಲಿ) ಕೊನೆಗೊಳ್ಳಲಿದೆಯೆಂದು ನಿರೀಕ್ಷಿಸಲಾಗಿರುವ ಗಿಫ್ಟ್ ಸಿಟಿ (ವಿಸ್ತೀರ್ಣ: 886 ಎಕರೆ) ಒಂದಕ್ಕೇ ರೂ 70,000 ಕೋಟಿ ಹೂಡಿಕೆಯಾಗುತ್ತಿದೆ. ಈಗ 2014-15ರ ಬಜೆಟ್ಟನಲ್ಲಿ ರಾಜ್ಯದ ಗ್ರಾಮೀಣಪ್ರದೇಶಗಳ ಅಭಿವೃದ್ಧಿಗೆಂದು ಒದಗಿಸಲಾಗಿರುವ ಮೊತ್ತ ರೂ 2311 ಕೋಟಿ. ಇದರ ಆಧಾರದಲ್ಲಿ ಮುಂದಿನ 15 ವರ್ಷಗಳ ಮೊತ್ತವನ್ನು ಲೆಕ್ಕಹಾಕಿದಾಗ 40,000 ಕೋಟಿ ಆಗುತ್ತದೆ. 40,000 ಎಲ್ಲಿ, 70,000 ಎಲ್ಲಿ!! ನಗರಗಳಿಗೆ ಸೀಮಿತವಾದ ಮೋದಿಯ 'ಅಭಿವೃದ್ಧಿ' ಮಾದರಿ ಹಳ್ಳಿ ಮತ್ತು ಪಟ್ಟಣಗಳ ನಡುವೆ ಎಷ್ಟೊಂದು ತಾರತಮ್ಯ ಮಾಡುತ್ತಿದೆ ಎಂಬುದಕ್ಕೆ ಇದಕ್ಕಿಂತ ಒಳ್ಳೆಯ ನಿದರ್ಶನ ಇನ್ನೊಂದಿರದು.

ಹಾಗಿದೆ. ಮೋದಿ ಹೊಡೆಯುವ 'ಅಭಿವೃದ್ಧಿ'ಯ ಡೈಲಾಗುಗಳು, ವೈರಿಗಳ ಹುಟ್ಟಡಗಿಸುವ ಸೋಗುಗಳು ಮತ್ತು ಗಂಡುಗಲಿ ಪೋಜುಗಳು ಯಾವುದೇ ಸಿನಿಮಾ ಹೀರೊನನ್ನು ಮೀರಿಸುವಂತಿವೆ.

ಆದರೆ ವಾಸ್ತವದಲ್ಲಿ ಮೋದಿಯ ಈ 'ಅಭಿವೃದ್ಧಿ'

ಗೋಕರ್ಣ ಮಂಡಲಾಧೀಶ್ವರರಿಗೆ ಈ ಎಲ್ಲಾ ಹೈಡ್ರಾಮಾ ಬೇಕಿತ್ತಾ?



ಮೊನ್ನೆ ಆಹ್ವಾನವಿದ್ದ ಒಂದು ಕಾರ್ಯಕ್ರಮಕ್ಕೆ ಹೋಗಲಾಗಿರಲಿಲ್ಲ. ಆಹ್ವಾನಿಸಿದ ಆ ವ್ಯಕ್ತಿ ದಾರಿಯಲ್ಲಿ ಸಿಕ್ಕಾಗ "ಸಂಸಾರ ತಾಪತ್ರಯ ಸ್ವಾಮಿ ಬರಲಾಗಲಿಲ್ಲ ಕ್ಷಮಿಸಿ" ಎಂದಿದ್ದೆ. ಅದಕ್ಕವರು "ಅದೂ ಸರಿಯೇ. ಸಂಸಾರ ಬಂಧನದಿಂದ ಹೊರನಿಂತವರೇ ಇಂತಹ ಬಿಡಲಾಗದ ತಾಪತ್ರಯದಲ್ಲಿ ಸಿಕ್ಕಿರುವಾಗ ಪ್ರಾಮಾಣಿಕವಾಗಿ ಸಂಸಾರ ನಡೆಸುವ ನಮ್ಮ ನಿಮ್ಮಂಥವರ ಪಾಡು ಇದ್ದದ್ದೇ ಬಿಡಿ" ಎಂದು ನಗಾಡಿದರು.

ಈ ರೀತಿಯಾಗಿ ತಾಪತ್ರಯ (ಮೂಲತಃ ತಾಪತ್ರಯ ಅಂದರೆ ಆದಿ ಭೌತಿಕ, ಆದಿ ಲೌಕಿಕ ಹಾಗು ಆಧ್ಯಾತ್ಮಿಕ ಮೂಲದಿಂದ ಮಾನವನನ್ನು ಕಾಡುವ ಮೂರು ಬಗೆಯ ತಾಪಗಳು ಎಂದರ್ಥ) ಗಳಿಂದ ಹೊರನಿಂತಿದ್ದರೂ ನಮ್ಮ ಗೋಕರ್ಣ ಮಂಡಲಾಧೀಶ ರಾಘವೇಶ್ವರ ಮಹಾಸ್ವಾಮಿಗಳ ಚಡಪಡಿಕೆ ದಿನೇ ದಿನೇ ಹೆಚ್ಚುತ್ತಿರುವುದು ಮಾತ್ರ ತಮಾಷೆಯಾಗಿದೆ.

ಒಂದು ಸುಳ್ಳನ್ನು ಸಾಧಿಸಲು ಸಾವಿರ ಸುಳ್ಳುಗಳ ಸರಮಾಲೆಯನ್ನೇ ಕಟ್ಟಬೇಕಾಗುತ್ತದೆ. ರಾಘವೇಶ್ವರರ ವಿಷಯದಲ್ಲಿ ಇದೀಗ ನಡೆಯುತ್ತಿರುವುದು ಇದೇನೆ. ಶ್ರೀಯುತ ಕೆ.ಪಿ.ಸುರೇಶ್ ಅವರು ಹೇಳಿದಂತೆ ದೊಡ್ಡ ದೊಡ್ಡ ವಕೀಲರನ್ನು ನೇಮಿಸಿಕೊಳ್ಳುವುದೇ ಕಳ್ಳಾಟಿಕೆಯ ಮೂಲ ಹೆಗ್ಗುರುತು. ಈಗಲೂ ಈ ಕೇಸನ್ನು ಒಂದೇ ಏಟಿಗೆ ಮಲಗಿಸಿಬಿಡಬಹುದು. ಬಟ್ಟೆ ಮೇಲಿನ 'ಅದರ' ಕಲೆ ತನ್ನದ್ದಲ್ಲ ಎಂಬುದು ಖಚಿತವಿದ್ದರೆ ನೇರಾನೇರ ಬಂದು ಸಂಪೂರ್ಣ ತನಿಖೆಗೆ ಸಹಕರಿಸಿದರೇ ಸಾಕು ದೂರುದಾರಳದ್ದೇ ಮೋಸ ಎಂದು ಅವರ ನಡೆಯ ಮೂಲಕವೇ ಜಗಜ್ಜಾಹೀರಾಗಿಬಿಡುತ್ತದೆ. ಆದರೆ ಇಲ್ಲಿ ಇಲ್ಲಸಲ್ಲದ ನೆಪವೊಡ್ಡಿ ತಪ್ಪಿಸಿಕೊಳ್ಳುವ ಹುನ್ನಾರಗಳೆಲ್ಲಾ ಯಾತಕ್ಕಾಗಿ?

ಇಂತಹ ಅಡ್ಡದಾರಿಯ ತಂತ್ರ, ಈ ಕೇಸಿನ ಆರಂಭದಿಂದಲೇ ನಡೆಯುತ್ತಿದೆ. ಶ್ಯಾಮಾಶಾಸ್ತ್ರಿಯಂತವರಿಗೆ ಬೆದರಿಕೆ, ಕೆಕ್ಕಾರ ಮಠದಲ್ಲಿ ಚಾತುರ್ಮಾಸದ ನೆಪ ಹೇಳಿ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳೋ ಯತ್ನ, ದೂರುದಾರಳ ಮೇಲೇ ಕೇಸು ದಾಖಲು, ರೌಡಿಗಳಿಂದ ಬೆದರಿಕೆ, ತನ್ನ ಹಿಡಿತದ ಮಾಧ್ಯಮಗಳ ಮೂಲಕ ದೂರುದಾರರ ಹಾಗು ಸ್ವ ಸಮುದಾಯಕ್ಕೇ ಸೇರಿರುವ ಅವರ ಮಕ್ಕಳ ಅದರಲ್ಲೂ ಹೆಣ್ಣುಮಕ್ಕಳ ಮಾನಹಾನಿಕರ ವರದಿ ಹಬ್ಬಿಸಿ ಅವರ ಸ್ಥೈರ್ಯಕ್ಕೆ ಪೆಟ್ಟುಕೊಡುವ ಯತ್ನ, ಅಬ್ಬಬ್ಬಾ..!!

ತಾವು ನ್ಯಾಯದ ಹಾದಿಯಲ್ಲಿದ್ದಿದ್ದೇ ಹೌದಾದರೆ ಈ ಎಲ್ಲಾ ತರಹೇವಾರಿ ಹೈಡ್ರಾಮಾಗಳೆಲ್ಲ ಯಾತಕ್ಕಾಗಿ? ಸ್ವಾಮಿ ಎಂದಾಕ್ಷಣ ಆತ ಅಗ್ನಿಪರೀಕ್ಷೆಗೆ ಒಳಗಾಗಬಾರದೆಂದೇನಿಲ್ಲ. ಸಮಾಜದ ನೈತಿಕತೆ ಕಾಪಾಡುವ ಹೊಣೆ ಹೊತ್ತಿರುವ ಆತ ಇಂತಹ ಅಗ್ನಿಪರೀಕ್ಷೆಗೆ ತನ್ನನ್ನು ತಾನು ಒಡ್ಡಿಕೊಳ್ಳಲು ಸದಾ ತಯಾರಿರಲೇ ಬೇಕು. ಅದನ್ನು ಬಿಟ್ಟು ಬಲಾಢ್ಯ ಸ್ವಾಮಿಯೊಬ್ಬನನ್ನು ರಕ್ಷಿಸುವ ಭರದಲ್ಲಿ ಹೆಣ್ಣೊಬ್ಬಳ ಮಾನಹಾನಿಗಿಳಿಯುವುದು ಮಾನವಂತರ ಲಕ್ಷಣವಂತೂ ಖಂಡಿತಾ ಅಲ್ಲ, ಇದು ಅರಿವಿನಲ್ಲಿರಲಿ.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

'ಮರು'ಮತಾಂತರಗೊಳ್ಳುತ್ತಿರುವವರನ್ನು ಯಾವ ಜಾತಿಗೆ ಸೇರಿಸುತ್ತಾರೆ!?

ಈಗಾಗಲೇ ಹಿಂದೂ ಧರ್ಮದಲ್ಲಿ ಸಾವಿರಕ್ಕೂ ಹೆಚ್ಚು ಜಾತಿಗಳಿರುವಾಗ ಮತ್ತೊಂದು ಹೊಸ ಜಾತಿಯೇ? ಇಂತಹ ಹಿಂದೂ ಧರ್ಮಕ್ಕೆ ಮರು ಮತಾಂತರಗೊಳ್ಳುತ್ತಿರುವವರನ್ನು ಒಂದು ಒಳ್ಳೆಯ ಮೇಲು ಜಾತಿಗೆ ಸೇರಿಸಲಿ ಬಿಡಿ! ಮುಂದೆ ಬಂದವರಿಗೆ ಕೀಳರಿಮೆಯ ತೊಂದರೆ, ಆರಕ್ಷಣೆ ಯಾವ ರೀತಿ ಕೊಡಬೇಕು, ಮಂದಿರಕ್ಕೆ ಪ್ರವೇಶ ಕೊಡಬೇಕೇ ಬೇಡವೇ, ಹೊಸ ಜಾತಿ ನಮೂದಿಸಿ ಮತ್ತೊಂದು ಜಾತಿ ಹುಟ್ಟಿಸಿ ಜಾತಿ ವೈಷಮ್ಯ ಬರಬಾರದು ಅಲ್ಲವೇ? ಹಾಗೂ ಮಂದಿರದಲ್ಲೇ ಒಂದು ಒಳ್ಳೆಯ ಹುದ್ದೆ ಕೊಡಲಿ ಅಲ್ಲವೇ?

ಹೊರಗಿನ ಪ್ರಪಂಚಕ್ಕೆ ಬಂದರೆ, ಜನ ಯಾರು ನೀನು, ಮೊದಲು ಎಲ್ಲಿದ್ದೆ, ನಿಮ್ಮ ಪೂರ್ವಜರು ಯಾರು, ಮತಾಂತರಕ್ಕೆ ಎಷ್ಟು ಹಣ ಕೊಟ್ಟರು, ಏನು ಕೆಲಸ ಬರುತ್ತದೆ, ನೀವು ಏನು ಊಟ ಮಾಡುತ್ತೀರಾ, ಮಾಂಸಾಹಾರಿಯೋ, ಸಸ್ಯಾಹಾರಿಯೋ, ಯಾವ ಭಾಷೆ ಬರುತ್ತದೆ ಎಂದೆಲ್ಲ ಅವಿರತವಾಗಿ ಪ್ರಶ್ನಿಸಬಹುದು! ಅಂತಹ ತೊಂದರೆ ಅವರಿಗೆ ಭವಿಷ್ಯದಲ್ಲಿ ಬರಬಾರದು!

ಯಾವುದಕ್ಕೂ ಮತಾಂತರ ಮಾಡುವರು ಇವರನ್ನೆಲ್ಲ ಯಾವ ಜಾತಿಗೆ ಸೇರಿಸುವುದು ಎಂದು ಯೋಚಿಸಲಿ, ಆಮೇಲೆ ತೊಂದರೆ ಬೇಡ ಅಲ್ಲವೇ?

-ಯು.ಬಿ.ಪಾಲಾಕ್ಷ. ಈ ಮೇಲ್ ಮೂಲಕ

ಮಠಗಳಿಗೆ ಅನುದಾನ ಬೇಕು ಆದರೆ ಅಂಕುಶ ಬೇಡ?

ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಮಠಗಳಿಗೆ ಸಂಬಂಧಿಸಿದ ವಿಧೇಯಕವನ್ನು ಸರಕಾರ ನಿಯಮಾನುಸಾರ ವಿಧಾನಸಭೆಯಲ್ಲಿ ಮಂಡಿಸಿದೆ. ಅದರಲ್ಲಿ ಯಾವ ಯಾವ ವಿಷಯಗಳು ಅಡಕವಾಗಿವೆ ಎಂದು ತಿಳಿದುಕೊಳ್ಳುವ ವ್ಯವಧಾನ ಹಾಗೂ ಸಹನೆಯು ಮಠಗಳನ್ನು ನಡೆಸುವವರಿಗೆ ಇರಬೇಕಿದೆ.

ಧ್ಯಾನದಿಂದ ಸಿದ್ಧಿಪಡೆದವರೆಂದು ಗುರುತಿಸಿಕೊಂಡವರು ಸಾಮಾನ್ಯರಂತೆ ವಿವೇಚನಾರಹಿತವಾಗಿ ಕೂಗಾಡುವ ಅಗತ್ಯ ಇಲ್ಲ. ಮಠಗಳು ಸಾರ್ವಜನಿಕರ (ಜಾತಿಯ ಭಕ್ತರ) ಹಣವನ್ನು ದಾನವಾಗಿ ಪಡೆದರೂ ಅದು ಈ ದೇಶದ ಹಣವೇ ತಾನೇ. ಆದರ ಲೆಕ್ಕ ದೇವರಿಗೆ ಸೇರಬಹುದು. ಆದರೆ ಸರಕಾರದಿಂದ ನೆಲೆ, ಜಲ, ವಿದ್ಯುತ್, ರಕ್ಷಣೆ ಇತ್ಯಾದಿ ಈ ನೆಲದ ಕಾನೂನಿನಂತೆ ಪಡೆದವರು ಈ ದೇಶದ ಕಾನೂನಿಗೆ ಮನ್ನಣೆ ಕೊಡಬೇಕು. ದೇವರ ಮುಂದೆ ಅಸತ್ಯ, ಮೋಸ, ವಂಚನೆ ಇತ್ಯಾದಿಗಳನ್ನು ಮಾಡಬಾರದು ಎಂದು ಪೂಜೆ ಸಲ್ಲಿಸುವವರು ತಾವೇ ಮುಂದಾಗಿ ಬಂದು ಪ್ರತಿವರ್ಷ ಸರಕಾರಕ್ಕೆ ಲೆಕ್ಕ ಸಲ್ಲಿಸಬೇಕಾಗಿತ್ತು. ಅದೇ ಭಗವಂತನಿಗೆ ನಾವು ತೋರುವ ಭಕ್ತಿ, ಗೌರವ.

ದೇವರು-ಧರ್ಮ-ಜಾತಿ-ಭಾಷೆ ಇವು ಈ ದೇಶದ ಐಕ್ಯತೆಗೆ ಅಡ್ಡಿ ಉಂಟುಮಾಡಬಾರದು ಎಂದು ಬೋಧಿಸುವವರೇ ಹೀಗೆ ವರ್ತಿಸಿದರೆ ಹೇಗೆ?

ಸರಕಾರದಿಂದ ಕೋಟಿ ಕೋಟಿ ಅನುದಾನಬೇಕು ಆದರೆ ಅದಕ್ಕೆ ಲೆಕ್ಕ ಕೊಡಬೇಕೆನ್ನುವ ವ್ಯವಧಾನ ಬೇಡವೆ? ಮಠಾಧೀಶರು ಸರಕಾರದ ಜೊತೆಗೆ ಕುಳಿತು ಮಾತುಕತೆ ಮಾಡಲಿ. ಅದಕ್ಕೆ ಬದಲಾಗಿ ಹೀಗೆ ಎಲ್ಲದಕ್ಕೂ ಬೀದಿಗೆ ಇಳಿಯುತ್ತೇವೆ ಅಥವಾ ಕೆಲ ಸ್ವಾಮಿಗಳು ಸರಕಾರವನ್ನೇ ಕೆಡುವುತ್ತೇವೆ ಅಂತ ಉದ್ಧಟತನದ ಮಾತು ಆಡುವುದು ಶರಣ ಧರ್ಮಕ್ಕೆ ಶೋಭೆ ಅಲ್ಲ.

ಹಿಂದೊಮ್ಮೆ 'ವಚನಕಾರರು ಇರಲಿಲ್ಲ, ಅನುಭವ ಮಂಟಪ ಹುಸಿ ಸುಳ್ಳು' ಎಂದು ಕಪಟರಾಳ ಕೃಷ್ಣರಾಯ ಎಂಬ ಸಂಶೋಧಕರೊಬ್ಬರು ಹೇಳಿದಾಗ ತುಟಿ ಎರಡು ಮಾಡದ ಮಠಾಧೀಶರು ಈಗ ಸಿದ್ದರಾಮಯ್ಯನವರ ಸರಕಾರ ಮಠಗಳಿಗೆ ಮೂಗು ದಾರ ಹಾಕುತ್ತೇವೆ ಎಂದಾಗ ಒಂದೇ ಸಮ ನೆಲ ಮುಗಿಲು ಒಂದಾಗುವಂತೆ ಹೇಳಿಕೆ ನೀಡುತ್ತಿದ್ದಾರೆ. ಮಠಗಳು ಸಹಿತ ನಾಡಿನ ದೇಶದ ಆಸ್ತಿ.

ಒಂದೇ ಜಾತಿಗೆ ಸಂಬಂಧಪಟ್ಟ ಸ್ವಾಮಿಗಳು ಆಸ್ತಿಗಾಗಿ ಏನೆಲ್ಲಾ ಮಾಡುತ್ತಾರೆ ಅಂತ ನಾವು ನೋಡಿದ್ದೇವೆ. ಮಠಗಳಲ್ಲಿ ಗೊಂದಲ ಉಂಟಾದರೆ ಪೊಲೀಸರ ಬೇಕು ರಕ್ಷಣೆ ಬೇಕು; ಆದರೆ ಸರಕಾರದ ಅಂಕುಶ ಬೇಡ ಅಂದರೆ ಹೇಗೆ? ಮಠಗಳು ಸರ್ಕಾರದ ಅನುದಾನವನ್ನು ತಿರಸ್ಕರಿಸಲಿ. ಬೇರೆ ಬೇರೆ ಯೋಜನೆಯ ಅಡಿಯಲ್ಲಿ ಮಂಜೂರಾದ ಕಾಮಗಾರಿಯ ಹಣವನ್ನು ಹಲವು ಮಠಾಧೀಶರು ದುರುಪಯೋಗಮಾಡಿಕೊಂಡಿದ್ದಾರೆ. ಇದು ನ್ಯಾಯ ಸಮ್ಮತವೇ? ಈ ವಿಷಯ ಗೊತ್ತಿದ್ದರೂ ಸುಮ್ಮನಿರುವ ಇತರೆ ಸ್ವಾಮಿಗಳು ಏಕೆ ಸರಕಾರವನ್ನು ಕೆಡುವುವ ಮಾತು ಆಡುತ್ತಿದ್ದಾರೆ?

-ಡಾ. ಶಶಿಕಾಂತ ಪಟ್ಟಣ. ಪೂಣೆ

ಉಗ್ರರನ್ನು ಉಗ್ರವಾಗಿ ಖಂಡಿಸಬೇಕಿದೆ

ತಾಲಿಬಾನಿಗಳ ರಾಕ್ಷಸತನವನ್ನು ನಾವು ಅತ್ಯಂತ ಉಗ್ರವಾಗಿ ಖಂಡಿಸಬೇಕಿದೆ. ಅಮಾಯಕ ಕಂದಮ್ಮಗಳನ್ನು ಕೊಲ್ಲುವ ಇವರು ಮನುಕುಲಕ್ಕೇ ಅಪಾಯಕಾರಿಯಾಗಿದ್ದಾರೆ. ಇವರು ಮನುಷ್ಯ ಜಾತಿಗೆ ಸೇರಿದ್ದಾರಾ? ಚೆಂಗೀಸ್ ಖಾನ್ ಎಂಬ ರಕ್ತಪಿಪಾಸುವನ್ನೇ ಇವರು ಮೀರಿಸಿದ್ದಾರೆ. ಇವರ ಗುರಿ ಮತ್ತು ಉದ್ದೇಶವಾದರೂ ಎಂತಹದ್ದು ಎಂದು ತಿಳಿಯುತ್ತಿಲ್ಲ.

ಅಮಾಯಕ ಹೆಣ್ಣುಮಕ್ಕಳನ್ನು ಕೊಲ್ಲುವ ರಾಕ್ಷಸರ ವಿರುದ್ಧ ಮುಸ್ಲಿಮ್ ಜಗತ್ತಿನ ಎಲ್ಲಾ ಮುಲ್ಲಾ ಮತ್ತು ಮೌಲ್ವಿಗಳು ಮಸೀದಿಗಳಲ್ಲಿ ಜಿಹಾದ್‌ಅನ್ನು ಸಾರಬೇಕು. ಯಾಕೆಂದರೆ ಇವರು ಇಸ್ಲಾಮಿಗೆ ಮಸಿ ಬಳಿಯುತ್ತಿದ್ದಾರೆ. ಇವರಿಗೆ ಎಲ್ಲಿಂದ ಮತ್ತು ಯಾರಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಪೂರೈಕೆ ಆಗುತ್ತಿವೆ? ಶಸ್ತ್ರಾಸ್ತ್ರಗಳ ಮಾರುಕಟ್ಟೆಯಾಗಿರುವ ಯೂರೋಪ್, ಅಮೆರಿಕಗಳಿಂದಲೇ ಕಳ್ಳಸಾಗಾಣಿಕೆ ಆಗುತ್ತಿರಬಹುದೇ? ನಿರ್ದಯವಾಗಿ ಇವರು ಹತ್ಯೆ ಮಾಡುವಾಗ ಇವರು ಮಾದಕ ಪದಾರ್ಥವನ್ನು ಸೇವಿಸಿ ಮನುಕುಲವನ್ನು ಕೊಲ್ಲುತ್ತಿರಬಹುದು. ಯಾಕೆಂದರೆ ಮೈಮೇಲೆ ಪ್ರಜ್ಞೆ ಇದ್ದವನು ಇಂತಹ ರಾಕ್ಷಸೀ ಕೃತ್ಯವನ್ನು ಎಸಗುವುದಿಲ್ಲ.

ಅಫಘಾನಿಸ್ತಾನದ ನಜೀಬುಲ್ಲಾ ಸರ್ಕಾರದ ವಿರುದ್ಧ ಹೋರಾಡಲು ಅಮೆರಿಕ ಈ ಮರಿ ಸರ್ಪಗಳಿಗೆ ಹಾಲು ಉಣ್ಣಿಸಿ ಪೋಷಿಸಿತ್ತು. ಇಪ್ಪತ್ತೈದು ವರ್ಷಗಳ ಹಿಂದೆ ರಷ್ಯನ್ನರು ಅಫಘಾನಿಸ್ತಾನದ ಮೇಲೆ ಆಕ್ರಮಣ ಮಾಡಿದಾಗ ರಷ್ಯನ್ನರ ವಿರುದ್ಧ ಹೋರಾಡಲು ಅಮೆರಿಕ ಇವರೆಲ್ಲರಿಗೆ ಸಹಾಯ




ಮರುಭೂಮಿಯಲ್ಲೊಂದು ಜಗಭುಗ್ಗೆ: ಪೀಕೆ

ನಮ್ಮ ಜೀವನದಲ್ಲಿ ಎಂಥ ಕ್ಷಣಗಳು ನಮ್ಮ ಒಟ್ಟು ಬದುಕಿನ ದರ್ಶನ ನೀಡುತ್ತವೆ? ಕೆಲವರು ತಾವು ನಂಬಿಕೊಂಡ ಸಿದ್ಧಾಂತಗಳಲ್ಲಿ, ಕೆಲವರು ತಾವು ಕಂಡುಕೊಂಡ ಸತ್ಯಗಳಲ್ಲಿ, ಮತ್ತೂ ಕೆಲವರು ತಾವು ಕಳಚಿಕೊಂಡ ಭ್ರಮೆಗಳಾಚೆಯ ವಾಸ್ತವದಲ್ಲಿ ಈ ಜೀವನದಲ್ಲಿಯೇ ಮುಕ್ತಿಗೂ ಮೀರಿದ ಅನುಭವಗಳನ್ನು ಗಳಿಸುತ್ತಾರೆ. ಆ ಪ್ರಯತ್ನದಲ್ಲಿ ಅದೆಷ್ಟೋ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಆ ಮೂಲಕ ನಿಂತ ಜಗತ್ತಿಗೆ ಚಲನೆ ನೀಡಲು ತವಕಿಸುತ್ತಾರೆ. ಈ ಪವಾಡ ಎಷ್ಟೋ ಸಲ ಗೊತ್ತಿದ್ದೂ, ಪೂರ್ವನಿಯೋಜಿತವೂ, ಸತತ ಪ್ರಯತ್ನದ ರೂಪದಲ್ಲಿ ಘಟಿಸಿದರೆ ಅನೇಕ ಬಾರಿ ಅಚಾನಕ್ಕಾಗಿ, ಅಚ್ಚರಿಯ ರೀತಿಯಲ್ಲಿ, ಅದ್ಭುತವೆಂಬಂತೆ ಜರುಗುತ್ತದೆ. ಇವೆಲ್ಲಕ್ಕೂ ಪುಷ್ಟಿ ನೀಡಬಲ್ಲ, ಈ ದಿಕ್ಕಿನಲ್ಲಿ ಹೊಸಬೆಳಕು ಹೊಮ್ಮಿಸಬಲ್ಲ, ದೇವರ ಕುರಿತ ಚರ್ಚೆಗಳಿಗೆ, ನಂಬಿಕೆಗಳಿಗೆ ಇನ್ನೂ ಹೊಸ ಆಯಾಮ ಒದಗಿಸಬಲ್ಲ ಒಂದು ಚಲನ ಚಿತ್ರದ ಸಂದರ್ಭ ನಮ್ಮ ಎದುರು ನಿಂತು ಆಹ್ವಾನಿಸುತ್ತಿದೆ.

ವೈಜ್ಞಾನಿಕತೆ, ವೈಚಾರಿಕತೆ, ಮಾನವಪರ ನಿಲುವುಗಳು, ಪ್ರಗತಿಪರ ಚಿಂತನೆಗಳು ಮೂಲಭೂತವಾದವನ್ನು, ಮೂಢ ನಂಬಿಕೆಗಳನ್ನು ಮಣ್ಣು ಮುಕ್ಕಿಸುತ್ತಾ ಜಯ ದಾಖಲಿಸುತ್ತಿವೆ. ಹೊಸ ವಾತಾವರಣಕ್ಕೆ, ಹೊಸ ಬೆಳಕಿಗೆ ತುಡಿಯುವ ಹಪಾಹಪಿ, ಆತುರ, ಅನಿವಾರ್ಯತೆ ಹೊಸ ತಲೆಮಾರಿನ ಮನುಷ್ಯನಿಗೆ ಅರ್ಥವಾಗತೊಡಗಿದೆ. ಶತಶತಮಾನಗಳಿಂದ ಪುರೋಹಿತರು ಹೇಳಿಕೊಂಡು ಬಂದ ಕಾಗಕ್ಕ ಗುಬ್ಬಕ್ಕ ಕಥೆಗಳು ಪ್ರಜ್ಞಾವಂತ ಜನಸಮೂಹಕ್ಕೆ ಬೋರೆನಿಸುತ್ತಿವೆ. ಎಲ್ಲೆಲ್ಲೂ ವಿಚಾರವಂತ ಮನಸುಗಳು, ಜೀವಪರ ಚಿಂತಕರು ಕಾಣಿಸಿಕೊಳ್ಳುತ್ತಿದ್ದಾರೆ. ಆದರೂ, ಇನ್ನೂ ಹೋಮ, ಹವನ, ದಕ್ಷಿಣೆ, ಹರಕೆ ಇತ್ಯಾದಿಗಳ ಹೆಸರಿನಲ್ಲಿ ಪುರೋಹಿತಶಾಹಿ ವರ್ಗ ಸಾಮಾನ್ಯ ಜನರನ್ನು ಸುಲಿಯುತ್ತಲೇ ಇದೆ. ಧರ್ಮಾಧರ್ಮಗಳ ನಡುವೆ ಬೆಂಕಿಹಚ್ಚಿ ಮೈ ಕಾಯಿಸಿಕೊಳ್ಳುವ ಪರಿಪಾಠ ಹಾಗೇ ಮುಂದುವರಿದಿದೆ.

ಜನರಲ್ಲಿ ಜಾಗೃತಿ ಮೂಡಿಸಲು ಪಣ ತೊಟ್ಟವರನ್ನು ಕಂಡರಾಗದ ಮೂಲಭೂತವಾದಿಗಳು ಹೊಂಚು ಹಾಕಿ ಮುಗಿಸಲು ಮುಂದಾಗುತ್ತಲೇ ಇದ್ದಾರೆ. ಅದಕ್ಕಾಗಿ ಯೋಜನೆ ರೂಪಿಸುತ್ತಾರೆ. ಸರಿಯಾದ ಸಮಯಕ್ಕಾಗಿ ಕಾಯುತ್ತಾರೆ. ತಮ್ಮ ಎಂದಿನ ಚಾಳಿಯಾದ ಗುಡಿಗೆ ಬಿಟ್ಟುಕೊಳ್ಳದಿರುವುದು, ಒಂದೇ ಪಂಕ್ತಿಯಲ್ಲಿ ಕೂತು ಊಟ ಮಾಡದಿರುವುದು, ಮುಟ್ಟಿಸಿಕೊಳ್ಳದಿರುವುದು, ಸ್ತ್ರೀಯರನ್ನು ಸಮಾನವಾಗಿ ಕಾಣದಿರುವುದು, ವರ್ಣವ್ಯವಸ್ಥೆಯನ್ನು ಉಳಿಸಿಕೊಳ್ಳುವುದು, ತಮ್ಮ ತಮ್ಮ ಸ್ವಾರ್ಥಕ್ಕೆ ರೂಪಿತವಾದ ಧಾರ್ಮಿಕ ಗ್ರಂಥಗಳಲ್ಲಿನ ಅಂಶಗಳನ್ನು ಅಮಾಯಕ ಜನರ ಮೇಲೆ ಹೇರುವುದು, ಧರ್ಮಾಂಧತೆ, ಜಾತೀಯತೆ, ಮೇಲುಕೀಳು ತಾರತಮ್ಯ ಶ್ರೇಷ್ಠ ಕನಿಷ್ಠವೆಂಬ ಮನೋ ರೋಗ... ಇವೆಲ್ಲವೂ



ಈಗಲೂ ಮುರಿದ ತಮ್ಮ ರೆಕ್ಕೆಗಳನ್ನು ಮತ್ತೆ ಜೋಡಿಸಿಕೊಂಡು ಹಾರಲು ಹವಹಣಿಸುತ್ತಿವೆ. ಧರ್ಮಗುರುಗಳು, ಮಠಾಧಿಪತಿಗಳು, ಜಾತಿಗುರುಗಳು, ಪೂಜಾರಿಗಳು, ಜ್ಯೋತಿಷಿಗಳು, ಮಂತ್ರವಾದಿಗಳು ಇನ್ನು ಮುಂದೆ ತಮ್ಮ ಅಸ್ತಿತ್ವ ಹೇಗೆ? ಅಂತ ಗಾಢ ಚಿಂತನೆಯಲ್ಲಿ ಮುಳುಗಿದ್ದಾರೆ.

ಇದಿಷ್ಟು 'ಪೀಕೆ' ಚಿತ್ರದ ಬಗ್ಗೆ ಬರೆಯುವ ಮುನ್ನ ಒಂದು ಪುಟ್ಟ ಪೀಠಿಕೆ.

ಈತ ಅನ್ಯಗ್ರಹದಿಂದ ಬರಿಮೈಯಲ್ಲಿ ಭೂಗ್ರಹಕ್ಕೆ ಬಂದವನು. ಹೆಸರು ಪೀಕೆ. ಮಗುವಿನಷ್ಟೇ ಮುಗ್ಧ ಇಲ್ಲಿಯ ಜನ, ಇವರ ಉಡುಗೆತೊಡುಗೆ, ಆಚಾರವಿಚಾರ, ದೇವರು ದಿಂಡಿರ ಬಗ್ಗೆ ಗೊಂದಲಕ್ಕೀಡಾದವನು. ಆಗಷ್ಟೇ ಹುಟ್ಟಿದ ಮಗುವಿನಂತೆ ಎಲ್ಲವನ್ನೂ ಹೊಸದಾಗಿ ನೋಡತೊಡಗಿದ; ವಾಸ್ತವ ಆಮೇಲೆ ನಿಧನಿಧಾನವಾಗಿ ಅರ್ಥವಾಗತೊಡಗಿತು. ವಿಚಿತ್ರ ಮನೋಧರ್ಮದವ, ಎಲ್ಲರಿಗೂ ಕುತೂಹಲವಾಗಿ ಕಂಡವ, ಜಾತಿ, ಮತ, ಧರ್ಮ ಇವನಿಗಿಲ್ಲ. ಆತನ ಮಾತುಗಳಲ್ಲಿನ, ಚಿಂತನೆಗಳಲ್ಲಿನ ಲಾಜಿಕ್ ಕಂಡು ನಾಯಕಿ ಬೆರಗಾಗುತ್ತಾಳೆ. ಪೀಕೆಯ ಸ್ನೇಹಕ್ಕಾಗಿ ತುಡಿಯುತ್ತಾಳೆ. ಪೀಕೆಗೂ ಅವಳ ಮೇಲೆ ಪ್ರೀತಿಯ ಥರದ್ದು ಏನೋ ಒಂದು ಆಗುತ್ತದೆ. ಅದು ಅವಳ ಗಮನಕ್ಕೆ ಕೊನೆಯಲ್ಲಿ ಬರುತ್ತದೆ. ಅಷ್ಟರಲ್ಲಿ ನಾಯಕಿ ಇಷ್ಟಪಟ್ಟು, ದೂರವಾಗಿದ್ದ ಪಾಕಿಸ್ತಾನಿ ಹುಡುಗ ಪವಾಡವೆಂಬಂತೆ ಸಂಪರ್ಕಕ್ಕೆ ಸಿಗುತ್ತಾನೆ- ಪೀಕೆ ವಾಪಸ್ ತನ್ನ ಗ್ರಹಕ್ಕೆ ಹೊರಟುಬಿಡುತ್ತಾನೆ.

ಅದಕ್ಕೂ ಮೊದಲು ದೇವರ ಕುರಿತಾಗಿ ಜನ ಹೊಂದಿರುವ ದ್ವಂದ್ವ, ಟಿವಿಯಲ್ಲಿ ಬಂದು ಮಂಕುಬೂದಿ ಎರಚುವ ಡೋಂಗಿ ಗುರೂಜಿಯ ಅಸಲಿಯತ್ತನ್ನು ಬಯಲು ಮಾಡಿರುತ್ತಾನೆ. ಜನಸಾಮಾನ್ಯರ ಮನಸ್ಸು ವೈಚಾರಿಕತೆಯೆಡೆಗೆ ವಾಲುವಂತೆ ಪರಿವರ್ತಿಸಿರುತ್ತಾನೆ. ಪೀಕೆಗೆ ಗೊತ್ತು- ಭೂಮಿಯಲ್ಲಿದ್ದಷ್ಟೂ ಕಾಲ ಮನುಷ್ಯ ಭಾವನೆಗಳ ಇಕ್ಕಳದಲ್ಲಿ ಸಿಲುಕಬೇಕು. ಮಗುವಿನಂತೆ ಬಂದು ಈ ಜಗತ್ತಿನ ಮಾನವಸಮೂಹದ ಆಳದ ವ್ಯಥೆ, ಮೂಢತನ, ದ್ವಂದ್ವ, ಕರುಣೆ, ಪ್ರೀತಿ, ಸ್ನೇಹ, ಆತ್ಮೀಯತೆ, ಕ್ರೌರ್ಯ, ಅಸೂಯೆ, ಮುಖವಾಡಗಳ ವಿವಿಧ ಆಯಾಮಗಳನ್ನು ಧ್ಯಾನಕ್ಕೆ ಒಡ್ಡಿ ಎಲ್ಲವನ್ನೂ ಸೂಕ್ಷ್ಮವಾಗಿ ಗ್ರಹಿಸಿದ ನಂತರ ಇಲ್ಲಿ ನೆಮ್ಮದಿಯಾಗಿರುವುದು ಕಷ್ಟವೆಂದು ಅರಿತಿರುತ್ತಾನೆ. ತಾನು ಮುಂಚಿನಂತೆ ನೆಮ್ಮದಿಯಿಂದಿರಲು ಆ ಮುಗ್ಧತೆ ಈಗ ಉಳಿದಿಲ್ಲ, ಮನುಷ್ಯ ಸಂಬಂಧಗಳು ಬೆರಗಿಗೆ ಬದಲಾಗಿ ವಸ್ತುಸ್ಥಿತಿಗೆ ಕನ್ನಡಿ ಹಿಡಿಯುತ್ತವೆ. ಈತನೊಬ್ಬ ಈಗ ಸಾಮಾನ್ಯ ಮನುಷ್ಯ, ಯಾವುದೋ ಗ್ರಹದಿಂದ ಬಂದು ರಾಜಸ್ಥಾನದ ವಿಶಾಲ ಬಯಲಿನಲ್ಲಿ ಇಳಿದು ದೆಹಲಿಯಂತಹ ಶಹರದಲ್ಲಿ ಮಾನವಲೋಕದ ಸೂಕ್ಷ್ಮ ಅನುಭವಗಳನ್ನು ಪಡೆದುಕೊಂಡ ಅಪ್ಪಟ ಭಾರತೀಯ ಮನಸ್ಥಿತಿಯವ.

'ಪೀಕೆ' ಚಿತ್ರದ ಬಗ್ಗೆ ಅನೇಕರು ಅವರವರ ಮುಖದ ನೇರಕ್ಕೆ ಏನೇ ಹೇಳಿಕೊಂಡರೂ, ಅವರವರ ಲೇಖನಿಯ ನೇರಕ್ಕೆ ಏನೇ ಬರೆದುಕೊಂಡರೂ ಎಲ್ಲರೂ ಒಮ್ಮೆ ನೋಡಲೇಬೇಕಾದ ಚಿತ್ರವಿದು. ಒಮ್ಮೆ 'ಪೀಕೆ' ಚಿತ್ರದ ತೆಕ್ಕೆಗೆ ನೀವು ಸಿಲುಕಿಬಿಟ್ಟಿರೆಂದರೆ ನಿಮ್ಮನ್ನು ಪಾರು ಮಾಡಲು ಚಿತ್ರವೇ ಮುಗಿಯಬೇಕು. ಒಂದಿಷ್ಟು ಪಾತ್ರಗಳು, ಸನ್ನಿವೇಶಗಳು ನಿಮ್ಮನ್ನು ಚಿಂತನೆಗೆ ಹಚ್ಚುತ್ತವೆ. ಜಗತ್ ಜನನಿ ಅಲಿಯಾಸ್ ಜಗ್ಗುವಿನ ಕಣ್ಣುಗಳು, ಮೋಹಕ ಕೆನ್ನೆಗಳು, ಮಾದಕ ತುಟಿಗಳು, ವಿಶಿಷ್ಟ ಹೇರ್ ಸ್ಟೈಲ್, ಸೊಗಸನ್ನೇ ಮೊಗೆದು ಕೊಡುವ ಮುಖ, ಆ ಮುಖದಲ್ಲಿನ ಕಾತರ, ಪ್ರೀತಿ ಚಿತ್ರದ ಅಂದ ಹೆಚ್ಚಲು ಸಹಕರಿಸಿವೆ. ಆಕೆ ತಾನು ಪ್ರೀತಿಸಿದ ಹುಡುಗನನ್ನು ಕಳೆದುಕೊಂಡ ನಂತರ ಪೀಕೆಯನ್ನು ಆಕಸ್ಮಿಕವಾಗಿ ನೋಡುತ್ತಾಳೆ. ಜಗ್ಗು ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಧ್ವನಿಯೆತ್ತುವ ಧೈರ್ಯಶಾಲಿ ಟಿವಿ ರಿಪೋರ್ಟರ್; ಪೀಕೆ ಇವಳ ಕುತೂಹಲ ಕೆರಳಿಸಿರುವ ವಿಚಿತ್ರ ಮನುಷ್ಯ. ಅವರಿಬ್ಬರ ಒಡನಾಟದ ಕಥಾನಕ ಚಾಲೂ ಆಗುತ್ತದೆ; ಆ ಕಥಾನಕ ಸೀದಾ ಪ್ರೇಕ್ಷಕರ ಮನಸಿನೊಳಕ್ಕೆ... ದೆಹಲಿಯ ಆಕೆ ಅವನನ್ನು ನೋಡುತ್ತಾಳೆ. ಪೊಲೀಸ್ ಲಾಕಪ್ಪಿನಲ್ಲಿ ಅವನಿಗೆ ಸಮೀಪವಾಗುತ್ತಾಳೆ. ದೇವರ ಬಗೆಗಿನ ಆತನ ಲಾಜಿಕ್ ಅವಳ ಕಣ್ಣರಳುವಂತೆ ಮಾಡುತ್ತದೆ. ದೇವರು ಎನ್ನುವುದರ ಬಗ್ಗೆ ಆತನಿಗೆ ನಿಖರವಾದ ವ್ಯಾಖ್ಯಾನವಾಗಲೀ, ಸ್ಪಷ್ಟ ಚಿತ್ರಣವಾಗಲೀ ಸಿಕ್ಕಿರುವುದಿಲ್ಲ, ಅನ್ಯಗ್ರಹದಲ್ಲಿ ಯಾವೊಂದು ದೇವರ ತಲೆನೋವೂ ಇಲ್ಲದೆ ನೆಮ್ಮದಿಯಿಂದಿದ್ದ ಪೀಕೆಗೆ ಭೂಲೋಕದಲ್ಲಿನ ಅದರಲ್ಲೂ ಭಾರತದಲ್ಲಿನ ದೇವರು, ಧರ್ಮ, ಅವುಗಳಲ್ಲಿನ ಗೊಂದಲ, ಜಿಜ್ಞಾಸೆ ಆತನೊಳಗೆ ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಮಂದಿರದ ದೇವರಿಗೆ ಅರ್ಪಿಸುವ ಹಣ್ಣು, ಕಾಯಿ, ಕಡ್ಡಿ, ಕರ್ಪೂರಗಳು ಚರ್ಚಿನ ದೇವರಿಗೆ ಸಂಬಂಧವಿಲ್ಲವೆಂಬುದರಿಂದ ಹಿಡಿದು, ಚರ್ಚಿನಲ್ಲಿ ಭಕ್ತಿಯಿಂದ ಸ್ವೀಕರಿಸುವ ದ್ರಾಕ್ಷಾರಸ ಮಸೀದಿಯ ದೇವರಿಗೆ ಸಂಬಂಧವಿಲ್ಲದ್ದು ಎನ್ನುವವರೆಗೆ ಆತನಲ್ಲಿ ಗೊಂದಲ ಉಂಟುಮಾಡುತ್ತವೆ. ಮನುಷ್ಯ ದೇವರೊಂದಿಗೆ ನೇರವಾಗಿ ಸಂಪರ್ಕ ಇರಿಸಿಕೊಳ್ಳಬಹುದಲ್ಲಾ... ವಿಗ್ರಹದ ಅಗತ್ಯವಾದರೂ ಯಾಕೆ? ಅನ್ನುವವರೆಗೆ ಆತನ ಮನಸ್ಸು ಜಾಗೃತವಾಗುತ್ತದೆ. ಭಾರತದ ಧಾರ್ಮಿಕ ವಾತಾವರಣ ಹಾಗೆ ಮಾಡಿತೆ? ಇಲ್ಲಿಯ ದೇವರುಗಳು, ಧರ್ಮಗಳು, ಪ್ರಶ್ನೆಗಳನ್ನೇ ವಿರೋಧಿಸುವ ನಂಬಿಕೆಗಳು, ಅರ್ಥವಿಲ್ಲದ ಆಚರಣೆಗಳು, ಅಂಧಕಾರ ಈ ಪೀಕೆಯನ್ನು ಚಿಂತೆಗೀಡುಮಾಡಿದವೆ? ಧರ್ಮಗಳು, ಧರ್ಮಗ್ರಂಥಗಳು, ಧರ್ಮಗುರುಗಳು, ಪ್ರಾರ್ಥನಾಮಂದಿರಗಳು ಇಲ್ಲದೆಯೇ ಮನುಷ್ಯ ದೇವರನ್ನು ಕಾಣಲು ಅಥವಾ ತನ್ನನ್ನು ಕಂಡುಕೊಳ್ಳಲು ಸಾಧ್ಯವೇ ಇಲ್ಲವೇ?

ನಿರ್ದೇಶಕ ಇಂತಹ ಅನುಮಾನಗಳಿಗೆ ಪರಿಹಾರ ಕಂಡುಕೊಳ್ಳಲು ತನ್ನ ಚಿತ್ರಕತೆ, ದೃಶ್ಯ ಕಟ್ಟುಕೊಡುವ ಕಲೆಯನ್ನು ಮೆರೆದಿದ್ದಾನೆ. ಪೀಕೆ ಮತ್ತು ಜಗ್ಗು ಟಿವಿ ಗುರೂಜಿ ತಪಸ್ವಿಯನ್ನು ಮಟ್ಟ ಹಾಕಲು ಅಸ್ತಿಭಾರ ಹಾಕುತ್ತಿದ್ದಂತೆಯೇ ಕಥೆಗೊಂದು ಹೊಸ ಆಯಾಮ ದೊರಕುತ್ತದೆ. ಡೋಂಗಿ ಬಾಬಾ ತಪಸ್ವಿಯನ್ನು ದೇವರೇ ಅಂತ ನಂಬಿರುವ ಜನರಲ್ಲಿ ಜಾಗೃತಿ, ವೈಚಾರಿಕತೆ ಮೂಡಲು ಸಾಧ್ಯವಾಗುತ್ತದೆ. ದೇವರ ಹೆಸರಿನಲ್ಲಿ ಲೂಟಿ ಮಾಡುವ ತಪಸ್ವಿಯಂಥವರು ಈ ದೇಶಕ್ಕೆ ಅಪಾಯಕಾರಿ ಜಂತುಗಳು ಎಂಬುದು ಜನಕ್ಕೆ ಗೊತ್ತಾಗಲು ಶುರುವಾಗುತ್ತದೆ. ಯಾವ ಜನ ತಪಸ್ವಿಯಂತಹ ಟಿವಿ ಗುರೂಜಿಗಳ ಮಾತುಗಳನ್ನು ಪ್ರಸಾದವೆಂಬಂತೆ ಸ್ವೀಕರಿಸುತ್ತಿದ್ದರೋ ಅದೇ ಜನ ಪ್ರಶ್ನಿಸುವ ಮನೋಧರ್ಮ ಬೆಳೆಸಿಕೊಳ್ಳಲಾರಂಭಿಸುತ್ತಾರೆ. ಇವೆಲ್ಲದರ ಹಿಂದೆ ಪೀಕೆ ತನ್ನ ಅರಿವಿಗೇ ಬಾರದಂತೆ ಮಹತ್ವವಾದುದೊಂದನ್ನು ಮಾಡಿಬಿಟ್ಟಿರುತ್ತಾನೆ. ಆತನಿಗೆ ಜಗ್ಗು ಮತ್ತು ನ್ಯೂಸ್ ಚಾನೆಲ್ಲಿನ ಹೆಡ್ ಸಾಥ್ ಕೊಟ್ಟಿರುತ್ತಾರೆ.

'ಪೀಕೆ' ಚಿತ್ರ ನಿರ್ದೇಶಿಸಿದ ರಾಜ್ ಕುಮಾರ್ ಹಿರಾನಿ ಜಗ್ಗು ಮತ್ತು ಪೀಕೆ ಪಾತ್ರಗಳನ್ನು ಎಷ್ಟು ಸರಳವಾಗಿ, ಪರಿಣಾಮಕಾರಿಯಾಗಿ ಬೆಳೆಸಿ ಮಾನವ ಜಗತ್ತಿನ ಅಗಾಧ ಅಂಧತ್ವವನ್ನು, ಅಲ್ಲಿ ಪಡಿಮೂಡುವ ಹೊಸ ಚಿಂತನೆಯನ್ನು ತೆರೆದಿಡುತ್ತಾರೆ! ಇದಕ್ಕೂ ಮೊದಲು ಪುಟ್ಟನುವಾಗಿ ಭೂಮಿಗೆ ಬರುವ ಪೀಕೆ ಇಲ್ಲಿಯ ಜನ ಬಟ್ಟೆ ಹಾಕಿಕೊಳ್ಳುವುದರ ಬಗ್ಗೆ, ಗಂಡಸರಿಗೆ ಹಾಗೂ ಹೆಂಗಸರಿಗೆ ಬೇರೆ ಬೇರೆ ಬಗೆಯ ಬಟ್ಟೆಗಳು ಇರುವುದರ ಬಗ್ಗೆ, ಇಲ್ಲಿಯ ಜನರ ಜೀವನದಲ್ಲಿ ಹಣದ ಪಾತ್ರ, ನೋಟಿನಲ್ಲಿರುವ ಗಾಂಧೀ, ಹಿಂದೂ ಧರ್ಮದ ಯುವತಿ ಬಿಳಿ ಬಟ್ಟೆ ಉಟ್ಟರೆ ಆಕೆ ವಿಧವೆಯೂ, ಅದೇ ಕ್ರೈಸ್ತ ಧರ್ಮದ ಹೆಣ್ಣು ಬಿಳಿ ಬಟ್ಟೆ ಉಟ್ಟರೆ ಆಕೆ ವಧುವೂ... ಇತ್ಯಾದಿಗಳ ಬಗ್ಗೆ ಇವನಿಗೆ ಕುತೂಹಲ ಕೆರಳುತ್ತದೆ. ಈ ಮಧ್ಯೆ ತಾನು ದೆಹಲಿಗೆ ಬರುವ ಮುನ್ನ ರಾಜಸ್ಥಾನದಲ್ಲಿ ಭೈರೋನ್ ಸಿಂಗ್ ಸ್ನೇಹ ಗಳಿಸುತ್ತಾನೆ. ಆತನ ಮೂಲಕ ಭೂಮಿ ಮೇಲಿನ ಜನಜೀವನದ ಬಗ್ಗೆ ಒಂದಿಷ್ಟು ಅರಿತುಕೊಳ್ಳುತ್ತಾನೆ. ಹಾಗೆಯೇ ಸಿಂಗ್ ಮೂಲಕ ಒಬ್ಬ ವೇಶ್ಯೆಯ ಹತ್ತಿರ ಹೋಗಿ ಭೂಗ್ರಹದ ಈ ಕಾನ್ಸೆಪ್ಟೇ ಅರ್ಥವಾಗದೇ ಪೀಕೆ ಮಗುವಿನಂತೆ ಸುಮ್ಮನಿದ್ದುಬಿಡುತ್ತಾನೆ.

ಇಷ್ಟೆಲ್ಲಾ ಹೇಳಿದ ಮೇಲೂ ಹೇಳಲೇಬೇಕಾದ ಒಂದಿಷ್ಟು ಮಾತುಗಳು ಹಾಗೇ ಉಳಿದುಬಿಡುತ್ತವೆ. ಈ ದ್ವಂದ್ವಮಯ ಪ್ರಪಂಚದಲ್ಲಿ ರಾಜ್ ಕುಮಾರ್ ಹಿರಾನಿಯಂಥವರು ಅತ್ತ ಯಶ್ ಚೋಪ್ರಾ, ಮಣಿರತ್ನಂ, ಸುಭಾಷ್ ಘಾಯ್, ಕರಣ್ ಜೋಹರ್ ಜಾಡು ಹಿಡಿಯದೆ, ಇತ್ತ ಪ್ರಕಾಶ್ ಝಾ, ವಿಧು ವಿನೋದ್ ಚೋಪ್ರಾ, ರಾಮ್ ಗೋಪಾಲ್ ವರ್ಮಾ, ಅಬ್ಬಾಸ್ ಮಸ್ತಾನ್ ದಾರಿಯನ್ನೂ ಹಿಡಿಯದೆ, ಮತ್ತೊಂದೆಡೆ ಮಹೇಶ್ ಭಟ್, ಮಧುರ್ ಭಂಡಾರ್ಕರ್, ಅನುರಾಗ್ ಬಸು ತರಹವೂ ಸಾಗದೆ ತಮ್ಮದೇ ವಿನೂತನ ಕಕ್ಷೆಯಲ್ಲಿ ಪರಿಭ್ರಮಿಸಲು ತುಡಿಯುವುದು ಮೆಚ್ಚತಕ್ಕದ್ದು.

ಒಂದು ಕಥಾವಸ್ತುವನ್ನು ಮನರಂಜನೆಯ ಜೊತೆಗೆ ಅಷ್ಟೇ ಪರಿಣಾಮಕಾರಿಯಾಗಿ ಚಿಂತನೆಗೆ ಹಚ್ಚುವುದು ಅಷ್ಟು ಸುಲಭದ ಮಾತಲ್ಲ. ಒಂದೇ ಒಂದು ಡೈಲಾಗ್ ಇಲ್ಲದೆ ಕೇವಲ ಪಾತ್ರದ ಮುಖಭಾವ ಮತ್ತು ಹಿನ್ನೆಲೆ ಸಂಗೀತದಿಂದ ಸಹಾಯದಿಂದ ತಲುಪಿಸಬೇಕಿರುವ ವಿಷಯವನ್ನು ಅಚ್ಚುಕಟ್ಟಾಗಿ ಜನರಿಗೆ ತಲುಪಿಸಬಹುದೆಂಬ ಸತ್ಯವನ್ನು ತೋರಿಸುತ್ತಾರೆ. ಬರೀ ಮಾತು ಮಾತು ಮಾತು ಅಂತ ಥಿಯೇಟರಿನಲ್ಲಿ ಕೂತವರ ಕಿವಿ ಚಿಟ್ಟು ಹಿಡಿಸುವ ಯೋಗರಾಜ ಭಟ್ ಥರದವರು ಇದನ್ನು ಅರ್ಥಮಾಡಿಕೊಳ್ಳಬೇಕು. ಥಿಯೇಟರಿನಲ್ಲಿ ಕೂತ ಜನ 'ಅನಾಸಿನ್ನು ತಿಂದ್ರು ತಲೆ ನೋಯ್ತದೆ' ಅನ್ನುವಷ್ಟು ರೋಸಿಹೋಗದಂತೆ ನೋಡಿಕೊಳ್ಳಲು ಇದು ಅಗತ್ಯವೇನೋ.

ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಎಂದರೆ, 'ಪೀಕೆ' ಚಿತ್ರವನ್ನು ನಿರ್ದೇಶಿಸಿದ ರಾಜ್ ಕುಮಾರ್ ಹಿರಾನಿ ಈ ಸೂಕ್ಷ್ಮವನ್ನು ಅರಿತಿದ್ದಾರೆ, ಸಿನಿಮಾಕಲೆಯನ್ನು ಆಳದಲ್ಲಿ ಕರಗತ ಮಾಡಿಕೊಂಡಿದ್ದಾರೆ. ಹಾಡು, ಮಾತು, ಮನರಂಜನೆಯ ಜೊತೆಗೆ ದೇವರ ಕುರಿತ ಚಿಂತನೆ, ಧರ್ಮಾಧರ್ಮಗಳ ನಡುವಣ ವಿಚಿತ್ರವೆನಿಸುವ ಭಿನ್ನತೆ, ದೇವರಿಗೂ ಭಕ್ತರಿಗೂ ಮಧ್ಯವರ್ತಿಗಳಂತೆ ವರ್ತಿಸುವ ಮೈಗಳ್ಳ ಗುರೂಜಿಗಳ ಮುಖವಾಡ ಇತ್ಯಾದಿಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನದ ಜೊತೆಗೆ ಜನ ವೈಚಾರಿಕ ದೃಷ್ಟಿಕೋನದಿಂದ ಬದುಕಲೆಂದು ಆಶಿಸಿದ್ದಾರೆ. ಈ ಚಿತ್ರದ ವಿಶೇಷವೆಂದರೆ, ಈ ದೇಶದಲ್ಲಿ ಇವತ್ತಿಗೂ ಬದುಕುವ ಜನರ ಮೂಢನಂಬಿಕೆ, ಅಂಧತ್ವ, ದೇವರು ಧರ್ಮದ ಹೆಸರಿನಲ್ಲಿ ಹಳೇ ಗೋರಿಗಳನ್ನೇ ಮತ್ತೆ ಮತ್ತೆ ತೋಡುವ ಪರಿಪಾಠ, ಹಳಸಲು ಆಚಾರವಿಚಾರಗಳು, ಅರ್ಥವಿಲ್ಲ ನಂಬಿಕೆಗಳು, ಪದೇ ಪದೇ ದೇವರ ದಲ್ಲಾಳಿಗಳಿಂದ ಸುಲಿಗೆಗೊಳಗಾಗುವ ಮೂರ್ಖತನ, ಮೊದಲಿನಿಂದ ಇರುವ ಕತ್ತಲೆಯೇ ನಿಜ ಹೊಸಬೆಳಕು ಸುಳ್ಳು ಅನ್ನುವ ಅವಿವೇಕಿತನ... ಮುಂತಾದ ಟಿಪಿಕಲ್ ಭಾರತೀಯ ಮನಸ್ಸು ಇಲ್ಲಿ ಪರಿಣಾಮಕಾರಿಯಾಗಿ ಬಿಂಬಿತವಾಗಿದೆ. ಮಾನವಜಗತ್ತಿನ ಕುರುಡುತನ ಅರ್ಥವಾಗುತ್ತಿದ್ದಂತೆಯೇ, ಧಾರ್ಮಿಕತೆ ಹೆಸರಿನ ಮುಟ್ಠಾಳತನ ಗೊತ್ತಾಗುತ್ತಿದ್ದಂತೆಯೇ, ಪೀಕೆಯ ಜಗತ್ತು ಹೊಸದಾಗುತ್ತಾ ಆತನ ಅಸಹಾಯಕತೆ, ಗೊಂದಲ, ದ್ವಂದ್ವ ಹೆಚ್ಚಾಗುವುದನ್ನು ನೋಡುತ್ತಿದ್ದಂತೆಯೇ, ಇವತ್ತಿಗೂ ನಮ್ಮಲ್ಲಿ ಉಲ್ಬಣವಾಗುತ್ತಿರುವ ಅನಾಮಧೇಯ ತಳಮಳದೆಡೆಗೆ ಬೊಟ್ಟು ಮಾಡಿ ತೋರಿಸುತ್ತಾರೆ ಹಿರಾನಿ... ಜಗ್ಗು ತಂದೆಯ ಮಾತಿಗೂ ಜಗ್ಗದೆ ಮುನ್ನುಗ್ಗುತ್ತಿದ್ದಂತೆಯೇ, ಧಾರ್ಮಿಕ ಲೂಟಿಕೋರರ ಬಂಡವಾಳ ಬಯಲು ಮಾಡಲು ದಾಪುಗಾಲು ಹಾಕುತ್ತಿದ್ದಂತೆಯೇ ಆಕೆಯ ಸುಂದರ, ತೀಕ್ಷ್ಣ ಹೊಳೆಯುವ ಮುಖದ ಇಷ್ಟಗಲ ಕಣ್ಣುಗಳಲ್ಲಿ ತುಂಬಿ ತುಳುಕುವ ಚೈತನ್ಯದಲ್ಲಿ ಇವತ್ತಿಗೂ ನಮ್ಮಲ್ಲಿರುವ ಹೊಳ್ಳ ಹೊಸತಿನೆಡೆಗೆ, ಧರ್ಮದ ಸಂಕೋಲೆ ಇಲ್ಲದ ನೆಮ್ಮದಿಯ ಬದುಕಿನೆಡೆಗೆ, ಶೋಷಣೆಗೆ ಒಳಪಡಿಸುವ ಯಾವೊಬ್ಬ ಧಾರ್ಮಿಕ ವ್ಯಕ್ತಿಗೂ ಹಂಗಿಲ್ಲದ ನೂತನ ವಿಶ್ವಕ್ಕೆ ಮನಸು ತೆರೆದುಕೊಂಡ ಯುವಸಮುದಾಯದ ಕ್ರಾಂತಿಕಾರಿ ಕಾಂತಿ ಮೈದಳೆಯುತ್ತದೆ.

ಈ ಬದುಕಿನಾಳಕ್ಕೆ ಬೆಳಕು ಎಂದಿಗೆ?

● ಹೃದಯಶಿವ

ಮಾಡಿತ್ತು. ಇತ್ತೀಚೆಗೆ 1991ರಲ್ಲಿ ಇರಾಕ್-ಕುವೇತ್ ವಿಷಯದಲ್ಲಿ ಅಮೆರಿಕ ಮೂಗು ತೂರಿಸಿ ಇರಾಕ್, ಟರ್ಕಿ, ಸಿರಿಯಾಗಳಲ್ಲಿ ಅರಾಜಕತೆ ಉಂಟುಮಾಡಿ, ಐಎಸ್ಐಎಸ್ ಉಗ್ರವಾದಿಗಳು ಜನ್ಮ ತಳೆಯುವಂತೆ ಮಾಡಿತ್ತು.

ಮತಾಂಧತೆ ಎಷ್ಟು ಅಪಾಯಕಾರಿಯಾಗಿದೆ ಎಂದು ಬೇಗ ಅರಿತುಕೊಂಡು ಯಾವುದೇ ಮುಲಾಜಿಲ್ಲದೆ ಉಗ್ರವಾದದ ವಿರುದ್ಧ ಹೋರಾಡಬೇಕಾಗಿದೆ. ಅಷ್ಟೇ ಅಲ್ಲ, ಉಗ್ರವಾದ ಜನ್ಮ ತಾಳಲು ಕಾರಣಗಳನ್ನು ಹುಡುಕಿ ಇಂಥವರನ್ನು ಪೋಷಿಸುತ್ತಿರುವವರನ್ನೂ ಸಹ ದಾರಿಗೆ ತರಬೇಕಿದೆ. ಮೂಲದಲ್ಲೇ ಇವರನ್ನು ಚಿವುಟಿ ಹಾಕುವ ಅಗತ್ಯವಿದೆ.

-ಮೊಯಿನುದ್ದೀನ್, ಗುಲ್ಬರ್ಗ

ಡಿಸೆಂಬರ್ 24, 2014ರ ಸಂಚಿಕೆಯಲ್ಲಿ ಗೆಳೆಯ ಬಿ.ಚಂದ್ರೇಗೌಡ ಅವರು 'ಸಿರಿಮನೆಯ ಗೆಳೆಯ ನಾಗರಾಜ್' ಎಂಬ ಲೇಖನಕ್ಕೆ ಪ್ರತಿಕ್ರಿಯೆ. ಆ ಲೇಖನ ಸ್ನೇಹಪೂರ್ಣವಾಗಿದ್ದು ಚೆನ್ನಾಗಿತ್ತು, ಆದರೆ ಹೇಮಾ ಅವರಿಗೆ 'ಇನ್ನು ಮದುವೆಯೇ ಆಗುವುದಿಲ್ಲ ಎಂಬಷ್ಟು ವಯಸ್ಸಾಗಿತ್ತು' ಎಂದು ಪ್ರಕಟವಾಗಿರುವ ಮಾತು ನಮಗೆ ಒಪ್ಪಿತವಲ್ಲ. ಅದು ಊಳಿಗಮಾನ್ಯ ಪುರುಷ ಮನಸ್ಥಿತಿಯನ್ನು ಬಿಂಬಿಸುತ್ತದೆ. ಇದು ಗೌರಿ ಅವರ ಕಣ್ಣು ತಪ್ಪಿ ಪ್ರಕಟಗೊಂಡಿದ್ದು ಹೇಗೆ?

- ಡಾ.ವಿ. ಲಕ್ಷ್ಮೀನಾರಾಯಣ ಮತ್ತು ಡಾ. ಇ.ಆರ್. ರತಿ, ಮೈಸೂರು

ಬಿ.ಚಂದ್ರೇಗೌಡ ಮತ್ತು ನಾನು ಶೃಂಗೇರಿಯಲ್ಲಿ ನಡೆದ ಅಂತರಜಾತಿ ವಿವಾಹಿತರ ಸಮ್ಮೇಳನಕ್ಕೆ ಹೋಗಿದ್ದಾಗ ತೇಜಸ್ವಿ, ರಾಮದಾಸ್ ಮತ್ತು ಸಿರಿಮನೆ ನಾಗರಾಜ್ ಅವರ ಪರಿಚಯವಾಗಿತ್ತು, ನಂತರ ಚಿಕ್ಕಮಗಳೂರಿನಲ್ಲಿ ನಾಗರಾಜ್ ಅವರನ್ನು ಎರಡು ಬಾರಿ ಭೇಟಿ ಮಾಡಿ ಅವರ 'ಮುಂಜಾವು' ಪತ್ರಿಕೆ ಮತ್ತು ಹೋರಾಟಗಳ ಬಗ್ಗೆ ಚರ್ಚೆ ನಡೆಸಿದ್ದೆವು.

ಈಗ ಸಿರಿಮನೆ ನಾಗರಾಜ್ ಮತ್ತು ನೂರ್ ಶ್ರೀಧರ್ ಅವರುಗಳು ಕಾಡಿನಿಂದ ನಾಡಿಗೆ ಬಂದಿರುವುದರಿಂದ ಇನ್ನು ಮುಂದೆ ಅವರು ಅಂತಹುದ್ದೇ ಜನಪರ ಹೋರಾಟಗಳನ್ನು ಮಾಡಲಿ ಎಂದು ನಮ್ಮಂತಹ ಎಲ್ಲಾ ಪ್ರಗತಿಪರ ಮನಸ್ಸುಗಳು ಆಶಿಸುತ್ತಿವೆ.

ಅವರನ್ನು ಮುಖ್ಯವಾಹಿನಿಗೆ ಕರೆತಂದದ್ದಕ್ಕೆ, ನಿಮಗೆ ಧನ್ಯವಾದಗಳು.

-ಶಶಿಕಲಾ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇ-ಮೇಲ್ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 07-01-2015 RNI No. KARKAN2005/14648

ವಿಷ್ಣು ಸ್ಮಾರಕಕ್ಕೆ ಚಾಲನೆ



ನೆನೆಗುದಿಯಲ್ಲಿ ಬಿದ್ದಿದ್ದ ಡಾ.ವಿಷ್ಣುವರ್ಧನ್ ಸ್ಮಾರಕ ಯೋಜನೆಗೆ ಇದೇ ಡಿಸೆಂಬರ್ ಮೂವತ್ತೊಂದು ಚಾಲನೆ ದೊರೆಯಲಿದೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಸ್ಮಾರಕ ನಿರ್ಮಾಣದ ಕೆಲಸಗಳು ಅಧಿಕೃತವಾಗಿ ಆರಂಭವಾಗಲಿವೆ. ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ಆರಂಭವಾಗಲಿರುವ ಈ ಕೆಲಸ ಎಂದೋ ಆಗಬೇಕಿತ್ತು. ಕಾರಣಾಂತರಗಳಿಂದ ಮುಂದೂಡುತ್ತಲೇ ಬಂದು ಇದೀಗ ಅದಕ್ಕೊಂದು ಅಂತ್ಯ ದೊರಕಿದೆ. ಇಷ್ಟಕ್ಕೂ ಈ ಸ್ಮಾರಕ ನಿರ್ಮಾಣಕ್ಕೆ ಆಯ್ಕೆ ಮಾಡಿಕೊಂಡಿದ್ದ ಭೂಮಿ ತಕರಾರು ಹೊಂದಿದ್ದರಿಂದ ಇಷ್ಟು ವಿಳಂಬವಾಯಿತು ಎನ್ನಬಹುದು. ಕಡೆಗೂ ಈ ಬಾರಿ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣವಾಗುತ್ತಿರುವುದರಿಂದ ವಿಷ್ಣು ಅಭಿಮಾನಿಗಳು ಖುಷಿ ಪಡುವಂತಾಗಿದೆ. ತಮ್ಮ ಗುರು ನೆನಪಾದಾಗಲೆಲ್ಲಾ ಸ್ಮಾರಕದ ಬಳಿ ಹೋಗಿ ಒಂದೆರಡು ನಿಮಿಷ ಧ್ಯಾನಮಗ್ನರಾಗಿ ಬರಲು ಹಾದಿ ಒದಗಿದಂತಾಗಿದೆ. ಅಂದಹಾಗೆ ಇತ್ತೀಚೆಗಷ್ಟೇ ಡಾ.ರಾಜಕುಮಾರ್ ಸ್ಮಾರಕ ಲೋಕಾರ್ಪಣೆಯಾಗಿದ್ದನ್ನು ಇಲ್ಲಿ ನೆನೆಯಬಹುದು.



ಗಾಂಧಿ-ಗಣೇಶ್ ಚಿತ್ರಕ್ಕೆ ನೋ ಅಂದ ಆಶಾ ಭಟ್

ನಟನಾಗಿ ಸೋತು ಸುಣ್ಣವಾಗಿರುವ ಗಣೇಶ್ ಮತ್ತು ನಿರ್ಮಾಪಕನಾಗಿ ಬರಿಗೈಯಾಗಿರುವ ದಿನೇಶ್ ಗಾಂಧಿ ಒಂದಾಗುತ್ತಿದ್ದಾರೆ. ದಿನೇಶ್ ಗಾಂಧಿ ಎಂಬ ಪಕ್ಕಾ ಗಾಂಧಿನಗರದ ಬ್ರೈನ್ ಈ ಬಾರಿ ಹಿಂದಿಯಲ್ಲಿ ಸೂಪರ್‌ಹಿಟ್ ಎನ್ನಿಸಿಕೊಂಡ 'ದಬಾಂಗ್' ಎಂಬ ಚಿತ್ರದ ರಿಮೇಕಿಗೆ ಕಾಮಿಡಿ ಫೇಸ್ ಗಣೇಶ್‌ನನ್ನು ಹಾಕಿಕೊಳ್ಳುವ ಮೂಲಕ ಹೊಸ ಸಾಹಸಕ್ಕೆ ಕೈಹಾಕಿದ್ದಾರೆ.

ರಾಜೇಂದ್ರ ಸಿಂಗ್ ಬಾಬು ತರಹದ ಘಟಾನುಘಟಿ ನಿರ್ದೇಶಕರ 'ಬೊಂಬಾಟ್' ಚಿತ್ರದಲ್ಲಿ ಆಕ್ಷನ್ ಹೀರೋ ಆಗಲು ಹೋಗಿ ಗಣೇಶ್ ಮಕಾಡೆ ಬಿದ್ದಿದ್ದರು. ಆದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಒಂದಿಷ್ಟು ಚಿತ್ರಗಳಲ್ಲಿ ಅಲ್ಲಲ್ಲಿ ಫೈಟ್ ಮಾಡುವ ಮೂಲಕ ತಾವೂ ಒಬ್ಬ ಆಕ್ಷನ್ ಹೀರೋ ಎಂಬಂತೆ ಆಕ್ಷನ್ ಹೀರೋಗಳಿಗೆ ಸೆಡ್ಡು ಹೊಡೆಯಲು ಪ್ರಯತ್ನಿಸುತ್ತಲೇ ಇದ್ದಾರೆ.


ಹಾಡುಗಳಲ್ಲೂ, ದೃಶ್ಯಗಳಲ್ಲೂ, ಡೈಲಾಗ್ ಡೆಲಿವರಿಯಲ್ಲೂ ಸಾಧ್ಯವಾದಷ್ಟು ಏಕತಾನತೆ ಕಾಯ್ದುಕೊಂಡು ತಮ್ಮ ಜನಪ್ರಿಯತೆಯನ್ನು ತಾವಾಗಿ ತಾವೇ ಹಾಳುಮಾಡಿಕೊಳ್ಳುವಲ್ಲಿ, ತಮ್ಮ ಮುಖ ಜನಕ್ಕೆ ಬೋರು ಹಿಡಿಸುವಂತೆ ಮಾಡುವಲ್ಲಿ ಯಶಸ್ವಿಯಾದ ಗಣೇಶ್ ಈಗ 'ದಬಾಂಗ್' ಚಿತ್ರದ ಕನ್ನಡ ವರ್ಷನ್‌ನಲ್ಲಿ ಸೂಪರ್ ಹೀರೋ ಆಗಲು ಹೊರಟಿರುವುದನ್ನು ಕೇಳಿ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ.

ಅಂದಹಾಗೆ ಈ ಚಿತ್ರಕ್ಕೆ ನಾಯಕಿಯ ಹುಡುಕಾಟದಲ್ಲಿದ್ದ ಚಿತ್ರತಂಡ 2014ರ ಮಿಸ್ ಸುಪ್ರನ್ಯಾಷನಲ್ ಸುಂದರಿ ಆಶಾಭಟ್‌ರನ್ನು ಸಂಪರ್ಕಿಸಿತ್ತು. ಆಕೆ ಒಂದು ವರ್ಷದವರೆಗೆ ಯಾವುದೇ ಚಿತ್ರದಲ್ಲಿ ನಟಿಸದ ಹಾಗೆ ಯಾರೊಟ್ಟಿಗೆಯೋ ಕರಾರು ಮಾಡಿಕೊಂಡಿದ್ದಾರಂತೆ. ಈ ಕಾರಣದಿಂದ 'ನನ್ನ ಸಿನಿಮಾದಲ್ಲಿ ನಟಿಸುತ್ತೀಯೇನಮ್ಮಾ?' ಎಂಬ ದಿನೇಶ್ ಗಾಂಧಿ ಪ್ರಶ್ನೆಗೆ ಆಶಾ 'ನೋ' ಅಂದಿದ್ದಾರೆ. ಈಗ ಗಾಂಧಿ ಬೇರೊಬ್ಬ ಹೀರೋಯಿನ್ ಹುಡುಕಾಟದಲ್ಲಿದ್ದಾರಂತೆ.

ಇಷ್ಟಕ್ಕೂ ಆಶಾ ಭಟ್ ಈ ಚಿತ್ರದಲ್ಲಿ ನಟಿಸದಿರಲು ಕಾರಣ ದಿನೇಶ್ ಗಾಂಧಿ ಸರಿಯಾಗಿ ಪೇಮೆಂಟ್ ಕೊಡಲ್ಲ ಅನ್ನೋದಾ? ಅಥವಾ ಗಣೇಶ್‌ಗೆ ಮಾರ್ಕೆಟ್ಟು ಇಲ್ಲ, ಮೆಜೆಸ್ಟಿಕ್ಕೂ ಇಲ್ಲ ಅನ್ನೋದಾ? ಇನ್ನೂ ಸ್ಪಷ್ಟವಾಗಿಲ್ಲ!




ಶರ್ಮಿಳಾ 'ಕಥಾ'ನಕ



'ಸಜನಿ' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಶರ್ಮಿಳಾ ಮಾಂಡ್ರೆಗೆ ಬ್ರೇಕ್ ಕೊಟ್ಟಿದ್ದು 'ಕೃಷ್ಣ' ಚಿತ್ರ. ಅದೇ ಜೋಶ್‌ನಲ್ಲಿ 'ಈ ಬಂಧನ', 'ನವಗ್ರಹ', 'ವೆಂಕಟ ಇನ್ ಸಂಕಟ', 'ಸ್ವಯಂವರ' ಸೇರಿದಂತೆ ಹಲವು ಚಿತ್ರಗಳಲ್ಲಿ ಅವರು ನಟಿಸಿದರು. ಈ ನಡುವೆ ಕನ್ನಡದಲ್ಲಿ ಅವಕಾಶಗಳು ಕಡಿಮೆಯಾಗಿ 'ವಿರಟ್ಟಲ್' ಎನ್ನುವ ತಮಿಳು ಚಿತ್ರದಲ್ಲಿಯೂ, 'ಕೆವ್ವು ಕೇಕ' ಎಂಬ ತೆಲುಗು ಚಿತ್ರದಲ್ಲಿಯೂ ನಟಿಸಿ ಬಂದರು. ಇನ್ನು ಇವರು ಇತ್ತೀಚೆಗೆ ನಟಿಸುತ್ತಿರುವ ಕನ್ನಡ ಚಿತ್ರಗಳೆಂದರೆ 'ಗೋವಾ' ಮತ್ತು 'ಮುಮ್ತಾಜ್'. ಇಂತಹ ಹಿನ್ನೆಲೆ ಇರುವ ಶರ್ಮಿಳಾ ಇದೆ ಮೊದಲಬಾರಿಗೆ ಒಂದು ಹಿಂದಿ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಆ ಚಿತ್ರದ ಹೆಸರು 'ಕಥಾ'. ಖಾಲಿದ್ ಮೊಹಮದ್ ಆ ಚಿತ್ರದ ಡೈರೆಕ್ಟರ್. 1983ರಲ್ಲಿ ಸಾಯಿ ಪರಾಂಜಪೆ ನಿರ್ದೇಶನದಲ್ಲಿ ತಯಾರಾಗಿದ್ದ 'ಕಥಾ' ಚಿತ್ರದ ರಿಮೇಕ್ ಚಿತ್ರವಾದ ಈ ಚಿತ್ರದ ಮೂಲಕ ಶರ್ಮಿಳಾ ಬಾಲಿವುಡ್‌ಗೆ ಇದೇ ಮೊದಲ ಬಾರಿಗೆ ಎಂಟ್ರಿ ಪಡೆದುಕೊಳ್ಳುತ್ತಿದ್ದಾರೆ. ಶರ್ಮಿಳಾ ನಟಿಸಬೇಕಿರುವ ಈ ಪಾತ್ರಕ್ಕೆ ನಿರ್ದೇಶಕ ಖಾಲಿದ್ ಆಡಿಶನ್ ನಡೆಸಿ, ಬರೋಬ್ಬರಿ ನೂರು ಹುಡುಗಿಯರನ್ನು ನೋಡಿದ್ದಾರೆ. ಕಡೆಗೆ ಶರ್ಮಿಳಾ ಆಯ್ಕೆಯಾಗಿದ್ದಾರೆ. ಕನ್ನಡದಲ್ಲಿ ಮಾರ್ಕೆಟ್ ಇಲ್ಲದ ಶರ್ಮಿಳಾ ಹಿಂದಿಯಲ್ಲಾದರೂ ಕ್ಲಿಕ್ ಆದರೆ ನಾವೂ ಹ್ಯಾಪೀನೆ.

ಜ್ಯೋತಿ ಅಲಿಯಾಸ್ ಕೋತಿರಾಜ್ ತೆರೆಗೆ

ಡೇವಿಡ್ ಸೆಬಾಸ್ಟಿಯನ್ ನಿರ್ದೇಶನದ ಜ್ಯೋತಿರಾಜ್ ಅಭಿನಯದ 'ಜ್ಯೋತಿ ಅಲಿಯಾಸ್ ಕೋತಿರಾಜ್' ಇದೇ ವಾರ ಬಿಡುಗಡೆ ಕಾಣುತ್ತಿದೆ. ಬರೋಬ್ಬರಿ ನೂರು ಚಿತ್ರಮಂದಿರಗಳಲ್ಲಿ ತೆರೆಗೆ ಬರುತ್ತಿರುವ ಈ ಚಿತ್ರ ಕ್ರಿಸ್‌ಮಸ್ ದಿನದಂದು ಬಿಡುಗಡೆ ಕಾಣುತ್ತಿರುವುದು ಮತ್ತೊಂದು ವಿಶೇಷ. ರಾಜ್ಯಾದ್ಯಂತ ಆರ್ಯ ಮೌರ್ಯ ಗೌಡರ ಡಿಸ್ಟ್ರಿಬ್ಯೂಟ್ ಆಗುತ್ತಿರುವ 'ಜ್ಯೋತಿ ಅಲಿಯಾಸ್ ಕೋತಿರಾಜ್' ಚಿತ್ರದ ಪ್ರಮುಖ ಆಕರ್ಷಣೆ ಎಂದರೆ ವಿಶ್ವಖ್ಯಾತಿಯ ಜ್ಯೋತಿರಾಜ್ ನಿರ್ವಹಿಸಿರುವ ಸ್ಟಂಟ್ಸ್. ಯಾವುದೇ ಆಧಾರವಿಲ್ಲದೆ ಗೋಡೆಯೇರುವ ಈ ಸಾಹಸಿಯ ಸ್ಟಂಟ್ಸ್ ಪ್ರೇಕ್ಷಕನ ಮನಸ್ಸು ಸೆಳೆಯುತ್ತವೆ ಅನ್ನೋದು ಈ ಸಿನಿಮಾದ ನಿರ್ದೇಶಕರ ನಂಬಿಕೆ. ಚಿತ್ರದುರ್ಗ, ಜೋಗ ಮುಂತಾದ ಕಡೆಗಳಲ್ಲಿ ಚಿತ್ರಿತವಾಗಿರುವ ಈ ಚಿತ್ರದಲ್ಲಿ ದೀಪಿಕಾ ದಾಸ್ ಮತ್ತು ಆಶಾನಿ ಶೆಟ್ಟಿ ನಾಯಕಿಯರಾಗಿ ನಟಿಸಿದ್ದಾರೆ. ಡಾ.ದೊಡ್ಡರಂಗೇಗೌಡರು ಹಾಡು ಬರೆದಿರುವುದು ಈ ಚಿತ್ರದ ಮತ್ತೊಂದು ಸ್ಪೆಷಾಲಿಟಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com